ಪ್ರಬುದ್ಧ ಕರ್ಣಾಟಕ

ಸಂಪುಟ ೮೮ ಸಂಚಿಕೆ ೩೪೩-೩೪೬



ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

ಪ್ರಬುದ್ಧ ಕರ್ನಾಟಕ

ಸಂಪುಟ ೮೮

ಸಂಚಿಕೆ ೩೪೩-೩೪೬

ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ

೨೦೧೦

Prabuddha Karnataka : A Kannada Quarterly of the University of Mysore, Volume 88, Nos 343-346 Edited by Prof. Panditaradhya, Prof. M.S. Shekhar, and Sri Ba.Ve. Shridhar. Published by Director, Prasranga, Manasagangotri, University of Mysore, MYSORE 570006. Pages: xii + 160

ಜಾಲತಾಣ: http://www.uni-mysore.ac.in/publications

ಪ್ರಧಾನ ಸಂಪಾದಕರು

ಪ್ರೊ. ಸಿ. ನಾಗಣ್ಣ

ಸಂಪಾದಕರು

ಪ್ರೊ. ಪಂಡಿತಾರಾಧ್ಯ
ಪ್ರೊ. ಎಂ.ಎಸ್. ಶೇಖರ್
ಶ್ರೀ ಬಾ.ವೇ. ಶ್ರೀಧರ್

ಪ್ರಕಾಶಕರು

ಪ್ರೊ. ಸಿ. ನಾಗಣ್ಣ
ನಿರ್ದೇಶಕರು
ಪ್ರಸಾರಾಂಗ
ಮಾನಸಗಂಗೋತ್ರಿ ಮೈಸೂರು ೫೭೦ ೦೦೬

ಮುದ್ರಕರು

ಶ್ರೀ ಎಸ್. ಆನಂದ
ನಿರ್ದೇಶಕರು
ವಿಶ್ವವಿದ್ಯಾನಿಲಯ ಮುದ್ರಣಾಲಯ
ಮಾನಸಗಂಗೋತ್ರಿ ಮೈಸೂರು ೫೭೦ ೦೦೬

ಮುನ್ನುಡಿ

ಪ್ರಬುದ್ಧ ಕರ್ಣಾಟಕ, ಮಾನವಿಕ ಕರ್ಣಾಟಕ, ವಿಜ್ಞಾನ ಕರ್ಣಾಟಕ– ಇವೆಲ್ಲ ನಮ್ಮ ವಿಶ್ವವಿದ್ಯಾನಿಲಯದಿಂದ ಪ್ರಕಟವಾಗುತ್ತಿರುವ ತ್ರೈಮಾಸಿಕಗಳು; ಹಾಗೆಯೇ ಆಂಗ್ಲ ಭಾಷೆಯಲ್ಲಿ ಬರುತ್ತಿರುವ *my*SCIENCE ಹಾಗೂ *my*SOCIETY ಅರ್ಧವಾರ್ಷಿಕಗಳು. ಕನ್ನಡದಲ್ಲಿ ಪಡಿಮೂಡುತ್ತಿರುವ ನಿಯತಕಾಲಿಕೆಗಳ ಕೊಡುಗೆ ದೊಡ್ಡದು. ಇಂದಿಗೂ ಸಂಶೋಧನೆ ಹಾಗೂ ಗ್ರಂಥಾಲಯದ ಭಾಷೆ ಇಂಗ್ಲಿಷ್ ಎಂಬುದನ್ನು ನಾವು ಚೆನ್ನಾಗಿ ಬಲ್ಲೆವು. ಹಾಗಾಗಿ ಆಂಗ್ಲ ಭಾಷೆಯಲ್ಲಿ ಸಂಶೋಧನಾ ಪ್ರಬಂಧಗಳನ್ನು ರಚಿಸುವವರಿಗೆ ಒಂದು ಅರ್ಥದಲ್ಲಿ ಹಾದಿ ಸುಗಮ; ಏಕೆಂದರೆ ಜಗತ್ತಿನಾದ್ಯಂತ ಈ ಭಾಷೆ ಬಳಕೆಯಲ್ಲಿದ್ದು ಪಾರಿಭಾಷಿಕ ಪದಗಳು ಸಿದ್ಧವಾಗಿ ದಕ್ಕುತ್ತವೆ. ಸಾರ್ವತ್ರಿಕವಾಗಿ ಬಳಕೆ ಮಾಡಲೂ ಒದಗುತ್ತವೆ. ಆದರೆ ಕನ್ನಡದಲ್ಲಿ ವೈಜ್ಞಾನಿಕ ವಿಷಯಗಳ ಮೇಲೆ ಸಂಶೋಧನಾತ್ಮಕ ಪ್ರಬಂಧ ಬರೆಯುವವರಿಗೆ ಅಷ್ಟು ಅನುಕೂಲಗಳಿಲ್ಲ. ಆದಾಗ್ಯೂ ಪ್ರಾದೇಶಿಕ ಭಾಷೆಯ ಮೂಲಕ ವಿಜ್ಞಾನವನ್ನು ಅರ್ಥಮಾಡಿಸುವ ಹೊಣೆಗಾರಿಕೆಯನ್ನು ಕನ್ನಡ ವಿಜ್ಞಾನ ಲೇಖಕರು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆ.

ಇದು ವಿಜ್ಞಾನ ಮತ್ತು ಮಾನವಿಕಗಳ ಮಾತಾಯಿತು. ಇನ್ನು **ಪ್ರಬುದ್ಧ ಕರ್ಣಾಟಕ**ಕ್ಕೆ ತನ್ನದೇ ಆದ ಹಿನ್ನೆಲೆಯಿದೆ, ಇತಿಹಾಸವಿದೆ. ಪ್ರೊ. ಎ.ಆರ್. ಕೃಷ್ಣಶಾಸ್ತ್ರಿಗಳಂಥ ಮಹನೀಯರು ಕಟ್ಟಿ ಬೆಳೆಸಿದ ನಿಯತಕಾಲಿಕೆಯಿದು. ಮೈಸೂರು ವಿಶ್ವವಿದ್ಯಾನಿಲಯದ ಜೊತೆ ಜೊತೆಗೇ ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಂಡ ಹೆಗ್ಗಳಿಕೆ ಈ ನಿಯತಕಾಲಿಕೆಗಿದೆ. ಹಾಗಾಗಿ ಕರ್ನಾಟಕದ ಪ್ರಬುದ್ಧ ಚಿಂತಕರು ಈ ನಿಯತಕಾಲಿಕೆಯನ್ನು ಪ್ರೀತಿಯಿಂದ ನೋಡಿಕೊಳ್ಳಬೇಕಾದ ಜವಾಬ್ದಾರಿ ಹೊತ್ತಿದ್ದಾರೆ. ಆ ಕಾಲದ ಕಠಿಣವಾದ ಮಾನದಂಡಗಳನ್ನು ಇಟ್ಟು ಪ್ರಕಟಣೆಯ ಪ್ರಕ್ರಿಯೆಯನ್ನು ನಿಧಾನಗೊಳಿಸದೆ ಹೊಸದಾಗಿ ಬರಹ ಕಲಿತು ಸಾಗುತ್ತಿರುವ ಯುವ ವಿದ್ವಾಂಸರನ್ನು ತಿದ್ದಿ ಮುನ್ನಡೆಸುವ ದಿಶೆಯಲ್ಲಿ ನಮ್ಮ ಎಲ್ಲ ನಿಯತಕಾಲಿಕೆಗಳ ಸಂಪಾದಕ ಮಂಡಳಿಗಳ ಸಂಚಾಲಕರು ಹಾಗೂ ಸದಸ್ಯರು ಬಲು ಆಸ್ಥೆಯಿಂದ ಕಾರ್ಯೋನ್ಮುಖರಾಗಿದ್ದಾರೆ. ಅವರಿಗೆ ಹಾಗೂ ಅಂದವಾಗಿ ಇವನ್ನು ಪ್ರಕಟಗೊಳಿಸುತ್ತಿರುವ ಪ್ರಸಾರಾಂಗದ ನಿರ್ದೇಶಕರಿಗೆ ಹಾಗೂ ಮುದ್ರಣಾಲಯದ ನಿರ್ದೇಶಕರಿಗೆ ನನ್ನ ಶುಭಕಾಮನೆಗಳನ್ನು ತಿಳಿಸಲು ಹರ್ಷಿಸುತ್ತೇನೆ.

ಪ್ರೊ. ಕೆ.ಎಸ್. ರಂಗಪ್ಪ
ಕುಲಪತಿ

ಪ್ರಕಾಶಕರ ನುಡಿ

ಪ್ರಬುದ್ಧ ಕರ್ಣಾಟಕ ನಡೆದು ಬಂದ ದಾರಿಯನ್ನು ನೆನೆದರೆ ಅಭಿಮಾನದ ಜೊತೆಗೆ ದಿಗಿಲೂ ಉಂಟಾಗುತ್ತದೆ. ದಿಗಿಲೇಕೆಂದರೆ ನಮ್ಮ ಹಿರೀಕರು ಈ ಸಾಹಿತ್ಯ ಪತ್ರಿಕೆಯ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಒಂದು ಗರಿಷ್ಠ ಜಲಚಿಹ್ನೆಯನ್ನು ನಿರ್ಮಿಸಿಬಿಟ್ಟಿದ್ದಾರೆ. ಕಾಲ ಕಳೆದಂತೆ ಸ್ವಲ್ಪ ಸ್ವಲ್ಪವೇ ರಿಯಾಯ್ತಿ ಕೊಟ್ಟುಕೊಂಡು ಇಲ್ಲಿಗೆ ತಲುಪಿದ್ದೇವೆ. ಹೊಸ ಹೊಸ ಜ್ಞಾನಕ್ಷೇತ್ರಗಳು ಅನಾವರಣವಾಗುತ್ತಿರುವ ಹಿನ್ನೆಲೆಯಲ್ಲಿ ನಮ್ಮ ಹೊಸ ತಲೆಮಾರಿನ ವಿದ್ವಾಂಸರು ಆ ಎಲ್ಲೆಗಳನ್ನು ಎಟುಕಿಸಿಕೊಳ್ಳಲು ತವಕಿಸುತ್ತಿದ್ದಾರೆ. ಹೊಸದರ ಅನ್ವೇಷಣೆಯ ಭರಾಟೆಯಲ್ಲಿ ಪಾರಂಪರಿಕವಾದ ಶಿಸ್ತು ಕೈಬಿಟ್ಟುಹೋಗಬಾರದು ಎಂಬ ಕಾಳಜಿಯೂ ನಮಗಿದೆ. ಈ ದೃಷ್ಟಿಯಿಂದ ಡಾ. ಪಂಡಿತಾರಾಧ್ಯರ ಮುಖಂಡತ್ವದ ಸಂಪಾದಕೀಯ ಮಂಡಳಿ ತುಂಬ ಸಂಯಮದಿಂದಲೇ *ಪ್ರಬುದ್ಧ ಕರ್ಣಾಟಕ* ದ ಈ ಸಂಚಿಕೆಯನ್ನು ಸಿದ್ಧಗೊಳಿಸಿದೆ. *ಪ್ರಬುದ್ಧ ಕರ್ಣಾಟಕ* ತಂತ್ರಜ್ಞಾನ ಕಾಲದ ರೀತಿ ರಿವಾಜನ್ನು ಪ್ರತಿಫಲಿಸಬೇಕೆಂದು ಆಸೆಪಟ್ಟು ಅದನ್ನು ಇಂದಿನ ನಿರೀಕ್ಷೆಗಳಿಗೆ ಒಗ್ಗಿಸಿರುವ ಅವರ ದೂರದೃಷ್ಟಿ ಹಾಗೂ ಕನ್ನಡಾಭಿಮಾನಕ್ಕಾಗಿ ನಾನು ಅವರಿಗೆ ಕೃತಜ್ಞನಾಗಿದ್ದೇನೆ. ಮಂಡಳಿಯ ಇತರ ಸದಸ್ಯರಿಗೆ ನನ್ನ ವಂದನೆಗಳು.

ಸನ್ಮಾನ್ಯ ಕುಲಪತಿಗಳಾದ ಪ್ರೊ. ಕೆ.ಎಸ್. ರಂಗಪ್ಪನವರು ನಮಗೆ ನೀಡುತ್ತಿರುವ ಅನವರತ ಪ್ರೋತ್ಸಾಹಕ್ಕಾಗಿ ನಾನವರಿಗೆ ಆಭಾರಿಯಾಗಿದ್ದೇನೆ. ಮಾನ್ಯ ಕುಲಸಚಿವರಾದ ಪ್ರೊ. ಸಿ. ಬಸವರಾಜು ಅವರಿಗೆ ವಂದನೆಗಳು.

ಈ ಗ್ರಂಥ ನಿರ್ಮಾಣದಲ್ಲಿ ಬೇರೆ ಬೇರೆ ಭೂಮಿಕೆಯನ್ನು ನನ್ನ ಸಹೋದ್ಯೋಗಿಗಳಾದ ಶ್ರೀ ಸ.ರ. ಸುದರ್ಶನ, ಶ್ರೀ ಎಸ್. ಆನಂದ, ಶ್ರೀಮತಿ ಟಿ. ಕಮಲಮ್ಮ, ಶ್ರೀಮತಿ ಬಿ.ಎಂ. ಮಂಜುಳ, ಶ್ರೀಮತಿ ಜಿ.ಬಿ. ಮಂಜುಳ, ಪ್ರಸಾರಾಂಗ ಹಾಗೂ ಮುದ್ರಣಾಲಯದ ಎಲ್ಲ ಸಿಬ್ಬಂದಿಗಳೂ ನಿರ್ವಹಿಸಿದ್ದಾರೆ. ಅವರಿಗೆ ನನ್ನ ನೆನಕೆಗಳು.

ಪ್ರೊ. ಸಿ. ನಾಗಣ್ಣ
ನಿರ್ದೇಶಕ

ಸಂಪಾದಕರ ನುಡಿ

*ಪ್ರಬುದ್ಧ ಕರ್ಣಾಟಕ*ದ ಹೊಸ ಸಂಚಿಕೆ ನಿಮ್ಮ ಕೈಯಲ್ಲಿದೆ. ಕಾರಣಾಂತರಗಳಿಂದ ಸಕಾಲದಲ್ಲಿ ಪತ್ರಿಕೆ ಪ್ರಕಟವಾಗದ ಸ್ಥಿತಿ ಇನ್ನು ಮುಂದೆ ಬದಲಾಗಲಿದೆ; ಬೆಳೆಯುತ್ತಿರುವ ತಂತ್ರಜ್ಞಾನ, ಸಂಶೋಧನೆಯ ವಿಧಾನಗಳ ಅಗತ್ಯಗಳಿಗನುಗುಣವಾಗಿ ಹೊಸ ಸೌಲಭ್ಯಗಳನ್ನು ಅಳವಡಿಸಿಕೊಂಡಿದೆ. *ಪ್ರಬುದ್ಧ ಕರ್ಣಾಟಕ*ದ ಅಂತರಜಾಲ ಆವೃತ್ತಿ ಪ್ರತಿ ತಿಂಗಳೂ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟವಾಗಲಿದೆ. ಇಲ್ಲಿನ ಲೇಖನಗಳ ಮಾಹಿತಿಯನ್ನು ಅಂತರಜಾಲದ ವಿವಿಧ ಹುಡುಕುವ ಯಂತ್ರಗಳ ಮೂಲಕ ಓದುಗರಿಗೆ ತಲುಪಿಸಿ ಪತ್ರಿಕೆಯಲ್ಲಿ ಗುಣಮಟ್ಟದ ಲೇಖನಗಳನ್ನೂ ಓದುಗರ ಪ್ರಮಾಣವನ್ನೂ ಹೆಚ್ಚಿಸುವುದು ನಮ್ಮ ಆಶಯ. ಪತ್ರಿಕೆಯ ತ್ರೈಮಾಸಿಕ ಮುದ್ರಿತ ಆವೃತ್ತಿ ಎಂದಿನಂತೆ ಲಭ್ಯವಿರುತ್ತದೆ.

ಲೇಖಕರು ಸ್ವಂತ ಆಲೋಚನೆಯ ಸ್ವತಂತ್ರ ಸಂಶೋಧನ ಲೇಖನಗಳನ್ನು ವಿದ್ಯುನ್ಮಾನ ರೂಪದಲ್ಲಿಯೂ ಸಲ್ಲಿಸಬಹುದು. ಅದನ್ನು ತಜ್ಞರಿಂದ ಪರಾಮರ್ಶಿಸಿ ಅವರು ನೀಡುವ ಸಲಹೆ ಸೂಚನೆಗಳಿಗೆ ಅನುಗುಣವಾಗಿ ಅಗತ್ಯಬಿದ್ದರೆ ಲೇಖನವನ್ನು ಮತ್ತೆ ಬರೆಸಲಾಗುವುದು. ಲೇಖಕರು ಸಂಶೋಧನ ಲೇಖನವನ್ನು ಬರೆಯುವ ಕ್ರಮಗಳನ್ನು ತಪ್ಪದೇ ಅನುಸರಿಸಿರಬೇಕು. ಅಸ್ವೀಕೃತ ಲೇಖನಗಳನ್ನು ತಿದ್ದಿ ಮತ್ತೆ ಸಲ್ಲಿಸಬಹುದು.

ಯೂನಿಕೋಡ್‌ನಲ್ಲಿ ಇರುವ *ಪ್ರಬುದ್ಧ ಕರ್ಣಾಟಕ*ದ ಅಂತರಜಾಲ ಆವೃತ್ತಿಯ ಜೊತೆಯಲ್ಲಿಯೇ ಅದನ್ನು 'ಓದ'ಬಲ್ಲ ವಿದ್ಯುನ್ಮಾನ ವಾಚಕ *ಇ–ಸ್ಪೀಕ್* ತಂತ್ರಾಂಶವನ್ನೂ ಕೊಡಲಾಗಿದೆ. ಅದನ್ನು ಇಳಿಸಿಕೊಂಡು *ಪ್ರಬುದ್ಧ ಕರ್ಣಾಟಕ*ದ ಲೇಖನಗಳನ್ನು 'ಕೇಳ'ಬಹುದು. ಇದರಿಂದ ಓದಲು ಸಾಧ್ಯವಾಗದ ದೃಷ್ಟಿವಂಚಿತರು ಲೇಖನಗಳನ್ನು ಗಣಕದಿಂದ ಓದಿಸಿ ಕೇಳಿ ತಿಳಿಯಲು ಬರೆಯಲು ಸಾಧ್ಯವಾಗಿದೆ. ಈ ವರ್ಷ ನಮ್ಮ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಎಂ.ಎ. ವಿದ್ಯಾರ್ಥಿಯಾಗಿದ್ದ ದೃಷ್ಟಿವಂಚಿತರಾದ ಸಿರಗುಪ್ಪದ ಶ್ರೀ ಪಿ.ವಿ. ನಾಗರಾಜ್ ಅವರ ಸಾಹಸ ಪ್ರಶಂಸಾರ್ಹವಾಗಿದೆ. ಅವರು ಈ ವರ್ಷದ ಕನ್ನಡ ಎಂ.ಎ. ಪರೀಕ್ಷೆಯಲ್ಲಿ ಸಹಾಯಕ ಬರಹಗಾರರಿಲ್ಲದೆ ತಾವೇ ಗಣಕದಲ್ಲಿ ಉತ್ತರಗಳನ್ನು ಬರೆದು ವಿಶ್ವವಿದ್ಯಾನಿಲಯದಲ್ಲಿ ಮೂರನೇ ರ್‍ಯಾಂಕ್ ಪಡೆದಿದ್ದಾರೆ. ನಗರದ ಜೆ.ಎಸ್.ಎಸ್ ಪಾಲಿಟೆಕ್ನಿಕಿನ ತಂತ್ರಜ್ಞಾನದ ವಿದ್ಯಾರ್ಥಿ ದೃಷ್ಟಿವಂಚಿತರಾದ ಸಾಗರದ ಶ್ರೀ ಟಿ.ಎಸ್. ಶ್ರೀಧರ್ *ಇ–ಸ್ಪೀಕ್* ವಾಚಕ ತಂತ್ರಾಂಶದಲ್ಲಿ ಕನ್ನಡವನ್ನು ಅಳವಡಿಸಿದವರು. *ಪ್ರಬುದ್ಧ ಕರ್ಣಾಟಕ* ಇವರಿಬ್ಬರನ್ನೂ ಹಾರ್ದಿಕವಾಗಿ ಅಭಿನಂದಿಸುತ್ತದೆ.

ಜ್ಞಾನಾನ್ವೇಷಣೆ ಮತ್ತು ಅದರ ಪ್ರಸಾರದಲ್ಲಿ ಸದಾ ಮುಂಚೂಣಿಯಲ್ಲಿರುವ *ಪ್ರಬುದ್ಧ ಕರ್ಣಾಟಕ* ನಿಮ್ಮ ಸುಸಜ್ಜಿತ ಸಹಯಾತ್ರಿಯಾಗಿದೆ. ನಿಮ್ಮ ಪ್ರತಿಕ್ರಿಯೆಗಳಿಗೆ ಸ್ವಾಗತ.

ಪಂಡಿತಾರಾಧ್ಯ

ಸಂಪಾದಕ ಮಂಡಲಿಯ ಪರವಾಗಿ

ಪರಿವಿಡಿ

ಈ ಸಂಚಿಕೆಯ ಲೇಖಕರು

೧ ಸೀತಾರಾಮ ಜಾಗೀರ್‌ದಾರ್

'ಕಲ್ಪ' ೪೦೬/ಬಿ೧
ಮೂರನೇ ಮುಖ್ಯರಸ್ತೆ, ೭ನೇ ತಿರುವು
ಸರಸ್ವತಿಪುರ ಮೈಸೂರು ೫೭೦ ೦೦೯

೨ ಜಿ.ಎನ್. ನರಸಿಂಹಮೂರ್ತಿ

ಪ್ರಧಾನ ಕಾರ್ಯದರ್ಶಿ ಕನ್ನಡ ಗಣಕ ಪರಿಷತ್ತು
೬೪/೨ ಮೊದಲ ಮಹಡಿ ೩ನೇ ತಿರುವು
೧ನೇ ಮುಖ್ಯ ರಸ್ತೆ ಚಾಮರಾಜಪೇಟೆ
ಬೆಂಗಳೂರು ೫೬೦ ೦೧೮

೩ ವಿನೋದಾ

ಕನ್ನಡ ಸಹಾಯಕ ಪ್ರಾಧ್ಯಾಪಕರು
ಎಂ.ಎಂ.ಕೆ. ಮತ್ತು ಎಸ್.ಡಿ.ಎಂ. ಮಹಿಳಾ ವಿದ್ಯಾಲಯ
ಕೃಷ್ಣಮೂರ್ತಿಪುರ, ಮೈಸೂರು ೫೭೦ ೦೦೪

೪ ಎಂ. ಭೈರಪ್ಪ

ಸಂಶೋಧನ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ ಮೈಸೂರು ೫೭೦ ೦೦೬

೫ ಧನಲಕ್ಷ್ಮಿ ಡಿ.ಡಿ.

ಕನ್ನಡ ಎಂ.ಎ. ವಿದ್ಯಾರ್ಥಿನಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ ಮೈಸೂರು ೫೭೦ ೦೦೬

೬ ಜಿ.ಆರ್. ತಿಪ್ಪೇಸ್ವಾಮಿ

ಕನ್ನಡ ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ ಮೈಸೂರು ೫೭೦ ೦೦೬

೭ **ವಿನೋದಮ್ಮ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಮಹಾಜನ ಪ್ರಥಮ ದರ್ಜೆ ಕಾಲೇಜು
ಜಯಲಕ್ಷ್ಮೀಪುರ ಮೈಸೂರು ೫೭೦ ೦೧೨

೮ **ಹೊಂಬಯ್ಯ ಹೊನ್ನಲಗೆರೆ**
ಸಂಶೋಧನ ವಿದ್ಯಾರ್ಥಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ ಮೈಸೂರು ೫೭೦ ೦೦೬

೯ **ಕಾ.ವೆಂ. ಶ್ರೀನಿವಾಸಮೂರ್ತಿ**
ಕನ್ನಡ ಸಹ ಪ್ರಾಧ್ಯಾಪಕ
ಕನ್ನಡ ಅಧ್ಯಯನ ವಿಭಾಗ
ಸ್ನಾತಕೋತ್ತರ ಕೇಂದ್ರ
ಕೋಲಾರ ೫೬೩ ೧೦೧

೧೦ **ಮಧುವನ ಶಂಕರ**
ಎಂ. ಶಂಕರ್
ಕನ್ನಡ ಸಹ ಪ್ರಾಧ್ಯಾಪಕ
ಸ್ನಾತಕೋತ್ತರ ಕೇಂದ್ರ
ಹೇಮಗಂಗೋತ್ರಿ ಹಾಸನ ೫೭೧ ೨೨೦

೧೧ **ಎನ್.ಎಸ್. ರಘುನಾಥ್**
ಸಂದರ್ಶನ ಪ್ರಾಧ್ಯಾಪಕ
ಇಂಗ್ಲಿಷ್ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ ೫೮೦ ೦೦೩

೧೨ **ನಗರಗೆರೆ ರಮೇಶ್**
'ನಾದ', ೩೬೬ ೮ನೆಯ ಅಡ್ಡ ರಸ್ತೆ,
೮ನೆಯ ಮುಖ್ಯರಸ್ತೆ
ಬೆಂಗಳೂರು ೫೬೦ ೦೭೦

೧೩ **ಎಂ.ಬಿ. ರಾಜಮಣಿ**
ಸಂಶೋಧನ ವಿದ್ಯಾರ್ಥಿನಿ
ಭಾಷಾವಿಜ್ಞಾನ ವಿಭಾಗ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ ಮೈಸೂರು ೫೭೦ ೦೦೬

೧೪ **ಆರ್. ಸೋಮಪ್ಪ**
ಪ್ರಾಧ್ಯಾಪಕರು
ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ ಮೈಸೂರು ೫೭೦೦೦೬

೧೫ **ವಿಜಯರಾಜು ಬಿ.ಪಿ.**
ಸಂಶೋಧನ ವಿದ್ಯಾರ್ಥಿ
ರಾಜ್ಯಶಾಸ್ತ್ರ ಅಧ್ಯಯನ ಮತ್ತು ಸಂಶೋಧನ ವಿಭಾಗ
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ ಮೈಸೂರು ೫೭೦೦೦೬

೧೫ **ಸತೀಶ ಇಟಗಿ ಕೊಟ್ರಪ್ಪ**
ಸಂಶೋಧನ ವಿದ್ಯಾರ್ಥಿ
ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ
ಮಾನಸಗಂಗೋತ್ರಿ ಮೈಸೂರು ೫೭೦೦೦೬

ಅಧ್ವರ ಧೂಮದೆ ಕರಿದು ಮಾಡಿದಂ ನಿಜಯಶಮಂ!

ಸೀತಾರಾಮ ಜಾಗೀರ್‌ದಾರ್

ಕನ್ನಡದ ಆದಿಕವಿಪಂಪ, ತನ್ನ ವಂಶಾವಳಿಯ ವಿವರಗಳನ್ನು 'ವಿಕ್ರಮಾರ್ಜುನವಿಜಯಂ' ಲೌಕಿಕ ಕಾವ್ಯದಲ್ಲಿ ವಿವರಿಸುತ್ತ ಆ ಹಿರಿಯರ ಹಿರಿಮೆಗರಿಮೆಗಳನ್ನು ಹೀಗೆ ನೀಡಿದ್ದಾನೆ:

ಆ ಮಳಯಾಚಳ ಹಿಮಗಿರಿ
ಸೀಮಾವನಿತಳ[ಕೆ] ಬೆಂಗಿಮಂಡಳದೊಳ್ ಚೆ
ಲ್ವಾವಗಮೆ ತನಗದೊಂದೂರ್
ನಾಮದೊಳಂ ವೆಂಗಿಪೞು ಕರಂ ಸೊಗಯಿಸುಗುಂ ॥೧೪-೪೦॥

ಅದುವೆ ವಸಂತಂ ಕೊಟ್ಬೊ
ರೊದವಿದ ನಿಡುಗುಂದಿ ಮಿಕ್ಕ ವಿಕ್ರಮಪುರವೆಂ
ಬುದುಮಗ್ರಹಾರ ಸಂಪ
ತ್ಪದವಿಗಳೊಳಮಗ್ರಗಣ್ಯನೂರ್ಜಿತಪುಣ್ಯಂ ॥೧೪-೪೧॥

ನಯಶಾಲಿ ವತ್ಸಗೋತ್ರ
ಶ್ರಯಣೀಯನನೇಕ ಸಕಳ ಶಾಸ್ತ್ರಾರ್ಥ ವಿನಿ
ಶ್ಚಯ ಮತಿಕೃತಿ ಮಾಧವಸೋ
ಮಯಾಜಿ ಸಲೆನೆಗೞ್ದನಾ ಸಮುದ್ರಂ ಬರೆಗಂ ॥೧೪-೪೨॥

ಶಕ್ರ ಶಶಾಂಕ ಸೂರ್ಯ ಪವಮಾನರುಮಾತನ ಹೋಮಮಂತ್ರ ಚ
ಕ್ರ ಕ್ರಮಕ್ಕ[ಣಂ] ಮಿಡುಕಲಾಗಡೆ ಶಾಪಮನೀಗುಮೆಂದೆ ದಿ
ಕ್ಚಕ್ರಮುಮಂಜಿ ಬೆರ್ಚಿ ಬೆಸಕೆಯ್ವುದದಲ್ಲದಗುರ್ವು ಪರ್ವೆ ಸ
ರ್ವಕ್ರತುಯಾಜಿಯಾದನಳವಿಂತುಟು ಮಾಧವಸೋಮಯಾಜಿಯಾ ॥೧೪-೪೩॥

ವರದಿಗ್ವನಿತೆಗೆ ಮಾಟದ
ಕುರುಳಾ ತ್ರೈಭುವನ ಕಾಂ[ತೆಗಂ] ದಲ್ ಕಂಠಾ
ಭರಣಮೆನೆ ಪರೆದ ತನ್ನ
ಧ್ವರ ಧೂಮದೆ ಕರಿದುಮಾಡಿದಂ ನಿಜಯಶಮಂ ॥೧೪-೪೪॥

ತತ್ತನಯನಖಿಳಕರಿತುರ
ಗೋತ್ತಮ ಮಣಿಕನಕ ಸಾರವಸ್ತುವನೆರೆದ
ರ್ಗಿತ್ತು ಸಲೆನೆಗಟ್ದನತಿಪುರು
ಷೋತ್ತಮನಭಿಮಾನಚಂದ್ರನೆನಿಪಂ ಪೆಸರಿಂ ॥೧೪-೪೫॥

ಆತಂಗೆ ಭುವನ ಭವನ
ಖ್ಯಾತಂಗೆ ಸಮಸ್ತ ವೇದ ವೇದಾಂಗ ಸಮು
ದ್ಯೋತಿತ ಮತಿಯುತನುಚಿತ ಪು
ರಾತನಚರಿತಂ ತನೂಭವಂ ಕೊಮರಯ್ಯಂ ॥೧೪-೪೬॥

ಆ ಕೊಮರಯ್ಯಂಗವನಿತ
ಳಾಕಾಶ ವ್ಯಾಪ್ತ ಕೀರ್ತಿ ನಿಜಗುಣಮಣಿ ರ
ತ್ನಾಕರನ ಜ್ಞಾನ ತಮೋ
ನೀಕಪರಂ ಭೀಮನಾಮಧೇಯಂ ತನಯಂ ॥೧೪-೪೭॥

ಜಾತಿಯೊಳೆಲ್ಲಮುತ್ತಮದ ಜಾತಿಯ ವಿಪ್ರಕುಲಂಗೆ ನಂಬಲೇ
ಮಾತೊ ಜಿನೇಂದ್ರ ಧರ್ಮಮೆ ವಲಂ ದೊರೆ ಧರ್ಮದೊಳೆಂದು ನಂಬಿ ತ
ಜ್ಞಾತಿಯನುತ್ತರೋತ್ತರಮೆ ಮಾಡಿ ನೆಗಳ್ಚಿದಂನಿಂತಿರಾತ್ಮ ವಿ
ಖ್ಯಾತಿಯನಾತನಾತನ ಮಗಂ ನೆಗಟ್ಡಂ ಕವಿತಾಗುಣಾರ್ಣವಂ ॥೧೪-೪೮॥

ಮೇಲಿನ ಪದ್ಯಗಳ ಸರಣಿಯನ್ನು ಗಮನಿಸಿದರೆ 'ಕವಿತಾಗುಣಾರ್ಣವ' ಬಿರುದಿನ ಪಂಪನಿಗೆ ತನ್ನ ಪೂರ್ವಜರ ಬಗೆಗೆ, ಅವರ ಜೀವನದ ಹಿರಿಮೆಗರಿಮೆಗಳ ಬಗೆಗೆ ಯಾವುದೇ ಅಸಹನೆ, ವ್ಯಂಗ್ಯ ಹಾಗೂ ತಿರಸ್ಕಾರಗಳು ಇದ್ದಂತೆ ತಿಳಿಯುವುದಕ್ಕೆ ಅವಕಾಶವಿಲ್ಲ. ಆದರೆ ೪೪ನೇ ಪದ್ಯವನ್ನು ಓದಿದಾಗ ಅಲ್ಲಿ ಬಂದಿರುವ ಶಬ್ದ ಯಶ ಎಂಬ ಪದಕ್ಕೆ 'ಕೀರ್ತಿ' ಎಂದು ಅರ್ಥೈಸಿ ಕವಿಸಮಯದ ಸಹಾಯದಿಂದ ಅನೇಕರು ವಿವರಿಸಿದರು. 'ಕೀರ್ತಿ' ಇದು ಕವಿಸಮಯದ ಪ್ರಕಾರ ಬೆಳ್ಳಗಿರುತ್ತದೆ. ಅಪಯಶಸ್ಸು ಕಪ್ಪಾಗಿರುತ್ತದೆ. ಇದು ಲೋಕರೂಢಿಯ ಸಾಮಾನ್ಯ ತಿಳಿವಳಿಕೆ. ಈ ದಿಶೆಯಲ್ಲಿ ಇನಿತು ವಿವರಣೆ ನೀಡಿ ಇಲ್ಲಿನ 'ನಿಜಯಶಮಂ ಕರಿದು ಮಾಡಿದಂ' ಎಂದು ಹೇಳಿರುವುದರಲ್ಲಿ ಔಚಿತ್ಯವೇನಿದೆ? ಎಂದು ಪ್ರಶ್ನಿಸಿ ದಿವಂಗತ ಪ್ರೊ. ಡಿ.ಎಲ್.ಎನ್. ಹೀಗೆ ನಿರೂಪಿಸಿದ್ದಾರೆ:

ದಿಗಂತ ವ್ಯಾಪಿಯೂ ಮೂರು ಲೋಕಗಳಲ್ಲಿ ಪ್ರಸಾರವುಳ್ಳದ್ದೂ ಆಗಿದ್ದ ಅವನ ಕೀರ್ತಿ – ಇದು ಬೆಳ್ಳಗೆ ಇರುವುದೆಂದು ಕವಿಸಮಯ–ಅವನು ಮಾಡಿದ ಯಾಗಗಳ ಧೂಮದಿಂದ ಕರಿದಾಯಿತು ಎಂದರೆ ಪ್ರಶಸ್ತಿಯ ಮಾತಲ್ಲ. ಈ ಪದ್ಯದಲ್ಲಿ ಏನೋ ಪಾಠದೋಷವಿರಬೇಕೆಂದು ತೋರುತ್ತದೆ. ಈ ಪದ್ಯವನ್ನು ಬರೆಯುವಾಗ ಪಂಪ ಬಾಣಭಟ್ಟನ ಈ ಕೆಳಗಿನ ಪದ್ಯವನ್ನು ಸ್ಮರಣೆಗೆ ತಂದುಕೊಂಡಿರುವನೆಂದು ತೋರುತ್ತದೆ.

ದಿಶಾಮಲೀಕಾಲಕ ಭಂಗತಾಂ ಗತಃ
ತ್ರಯೀವಧೂಕರ್ಣತಮಾಲ ಪಲ್ಲವಃ ।
ಚಕಾರ ಯಸ್ಯಾಧ್ವರಧೂಮಸಂಚಯೋ
ಮಲೀಮಸಃ ಶುಕ್ಲತರಂ ನಿಜಯಶಃ ॥ (ಕಾದಂಬರೀ ೧-೧೮)

ಇದರಲ್ಲಿ ಬಾಣ ತನ್ನ ತಂದೆಯಾದ ಚಿತ್ರಭಾನುವಿನ ಪ್ರಶಂಸೆಯನ್ನು ಮಾಡಿದ್ದಾನೆ. ಯಾರ ಯಾಗಧೂಮಸಮೂಹ ದಿಗ್ವನಿತೆಗಳ ಲಲಾಟದಲ್ಲಿ ಕುರುಳುಗಳಾದವೋ, ವೇದತ್ರಯಗಳೆಂಬ ಕಾಂತೆಯ ಕಿವಿಯಲ್ಲಿರುವ ತಮಾಲಪಲ್ಲವಗಳಾದವೋ ಆ ಧೂಮವು ಮಲೀಮಸ ಮಸವಾಗಿದ್ದರೂ ಅವನ ಕೀರ್ತಿಯನ್ನು ಶುಕ್ಲತರವಾಗಿ ಮಾಡಿದವು –ಇದು ಪದ್ಯದ ಅಭಿಪ್ರಾಯ, ಅವನ ಕೀರ್ತಿ ಮೊದಲೇ ಬೆಳ್ಳಗಿತ್ತು; ಅದನ್ನು ಯಾಗಧೂಮದ ಹೊಗೆ ತಾನೆ ಕರಿದಾಗಿದ್ದರೂ ಹೆಚ್ಚು ಬೆಳ್ಳಗಾಗಿಸಿತು. ಎಂದರೆ ಅವನ ಕೀರ್ತಿ ದಿಗಂತದವರೆಗೂ ವ್ಯಾಪಿಸಿತ್ತು. ಮೂರು ವೇದಗಳಿಗೆ ಕರ್ಣಾಭರಣವಾಯಿತು. ಅತಿಶಯವಾಯಿತು ಎಂದು ಭಾವ. ಈ ಪದ್ಯಗಳಲ್ಲಿರುವ ಆಲೀಕ ಶಬ್ದಕ್ಕೆ ಕೃತಕ, ಲಲಾಟ ಎಂಬೆರಡರ್ಥಗಳಿವೆ. ಪ್ರಕೃತ ಪಂಪನು 'ಅಲೀಕ'ವನ್ನು ಕೃತಕಾರ್ಥದಲ್ಲಿ ಸ್ವೀಕರಿಸಿ 'ಮಾಟದ' ಎಂದು ಭಾಷಾಂತರಿಸಿದ್ದಾನೆ; 'ತ್ರಯೀವಧೂ'ವನ್ನು ತ್ರೈಭುವನ ಕಾಂತೆಯನ್ನಾಗಿ ಮಾಡಿದ್ದಾನೆ; ಕರ್ಣತಮಾಲ ಪಲ್ಲವ'ವನ್ನು 'ಕಂಠಾಭರಣ'ವಾಗಿಸಿದ್ದಾನೆ. 'ಮಾಟದ ಕುರುಳ್' ಚೆನ್ನಾಗಿದೆ; 'ತ್ರೈಭುವನಕಾಂತ' ಆದುದಕ್ಕೆ ಕಾರಣ? ಪಂಪನಿಗೆ ಶ್ರುತಸ್ಕಂಧದಲ್ಲಿ ಇದ್ದಷ್ಟು ನಂಬಿಕೆ ವೇದತ್ರಯದಲ್ಲಿ ಬಹುಶಃ ಇದ್ದಿರಲಾರದೇನೋ? ಆದ್ದರಿಂದ ಅವನು ಬಾಣನ ರೂಪಕವನ್ನು ಮಾರ್ಪಡಿಸಿರಬಹುದು. 'ಕಾಂ[ತೆಗಂ]ದಲ್' ಎಂಬುದಕ್ಕೆ, ಕಂಠಮಾಲಾ, ಕಂಠಮಾ, ಕತಮಾ, ಕಾಂತಮಾದಲ್– ಎಂಬ ಪಾಠಾಂತರಗಳಿವೆ; ಇವನ್ನು ನೋಡಿದರೆ ಈ ಎಡೆಯಲ್ಲಿ ಪಂಪನ ಪದ್ಯ ಕೆಟ್ಟಿದೆಯೆಂದು ತೋರಿಬರುತ್ತದೆ. 'ಶುಕ್ಲತರಂ ಚಕಾರ' ಎಂಬ ಬಾಣನ ಮಾತುಗಳಿಗೆ ಪ್ರತಿಯಾಗಿ 'ಕರಿದು ಮಾಡಿದಂ' ಎಂದು ಏಕೆ ಬರೆದ ಪಂಪ? ಇದು ಬಹುಶಃ 'ಕರಮೆ ಮಾಡಿದಂ' ಎಂದಿರಬಹುದೇನೋ? ಎಂದರೆ ಅತಿಶಯವಾಗುವಂತೆಯೇ ಮಾಡಿದನು ಎಂದರ್ಥ ಬರುತ್ತದೆ. ಅಂತು ಈ ಪದ್ಯ ಒಂದು ಸಮಸ್ಯೆಯಾಗಿದೆ (ಡಿ.ಎಲ್. ನರಸಿಂಹಚಚಾರ್ ೧೯೭೧: ೫೭೦–೭೧).

ವ್ಯಾಖ್ಯಾನವನ್ನು ಮುಂದುವರೆಸುತ್ತ ಪಂಪನ ತಂದೆ ಭೀಮಪ್ಪಯ್ಯ, ತಾಯಿ ಅಬ್ಬಣಬ್ಬೆ ತಂದೆಯ ತಂದೆ ನಿಡುಂಗೊಂಡೆಯ ಅಭಿಮಾನಚಂದ್ರ ಮತ್ತು ತಾಯಿಯ ತಂದೆ ಬೆಳ್ವೊಲದಣ್ಣಿಗೆರೆಯ ಜೋಯಿಸ ಸಿಂಘ ಎಂದೂ ವಿವರಿಸಿದ್ದಾರೆ. ಅದಾದ ಮೇಲೆ 'ಅಬ್ಬಣಬ್ಬೆಯ ತಾತ ಅಣ್ಣಿಗೆಱೆಯ ಜೋಯಿಸ ಸಿಂಘ, ಅವನ ಮೊಮ್ಮಗಳ ಮಗ ಜಿನವಲ್ಲಭ, ಪಂಪ ಇವನ ಅಣ್ಣನಾದುದರಿಂದ ಪಂಪನ ತಾಯಿ ಅಬ್ಬಣಬ್ಬೆಯೇ ಆಗಿರಬಹುದು. ಇವರು **ಏಕೋದರರಾಗಿದ್ದ** ಪಕ್ಷದಲ್ಲಿ' (ಅಲ್ಲೇ ಪು.೫೭೨). ಈ ಮಾತುಗಳನ್ನು ಕನ್ನಡನಾಡಿನ ನಮ್ಮ ವಿದ್ವಾಂಸರು ಬಹಳ ಎಚ್ಚರದಿಂದ ಪರಿಶೀಲಿಸಬೇಕು. ಪಂಪ ಮತ್ತು ಜಿನವಲ್ಲಭ **ಏಕೋದರರು** ಎಂದು ಹೇಳುವುದಕ್ಕೆ ಸದ್ಯ ಒಂದಾದರೂ ದಾಖಲೆ ಇಲ್ಲ. ಊಹೆಯ ಕುದುರೆಯ ಮೇಲೆ ಕೂಡಬೇಕಾಗಿದೆ. ಪಂಪನು 'ಅಣ್ಣಿಗೆರೆ' ಊರಿನ ಬಗೆಗಾಗಲಿ, ಜಿನವಲ್ಲಭನ ಬಗೆಗಾಗಲಿ ಹಾಗೂ ಅಬ್ಬಣಬ್ಬೆ ಮತ್ತು ಆಕೆಯ ತವರಿನವರ ಬಗೆಗಾಗಲಿ ತನ್ನ ಕಾವ್ಯಗಳಲ್ಲಿ ಒಂದಕ್ಷರವನ್ನು ಬರೆದಿಲ್ಲ. ಕೆಲವು ವಿದ್ವಾಂಸರು ಊಹಿಸುವಂತೆ ಬೆಳ್ವೊಲದ ಅಣ್ಣಿಗೇರಿಯವನೆಂದು ಹೇಳಲು ಪಂಪನ ಮಾತೆ ಅಡ್ಡಬರುತ್ತದೆ ಏಕೆಂದರೆ ಬೆಳ್ವೊಲ ಮೂನೂರರ ಪ್ರಾಂತ (ಬೆಳ್ವೊಲ–೩೦೦) ಪುಲಿಗೆರೆ–೩೦೦ರಿಂದ ಭಿನ್ನವಾದದ್ದು. ಅದರ ಆಡಳಿತ ಆ ಪ್ರಾಂತವನ್ನು ಮುಂದಕ್ಕೆ ತರುತ್ತದೆ. ಅಡ್ಡವಾಗುತ್ತದೆ. ಪಂಪನು ಹೇಳಿರುವುದು ತನ್ನದು 'ರಾಜದ್ರಾಜಕಮೆನಿಸಿದ' ಪುಲಿಗೆರೆಯ ತಿರುಳ ಕನ್ನಡ. ಜಿನವಲ್ಲಭ ಹಾಗೂ ಆತನ ಮಾತೆ ಅಬ್ಬಣಬ್ಬೆ ಇವರು ಪಂಪನು ಅವರನ್ನು ಜ್ಞಾಪಿಸಿಕೊಳ್ಳಲಾರದಂತಹ ರೀತಿಯ ಏನೋ ಕೆಲಸ ಮಾಡಿರಬೇಕು. ನೆನೆಯಲು ಆಗದ ಸಂಬಂಧಿಗಳು ಆಗಿರಬೇಕು! ಅಜ್ಜ ಅಭಿಮಾನಚಂದ್ರ–ತಂದೆಯ

ತಂದೆಯ ತಂದೆಯನ್ನು ತಂದೆಯ ತಂದೆ ಕೊಮರಯ್ಯನನ್ನು ಹೇಳಿದ ಪಂಪನಿಗೆ ಅಜ್ಜ ಜೋಯಿಸ ಸಿಂಘನ ಬಗೆಗೆ ಗೌರವ ಇದ್ದಿಲ್ಲವೆ? ಮತ್ತೆ ಜಿನವಲ್ಲಭನು ಅಜ್ಜ ಕೊಮರಯ್ಯನ ಬಗೆಗೆ ಒಂದು ಮಾತನ್ನೂ ಹೇಳಿಲ್ಲ. ಕೊಮರಯ್ಯ ಜಿನವಲ್ಲಭನಿಗೆ ಏನನ್ನು ಮಾಡಿದ? ಕೊಮರಯ್ಯ ಪಂಪ ಒಂದೆಡೆ ಇದ್ದರೆ ಭೀಮಪಯ್ಯ ಹಾಗೂ ಆತನ ಎರಡನೆಯ ಹೆಂಡತಿ, ಆ ಕುಟುಂಬ ಬೇರೆ ಇದ್ದಿರಬಹುದು. ಕೊಮರಯ್ಯನಿಗೂ ಜಿನವಲ್ಲಭನಿಗೂ ಹತ್ತಿರದ ಆತ್ಮೀಯತೆ ಬಂದಿರಲಿಕ್ಕಿಲ್ಲ. ಪಂಪ ಕೊಮರಯ್ಯನನ್ನು ತುಂಬ ಗೌರವದಿಂದಲೇ ಕಂಡಿದ್ದಾನೆ (೧೪–೪೬).

ಅವನಿಗೆ ಆ ಅಜ್ಜನ ಮೇಲೂ ಹಾಗೆಯೇ ವೇದ ವೇದಾಂಗಗಳ ಬಗೆಗೂ ಗೌರವ ಇದ್ದುದಕ್ಕೆ ಇಲ್ಲಿ ಸಾಕ್ಷಿ ಇದೆ; ಕಾರಣ ಪಂಪನಿಗೆ ವೇದ, ವೇದಾಂಗಗಳ ಬಗ್ಗೆ ಗೌರವ ಇದ್ದಿಲ್ಲವೆಂದು ಅಥವಾ 'ಪಂಪನಿಗೆ ಶ್ರುತಸ್ಕಂಧದಲ್ಲಿ ಇದ್ದಷ್ಟು ನಂಬಿಕೆ ವೇದತ್ರಯದಲ್ಲಿ ಬಹುಶಃ ಇದ್ದಿರಲಾರದೇನೋ?' ಎಂದೂ ಸಂದೇಹಪಡಬೇಕಾಗಿಲ್ಲ. ಮಹಾಕವಿಗಳು, ಮಹಾಪಂಡಿತರು, ಶಾಸ್ತ್ರಿಗಳು, ಪ್ರಾಚಾರ್ಯರು ಇನ್ನೊಬ್ಬರು ಹೇಳಿದುದನ್ನು ಯಥಾವತ್ತಾಗಿ ಸ್ವೀಕರಿಸುವುದಿಲ್ಲ; ತಮ್ಮದಾದ ರೀತಿಯಲ್ಲೇ ಅವರು ನಿರೂಪಿಸುತ್ತಾರೆ; ಪಂಪನೂ ಹಾಗೆ ಮಾಡಿದ್ದಾನೆ.

ಪಂಪನು ಬಾಣಭಟ್ಟನ ಕೃತಿಗಳಿಂದ ವಿಶೇಷ ಪ್ರಭಾವಿತನಾಗಿದ್ದಾನೆ. ಇದಕ್ಕೆ ಎರಡು ಕಾರಣಗಳಿವೆ:

(೧) ಬಾಣಭಟ್ಟ, ಭಾರತವು ಪಡೆದ ಕೆಲವೇ ಪ್ರತಿಭಾವಂತ ಕವಿಗಳಲ್ಲಿ ಒಬ್ಬ.

(೨) ಇನ್ನೊಂದು ಆತ ಪಂಪನಿಗೆ ತನ್ನ ಗೋತ್ರದ ವ್ಯಕ್ತಿ, ಸಂಬಂಧಿ ಎಂಬ ಒಂದು ಗೋತ್ರ ಸಂಬಂಧವೂ ಇದೆ. ಅದೆಂದರೆ 'ವತ್ಸ' ಗೋತ್ರ–

ಬಭೂವ ವಾತ್ಸಾಯನ ವಂಶಸಂಭವೋ
ದ್ವಿಜೋ ಜಗದ್ಗೀತ ಗುಣೋಗ್ರಣೀಃ ಸತಾಮ್
ಅನೇಕ ಗುಪ್ತಾರ್ಚಿತ ಪದಪಂಕಜಃ
ಕುಬೇರನಾಮಾಂಶ ಸ್ವಯಂಭುವಃ ಕಾದಂಬರೀ ॥೧–೧೦॥

ಉವಾಸ ಯಸ್ಯ ಶ್ರುತಿಶಾಂತಕಲ್ಮಷೇ
ಸದಾ ಪುರೋಡಾಶಪವಿತ್ರಿತಾಧರೇ
ಸರಸ್ವತೀ ಸೋಮಕಷಾಯಿತೋದರೇ
ಸಮಸ್ತಶಾಸ್ತ್ರಸ್ಮೃತಿಬಂಧುರೇ ಮುಖೇ ॥೧–೧೧॥
ಜಗುರ್ಗೃಹೇಭ್ಯಸ್ತ ಸಮಸ್ತ ವಾಙ್ಮಯೈಃ
ಸಸಾರಿಕೈಃ ಪಂಜರ ವರ್ತಿಭಿಃ ಶುಕೈಃ
ನಿಗೃಹ್ಯಮಾಣಾ ವಟವಃ ಪದೇಪದೇ
ಯಜೂಂಷಿ ಸಾಮಾನಿ ಚ ಯಸ್ಯ ಶಂಕಿತಾಃ ॥೧–೧೨॥

ಹಿರಣ್ಯಗರ್ಭೋ ಭುವನಾಂಡಕಾದಿವ
ಕ್ಷಪಾಕರಃ ಕ್ಷೀರಮಹಾರ್ಣವಾದಿವ

ಅಧ್ವರ ಧೂಮದೆ ಕರಿದು ಮಾಡಿದಂ ನಿಜಯಶಮಂ!

ಅಭೂತ್ಸುಪರ್ಣೋರ್ವಿನತೋದರಾದಿವ
ದ್ವಿಜನ್ಮನಾಮರ್ಥಪತಿಃ ಪತಿಸ್ತತಃ ॥೧–೧೩॥

ವಿವೃಣ್ವತೋ ಯಸ್ಯವಿಸಾರಿ ವಾಙ್ಮಯಂ
ದಿನೇದಿನೇ ಶಿಷ್ಯಗಣಾ ನವಾನವಾಃ
ಉಷಃ ಸುಲಗ್ನಾಃ ಶ್ರವಸೇಧಿಕಾಂ
ಶ್ರಿಯಂಪ್ರಚಕ್ರಿರೇ ಚಂದನಪಲ್ಲವಾ ಇವ ॥೧–೧೪॥

ವಿಧಾನಸಂಪಾದಿತದಾನ ಶೋಭಿತೈಃ
ಸ್ಫುರನ್ಮಹಾವೀರ ಸನಾಥ ಮೂರ್ತಿಭಿಃ
ಮಖೈರಸಂಖ್ಯೈರಜಯತ್ಸುರಾಲಯಂ
ಸುಖೇನ ಯೋಯೂಪಕರೈರ್ಗಜೈರಿವ ॥೧–೧೫॥

ಸ ಚಿತ್ರಭಾನುಂ ತನಯಂ ಮಹಾತ್ಮನಾಂ
ಸುತೋತ್ತಮಾನಾಂ ಶ್ರುತಿಶಾಸ್ತ್ರಶಾಲಿನಾಮ್
ಅವಾಪ ಮಧ್ಯೇಸ್ಫಟಿಕೋಪಲೋಪಮಂ
ಕ್ರಮೇಣ ಕೈಲಾಸಮಿವ ಕ್ಷಮಾಭೃತಾಮ್ ॥೧–೧೬॥

ಮಹಾತ್ಮನೋ ಯಸ್ಯ ಸುದೂರ ನಿರ್ಗತಾಃ
ಕಲಂಕಮುಕ್ತೇಂದು ಕಲಾಮಲತ್ವಿಷಃ
ದ್ವಿಷನ್ಮನಃ ಪ್ರಾವಿವಿಶುಃ ಕೃತಾಂತರಾ
ಗುಣಾ ನೃಸಿಂಹಸ್ಯ ನಖಾಂಕುರಾ ಇವ ॥೧–೧೭॥

ದಿಶಾಮಲೀಕಾಲಕ ಭಂಗತಾಂ ಗತಃ
ತ್ರಯೀವಧುಕರ್ಣ ತಮಾಲಪಲ್ಲವಃ
ಚಕಾರ ಯಶ್ಯಾಧ್ವರಧೂಮಸಂಚಯೋ
ಮಲೀಮಸಃ ಶುಕ್ಲತರಂ ನಿಜಂ ಯಶಃ ॥೧–೧೮॥

ಸರಸ್ವತೀ ಪಾಣಿಸರೋಜ ಸಂಪುಟ
ಪ್ರಮೃಷ್ಟ ಹೋಮ ಶ್ರಮಶೀಕರಾಂಭಸಃ
ಯಶೋಂಶು ಶುಕ್ಲೀಕೃತಸಪ್ತ ವಿಷ್ಟಪಾತ್
ತತಃಸುತೋ ಬಾಣ ಇತಿ ವ್ಯಜಾಯತ ॥೧–೧೯॥

ದ್ವಿಜೇನ ತೇನಾಕ್ಷತ ಕಂಠಕೌಂಠ್ಯಂ ಯಾ
ಮಹಾಮನೋ ಮೋಹ ಮಲೀಮಸಾಂಧಯಾ
ಅಲಬ್ಧ ವೈದಗ್ಧ್ಯ ವಿಲಾಸ ಮುಗ್ಧಯಾ
ಧಿಯಾ ನಿಬದ್ಧೇಯಮತಿದ್ವಯೀ ಕಥಾ ॥೧–೨೦॥

ಬಾಣಭಟ್ಟ ತನ್ನ ವಂಶಚರಿತ್ರೆಯನ್ನು ಕೃತಿಯ ಆರಂಭದಲ್ಲಿ ಕೊಟ್ಟರೆ ಪಂಪ ತನ್ನ ಕೃತಿಯ ಕೊನೆಯ ಭಾಗದಲ್ಲಿ ಅದನ್ನು ಕೊಟ್ಟಿದ್ದಾನೆ. ಬಾಣ ತನ್ನ ಅಜ್ಜ ಕುಬೇರ ಎಂಬ ಶ್ರೀಮಂತ ವ್ಯಕ್ತಿಯಿಂದ ಆರಂಭಿಸಿದರೆ ಪಂಪನೂ ತನ್ನ ವಂಶದ ಹಿರಿಯ ಶ್ರೀಮಂತ ವ್ಯಕ್ತಿ– ಪ್ರಸಿದ್ಧ ವ್ಯಕ್ತಿ– ಮಾಧವ ಸೋಮಯಾಜಿ ಎಂಬವನಿಂದ

ಆರಂಭಿಸಿದ್ದಾನೆ. ಬಾಣಭಟ್ಟ ತನ್ನ ವಂಶಜರ ಊರುಕೇರಿ ಇವುಗಳ ಬಗ್ಗೆ ಬರೆದಿಲ್ಲ. ಆದರೆ ಪಂಪ ಆ ಬಗ್ಗೆ ಸ್ಪಷ್ಟವಾಗಿ ಬರೆದಿದ್ದಾನೆ:

ಹಿಮಗಿರಿ ಸೀಮಾವನಿತಳಕ್ಕೆ ವ್ಯಂಗಿ(ಬೆಂಗಿ) ಮಂಡಲದಲ್ಲಿ ಚೆಲ್ವಿನಿಂದ ಕೂಡಿದ ಊರು ವೆಂಗಿಪೞು. ವಸಂತ, ಕೊಟ್ಟೂರು, ನಿಡುಗುಂದಿ (ನಿಡುಂಗೊಂಡೆ) ವಿಕ್ರಮಪುರಗಳ ಹಾಗೆ ಪ್ರಸಿದ್ಧ ಅಗ್ರಹಾರ ವೆಂಗಿಪೞು. ಆ ವೆಂಗಿಪೞುವಿನಲ್ಲಿ ವತ್ಸಗೋತ್ರ ಶ್ರಯಣೀಯ –ಸಕಳ ಶಾಸ್ತ್ರಾರ್ಥ ಸೂಕ್ಷ್ಮಾತಿಸೂಕ್ಷ್ಮಗಳನ್ನು ಬಲ್ಲವ್ಯಕ್ತಿ– ಮಾಧವ ಸೊಮಯಾಜಿ. ಅವನ ಕೀರ್ತಿ ಆ ಸಮುದ್ರದವರೆಗೆ ಹಬ್ಬಿತ್ತು.

ಆತನ ತನಯ ಅಭಿಮಾನಚಂದ್ರ 'ಕರಿ, ತುರಗ, ಮಣಿ, ಕನಕ' ಇತ್ಯಾದಿ ಸಾರವಸ್ತುಗಳನ್ನು ಬೇಡಿದವರಿಗೆ ಬೇಡಿದಂತೆ ಕೊಟ್ಟು 'ಅತಿ ಪುರುಷೋತ್ತಮ' ಎಂಬ ಬಿರುದಿಗೆ ಪಾತ್ರನಾದ. ಆತನಿಗೆ, ಭುವನ–ಭವನ ಖ್ಯಾತನಿಗೆ, ವೇದವೇದಾಂಗ ಪಾರಂಗತ ಕೊಮರಯ್ಯ ಪುತ್ರ, ಆ ಕೊಮರಯ್ಯನಿಗೆ 'ಅವನಿತಳ ಆಕಾಶ ವಾಪ್ತ ಕೀರ್ತಿ' 'ನಿಜಗುಣಮಣಿರತ್ನಾಕರ' 'ಅಜ್ಞಾನ ತಮೋನೀಕಪರನ್' ಬಿರುದಿನ ಭೀಮಪಯ್ಯನು ತನಯ. ತೆಲುಗು ಪತ್ರಿಕೆ 'ಭಾರತಿ'ಯ ೧೯೬೭ರ ಮಾರ್ಚ್‌ನ ಸಂಚಿಕೆ ಬರುವವರೆಗೆ ಎಂದರೆ ಪಂಪನ ತಮ್ಮ ಜಿನವಲ್ಲಭನ ಗಂಗಾಧರಂ(ವೃಷಭಾದ್ರಿ) ಶಿಲಾಶಾಸನವು ಪ್ರಕಟವಾಗುವ ತನಕ ಪಂಪನ ತಂದೆಯ ಹೆಸರು 'ಆಭಿರಾಮದೇವರಾಯ' ಎಂದು ಕನ್ನಡ ಲೋಕದಲ್ಲಿ ಪ್ರಚಲಿತವಾಗಿತ್ತು. ಈ ಶಾಸನ, ಪಂಪನ ಬಗೆಗೆ ಹಲವು ಹೊಸ ಸಂಗತಿಗಳನ್ನು ಬೆಳಕಿಗೆ ತಂದಿತು. ಅವೆಂದರೆ

೧). ಪಂಪನ ತಂದೆಯ ಹೆಸರು ಭೀಮಪ್ಪಯ್ಯ. 'ಆಭಿರಾಮದೇವರಾಯ' ಎಂಬುದು ಪ್ರಮಾದ ಜನಿತ.

೨) ಮಾಧವಸೋಮಯಾಜಿಯು ವೆಂಗಿಪೞು ಎಂಬ ಗ್ರಾಮದಲ್ಲಿ ಇದ್ದರೆ ಆತನ ಪುತ್ರ ಅಭಿಮಾನಚಂದ್ರ ಗುಂಡಿಕಞ್ಬ (ಗುಂಡ್ಲಕಮ್ಮ) ನದಿಯ ತೀರದ ನಿಡುಂಗೊಂಡೆ ಗ್ರಾಮದಲ್ಲಿ ಇದ್ದ ವ್ಯಕ್ತಿ; ಗುಂಡ್ಲಕಮ್ಮ ನೀರು ಈಗಲೂ ನದೀ ರೂಪದಲ್ಲಿ ಆಂಧ್ರಪ್ರದೇಶದ ಪ್ರಕಾಶಂ ಜಿಲ್ಲೆಯಲ್ಲಿ ಹರಿಯುತ್ತಿದೆ. ಇದರ ಮೂಲ ಕಂಭಂ ಗ್ರಾಮದ ಹತ್ತಿರದಲ್ಲಿದೆ. ಅದು ವಿನುಕೊಂಡ, ಓಂಗೋಲುಗಳನ್ನು ದಾಟಿ ಹೋಗಿ ಬಂಗಾಳ ಕೊಲ್ಲಿಯನ್ನು ಸೇರುತ್ತದೆ. ವೆಂಗಿಪೞು ಈಗಿನ ಬಾಪಟ್ಲಾ ಗ್ರಾಮದ ಬಳಿಯಲ್ಲಿದ್ದಿತು. ನಿಡುಂಗೊಡೆ ಊರು ಗುಂಡ್ಲುಕಮ್ಮ ನದಿಯ ದಡದಲ್ಲಿದ್ದಿತು. ಇವೆರಡೂ ಬೇರೆ ಬೇರೆ.

೩) ಪಂಪನು ಇಮ್ಮಡಿ ಅರಿಕೇಸರಿ ದೊರೆಯನ್ನು ನಾಯಕನನ್ನಾಗಿಸಿ ಬರೆದ ವಿಕ್ರಮಾರ್ಜುನ, ವಿಜಯ ಕಾವ್ಯಕ್ಕೆ ಉಂಬಳಿಯಾಗಿ ಪಡೆದ ಧರ್ಮವೂರ – ಸಬ್ಬಿನಾಡು– ಇವು ಈಗನ ವೃಷಭಾದ್ರಿಯ ಹತ್ತಿರದಲ್ಲಿ ಇದ್ದುವೆಂಬುದು ಸ್ಪಷ್ಟವಾಗಿದೆ.

೪) ಪಂಪನು ಆ ಮಹಾಕಾವ್ಯವನ್ನು ಬರೆದು ಸನ್ಮಾನ ದಾನಗಳನ್ನು, ಗ್ರಾಮಗಳನ್ನು, ಜೀವಧನವನ್ನು ಮತ್ತು ಹೊನ್ನುಗಳನ್ನು (ಪೊನ್ಗಳು < ಪೊಂಗಳ್ಗೆ < ಪೊಂಗಳ್ಗಂ)

ಪಡೆದದ್ದು ಇಮ್ಮಡಿ ಅರಿಕೇಸರಿಯ ಆಸ್ಥಾನದಲ್ಲಿ –ಬೋದನ ನಗರದಲ್ಲಿ. ಏಕೆಂದರೆ ಆ ನಗರ ಅವರ ವಂಶಕ್ಕೆ ವಂಶಪಾರಂಪರ್ಯವಾಗಿ ಬಂದ ರಾಜಧಾನಿಯಾಗಿತ್ತು:

ಏನಂ ಪೇೞ್ವುದೊ ಸಿರಿಯು
ದ್ದಾನಿಯನೆಣ್ಣೆಯೊಳೆ ತೀವಿ ದೀರ್ಘಿಕೆಗಳನಂ
ತಾಂ ನೃಪತಿ ನಿಚ್ಚಲಯ್ಯೂ
ಱಾನೆಯನವಗಾಹ ಮಿರಿಸುವಂ ಬೋದನದೊಳ್

ವಿಕ್ರಮಾರ್ಜುನ ವಿಜಯ (೧–೧೭)

ಬೋದನ, ಯುದ್ಧಮಲ್ಲ(೧) ರಾಜನಿಂದ ಇಮ್ಮಡಿ ಅರಿಕೇಸರಿಯ ಕಾಲದವರೆಗೆ ರಾಜಧಾನಿಯಾಗಿತ್ತು. ಅರಿಕೇಸರಿಗೆ ಇಬ್ಬರು ಪುತ್ರರು : ವಾಗ್ರಾಜ ಹಾಗೂ ಭದ್ರದೇವ(೩). ವಾಗ್ರಾಜನು ಗಂಗಾಧರಂ(ಗ್ರಾಮದಲ್ಲಿ) ಊರಲ್ಲಿ ಇದ್ದನು; ಭದ್ರದೇವನು ವೇಮುಲವಾಡದಲ್ಲಿ ಇದ್ದನು. ಭದ್ರದೇವನ ಪುತ್ರ ಮುಮ್ಮಡಿ ಅರಿಕೇಸರಿಯ ಕಾಲದಲ್ಲಿ ಪರಭಣಿಯ ತಾಮ್ರಶಾಸನವನ್ನು ಬರೆದು ಜಾರಿಮಾಡಲಾಯಿತು. ಆತನ ಕಾಲಕ್ಕೆ ವೇಮುಲವಾಡವು ರಾಜಧಾನಿಯಾಗಿತ್ತು. ಪರಭಣಿ ಶಾಸನವು ಈ ರಾಜಮನೆತನದ ಚರಿತ್ರೆಯನ್ನು ಬರೆಯುವಲ್ಲಿ ಉಪಲಬ್ಧ ಮೊದಲ ದಾಖಲೆಯಾಗಿತ್ತು; ಆದುದರಿಂದ ಆಗಿನ ಚರಿತ್ರಕಾರರು 'ವೇಮುಲವಾಡದ ಚಾಳುಕ್ಯರು' ಎಂಬ ಕೃತಿಯನ್ನು (Monograph) ರಚಿಸಿದರು. ಅನಂತರ ಉಪಲಬ್ಧವಾದ ದಾಖಲೆಗಳ ಬೆಳಕಿನಲ್ಲಿ, ಆಧಾರಗಳ ಸೂಚನೆಯಲ್ಲಿ ಮಾರ್ಪಾಟು ಆಗಲೇ ಇಲ್ಲ! ಮಧ್ಯಮ ಸಮರ್ಥರು ಆ ಹೆಜ್ಜೆಯಲ್ಲೇ ಸುತ್ತಿದ್ದಾರೆ! ಅಸತ್ಯದ ಸಂಗತಿಗಳೇ ಗಟ್ಟಿಗೊಂಡು ಕುಳಿತಿವೆ!!

೫) ಪಂಪನ ಅಜ್ಜ ಅಭಿಮಾನಚಂದ್ರನಿಗೆ ಜಿನವಲ್ಲಭನ ಶಾಸನದಿಂದ 'ಭವ್ಯರತ್ನಾಕರ' ಎಂಬ ಬಿರುದು ಇದ್ದುದು ಸ್ಫಟಿಕ ಶಲಾಕೆಯಷ್ಟು ಸ್ಪಷ್ಟವಿದೆ. ಅರ್ಥಾತ್ ಈ ಕುಟುಂಬದವರು ಆತನ ಕಾಲಕ್ಕಾಗಲೇ ಜೈನಧರ್ಮವನ್ನು ಸ್ವೀಕರಿಸಿದ್ದರು. 'ಭವ್ಯರತ್ನಾಕರ' ಎಂಬುದು 'ಸಮ್ಯಕ್ತ್ವರತ್ನಾಕರ' 'ಗುಣರತ್ನಭೂಷಣ' ಮುಂತಾದವುಗಳ ಹಾಗೆ ಜೈನಧರ್ಮನಿಷ್ಠ ಬಿರುದು. ಜಿನವಲ್ಲಭನಿಗೆ 'ಸಮ್ಯಕ್ತ್ವರತ್ನಾಕರ' ಎಂಬ ಬಿರುದಿದ್ದಿತು. ಈ ಅಜ್ಜ ಮೊಮ್ಮಕ್ಕಳು ಜೈನಧರ್ಮಾನುಯಾಯಿಗಳು ಎನ್ನುವುದರಲ್ಲಿ ಈಗ ಸಂಶಯವಿಲ್ಲ. ಪಂಪನ ತಂದೆ ಭೀಮಪ್ಪಯ್ಯ 'ಗುಣಮಣಿರತ್ನಾಕರ'. ಒಂದೊಂದೂ ಒಂದೊಂದು ಸಮುದ್ರ–ರತ್ನಾಕರ. ಪಂಪನೂ ರತ್ನಾಕರ–ಕವಿತಾ ರತ್ನಾಕರ–ಕವಿತಾ ಗುಣಾರ್ಣವ. ಆಶ್ರಯದಾತ ಅರಿಕೇಸರಿ 'ಗುಣಾರ್ಣವ'; ಪಂಪ 'ಕವಿತಾ ಗುಣಾರ್ಣವ'. ಎರಡೂ ಸಮುದ್ರದ ಪರ್ಯಾಯಗಳು.

೬) ಜಿನವಲ್ಲಭನ ಈ ಶಾಸನ, ಆ ಕುಟುಂಬದಲ್ಲಿ ಕನ್ನಡ ಹಾಗೂ ತೆಲುಗು ಎರಡೂ ಭಾಷೆಗಳು ಬಳಕೆಯಲ್ಲಿ ಇದ್ದವೆಂದು ಸಾರುತ್ತಿದೆ. ಕನ್ನಡಕ್ಕೆ ಈ ಶಾಸನ ಎಷ್ಟು ಮಹತ್ವದ್ದೊ ಅಷ್ಟೇ ತೆಲುಗು ಭಾಷೆಗೂ ಮಹತ್ವದ್ದು. ತೆಲುಗು

ಸಾಹಿತ್ಯದಲ್ಲಿ ಕಂದ ಪದ್ಯಗಳ ಛಂದಸ್ಸಿನ ಚರಿತ್ರೆ ಈ ಶಾಸನದಿಂದಲೇ ಆರಂಭವಾಗುತ್ತದೆ. ಸದ್ಯ ಇಲ್ಲಿನ ಕಂದಪದ್ಯಗಳೇ ತೆಲುಗು ಭಾಷೆಯಲ್ಲಿನ ಮೊದಲ ಕಂದಪದ್ಯಗಳು, ಅವರಿದ್ದದ್ದು ದ್ವಿಭಾಷಾವಲಯದಲ್ಲಿ.

೭) ಜಿನವಲ್ಲಭನ ಶಾಸನದ ಅನಂತರ ದೊರಕಿದ ಕರೀಮ್‌ನಗರದ ವಸ್ತು ಸಂಗ್ರಹಾಲಯದಲ್ಲಿನ ಶಾಸನ ಇದಕ್ಕೂ ಹೆಚ್ಚು ಮಹತ್ವದ್ದು. ಇದನ್ನು ಕ್ರಿ.ಶ. ೯೪೬ರಲ್ಲಿ ಬರೆಯಲಾಗಿದೆ. ಈ ಶಾಸನದಲ್ಲಿ ಪಂಪಭಾರತ(ವಿಕ್ರಮಾರ್ಜುನ ವಿಜಯ) ಕಾವ್ಯದಿಂದ ಐದು ಪದ್ಯಗಳನ್ನು ಯಥಾವತ್ತಾಗಿ ಉದ್ಧರಿಸಲಾಗಿದೆ. ಆದುದರಿಂದ ವಿಕ್ರಮಾರ್ಜುನ ವಿಜಯಕ್ಕೂ ಕ್ರಿ.ಶ. ೯೪೧ (೮೬೩ ಪ್ಲವ ಸಂವತ್ಸರದ ಕಾರ್ತಿಕ ನಂದೀಶ್ವರ ಪರ್ವದಲ್ಲಿ –೭ನೇ ನವೆಂಬರ್ ೯೪೧)ರಲ್ಲಿ ಸಮಾಪ್ತಿಗೊಂಡ 'ಆದಿಪುರಾಣ' ಕಾವ್ಯಕ್ಕೂ ಹೆಚ್ಚು ಅಂತರವಿದ್ದಿಲ್ಲ; ಅಂತರವಿರುವುದು ಕೇವಲ ಐದು ವರ್ಷ. ಆಗ ಪಂಪನಿಗೆ ೩೯ರ ಎಡಬಲದ ವಯಸ್ಸು ಅಷ್ಟೇ; ಎಂದರೆ ೪೪ ವರ್ಷ. ಅರ್ಥಾತ್ ಹಲವರು ತಿಳಿದ ಹಾಗೆ ಪಂಪನಿಗೆ ಮಾಗಿದ ಮುಪ್ಪಿನ ವಯಸ್ಸಲ್ಲ.

ವಿಕ್ರಮಾರ್ಜುನ ವಿಜಯದಲ್ಲಿ ಪಂಪ ತನ್ನ ಪೂರ್ವಜರ, ಲೌಕಿಕ ಜೀವನದ ಹಿರಿಯರನ್ನು ಕುರಿತು ಹೇಳಿದರೆ ಆದಿಪುರಾಣ ಕಾವ್ಯದಲ್ಲಿ ತನ್ನ ಅಧ್ಯಾತ್ಮ ಜೀವನದಲ್ಲಿನ ಧಾರ್ಮಿಕ ಗುರು ಪರಂಪರೆಯನ್ನು, ತನ್ನ ಮೇಲೆ ವಿಶೇಷ ಪ್ರಭಾವವನ್ನು ಬೀರಿದವರನ್ನು ಕುರಿತು ಬರೆದಿದ್ದಾನೆ. ಅವರೆಂದರೆ:

೧) ಸಮಂತಭದ್ರಸ್ವಾಮಿ
೨) ಕವಿ ಪರಮೇಷ್ಠಿ
೩) ಪೂಜ್ಯಪಾದರು(ದೇವನಂದಿ)
೪) ಗೃಧ್ರಪಿಂಛಾಚಾರ್ಯರು
೫) ಜಟಾಚಾರ್ಯರು
೬) ಶ್ರುತಕೀರ್ತ್ಯಾಚಾರ್ಯರು
೭) ಮಲಧಾರಿ ಸಿದ್ಧಾಂತರು
೮) ದೇವೇಂದ್ರ ಮುನಿ
೯) ಜಯನಂದಿನುಮನಿ
೧೦) ಅಕಳಂಕದೇವ
೧೧) ವೀರಸೇನ
೧೨) ಜಿನಸೇನಾಚಾರ್ಯ

ಗಣಧಾರರಿಂದ ಈ ಆಚಾರ್ಯರವರೆಗೆ ಎಲ್ಲರೂ 'ಜ್ಞಾನರ್ಧಿ ಸಂಪನ್ನರ್' ಎಂದು ಹೇಳಿದಂತೆ ಪಂಪ ವೈದಿಕ ಧರ್ಮದ ವ್ಯಕ್ತಿಗಳಾದ ವ್ಯಾಸರನ್ನು ಅಷ್ಟೇ ಗೌರವಾದರಗಳಿಂದ ಕಂಡಿದ್ದಾನೆ–ಶ್ಲಾಘಿಸಿದಾನೆ. ಅವರದೂ 'ವಚನಾಮೃತ ವಾರಿಧಿ'

ಎಂದು ಹೇಳಿದ್ದಾನೆ. ಇಷ್ಟೆಲ್ಲ ವಿವರಣೆ ಕೊಡುವ ಉದ್ದೇಶವೆಂದರೆ ಪಂಪನಿಗೆ ಎರಡೂ ಧರ್ಮಗಳಲ್ಲಿ ಅಷ್ಟೇ ಶ್ರದ್ಧೆ ಇದ್ದಿತು. ಅರ್ಥಾತ್ ಅಜ್ಜ ಮಾಧವ, ಸೋಮಯಾಜಿಯ ವೈದಿಕ ಧರ್ಮದ ಬಗ್ಗೆ ಅಸಡ್ಡೆ ಆಗಲಿ ಅಗೌರವ ಆಗಲಿ ಪಂಪನಿಗೆ ಇದ್ದಿಲ್ಲ.

'ಕೀರ್ತಿ' – ಇದನ್ನು ಬೆಳ್ಳಗೆ ಎಂದು ಹೇಳಿದ ಹಾಗೆ 'ಕಪ್ಪು' ಎಂದೂ ಹೇಳುತ್ತಿದ್ದರು; 'ಕಪ್ಪು' ಎಂಬ ಸಂಗತಿ ಇಪ್ಪತ್ತನೆಯ ಶತಮಾನದ ಹಿರಿಯ ತಲೆಮಾರಿನ ವಿದ್ವಾಂಸರಿಗೆ ಅಪರಿಚಿತ. ಅಂತೆಯೆ ಅವರುಗಳು ಪಂಪ 'ವೈದಿಕ ಧರ್ಮದ ಬಗೆಗೆ ತಿರಸ್ಕಾರ ಭಾವವನ್ನು ತಳೆದಿದ್ದಾನೆ' ಎಂದು ಪಾಠ ಹೇಳುತ್ತ ಬಂದರು. ಮತ್ತೆ ಕೆಲವರು ಇಲ್ಲಿ ಪಾಠದೋಷವಿದೆ ಎಂದು ವಿವರಿಸಿದರು. ಇನ್ನೂ ಕೆಲವರು ವಿವರಣೆ ನೀಡದೆ ನುಸುಳಿದ್ದಾರೆ. ಈ ಪದ್ಯಕ್ಕೆ ಅರ್ಥವನ್ನೇ ವಿವರವಾಗಿ ಬರೆದಿಲ್ಲ ! ಇರಲಿ; ಶಿಕಾರಿಪುರ ತಾಲೂಕಿನ ಒಂದು ಶಾಸನದಲ್ಲಿ ಕೀರ್ತಿ ಕುರಿತ ಪದ್ಯಗಳು ಹೀಗಿವೆ:

ತಸ್ಮಾತ್ ಶ್ರೀಕಾಮಭೂಪಾಲಾದಭೂನ್ಮಲ್ಲಧರಾಧಿಪತಿಃ।
ಯದ್ಯಶಃ ಕ್ಷೀರವಾರಾಶೌ ಬ್ರಹ್ಮಾಂಡ್ಯೈಃ ಕಮಠಾಯಿತಂ॥
ಆಸೀತ್ ಪದ್ಮಾವತೀಪಟ್ಟಮಹಿಷೀ ಮಲ್ಲ ಭೂಪತೇಃ।
ಯದ್ಯಶೋನೀಲಕಂಠಸ್ಯ ಕಂಠ ನೀಲಾಯತೇ ನಭಃ॥
ಎಪಿಗ್ರಾಫಿಯಾ ಕರ್ನಾಟಿಕಾ ಸಂ ೭, ಶಿಕಾರಿಪುರ ೧೧೭ ಪಂಕ್ತಿಗಳು ೧೮–೨೧

'ಶ್ರೀಕಾಮಭೂಪಾಲನಿಂದ ಮಲ್ಲಧರಾಧಿಪತಿಯು ಜನಿಸಿದನು. ಆತನ ಕೀರ್ತಿಕ್ಷೀರವಾರಾಶಿಯಲ್ಲಿ –ಇಂಗಡಲಿನಲ್ಲಿ– ಬ್ರಹ್ಮಾಂಡವು ಕಮಠನ (ಕೂರ್ಮನ) ಹಾಗೆ ಈಜಾಡಿತು. ಮತ್ತೆ ಆ ಮಲ್ಲಧರಾಧಿಪತಿಯ ಪಟ್ಟಮಹಿಷಿ ಪದ್ಮಾವತಿಯ ಕೀರ್ತಿ ಮಯೂರ ತನ್ನ ಕಂಠದ ನೀಲಿಯನ್ನು ನಭಕ್ಕೆ ಲೇಪಿಸಿ ಅದನ್ನು ನೀಲಿಯಾಗಿಸಿತು! ಅರ್ಥಾತ್ ಯಶಸ್ಸು ದಿಗ್‌ದಿಗಂತದವರೆಗೆ ವ್ಯಾಪಿಸಿತು.'

ಇಲ್ಲಿ ಕೀರ್ತಿ 'ಕ್ಷೀರ ವಾರಾಶಿ' ಆಹುದು ಅಂತೆಯೇ ಅದು 'ನೀಲಕಂಠವೂ' ಅಹುದು. ಅರ್ಥಾತ್ ಕೀರ್ತಿ ಹಾಲಿನಂತೆ ಬೆಳ್ಳಗೂ ಇದೆ; ಮತ್ತೆ ನವಿಲಿನ ಕಂಠದಂತೆ ನೀಲ ಅರ್ಥಾತ್ ಕಪ್ಪಾಗಿಯೂ ಇದೆ. 'ನೀಲ', 'ಕಪ್ಪು', 'ಗಿಳಿಯ ಬಣ್ಣ'(ಕೆಲವೊಮ್ಮೆ) ಹಾಗೂ 'ಹರಿತ' ಇವು ಒಂದಕ್ಕೆ ಇನ್ನೊಂದು ಪರ್ಯಾಯವಾಗಿ ಬರುವುದು ರೂಢಿ:

ಕೃಷ್ಣೇ ನೀಲಾಸಿತ ಶ್ಯಾಮಕಾಲ ಶ್ಯಾಮಲ ಮೇಚಕಾಃ

(ಅಮರಕೋಶ, ಪ್ರಥಮಕಾಂಡ, ಪದ್ಯ – ೧೬೯).

ಕೃಷ್ಣ, ನೀಲ, ಅಸಿತ, ಶ್ಯಾಮ, ಕಾಲ, ಶ್ಯಾಮಲ ಹಾಗೂ ಮೇಚಕ ಇವು ಏಕಾರ್ಥ ಪದಗಳು. ಆದುದರಿಂದ ಪಂಪನ ಪದ್ಯವನ್ನು ನಾವು ಈಗ ಪುನಃ ಪರಿಶೀಲಿಸಬೇಕು. ಸರಿಯಾದ ಅರ್ಥವನ್ನು ವಿವರಿಸಬೇಕು.

ವರದಿಗ್ವನಿತೆಗೆ ಮಾಟದ
ಕುರುಳಾ ತ್ರೈಭುವನಕಾಂ[ತೆಗಂ] ದಲ್ ಕಂಠಾ
ಭರಣಮೆನೆ ಪರೆದ ತನ್ನ
ಧ್ವರಧೂಮದೆ ಕರಿದುಮಾಡಿದಂ ನಿಜಯಶಮಂ ॥

ಈ ಪದ್ಯದ ಎರಡನೇ ಪಂಕ್ತಿ ಪರಿಷತ್ತಿನ ಸಂಪಾದಕರು ಸೃಷ್ಟಿಸಿದ–ರಚಿಸಿದ ಪಂಕ್ತಿ. ವಾಸ್ತವದಲ್ಲಿ ಯಾವುದೇ ಪ್ರತಿಯಲ್ಲಿ ಈ ಪಂಕ್ತಿ ಸರಿಯಾಗಿ ಉಪಲಬ್ಧವಿಲ್ಲ! ಶಿನೇ ಅಡಿಟಿಪ್ಪಣಿಯನ್ನು (ವಿ.ವಿ.೧೪–೪೪ ಅ.ಟಿ.೫, ಪುಟ ೪೦೨) ಪರಿಶೀಲಿಸಿದರೆ ಇದು ಸುವ್ಯಕ್ತ. ಹಸ್ತಪ್ರತಿಗಳಲ್ಲಿ ಪಾಠಾಂತರಗಳು ಹೀಗಿವೆ :

ಕಂಠಮಾಲಾ (ಕ ಪ್ರತಿ)
ಕಂಠಮಾ (ಖ ಪ್ರತಿ)
ಕಂಠಮಾ (ಗ ಪ್ರತಿ)
ಕ. ಠಮಾ (ಘ ಪ್ರತಿ)
ಕಾಂಠಮಾದಲ್ (ಘ ಪ್ರತಿ – $)

ಕೊನೆಯದು ಓದುಗನೊಬ್ಬನ ಟಿಪ್ಪಣಿ ಹೊರತು ಕವಿಯ ಮೂಲ ಪಾಠವಲ್ಲ. ಗ್ರಂಥ ಸಂಪಾದನಾ ಶಾಸ್ತ್ರದಲ್ಲಿ ಅದಕ್ಕೆ ಗೌಣಸ್ಥಾನ. ತ್ರಿಪುರ, ತ್ರಿಭುವನ, ತ್ರಿಲೋಕ ಇತ್ಯಾದಿಗಳನ್ನು ಕವಿಗಳು ಆಗೊಮ್ಮೆ ಈಗೊಮ್ಮೆ ಸಂಪತ್ತಿಗೆ–ಲಕ್ಷ್ಮಿಗೆ, ಅನಂತರ ಆ ಹೋಲಿಕೆಯ ಬೆಳವಣಿಗೆಯನ್ನು ಓರ್ವ ಸ್ತ್ರೀಗೆ ಹೋಲಿಸುವುದು–ರೂಪಿಸುವುದು ರೂಢಿ; ಶಾಸನವೊಂದರಲ್ಲಿ ಒಂದು ಪದ್ಯ ಹೀಗಿದೆ:

ಮೂಱುಂ ಪುರಂಗಳಲ್ಲಿಯ
ಮೂಱುಂ ಕಣ್ಗಳ್ಸಮಗ್ರ ಲಕ್ಷ್ಮಿಗೆ ಮೇಣಾ
ನೀಱೆಯ ಕೊರಲೊಳ್ನೆಲಸಿದ
ಮೂಱುಂ ಮುತ್ತಿನಸರಂಗಳೆಂಬಂತಿಕು[ಂ*]॥

ಎಪಿಗ್ರಾಫಿಯಾ ಕರ್ನಾಟಿಕಾ ಸಂ ೭, ಶಿಕಾರಿಪುರ ೧೦೦ ಪಂಕ್ತಿಗಳು ೪೬.

ಸಂಪತ್ತು ಸ್ತ್ರೀ ರೂಪ ತಾಳಿರುವುದು ಸ್ಪಷ್ಟವಿದೆ – ಸ್ಫುಟವಾಗಿದೆ. 'ಕಂಠ' ಕ್ಕೆ ಸಂಬಂಧಿಸಿದ ಆಭರಣ ಎಂದ ಮೇಲೆ ಅದು ಮಾಲೆಯೊ, ಹಾರವೊ ಅಥವಾ ಸರವೊ ಆಗಿರಲಿಕ್ಕೇ ಬೇಕು. ಆದುದರಿಂದ 'ಕ' ಪ್ರತಿಯ ಪಾಠವೇ ಸರಿಯಾದ ಪದ್ಯವಾಗಿದೆ. ಅದು ಹೀಗಿರುತ್ತದೆ.

ವರದಿಗ್ವನಿತೆಗೆ ಮಾಟದ
ಕುರುಳಾ ತ್ರೈಭುವನ ಕಂಠಮಾಲಾ ಕಂಠಾ
ಭರಣಮೆನೆ ಪರೆದ ತನ್ನ
ಧ್ವರಧೂಮದೆ ಕರಿದು ಮಾಡಿದಂ ನಿಜಯಶಮಂ॥

ಶ್ರೇಷ್ಠಳಾದ ದಿಗ್ವನಿತೆಗೆ ಆಕೆಯ ಹಣೆಯ ಮೇಲೆ ಓಲಾಡುವ ಸುಂದರ ಕೇಶರಾಶಿಯಂತೆ ಮತ್ತು ಆಕೆಯ ಕೊರಳಲ್ಲಿ ತ್ರಿಭುವನಕ್ಕೆ ಶ್ರೇಷ್ಠವಾದ ಕಂಠಮಾಲಾ

ಅಧ್ವರ ಧೂಮದೆ ಕರಿದು ಮಾಡಿದಂ ನಿಜಯಶಮಂ!

ಎಂಬ ಕಂಠಾಭರಣದಂತೆ ಅಧ್ವರಧೂಮವು ರಾರಾಜಿಸಿತು. ತನ್ಮುಖೇನ ಮಾಧವ ಸೋಮಯಾಜಿ ತನ್ನ ಕೀರ್ತಿಯನ್ನು ಆಕಾಶದಲ್ಲಿ ಹರಡಿ ನೀಲ(ನಭದಂತೆ) ವಿಶಾಲಕ್ಕೆ ಕಾರಣನಾದ. ಅರ್ಥಾತ್ ಆತನ ಕೀರ್ತಿ ದೇಶೋ ವಿಶಾಲವಾಗಿತ್ತು. ಕೀರ್ತಿ ಕೇವಲ ಬೆಳ್ಳಗಿರುತ್ತದೆ ಎಂದು ಹೇಳುವ ಬೆಳ್ಳರಾಗುವುದು ಬೇಡ.

ಗ್ರಂಥಋಣ

೧. ಬೆಳ್ಳಾವೆ ವೆಂಕಟನಾರಾಯಣಪ್ಪ(ಸಂ) ೧೯೩೧ ವಿಕ್ರಮಾರ್ಜುನವಿಜಯಂ
ಬೆಂಗಳೂರು
ಕನ್ನಡ ಸಾಹಿತ್ಯ ಪರಿಷತ್ತು

೨. ೧೯೭೩ ವಿಕ್ರಮಾರ್ಜುನವಿಜಯಂ
ಮೈಸೂರು
ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

೩. ನರಸಿಂಹಚಾರ್ ಡಿ.ಎಲ್. ೧೯೭೧ ಪಂಪಭಾರತ ದೀಪಿಕೆ
ಮೈಸೂರು
ಕನ್ನಡ ಅಧ್ಯಯನ ಸಂಸ್ಥೆ
ಮೈಸೂರು ವಿಶ್ವವಿದ್ಯಾನಿಲಯ

೪. ನರಸಿಂಹಾಚಾರ್ಯ ಎಸ್.ಜಿ.(ಸಂ.) ೧೯೯೦ ಆದಿಪುರಾಣಂ
ಮೈಸೂರು ?

೫. ಬಾಣಭಟ್ಟ ? ಕಾದಂಬರಿ
ಮುಂಬಯಿ
ನಿರ್ಣಯಸಾಗರ ಪ್ರೆಸ್

೬. ರೈಸ್ ಬಿ.ಎಲ್. (ಸಂ) ೧೯೦೨ ಎಪಿಗ್ರಾಫಿಯಾ ಕರ್ನಾಟಿಕಾ ಸಂ ೭
ಆರ್ಕಿಯಾಲಜಿ ಮಾಲೆ
ಬೆಂಗಳೂರು
ಮೈಸೂರು ಗವರ್ನಮೆಂಟ್ ಪ್ರೆಸ್

□

ಹೊಸಕೆರೆ ಚಿದಂಬರಯ್ಯನವರ ನಾಟಕ ಸಾಹಿತ್ಯ ಒಂದು ನೋಟ

ಜಿ.ಎಸ್. ನರಸಿಂಹಮೂರ್ತಿ

ಕನ್ನಡ ರಂಗಭೂಮಿಗೆ ಅತ್ಯಂತ ಶ್ರೀಮಂತ ಪರಂಪರೆ ಇದೆ. ಆಧುನಿಕ ಜಗತ್ತಿನಲ್ಲಿಯಂತೂ ಕನ್ನಡದ ರಂಗಭೂಮಿ ಖ್ಯಾತಿಯನ್ನು ಪಡೆದಿದೆ. ಕನ್ನಡದ ನಾಟಕಗಳು ನಾಡಿಗೆ ಕೀರ್ತಿಯನ್ನು ತಂದುಕೊಟ್ಟಿವೆ. ನಾಟಕಕಾರರಾದ ಗಿರೀಶ ಕಾರ್ನಾಡ ಮತ್ತು ಚಂದ್ರಶೇಖರ ಕಂಬಾರರಿಗೆ ಜ್ಞಾನಪೀಠ ಪ್ರಶಸ್ತಿ ಸಂದಿದೆ. ಗುಬ್ಬಿ ಕಂಪನಿಯಂಥ ವೃತ್ತಿ ರಂಗಭೂಮಿಯ ಸಂಸ್ಥೆ ಒಂದು ಶತಮಾನಕ್ಕೂ ಹೆಚ್ಚುಕಾಲ ಸತತವಾಗಿ ನಾಟಕಗಳನ್ನು ಪ್ರದರ್ಶಿಸಿದೆ. ಅನೇಕ ಪ್ರಸಿದ್ಧ ಕಲಾವಿದರು ತಮ್ಮ ವೃತ್ತಿಯನ್ನು ಇಲ್ಲಿ ಆರಂಭಿಸಿದವರು.

ಪ್ರಾಚೀನ ಕಾಲದಿಂದಲೂ ಕರ್ನಾಟಕದಲ್ಲಿ ನಾಟಕಗಳು ಇದ್ದವೆಂದು ವಿದ್ವಾಂಸರು ತಿಳಿಸಿದ್ದಾರೆ. ರನ್ನನ ಗದಾಯುದ್ಧ, ರಾಘವಾಂಕನ ಹರಿಶ್ಚಂದ್ರ ಚಾರಿತ್ರ ಕೃತಿಗಳು ನಾಟಕೀಯತೆಯಿಂದ ತುಂಬಿವೆ. ಗೋವಿಂದ ಪೈ ಮತ್ತು ಅವರ ಹಾಗೆ ಹಲವು ವಿದ್ವಾಂಸರು ಕುಮಾರವ್ಯಾಸನ ಕಾಲದಿಂದ ನಮ್ಮಲ್ಲಿ ನಾಟಕದ ವಿವಿಧ ರೂಪಗಳು ಇದ್ದಿರಬೇಕೆಂದು ತರ್ಕಿಸುತ್ತಾರೆ

ಖೇಡನಾದನಜಾತರಿಪು ಮಾ
ತಾಡಿಸಿದ ನಹಿತ ಪತಿಯನೆಲೆ ನಾ
ಡಾಡಿಗಳ ನಾಟಕದ ಫಣಿಯಲ್ಲಾರು ನೀನೆಂದ

ಅರಣ್ಯಕ ಪರ್ವ ಸಂಧಿ ೧೩. ಪದ್ಯ ೪೧
(ಗೋವಿಂದ ಪೈ: ೧೯೪೬).

ಜನತೆಯ ಕವಿಯಾದ ಕುಮಾರವ್ಯಾಸ, 'ಜವನಿಕೆ', 'ಹಗರಣ' ಮೊದಲಾದ ರಂಗಪದಗಳನ್ನೂ ತನ್ನ ಕಾವ್ಯದಲ್ಲಿ ಬಳಸಿ ತನ್ನ ಕಾಲದ ಜಾನಪದ ರಂಗಭೂಮಿ ಜೀವಂತವಾಗಿದ್ದಿತೆಂದು ಸೂಚಿಸಿದ್ದಾನೆ. 'ಕನ್ನಡದಲ್ಲಿ ನಾಟಕ ಪ್ರದರ್ಶನಗಳು ಇಲ್ಲದೇ ಹೋಗಿದ್ದರೆ ಹಾಗೂ ಅವು

ಜನಪ್ರಿಯವಾಗಿಲ್ಲದೆ ಹೋಗಿದ್ದಲ್ಲಿ ಅವುಗಳನ್ನು ಬಳಸಿರುವ ಅಷ್ಟೊಂದು ಉದಾಹರಣೆಯನ್ನು ಕುಮಾರವ್ಯಾಸ ಕೊಡುತ್ತಿರಲಿಲ್ಲ' ಎಂದು ಗೋವಿಂದಪೈ ಅವರು ಹೇಳಿದ ಮಾತನ್ನು, ('ಕನ್ನಡ ನಾಟಕದ ಹಳಮೆ' ಪು.೧೦.೧೧) ಒಪ್ಪುವಂತಾಗುತ್ತದೆ' (ಎಚ್.ಕೆ ರಂಗನಾಥ್, ೧೯೭೮:೪೪).

ಎಚ್.ಕೆ. ರಂಗನಾಥ್ ಅವರದು. ಅವರು ಗೋವಿಂದ ಪೈಯವರದೆಂದು 'ಉಲ್ಲೇಖಿಸಿರುವ' ಮಾತುಗಳು ಪೈ ಅವರ 'ಕನ್ನಡ ನಾಟಕದ ಹಳಮೆ' ಲೇಖನದಲ್ಲಿ ಇಲ್ಲ! ಪೈ ಅವರ ಅಭಿಪ್ರಾಯವನ್ನು ರಂಗನಾಥರು ತಮ್ಮ ಮಾತುಗಳಲ್ಲಿ ಸಂಗ್ರಹಿಸಿ 'ಉಲ್ಲೇಖಿ'ಸಿದ್ದಾರೆ!

ಇಷ್ಟಾಗಿಯೂ ನಮ್ಮ ಎಲ್ಲ ಸಾಹಿತ್ಯಕ ಚಟುವಟಿಕೆಗಳು ಆಧುನಿಕ ಎನಿಸಿಕೊಳ್ಳುವುದು ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ. ಒಟ್ಟಾರೆ ನವೋದಯ ಸಾಹಿತ್ಯ ಎಂಬ ಪ್ರಕಾರ ಉದಯವಾಗುವ ಹೊತ್ತಿಗೆ ಸಾಹಿತ್ಯ ಪ್ರಕಾರ ಮತ್ತು ಪ್ರದರ್ಶನ ರೂಪ ಎರಡೂ ಬಗೆಯಲ್ಲಿ ನಾಟಕ ಸಾಕಷ್ಟು ಜನಪ್ರಿಯತೆಯನ್ನು ಪಡೆದಿತ್ತು. ಮೊದಮೊದಲು ಮರಾಠಿ ರಂಗಭೂಮಿಯ ಪ್ರಭಾವಕ್ಕೆ ಒಳಗಾದರೂ ಶೀಘ್ರವಾಗಿ ಅದರಿಂದ ಹೊರಬಂದಿತು. ೧೮೬೯ರಲ್ಲಿ ಚುರಮುರಿ ಶೇಷಗಿರಿರಾಯರು ಶಾಕುಂತಲಾ ನಾಟಕವನ್ನು ಉತ್ತರ ಕರ್ನಾಟಕದ ಆಡುನುಡಿಯಲ್ಲಿ ಕನ್ನಡಕ್ಕೆ ಅನುವಾದಿಸಿದರು. ಶಾಂತಕವಿಗಳು ೧೮೭೪ರಲ್ಲಿ ನಾಟಕ ಕಂಪನಿಯನ್ನು ಪ್ರಾರಂಭಿಸಿ ಪೌರಾಣಿಕ ನಾಟಕಗಳನ್ನು ರಚಿಸಿ ರಂಗಕ್ಕೆ ತಂದರು. ಅದೇ ಸುಮಾರಿನಲ್ಲಿ ಮೈಸೂರಿನ ಆಸ್ಥಾನಕವಿ ಬಸವಪ್ಪಶಾಸ್ತ್ರಿಗಳು ಶಾಕುಂತಲಾ ನಾಟಕವನ್ನು ಅನುವಾದಿಸಿದರು. ಮೈಸೂರಿನ ಅರಮನೆಯ ಚಾಮರಾಜೇಂದ್ರ ನಾಟಕ ಸಭಾ ಇದನ್ನು ರಂಗದ ಮೇಲೆ ಪ್ರದರ್ಶಿಸಿತು(೧೮೮೧).

ಕನ್ನಡದ ಮೊದಲ ಐತಿಹಾಸಿಕ ನಾಟಕ ಯಾವುದು ಎನ್ನುವ ಕುತೂಹಲಕ್ಕೆ ಇನ್ನೂ ಸರಿಯಾದ ಸಮಾಧಾನ ದೊರೆತಿಲ್ಲ. "ಶಾಲಿವಾಹನ ಶಕ ೧೮೦೭ನೆಯ ತಾರಣ(೧೮೮೪) ಮಾರ್ಗಶಿರ ಶುದ್ಧ ದಶಮಿಯ ದಿನ 'ಗುಬ್ಬಿ ಶ್ರೀ ಚನ್ನಬಸವೇಶ್ವರ ಸ್ವಾಮಿ ಕೃಪಾಪೋಷಿತ ನಾಟಕ ಸಂಘ'ದ ಪ್ರಥಮ ನಾಟಕವಾದ 'ಕುಮಾರರಾಮ ಚಾರಿತ್ರ'ವು ಗುಬ್ಬಿ ಗ್ರಾಮದಲ್ಲಿ ಮೊಟ್ಟಮೊದಲು ಅಭಿನಯಿಸಲ್ಪಟ್ಟಿತು" ಎಂದು ಬೆಳ್ಳಾವೆ ನರಹರಿಶಾಸ್ತ್ರಿ (೧೯೪೮:೩೩-೩೪)ತಿಳಿಸಿದ್ದಾರೆ. ಆದರೆ ಆವರು ಆ ಕೃತಿಯ ಕರ್ತೃ ಅಥವಾ ಕಥಾವಸ್ತುವಿನ ಬಗೆಗೆ ಯಾವ ಮಾಹಿತಿಯನ್ನೂ ನೀಡಿಲ್ಲ. ಒಂದು ಯಕ್ಷಗಾನವನ್ನಾಧರಿಸಿದ ಕುಮಾರರಾಮ ನಾಟಕವನ್ನು ೧೮೮೪ರಲ್ಲಿ ಪ್ರದರ್ಶಿಸಿದರು ಎಂದು ಬಿ.ವಿ. ವೈಕುಂಠರಾಜು ಹೇಳಿದ್ದಾರೆ(೧೯೭೩:೯).

ಇದು ಯಕ್ಷಗಾನ ಅಥವಾ ಮೂಡಲಪಾಯವಿರಬಹುದು ಎಂದು ಊಹಿಸಲು ಅವಕಾಶವಿದೆ. ಡಾ. ಬಸವರಾಜ ಮಲಶೆಟ್ಟಿ ಅವರು ಕುಮಾರರಾಮನ ಕುರಿತಾದ ಒಂದು ದೊಡ್ಡಾಟವನ್ನು ಉಲ್ಲೇಖಿಸಿದ್ದಾರೆ: ೧೮೫೭ರಲ್ಲಿ ಸುರ್ಜಾಸಿಂಗ ಎನ್ನುವವರು

ಧಾರವಾಡದಲ್ಲಿ ಪ್ರಕಟಿಸಿದ 'ಕುಮಾರರಾಮ' ಎಂಬ ಕೃತಿಯೇ ಮೂಡಲಪಾಯಗಳಲ್ಲೆಲ್ಲ ಅತ್ಯಂತ ಹಳೆಯ ಮುದ್ರಿತ ಕೃತಿ ಎಂದು ಅವರು ತಿಳಿಸಿದ್ದಾರೆ(೧೯೮೩:೪೯). ಜೊತೆಗೆ ಅವರ ಸ್ನೇಹಿತರಾದ ಶ್ರೀ ಎಸ್.ಬಿ. ನಾಯಕರ ಬಳಿ ಈ ಪುಸ್ತಕ ಇದ್ದು ಅದನ್ನು ಎರವಲು ಪಡೆದುಕೊಂಡು ಪರಿಶೀಲನೆಯ ಕೆಲಸ ಮುಗಿದ ಅನಂತರ ಅವರಿಗೇ ಹಿಂತಿರುಗಿಸಿದರಂತೆ. ಹೀಗಾಗಿ ದೊಡ್ಡಾಟ ಮತ್ತು ನಾಟಕ ಇವುಗಳಲ್ಲಿನ ಸೂಕ್ಷ್ಮ ವ್ಯತ್ಯಾಸಗಳನ್ನು ಗಣಿಸದಿದ್ದರೆ ಕುಮಾರರಾಮನ ಕಥೆಯ ಆಧಾರದಿಂದ ರಚಿತವಾದ ಮೂಡಲಪಾಯವೇ ಕನ್ನಡದ ಮೊದಲ ಐತಿಹಾಸಿಕ ನಾಟಕ ಎಂದು ನಂಬಬಹುದು. ಆ ಕೃತಿ ಇಂದು ದೊರೆಯುತ್ತಿಲ್ಲ ಎನ್ನುವುದು ವಿಷಾದದ ಸಂಗತಿ.

ಇಂತಹ ವಾತಾವರಣವಿದ್ದ ಕಾಲದಲ್ಲಿ ಹೊಸಕೆರೆ ಚಿದಂಬರಯ್ಯನವರು ಬರವಣಿಗೆಯನ್ನು ಆರಂಭಿಸಿ ಅಧ್ಯಾತ್ಮದ ಹಿನ್ನೆಲೆಯ ಅನೇಕ ಕೃತಿಗಳನ್ನು ರಚಿಸಿದರು. ಅವರು ನಾಟಕಗಳನ್ನೂ ರಚಿಸಿದರೆಂಬುದು ವಿಶೇಷ ಸಂಗತಿ. ನಾಟಕಕ್ಕೆ ಅವರನ್ನು ಸೆಳೆದ ಸಂದರ್ಭವನ್ನು ಖಚಿತವಾಗಿ ಗುರುತಿಸಲು ಸಾಧ್ಯವಿಲ್ಲ. ಕೆಲವೊಂದು ಹೊಳಹುಗಳು ಅವರ ನಾಟಕಗಳ ಪೀಠಿಕೆಗಳಲ್ಲಿ, ಕೆಲವೊಮ್ಮೆ ನಾಟಕಗಳಲ್ಲಿಯೂ ದೊರೆಯುತ್ತವೆ. ಆಗಿನ ಕಾಲದಲ್ಲಿ ನಾಟಕ ಹೊಸದಾಗಿ ಕಂಡುಕೊಂಡ ಮನೋರಂಜನೆಯ ಸಾಧನವಾಗಿದ್ದು ಸಾರ್ವಜನಿಕರು ಅದರಿಂದ ಹೆಚ್ಚು ಆಕರ್ಷಿತರಾಗಿದ್ದರು ಎಂಬುದೇ ಮುಖ್ಯ ಕಾರಣವಾಗಿರಬೇಕು ಎಂದು ಊಹಿಸಬಹುದು. ಹೊಸಕೆರೆ ಚಿದಂಬರಯ್ಯನವರು ಬರವಣಿಗೆಯನ್ನು ಪ್ರಾರಂಭಿಸುವ ಹೊತ್ತಿಗಾಗಲೇ ಕರ್ನಾಟಕದಲ್ಲಿ ವೃತ್ತಿ ರಂಗಭೂಮಿ ಪ್ರಾರಂಭವಾಗಿ ಅಸ್ತಿತ್ವವನ್ನು ಕಂಡುಕೊಂಡಿತ್ತು. ೧೮೭೪ರಲ್ಲಿ ಶಾಂತಕವಿ ಸಕ್ಕರಿ ಬಾಳಾಚಾರ್ಯರ ಪ್ರಯತ್ನದಿಂದ ಮರಾಠಿ ನಾಟಕಗಳ ಪ್ರಾಬಲ್ಯ ಕಡಿಮೆಯಾಗಿ ಕನ್ನಡ ನಾಟಕಗಳು ಪ್ರವರ್ಧಮಾನಕ್ಕೆ ಬರುವ ಹಾಗಾಯಿತು.

ಹರಿಕೃಷ್ಣ ಭರಣ್ಯ ಅವರು '೧೯೦೦ರ ವೇಳೆಗೆ ಬೇರೆ ಬೇರೆ ಭಾಷೆಗಳಿಂದ ಅನುವಾದಿಸಿದ ೭೭ ನಾಟಕಗಳು ಹಾಗೂ ಸ್ವತಂತ್ರವಾಗಿ ರಚಿಸಿದ್ದ ೪೫ ನಾಟಕಗಳು ಪ್ರಕಟವಾಗಿದ್ದವೆ'ಂದು ದಾಖಲಿಸಿದ್ದಾರೆ(೧೯೯೦:೨೧೪-೨೪). ಅನುಬಂಧದಲ್ಲಿ ಆ ಕೃತಿಗಳ ಹೆಸರುಗಳನ್ನೂ ತಿಳಿಸಿದ್ದಾರೆ. ಅದರಲ್ಲಿ ಹೊಸಕೆರೆ ಚಿದಂಬರಯ್ಯನವರ ನಾಟಕಗಳೂ ಸೇರಿವೆ. ಎರಡು ನಾಟಕಗಳ ಹೆಸರುಗಳು ತಪ್ಪಾಗಿ ನಮೂದಾಗಿವೆ. *ಸುಧರ್ಮ ಪ್ರಭಾವ* – ಸುಧನ್ವ ಪ್ರಭಾವ ಎಂದಾಗಿದ್ದರೆ *ಕೃಷ್ಣ ಮಹೀಶ್ವರೀ* ಎನ್ನುವುದು ಕೃಷ್ಣ ಮಹೇಶ್ವರಿ ಎಂದಾಗಿದೆ. ನಾಟಕಗಳು ಪ್ರಕಟವಾಗಿ, ಪ್ರದರ್ಶಿತವಾಗಿ ಒಂದು ಪ್ರಬಲ ಮಾಧ್ಯಮವಾಗಿ ಕಾಣಿಸಿಕೊಂಡ ಕಾಲದಲ್ಲಿ ಆ ಪ್ರಕಾರದ ಮೂಲಕ ತಮ್ಮ ವಿಚಾರಗಳನ್ನು ಎಲ್ಲರಿಗೆ ತಲಪಿಸಬೇಕೆಂಬ ಉದ್ದೇಶದಿಂದ ಹೊಸಕೆರೆ ಚಿದಂಬರಯ್ಯನವರು ನಾಟಕಗಳನ್ನು ರಚಿಸಲು ಪ್ರಾರಂಭಿಸಿದ್ದು ಸಹಜವೇ ಎನಿಸುತ್ತದೆ.

ಹೊಸಕೆರೆ ಚಿದಂಬರಯ್ಯನವರು ಒಟ್ಟು ಹನ್ನೊಂದು ನಾಟಕಗಳನ್ನು ಬರೆದಿದ್ದರೆಂದು ತಿಳಿದುಬರುತ್ತದೆ. ಅವುಗಳ ವಿವರ ಹೀಗಿದೆ:

೧. ಸುಶೀಲಾ ಪರಿಣಯ (೧೮೯೯)
೨. ಕೃಷ್ಣಮಹೀಶ್ವರೀ (೧೯೧೦)
೩. ಕಲಿ ಸಂತರಣ (೧೯೧೭)
೪. ನವೀನ ಕಲ್ಪ (೧೯೨೧)
೫. ಚೂಡಾಲೆ (೧೯೨೯)
೬. ಶಾಂತಾದೇವಿಯ ಸಂಸಾರ (೧೯೩೨)
೭. ಸುಧರ್ಮ ಪ್ರಭಾವ
(ಈ ಕೃತಿ ಲಭ್ಯವಿದೆ. ಆದರೆ ಅದರಲ್ಲಿ ಪ್ರಕಾಶನ ವರ್ಷ ನಮೂದಿಸಿಲ್ಲ).
೮. ವಿಜಯಾಭ್ಯುದಯ ನಾಟಕ ?
(ಹರಿಕೃಷ್ಣ ಭರಣ್ಯ, ೧೯೯೧ : ೨೨೧)
೯. ಮೈರಾವಣ ಚರಿತ್ರಂ ? (ಹರಿಕೃಷ್ಣ ಭರಣ್ಯ, ೧೯೯೧ : ೨೨೦)
೧೦. ದೌರ್ಭಾಗ್ಯ ದಾಂಪತ್ಯ
೧೧. ದುರ್ಗಾವತಿ

ಈ ನಾಟಕಗಳಲ್ಲಿ ವಿಜಯಾಭ್ಯುದಯ, ಮೈರಾವಣ ಚರಿತ್ರಂ, ದೌರ್ಭಾಗ್ಯ ದಾಂಪತ್ಯ , ದುರ್ಗಾವತಿ, ನವೀನ ಕಲ್ಪ, ಎಂಬ ಕೃತಿಗಳು ನನಗೆ ಲಭ್ಯವಾಗಿಲ್ಲ. ಆದರೆ ಡಾ. ಪಂಡಿತಾರಾಧ್ಯ ಅವರು "ಹೊಸಕೆರೆ ಚಿದಂಬರಯ್ಯನವರು ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆಯನ್ನು 'ನವೀನ ಕಲ್ಪ'ದಲ್ಲಿ ಟೀಕಿಸಿದ್ದಾರೆ" ಎಂದು ಹೇಳಿದ್ದಾರೆ(೨೦೦೦:೭೦). ಅಲ್ಲದೆ ಅವರು ತಮ್ಮ ಲೇಖನದ ಅನುಬಂಧದಲ್ಲಿ ೧೯೦೦–೧೯೨೫ರ ಅವಧಿಯಲ್ಲಿ ಪ್ರಕಟವಾಗಿರುವ ಕನ್ನಡದ ನಾಟಕಗಳ ಪಟ್ಟಿಯಲ್ಲಿ 'ನವೀನ ಕಲ್ಪ'ವನ್ನೂ ಉಲ್ಲೇಖಿಸಿ ಅದರ ಪ್ರಕಟಣೆಯ ವರ್ಷ ೧೯೨೧ ಎಂದು ನಮೂದಿಸಿದ್ದಾರೆ. 'ಕೃಷ್ಣಮಹೀಶ್ವರೀ' ಐತಿಹಾಸಿಕ ನಾಟಕವಾದರೆ 'ಶಾಂತಾದೇವಿಯ ಸಂಸಾರ' ಮತ್ತು 'ಕಲಿ ಸಂತರಣ' ನಾಟಕಗಳು ಆಧ್ಯಾತ್ಮಿಕತೆಯ ಮಹತ್ವವನ್ನು ಎತ್ತಿ ಹಿಡಿಯುವ ಸಾಮಾಜಿಕ ನಾಟಕಗಳಾಗಿವೆ. ಮಿಕ್ಕ ಮೂರು ನಾಟಕಗಳೂ(ಸುಶೀಲಾ ಪರಿಣಯ, ಚೂಡಾಲೆ, ಸುಧರ್ಮ ಪ್ರಭಾವ) ಪೌರಾಣಿಕ ಸ್ವರೂಪದ ವಸ್ತುಗಳನ್ನು ಇರಿಸಿಕೊಂಡಿವೆ. ಈ ಕೃತಿಗಳಲ್ಲಿ ಹೆಚ್ಚಿನವು ಆಗ ಪ್ರಕಟವಾಗುತ್ತಿದ್ದ ವಾಗ್ಭೂಷಣ, ಶ್ರೀಕೃಷ್ಣಸೂಕ್ತಿ, ಪರಮಾರ್ಥ ಮುಂತಾದ ಪತ್ರಿಕೆಗಳಲ್ಲಿ ಪ್ರಕಟವಾಗಿ ಅನಂತರ ಪುಸ್ತಕರೂಪದಲ್ಲಿ ಪ್ರಕಟವಾಗಿವೆ. 'ಶಾಂತಾದೇವಿಯ ಸಂಸಾರ' ಹೊಳೇನರಸೀಪುರದಿಂದ ಪ್ರಕಟವಾಗುತ್ತಿದ್ದ ಅಧ್ಯಾತ್ಮ ಪ್ರಕಾಶ ಪತ್ರಿಕೆಯ ೧೯೩೨ರ ಹಲವು ಸಂಚಿಕೆಗಳಲ್ಲಿ ಪ್ರಕಟವಾಗಿದೆ. ಇದು ಪುಸ್ತಕ ರೂಪದಲ್ಲಿ ಪ್ರಕಟವಾಗಿದೆಯೆ, ತಿಳಿದಿಲ್ಲ (ಪ್ರೊ.ಜಿ. ಅಶ್ವತ್ಥ ನಾರಾಯಣರವರಿಗೆ, ಶ್ರೀ ರಾಮಮೋಹನ್ ಬೆಂಗಳೂರು– ಇವರು ಶ್ರಮವಹಿಸಿ ದೊರಕಿಸಿಕೊಟ್ಟಿದ್ದರಿಂದ ಈ ಕೃತಿಯನ್ನು ಗಮನಿಸಲು ನನಗೆ ಸಾಧ್ಯವಾಯಿತು).

ರಮ್ಯ ನಾಟಕಗಳು

ಸುಶೀಲಾ ಪರಿಣಯ ೧೮೯೯ರಲ್ಲಿ ಪ್ರಕಟವಾದ ಕಾಲ್ಪನಿಕ ನಾಟಕ. ಇದರಲ್ಲಿ ಶಾಕುಂತಲಾ ನಾಟಕದಂತೆಯೇ ಒಂದು ಸನ್ನಿವೇಶವಿದೆ. ಅಲ್ಲಿ ದುಶ್ಯಂತ ಬೇಟೆಗಾಗಿ ಒಂದು ಜಿಂಕೆಯನ್ನು ಹಿಂಬಾಲಿಸಿ ಬಂದಾಗ ಅವನನ್ನು ಕಣ್ವನ ಆಶ್ರಮದ ಮುನಿಕುಮಾರರು ತಡೆಯುತ್ತಾರೆ. ಇಲ್ಲಿ ವಿಜಯಧ್ವಜ ಎಂಬ ರಾಜಕುಮಾರನು ವಿಹರಿಸುತ್ತಾ ಒಂದು ಗಿಳಿಯನ್ನು ನೋಡಿ ಅಕರ್ಷಿತನಾಗಿ ಅದನ್ನು ಹಿಂಬಾಲಿಸಿ ಬರುತ್ತಾನೆ. ಅದು ಬತ್ತದ ಗದ್ದೆಯ ಬಳಿ ಬರುತ್ತದೆ. ಅಲ್ಲಿಗೆ ವಿಹಾರಾರ್ಥವಾಗಿ ಬಂದಿದ್ದ ಸುಶೀಲೆ ಮತ್ತು ಅವಳ ಸಖಿ ಆ ಗಿಳಿಯನ್ನು ಕಂಡು ಅದನ್ನು ಅರಸಿ ಮುಂದೆ ಬಂದಾಗ ಗಿಳಿ ಸುಶೀಲೆಯ ಕೈ ಸೇರುತ್ತದೆ. ಮುಂದಿನ ಪ್ರಸಂಗವೆಲ್ಲ ಸುಶೀಲೆ ಮತ್ತು ವಿಜಯಧ್ವಜರ ಪ್ರಣಯ ವಿರಹದಲ್ಲಿ ಬೆಳೆದು ವಿವಾಹದಲ್ಲಿ ಪರ್ಯವಸಾನವಾಗುತ್ತದೆ. ಹೀಗೆ ಕಥಾವಸ್ತು ಅಪರಿಚಿತವಾದದ್ದೇನೂ ಅಲ್ಲ. ಇಂತಹ ವಸ್ತುವನ್ನು ಇವರೊಬ್ಬರೇ ಆರಿಸಿಕೊಂಡಿಲ್ಲ. ಆ ಕಾಲದಲ್ಲಿ ಬಂದ ಗದ್ಯ ಕೃತಿಗಳೂ ಇಂತಹ ವಸ್ತುವನ್ನೇ ಆರಿಸಿಕೊಂಡಿದ್ದವು, ಅವೂ ಅದ್ಭುತ ರಮ್ಯ ಸ್ವರೂಪವನ್ನೇ ಹೊಂದಿದ್ದವು ಎಂಬುದನ್ನು ನೆನೆಯಬೇಕು. ೧೮೬೭ರಲ್ಲಿ ಪ್ರಕಟವಾದ ಗುಬ್ಬಿ ಮುರಿಗಾರಾಧ್ಯರ 'ಶೃಂಗಾರ ಚಾತುರ್ಯೋಲ್ಲಾಸಿನಿ', ೧೮೯೮ರಲ್ಲಿ ಪ್ರಕಟವಾದ ಗಳಗನಾಥರ 'ಪ್ರಬುದ್ಧ ಪದ್ಮನಯನೆ' ಮುಂತಾದ ಕೃತಿಗಳಲ್ಲಿಯೂ ಇಂತಹುದೇ ವಸ್ತುವಿರುವುದನ್ನು ಗಮನಿಸಬಹುದು. ಹರಿಕೃಷ್ಣ ಭರಣ್ಯ ಅವರು ಸುಶೀಲಾ ಪರಿಣಯವನ್ನು ಉಲ್ಲೇಖಿಸಿ ಇಲ್ಲಿ ಕಥಾವಸ್ತುವೇ ಸ್ಪಷ್ಟವಾಗಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕಥೆಯ ತುಂಬಾ ತೆಳು ಎನ್ನುವುದು ನಿಜ. ಆದರೆ ನಾಟಕವೊಂದರ ಯಶಸ್ಸನ್ನು ರಂಗಭೂಮಿಯಲ್ಲಿ ಪ್ರದರ್ಶಿಸಿದ ಮೇಲೆ ಮಾತ್ರ ಸರಿಯಾಗಿ ನಿರ್ಧರಿಸಲು ಸಾಧ್ಯ. ಇದರಲ್ಲಿ ಅನೇಕ ವೈಶಿಷ್ಟ್ಯಗಳಿವೆ. ರಂಗಭೂಮಿಯ ಅಂದಿನ ಪದ್ಧತಿಯಾದ ಸೂತ್ರಧಾರನಿಂದ ಆರಂಭವಾಗುವ ದೃಶ್ಯವಿದೆ. ಅನೇಕ ಕಂದ ಮತ್ತು ವಿವಿಧ ವೃತ್ತಗಳಲ್ಲಿ ರಚಿಸಿರುವ ಪದ್ಯಗಳಿವೆ. ಈ ಪೈಕಿ ಹಲವು ಸೊಗಸಾಗಿವೆ. ಹೊಸಕೆರೆ ಚಿದಂಬರಯ್ಯನವರು ಆಗಲೇ ಪದ್ಯರಚನೆಯಲ್ಲಿ ಪಳಗಿದ್ದರು ಎಂಬುದಕ್ಕೆ ಇದು ನಿದರ್ಶನವಾಗಿದೆ. ಈ ಎಲ್ಲಾ ಪದ್ಯಗಳು ಓದುವುದಕ್ಕೆ ಹಿತವಾಗಿವೆ. ಜೊತೆಗೆ ಈ ಕೃತಿಯ ಅಂತ್ಯದಲ್ಲಿ ಓದುವುದಕ್ಕಾಗಿಯೇ ಬರೆದ ಅವರ ಕಂದಪದ್ಯಗಳಿವೆ. ಕೇವಲ ನಾಟಕ ಪ್ರದರ್ಶನದ ಸಮಯದಲ್ಲಿ ಅವುಗಳ ಬದಲಿಗೆ ಹಾಡುಗಳನ್ನು ಬಳಸಿಕೊಳ್ಳಬಹುದೆಂದು ತಿಳಿಸಿ ನಲವತ್ತಕ್ಕೂ ಹೆಚ್ಚಿನ ಮಟ್ಟುಗಳನ್ನು ಪ್ರತ್ಯೇಕವಾಗಿ ಕೊಟ್ಟಿದ್ದಾರೆ. ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಆ ಎಲ್ಲ ಹಾಡುಗಳನ್ನು ಆಗ ಪ್ರಚಲಿತವಿದ್ದ ಮಟ್ಟುಗಳಂತೆ ಹಾಡಬಹುದು ಎಂದು ಸೂಚಿಸಿ ಅವುಗಳ ಮೊದಲ ಸಾಲುಗಳನ್ನು ನೀಡಿದ್ದಾರೆ. ಇದರಿಂದ ಅವರು ಆಗ ಪ್ರಚಲಿತವಿದ್ದ ಅನೇಕ ನಾಟಕಗಳನ್ನು ನೋಡಿ ಅಲ್ಲಿಯ ಮಟ್ಟುಗಳ ಧಾಟಿಗಳನ್ನು ಮೆಚ್ಚಿಕೊಂಡಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಒಂದು ನಿದರ್ಶನವನ್ನು ನೋಡಬಹುದು. ೧೧ನೆಯ

ಪುಟದಲ್ಲಿ ಒಂದು ಪದ್ಯದ ಮೊದಲ ಸಾಲು ಹೀಗಿದೆ. 'ಭರದಿಂ ಪೋಪೆನಾದೆಡೆ...' ಎಂಬ ಪದ್ಯಕ್ಕೆ ಬದಲಾಗಿ 'ಎಂಥ ವಾಕ್ಯವ ಪೇಳ್ವೆ ದಂತಿಗಮನೆಯೇ' ಎಂಬಂತೆ ಪ್ರತ್ಯೇಕವಾಗಿ ಒದಗಿಸಿರುವ ಪದ್ಯವನ್ನು ಹಾಡಬೇಕು ಎಂದು ಸೂಚನೆ ಇದೆ. ಆ ಎಲ್ಲ ಮೊದಲಸಾಲುಗಳು ಯಾವ ನಾಟಕಗಳದ್ದು, ಅವುಗಳ ಸಂದರ್ಭ ಸ್ವಾರಸ್ಯಗಳೇನು ಎಂಬುವು ಈಗ ತಿಳಿಯುವುದಿಲ್ಲ. ಆದುದರಿಂದ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ 'ರಂಗಗೀತೆಗಳು' ಸಂಪುಟಗಳಿಂದ ಮತ್ತು ಇತರ ಆಕರಗಳಿಂದ ಈ ಎಲ್ಲ ಮಟ್ಟುಗಳ ಪೂರ್ಣ ಪಾಠವನ್ನು ಗುರುತಿಸಬೇಕಾಗಿದೆ. ಆ ಹಿನ್ನೆಲೆಯಲ್ಲಿ ಇನ್ನೂ ಬೆಳಕಿಗೆ ಬಾರದ ನಾಟಕ ಕೃತಿಗಳಿವೆಯೇ ಎಂಬುದನ್ನೂ ತಿಳಿಯಲು ಅವಕಾಶವಿದೆ. ಆಗಿನ ಕಾಲದ ನಾಟಕಗಳ ಹಾಡುಗಳನ್ನು ಆ ನಾಟಕದ ಲೇಖಕರು ಬರೆಯುತ್ತಿದ್ದರೂ ಕೆಲವನ್ನಾದರೂ ಬೇರೆಬೇರೆ ಮೂಲಗಳಿಂದ ಪಡೆದುಕೊಂಡು ಸಂದರ್ಭಾನುಸಾರ ಬಳಸುತ್ತಿದ್ದ ರೂಢಿ ಇದ್ದಿತು ಎಂಬುದನ್ನು ಗಮನಿಸಬೇಕು.

ಇಲ್ಲಿಯ ಸಂಭಾಷಣೆಯ ಪರಿಯನ್ನು ಗಮನಿಸಿದರೆ ಕೆಲವು ಸಂದರ್ಭಗಳಲ್ಲಿ, ವಿಶೇಷವಾಗಿ ವಿದೂಷಕನ ಮಾತುಗಳು, ಜನಸಾಮಾನ್ಯರ ಮಾತುಗಳು ಆಡುಭಾಷೆಯಲ್ಲಿ ಆಗಲೇ ಮೂಡಿ ಬಂದಿರುವುದು ಗೊತ್ತಾಗುತ್ತದೆ. ಇದಕ್ಕೂ ಪೂರ್ವನಿದರ್ಶನವಿದೆ. ಚುರಮುರಿ ಶೇಷಗಿರಿರಾಯರ ಶಾಕುಂತಲದಲ್ಲಿಯೇ ಇಂತಹ ಸಂಭಾಷಣೆ ಇದೆ. ಸುಶೀಲಾ ಪರಿಣಯದ ವಿಶೇಷವೆಂದರೆ ನಾಯಕನ ಮಿತ್ರ(ಸಾಮಾನ್ಯವಾಗಿ ವಿದೂಷಕ) ನಗೆಯನ್ನು ಉಕ್ಕಿಸಲು ಪ್ರಾಸಪ್ರಿಯನಾಗಿದ್ದಾನೆ. ಗಿಳಿಯನ್ನು ಹಿಂಬಾಲಿಸಿಕೊಂಡು ಹೋದ ರಾಜಕುಮಾರನ ನಡಿಗೆಯ ವೇಗವನ್ನು ಅನುಸರಿಸಲು ಸಾಧ್ಯವಾಗದೆ ಹಿಂದುಳಿದ ವಿದೂಷಕನ ಸ್ವಗತ ಹೀಗಿದೆ: "ಎತ್ತ ಹೋದನೋ ಗೊತ್ತೇ ಇಲ್ಲ. ಇತ್ತಲೆಲ್ಲಾ ಕತ್ತೆಯಂತೆ ಸುತ್ತಿಸುತ್ತಿ ಕೈಕಾಲುಗಳು ಸತ್ತು ಹೋಗಿವೆ. ಅವನ ಪತ್ತೆಯೇ ಇಲ್ಲ. ಕತ್ತಲೆ ಬರುತ್ತಿದೆ. ಮತ್ತೆ ಮತ್ತೆ ನಾನು ಸುತ್ತಲಾರೆ. ಈ ತೊತ್ತಿನ ಮಗನ ಅವಸ್ಥೆಯೇ ಹೀಗೆ. ಹತ್ತಿ ಹತ್ತಿ ನಡೆಯಲಾರೆ. ಎತ್ತ ಹೋಗಲಿ? ಅಗೋ ಕಟ್ಟಕಡೆಗೆ ಬಟ್ಟ ಬಯಲು. ಅಲ್ಲ ಅಲ್ಲ ಭತ್ತದ ಬಯಲು". ಹೀಗೇ ಏಕಾಕ್ಷರ ಪ್ರಾಸಯುಕ್ತ ಸುರಸ ಸಂಭಾಷಣೆ ಜನರನ್ನು ರಂಜಿಸಿರಬಹುದು ಎಂಬುದರಲ್ಲಿ ಅನುಮಾನಿಸಬೇಕಾದುದಿಲ್ಲ. ಡಾ. ಬಸವರಾಜ ಮಲಶೆಟ್ಟಿಯವರು ಇಂತಹ ಏಕಾಕ್ಷರ ಪ್ರಾಸದ ಬಳಕೆ ಮೂಡಲಪಾಯಗಳಲ್ಲಿ ಹಿಂದಿನಿಂದಲೂ ಇದ್ದಿತು ಎಂದು ತಿಳಿಸಿ ಉದಾಹರಣೆಗಳನ್ನೂ ನೀಡಿದ್ದಾರೆ(೧೯೮೩:೫೯). ಇದು ರಂಗಭೂಮಿಯ ಇತಿಹಾಸದ ಅಧ್ಯಯನಕ್ಕೆ ಅವಕಾಶ ಮಾಡಿಕೊಡುತ್ತದೆ. ಕಥಾವಸ್ತುವಿನಲ್ಲಿ ಮಹತ್ವವಿಲ್ಲದಿದ್ದರೂ ಇಂಥ ಇತರ ಅಂಶಗಳು ಗಮನ ಸೆಳೆಯುತ್ತವೆ.

ಪೌರಾಣಿಕ ಹಿನ್ನೆಲೆಯುಳ್ಳ ಇನ್ನೆರಡು ನಾಟಕಗಳಲ್ಲಿ ಹೆಚ್ಚೇನೂ ಹೇಳುವಂತಿಲ್ಲ. 'ಚೂಡಾಲೆ' ಯೋಗವಾಶಿಷ್ಠದ ಒಂದು ಪ್ರಸಂಗದಿಂದ ಪ್ರೇರಿತವಾಗಿದೆ. ಸ್ತ್ರೀಶಿಕ್ಷಣ, ಸ್ತ್ರೀಯರ ಸಾಮರ್ಥ್ಯಗಳನ್ನು ಕುರಿತು ಚರ್ಚಿಸುವ ಉದ್ದೇಶ ಇದೆ ಎಂದು ಪೀಠಿಕೆಯಿಂದ ತಿಳಿಯುತ್ತದೆ. ಕಥಾ ಹಂದರ ಬಹಳ ತೆಳುವಾಗಿದೆ. ದೈವ ಶಕ್ತಿ, ಚೂಡಾಲೆಯ ಶ್ರದ್ಧೆ,

ಅವಳು ಪಡೆದ ಯೋಗಶಿಕ್ಷಣ, ಅದರಿಂದ ಸಾಧಿಸಿದ ಯೋಗ ಶಕ್ತಿ ಇವೆಲ್ಲ ಮಾನುಷ ನೆಲೆಯ ಆಚೆಗೆ ಸಲ್ಲುವ ಸಂಗತಿಗಳಾಗಿವೆ. ಸ್ತ್ರೀವಾದಿ ಅಧ್ಯಯನದ ದೃಷ್ಟಿಯಿಂದ ಇವನ್ನು ಗಮನಿಸಬಹುದಾಗಿದೆ.

'ಸುಧರ್ಮ ಪ್ರಭಾವ' ಅಂತಹದೇ ಇನ್ನೊಂದು ನಾಟಕ. ಇಲ್ಲಿ ಕಥೆ ಎನ್ನುವುದು ಏನೂ ಇಲ್ಲವೆಂದೇ ಹೇಳಬಹುದು. ಇದರಲ್ಲಿಯೂ ಪದ್ಯಗಳ ಹೊರತಾಗಿ ನಾಟಕದ ಬಂಧದಲ್ಲಿ ಅಥವಾ ವಸ್ತುವಿನಲ್ಲಿ ಯಾವ ನಾವೀನ್ಯವೂ ಇಲ್ಲ.

'ಶಾಂತಾದೇವಿಯ ಸಂಸಾರ'(೧೯೩೨) ಅಧ್ಯಾತ್ಮದ ಶಕ್ತಿಯನ್ನು ಪ್ರಚಾರ ಮಾಡುವ ಉದ್ದೇಶದಿಂದ ಬರೆದ ಸಾಮಾಜಿಕ ರೀತಿಯ ನಾಟಕ. ಅದು ಅಧ್ಯಾತ್ಮ ಪ್ರಕಾಶ ಪತ್ರಿಕೆಯಲ್ಲಿ ಪ್ರಕಟವಾಗಿರುವುದು ಸಹಜವಾಗಿದೆ. ಇಲ್ಲಿರುವ ಕಥೆಯಲ್ಲಿಯೂ ಒಂದು ಅಚ್ಚುಕಟ್ಟಿಲ್ಲ. ಸ್ತ್ರೀಯರ ವಿದ್ಯಾಭ್ಯಾಸ ಅಧ್ಯಾತ್ಮದತ್ತ ಹೊರಳಲು ಕಾರಣವಾಗಬೇಕೆಂಬ ಆಶಯ ಪ್ರತಿಪಾದಿತವಾಗಿದೆ. ಸ್ತ್ರೀಯರ ಬೇರೆ ಯಾವ ಸಮಸ್ಯೆಗಳ ಕುರಿತಾಗಿಯೂ ಇಲ್ಲಿ ಯಾವುದೇ ಪ್ರಸ್ತಾಪವಿಲ್ಲ. ಇದು ಹೊಸಕೆರೆ ಚಿದಂಬರಯ್ಯನವರ ತೀರ ದುರ್ಬಲವಾದ ನಾಟಕ ಎಂದು ಹೇಳಬಹುದಾಗಿದೆ. ಆದರೆ ಇದರಲ್ಲಿನ ಒಂದು ಉಲ್ಲೇಖ ಅಚ್ಚರಿ ತರುತ್ತದೆ. ಒಂದು ಕಡೆ ಶಾಂತಾದೇವಿ ತನ್ನ ತಮ್ಮನು ವೈರಾಗ್ಯಪರನಾದದ್ದನ್ನು ಹೇಳುತ್ತ 'ಸಿನಿಮಾ ನಾಟಕಗಳನ್ನೂ ಬಿಟ್ಟನು'(೧೯೩೨ :೩೭) ಎಂದು ನುಡಿಯುತ್ತಾಳೆ. ೧೯೩೨ರಲ್ಲಿ ಈ ಕೃತಿ ಪ್ರಕಟವಾಗುವ ವೇಳೆಗೆ ಇನ್ನೂ ಕನ್ನಡದಲ್ಲಿ ವಾಕ್ಚಿತ್ರಗಳು ಬಂದೇ ಇರಲಿಲ್ಲ. ಮೊಟ್ಟ ಮೊದಲ ಕನ್ನಡ ವಾಕ್ಚಿತ್ರ ಸತಿ ಸುಲೋಚನಾ ತಯಾರಾದದ್ದು ೧೯೩೪ರಲ್ಲಿ ಎಂಬುದನ್ನು ನೆನಪಿಸಿಕೊಳ್ಳಬಹುದು. ಆದರೆ ಆಗಲೇ ಸಿನಿಮಾ ನೋಡುವುದು ಒಂದು ಹವ್ಯಾಸವಾಗಿತ್ತು ಎನ್ನುವುದನ್ನು ಈ ನಾಟಕ ದಾಖಲಿಸಿದೆ. ಪರಭಾಷೆಯ ಚಿತ್ರಗಳು ಮತ್ತು ಮೂಕಿ ಚಿತ್ರಗಳೇ ಆಗ ಹೇರಳವಾದ ಮನೋರಂಜನೆ ಒದಗಿಸಿ ಜನಪ್ರಿಯವಾಗಿದ್ದವು. ಅಲ್ಲದೆ ಕೆಲ ಸಂಪ್ರದಾಯವಂತರು ಹೇಳುವ ಮಟ್ಟಿಗೆ ನಾಟಕಗಳನ್ನು ನೋಡುವ ಹಾಗೆಯೇ ಅದೂ ಒಂದು ಹವ್ಯಾಸವಾಗಿತ್ತು ಎಂದು ಭಾವಿಸಬಹುದಾಗಿದೆ.

'ಕಲಿ ಸಂತರಣ' ಶಾಂತಾದೇವಿಯ ಸಂಸಾರದ ರೀತಿಯಲ್ಲಿಯೇ ನಮ್ಮ ಜೀವನದ ಎಲ್ಲ ಸಮಸ್ಯೆಗಳಿಗೆ ರಾಮನಾಮವೇ ಸೂಕ್ತ ಪರಿಹಾರ ಎನ್ನುವುದನ್ನು ಬಿಂಬಿಸುವ ನಾಟಕ. ಹೆಚ್ಚು ಚರ್ಚೆಗೆ ಯೋಗ್ಯವಾದುದಲ್ಲ.

'ಕೃಷ್ಣ ಮಹೀಶ್ವರೀ' (೧೯೧೦) 'ಮೈಸೂರು ದೇಶದ ಚರಿತ್ರೆಯ ನಾಟಕಾನುವಾದ'. ಹೊಸಕೆರೆ ಚಿದಂಬರಯ್ಯನವರು ಐತಿಹಾಸಿಕ ನಾಟಕಗಳ ಮಹತ್ವವನ್ನೂ ಅವು ಅಪರೂಪದ ಸಂಗತಿಗಳು ಎಂಬುದನ್ನೂ ಇದರ ಪೀಠಿಕೆಯಲ್ಲಿ ತಿಳಿಸಿದ್ದಾರೆ: 'ಪುರಾಣದ ಕಥೆಗಳಿಗಿಂತಲೂ ಐತಿಹಾಸಿಕವಾದ ಸಂಗತಿಗಳೇ ಈಗಿನ ಜನರಿಗೆ ವಿಶೇಷವಾಗಿ ಆದರಣೀಯವಾಗಿಯೂ ಜನಾಂಗದ ಅಭ್ಯುದಯಕ್ಕೆ ಅತ್ಯಗತ್ಯವಾಗಿಯೂ ಇರುವುದೆಂದು ಕಂಡುಬಂದುದರಿಂದ ಅಂತಹ ಐತಿಹಾಸಿಕ

ನಾಟಕವೊಂದನ್ನು ಬರೆಯಬೇಕೆಂದು ಅಪೇಕ್ಷಿಸಿ, ಮಾತೃಭೂಮಿಯಾದ ಮೈಸೂರುದೇಶದ ಚರಿತ್ರ ಸೂಚಿತವಾದ ಸಂಗತಿಗಳನ್ನೆಲ್ಲಾ ಅಡಕಮಾಡಿ, ಹೊಸಬಗೆಯ ಸಂವಿಧಾನದಿಂದ ಸಾಲಂಕೃತವಾಗಿರುವಂತೆ, ಯಥಾಮತಿಯಾಗಿ ಈ ನಾಟಕವನ್ನು ವಿರಚಿಸಿರುತ್ತೇನೆ.'(೧೯೧೦:೪). 'ಕೇವಲ ಐತಿಹಾಸಿಕವಾದ ನಾಟಕಗಳಲ್ಲಿ 'ಮುದ್ರಾರಾಕ್ಷಸ'ವೊಂದನ್ನು ಬಿಟ್ಟು, ಇನ್ನಾವುದೂ ಹೆಸರುವಾಸಿಯನ್ನು ಪಡೆದೇ ಇಲ್ಲವೆನ್ನಬೇಕು' ಎಂದೂ ಅಭಿಪ್ರಾಯಪಟ್ಟಿದ್ದಾರೆ(ಅಲ್ಲೇ). ಅದು ಬಹುಶಃ ಮೋ. ರಾಮಾಶಾಸ್ತ್ರಿಗಳು(೧೯೦೮) ರಚಿಸಿರಬಹುದಾದ 'ಮುದ್ರಾರಾಕ್ಷಸ' ಕೃತಿಯೇ ಇದ್ದಿರಬಹುದು. ಇದು ಐತಿಹಾಸಿಕ ವಸ್ತುವಿನತ್ತ ಜನರ ಮನಸ್ಸು ಹೊರಳಿದುದರ ಸೂಚನೆಯನ್ನು ನೀಡುತ್ತದೆ. ಆ ವೇಳೆಗಾಗಲೇ ಕೆಲವಾದರೂ ಐತಿಹಾಸಿಕ ಕೃತಿಗಳು ರಚಿತವಾಗಿ ಪ್ರದರ್ಶಿತವಾಗಿರಬೇಕು ಎಂಬ ತೀರ್ಮಾನದತ್ತ ಕರೆದೊಯ್ಯುತ್ತದೆ.

'ಕೃಷ್ಣ ಮಹೀಶ್ವರೀ' ಮೈಸೂರು ಅರಸರ ಬಗೆಗೆ ಬಂದ ಮೊದಲ ನಾಟಕ ಎಂದು ಹೇಳಬಹುದು. ಇದು ಪ್ರಕಟವಾಗಿರುವುದು ೧೯೧೦ರಲ್ಲಿ. ಸಂಸರ ಮೊದಲ ನಾಟಕ 'ಸುಗುಣ ಗಂಭೀರ' ೧೯೧೮ರಲ್ಲಿ ಪ್ರಕಟವಾಯಿತು.

'ಕೃಷ್ಣ ಮಹೀಶ್ವರೀ'ಯಲ್ಲಿ ಮೈಸೂರು ವಂಶದ ಚರಿತ್ರೆಯನ್ನು ಬಹುತೇಕ ೧೯೦೦ರವರೆಗೆ ನಿರೂಪಿಸಲು ಹವಣಿಸಿರುವುದು ಕಂಡುಬರುತ್ತದೆ. ಯದುರಾಜರಿಂದ ಪ್ರಾರಂಭಿಸಿ ನಾಲ್ವಡಿ ಕೃಷ್ಣರಾಜೊಡೆಯರ ತನಕ ವಸ್ತು ವ್ಯಾಪಿಸಿಕೊಂಡಿದೆ. ಹೀಗೆ ದೀರ್ಘಕಾಲದ ಇತಿಹಾಸವನ್ನು ಬಿಂಬಿಸಲು ಪ್ರಯತ್ನಿಸಿರುವುದು ಮುಖ್ಯವಾಗಿ ನಾಟಕಕ್ಕೆ ಒಂದು ಮಿತಿಯನ್ನು ತಂದಿದೆ. ಪೀಠಿಕೆಯಲ್ಲಿ ತಿಳಿಸಿರುವಂತೆ ಅವರು ಆಗಿನ ಕಾಲದಲ್ಲಿ ಲಭ್ಯವಿದ್ದ ಎಲ್ಲ ಆಕರಗಳನ್ನೂ ಗಮನಿಸಿರಬಹುದು. ಇತಿಹಾಸಕ್ಕೆ ಅಪಚಾರವನ್ನೆಸಗುವ ಯಾವುದೇ ಸಂಗತಿ ಕಣ್ಣಿಗೆ ಬೀಳುವುದಿಲ್ಲ. ರಾಜಭಕ್ತಿಯನ್ನಿರಿಸಿಕೊಂಡೂ ಒಂದು ಬಗೆಯ ನಿರ್ಲಿಪ್ತ ದೃಷ್ಟಿಯನ್ನು ಸಾಧಿಸಿದ್ದಾರೆ. ಇಲ್ಲಿ ಸಂಸರ ನಾಟಕಗಳಲ್ಲಿ ಕಂಡುಬರುವ ಉದ್ವೇಗ, ಆವೇಶ ಮುಂತಾದವು ಹೆಚ್ಚಾಗಿ ಕಾಣುವುದಿಲ್ಲ. ಜೊತೆಗೆ ಪೌರಾಣಿಕ ಅಭಿವ್ಯಕ್ತಿಗೆ ಒಗ್ಗಿಕೊಂಡಿರುವ ನಾಟಕಕಾರರು ಅದನ್ನು ಇಲ್ಲಿ ಒಂದು ರೂಪಕವಾಗಿ ಬಳಸಿಕೊಳ್ಳುವ ಜಾಣ್ಮೆ ತೋರಿದ್ದಾರೆ. ಮಹೀಶ್ವರಿಯನ್ನು ಮೈಸೂರಿನ ರಾಜ್ಯಲಕ್ಷ್ಮಿ ಎಂದು ಕಲ್ಪಿಸಿಕೊಂಡು ರಾಜಾ ಪೃಥ್ವೀ ವಲ್ಲಭ ಎಂಬ ನಿಟ್ಟಿನಲ್ಲಿ ಎಲ್ಲ ರಾಜರೂ ಕೃಷ್ಣನ ಅವತಾರಗಳಲ್ಲಿ ಮಹೀಶ್ವರಿಗೆ ಒಡೆಯರು ಎಂಬ ರೀತಿಯಲ್ಲಿ ಕಥೆ ಮುಂದುವರೆದುಕೊಂಡು ಹೋಗುತ್ತದೆ. ಯದುರಾಜರು ಸಾಕ್ಷಾತ್ ಕೃಷ್ಣನೇ ಆಗಿದ್ದಾರೆ. ಅನೇಕ ಇತರ ತಂತ್ರಗಳನ್ನೂ ಚಿದಂಬರಯ್ಯನವರು ಬಳಸಿದ್ದಾರೆ. ಅವರಿಗೆ ಎಲ್ಲಿ ಬೇಕೋ ಅಲ್ಲಿ ಪ್ರಸಂಗವನ್ನು ಬೇಗ ಮುಗಿಸಲು ಮಹೀಶ್ವರಿಯ ಸಖಿಯ ಕೈಯಲ್ಲಿ ಅಥವಾ ಬೇರೊಂದು ಪಾತ್ರದ ಮೂಲಕ ಘಟನೆಗಳನ್ನು ನಿರೂಪಿಸಿ ಮುಂದುವರೆಯುತ್ತಾರೆ. ಹೀಗೆ ಮಾಡುವುದರಿಂದ ಅನೇಕ ಸ್ವಾರಸ್ಯದ ಪ್ರಸಂಗಗಳ ವಿವರ ಓದುಗರಿಗೆ, ನೋಡುಗರಿಗೆ ದಕ್ಕದೇ ಹೋಗುತ್ತದೆ. ಉದಾಹರಣೆಗೆ ಕಂಠೀರವ

ನರಸರಾಜ ಒಡೆಯರು ತಿರುಚನಾಪಳ್ಳಿಗೆ ಹೋಗಿ ಅಲ್ಲಿನ ಜೆಟ್ಟಿಯನ್ನು ಸೋಲಿಸಿ ಬಂದ ಪ್ರಸಂಗ ಕೇವಲ ನಿರೂಪಣೆಯಲ್ಲಿ ಮುಗಿದು ಹೋಗುತ್ತದೆ.

ಹಾಗೆಯೇ ಸಾಮಾನ್ಯವಾಗಿ ನಾಟಕಗಳಲ್ಲಿ ನೀಡದಂತಹ ಕೆಲವು ಮಾಹಿತಿಗಳನ್ನು ಚಿದಂಬರಯ್ಯನವರು ನೀಡುತ್ತಾರೆ. ಸೂತ್ರಧಾರ ಮತ್ತು ನಟಿಯರ ಸಂಭಾಷಣೆ ವರ್ತಮಾನದ ಮೈಸೂರಿನ ಅಭಿವೃದ್ಧಿಯ ವರ್ಣನೆಯೇ ಆಗಿದೆ:

> ನಮ್ಮ ಮೈಸೂರು ರಾಜಧಾನಿಯನ್ನು ಈಗ ನೋಡು. ನವರಾತ್ರುತ್ಸವವನ್ನು ನೋಡುವುದಕ್ಕೆ, ಎಲ್ಲೆಲ್ಲಿಯೂ ಪ್ರೇಕ್ಷಕರ ಗುಂಪು ನೆರೆದಿರುವುದು. ನಾನಾ ದೇಶಗಳ ಜನಗಳೆಲ್ಲರೂ ಏಕದೇಶದಲ್ಲಿ ಇಲ್ಲಿ ಸೇರಿರುವುದರಿಂದ, ಈಗಲೀಗ ನಮ್ಮ ದೇಶವು ಸಮಸ್ತ ಭೂಮಂಡಲವನ್ನೂ ಒಳಗೊಂಡಂತೆ ತೋರುತ್ತಿದೆ. ಹಿಂದೆ, ಒಂದೆರಡು ವೇಳೆ, ಸ್ವಲ್ಪ ಕಾಲದ ಮಟ್ಟಿಗೆ ಮಾತ್ರ, ಈ ಪಟ್ಟಣವನ್ನು ನೋಡಿದ್ದವರು ತಾವು ಹಿಂದೆ ನೋಡಿದ ಪಟ್ಟಣದಂತೆ ಈ ಪಟ್ಟಣವು ಕಾಣುವುದಿಲ್ಲವೆಂದೂ, 'ದೇವಲೋಕದಿಂದ ಅಮರಾವತೀನಗರವು ಇಳಿತಂದಿರುವುದೆಂದೂ' ಈಗ ಹೇಳಿಕೊಳ್ಳುತ್ತಿರುವರು. ಪಟ್ಟಣದ ಅಲಂಕಾರವೆಷ್ಟು ಅಂದವಾಗಿದೆ! ಎಲ್ಲೆಲ್ಲಿಯೂ ನವನವೀನವಾದ ಮಂಟಪಗಳು; ಎಲ್ಲೆಲ್ಲಿಯೂ ಕೆಂದಳಿರಿನ ತೋರಣಗಳು; ಎಲ್ಲೆಲ್ಲಿಯೂ ಉತ್ಸಾಹವು ಬೀಡುಬಿಟ್ಟಂತಿದೆ. ಒಂದೆಡೆಯಲ್ಲಿ ಹೊಸಹೊಸ ನಾಟಕಗಳು; ಇನ್ನೊಂದೆಡೆಯಲ್ಲಿ ಅತ್ಯದ್ಭುತವಾದ ಕುದುರೆಯಾಟಗಳು; ಮತ್ತೊಂದೆಡೆಯಲ್ಲಿ ವಿಜಾತೀಯವಾದ ಚಂಡಿನಾಟಗಳು; ಮಗುಳೊಂದೆಡೆಯಲ್ಲಿ ಜಟ್ಟಿಗಾಳಗದ ಬಲಪ್ರದರ್ಶನಗಳು; ಬೇರೊಂದೆಡೆಯಲ್ಲಿ ರಸಾಭಿನಯಭರಿತವಾದ ನಾಟ್ಯವಿಶೇಷಗಳು; ಇದರ ಮೇಲೆ, ಎಲ್ಲೆಲ್ಲಿ ನೋಡಿದರೂ, ವೀಣಾದಿ ವಾದನಗಳು ತಂತ್ರೀನಿನಾದಗಳು; ಎಲ್ಲೆಲ್ಲಿ ನೋಡಿದರೂ ವಿದೇಶಗಳ ಸಂಗೀತ ವಿದ್ವಾಂಸರ ಕಂಠಸ್ವರ; –ಎಷ್ಟು ನೋಡಿದರೂ, ಕಣ್ಣಿಗೆ ದಣಿವಾಗದ ಬಾಣಬಿರುಸುಗಳ ವಿಧವಿಧವೈಚಿತ್ರ್ಯಗಳು. ಪ್ರಿಯೆ! ಭಗವಂತನು ಸಮಸ್ತ ಸುಖಸಾಧನಗಳನ್ನೂ ಇಲ್ಲಿಯೆ ನೆಲೆಗೊಳಿಸಿದಂತೆ ತೋರುವುದಿಲ್ಲವೆ?
>
> ಮಹೋತ್ಸವವನ್ನು ನೋಡಲೋಸುಗ ದಿಗಂತಗಳಿಂದಲೂ ಬಂದಿರುವ ಜನರಿಗೆ, ಪ್ರಯೋಜನದೊಡಗೂಡಿದ ವಿನೋದವನ್ನು ಉಂಟುಮಾಡುವುದಕ್ಕಾಗಿ, ಎಷ್ಟೋ ಕಡೆಗಳಿಂದ, ಸ್ತ್ರೀಯರೂ ಸಹ, ವಸ್ತುಪ್ರದರ್ಶನಕ್ಕೆ, ಅವರಿವರಿಗೆ ಬಳಕೆಯಾದ ದಿವ್ಯೋಪಕರಣಗಳನ್ನು ಕಳುಹಿಸಿದ್ದಾರೆ.
>
> ಮೈಸೂರು ದೇಶದಲ್ಲಿ ಸ್ತ್ರೀವಿದ್ಯಾಭ್ಯಾಸವು ಈಚೆಗೆ ಬಹಳ ಅಭಿವೃದ್ಧಿಗೆ ಬಂದು, ಅನೇಕ ಅಬಲೆಯರು ಬೀ.ಏ. ಪರೀಕ್ಷೆಯಲ್ಲಿ ಕೂಡ ಉತ್ತೀರ್ಣರಾಗಿರುವುದರಿಂದ, ಅನೇಕ ವಸ್ತುಗಳ ಬಳಕೆಯು ಸುಲಭವಾಗಿ ಅವರಿಗೆ ಉಂಟಾಗಿದೆ..

ಮೈಸೂರು ಅರಸರ ಅಭಿವೃದ್ಧಿ ಕಾರ್ಯಗಳನ್ನು ವಿವರಿಸುವಾಗ ಕೆರೆ, ಕಾಲುವೆ ಕಟ್ಟೆಗಳನ್ನು ನಿರ್ಮಿಸಿದ ವಿಚಾರಗಳನ್ನು ಪ್ರಸ್ತಾಪಿಸಿ ಹಾಗೆಯೇ ಮಾರೀ ಕಣಿವೆ ಅಥವಾ ವಾಣೀವಿಲಾಸಸಾಗರದ ನಿರ್ಮಾಣವಾದದ್ದನ್ನೂ ದಾಖಲಿಸುತ್ತಾರೆ. ಬಿದನೂರಿನ ನಾಯಕರು, ಬೂದಿಬಸಪ್ಪ, ರಂಗಪ್ಪನಾಯಕ ಇವರಿಂದ ಮೈಸೂರು ಅರಸೊತ್ತಿಗೆಗೆ

ಆದ ತೊಂದರೆಯನ್ನು ಸೂಚಿಸುತ್ತಾರೆ. ಕೆಲವು ಸನ್ನಿವೇಶಗಳು ವಿಶೇಷವಾಗಿ ಟಿಪ್ಪು ಕಾರ್ನ್‌ವಾಲೀಸನಿಗೆ ತನ್ನ ಮಕ್ಕಳನ್ನು ಒಪ್ಪಿಸುವ ದೃಶ್ಯ ಮುಂತಾದವು ಹೃದಯಂಗಮವಾಗಿವೆ. ರಾಜ ಒಡೆಯರು ಅವರ ಅಣ್ಣನೊಡನೆ ನಡೆದುಕೊಂಡ ರೀತಿ ಸೂಕ್ಷ್ಮತೆಯೊಡನೆ ಪ್ರಸ್ತಾಪಿತವಾಗಿದೆ. ಹೈದರಲ್ಲಿಯ ಕ್ರೌರ್ಯವೂ ಜನರ ಮಾತಿನಲ್ಲಿ ಚಿತ್ರಿತವಾಗಿ ಮನಮುಟ್ಟುತ್ತದೆ. ಕೊಡಗಿನ ಇತಿಹಾಸವನ್ನು ಬರೆದಿರುವ ಡಿ.ಎನ್. ಕೃಷ್ಣಯ್ಯನವರು ತನ್ನ ಸೈನಿಕರು ಮೂಟೆಯಲ್ಲಿ ಹೊತ್ತು ತಂದ ಚೆಲುವಾದ ಯೋಧರ ಮುಖಗಳನ್ನು ನೋಡಿ ಎಂಥ ಸುಂದರವಾಗಿದ್ದಾರೆ ಇವರನ್ನು ಕೊಲ್ಲಬೇಕಾಯಿತೇ ಎಂದು ಕೊರಗಿದ ಹೈದರನ ಇನ್ನೊಂದು ಮುಖವನ್ನು ಕಾಣಿಸಿದ್ದಾರೆ. ಇಲ್ಲಿ ಅಂತಹ ಹೈದರ ಕಾಣಸಿಗುವುದಿಲ್ಲವಾದರೂ ಜನರ ಆಡು ಮಾತುಗಳಲ್ಲಿ ಅವನೆಸಗಿದ ಹಿಂಸಾಕೃತ್ಯಗಳು ಮನಸ್ಸನ್ನು ಹೊಗುತ್ತವೆ. ಅಲ್ಲದೆ ಖಂಡೇರಾಯನನ್ನು ಬಂಧಿಸಿದ ಅನಂತರ ಚಿಕ್ಕ ಕೃಷ್ಣರಾಜ ಹೈದರನ ಬಳಿ ಅವನನ್ನು ಕೊಲ್ಲಬಾರದು ಎಂದು ವಿನಂತಿಸಿಕೊಂಡಾಗ ಹೈದರ್ ನೀಡುವ ಉತ್ತರ ಬಹುಶಃ ಇಡೀ ನಾಟಕದಲ್ಲಿ ಅತ್ಯಂತ ಧ್ವನಿಪೂರ್ಣವಾಗಿದೆ: 'ಇಲ್ಲ! ಇಲ್ಲ!! ಮಹಾಸ್ವಾಮಿ' ಎಂದು ಸೇವಕನ್ನು ಕರೆದು 'ಈ ಖಂಡೇರಾಯನನ್ನು ತೆಗೆದುಕೊಂಡು ಹೋಗಿ ಪಂಜರದಲ್ಲಿಟ್ಟು, ಬೀಗವನ್ನು ಹಾಕಿ, ಗಿಳಿಗೆ ಕೊಡುವಷ್ಟು ಹಾಲನ್ನೂ ಅನ್ನವನ್ನೂ ಇಟ್ಟು ಪೋಷಿಸುತ್ತಿರಿ' ಎಂದು ಹೇಳುವಾಗ ಹೈದರನ ಕ್ರೌರ್ಯಪೂರ್ಣ ವ್ಯಂಗ್ಯ ಮನಸ್ಸಿಗೆ ರಾಚುವ ಹಾಗೆ ನಾಟುತ್ತದೆ. ವಿಲ್ಕ್ಸ್ ಬರೆದಿರುವ, ಮೈಸೂರು ಅರಮನೆಯ ಸರಸ್ವತೀ ಭಂಡಾರದ ಪುಸ್ತಕಗಳನ್ನು ಟಿಪ್ಪು ಹುರುಳಿ ಬೇಯಿಸುವ ಒಲೆಗೆ ಹಾಕಿಸಿದ ಪ್ರಸಂಗವೂ ದಾಖಲಾಗುತ್ತದೆ. ಆದರೆ ಮೈಸೂರು ಒಡೆಯರ ಕಾಲದ ಸಂಸ್ಕೃತಿ ಪೋಷಣೆಯ ಕೆಲಸಗಳೂ ಅನಂತರದ ಕಾಲದಲ್ಲಿ ಅರಮನೆ ಒಂದು ನಾಟಕ ಕಂಪನಿ ಸ್ಥಾಪಿಸಿದಂತಹ ಘಟನೆಗಳು ಇಲ್ಲಿ ದಾಖಲಾಗುವುದಿಲ್ಲ. ಚಿಕುಪಾಧ್ಯಾಯರಲ್ಲಿ ಚಿಕ್ಕದೇವರಾಜ ಒಡೆಯರು ಅಧ್ಯಯನ ಕೈಗೊಂಡರೆಂಬ ಮಾತು ಮಾತ್ರ ಇದೆ. ಯದುವೊಡೆಯರಿಂದ ಹೈದರನು ಪಟ್ಟಕ್ಕೆ ಬರುವ ನಿಕಟಪೂರ್ವ ಸನ್ನಿವೇಶದವರೆಗಿನ ಎಲ್ಲವೂ ಕೇವಲ ಕೆಲ ಪುಟಗಳಲ್ಲಿ ಮುಗಿದು ಹೋಗುವುದು ನಿರಾಸೆ ಮೂಡಿಸುತ್ತದೆ. ಇತಿಹಾಸದ ನಿರೂಪಣೆಯಲ್ಲಿ ಕಲ್ಪನೆಗೆ ಅವಕಾಶವಿಲ್ಲದಿರುವುದೂ ಇಂತಹ ಬಿಗಿಯಾದ ಬಂಧಕ್ಕೆ ಕಾರಣವಾಗಿರಬಹುದು. ಸಂಸರು ಆರು ನಾಟಕಗಳ ಚಕ್ರವನ್ನೇ ಬರೆದರೂ ಮೈಸೂರಿನ ಸಮಗ್ರ ಇತಿಹಾಸವನ್ನು ನಿರೂಪಿಸಿಲ್ಲ ಎಂಬುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು. ಬಹುಶಃ ಚಿದಂಬರಯ್ಯನವರು ಐತಿಹಾಸಿಕ ವಸ್ತುವನ್ನು ಮತ್ತೊಮ್ಮೆ ಬರವಣಿಗೆಗೆ ಆಯ್ಕೆ ಮಾಡಿಕೊಂಡಿದ್ದರೆ ಇನ್ನೂ ಪರಿಪುಷ್ಟವಾದ ನಾಟಕವನ್ನು ನೀಡುತ್ತಿದ್ದರು ಎಂದು ಭಾವಿಸಬಹುದಾಗಿದೆ.

ಇಲ್ಲಿಯೂ ಕಂದ ಪದ್ಯಗಳ ಬಳಕೆ ಇದೆ. ವೃತ್ತಗಳ ಬಳಕೆ ಇಲ್ಲದೆ ನಾಟಕ ಸರಾಗವಾಗಿ ಮುಂದುವರೆಯುತ್ತದೆ. ಮೈಸೂರು ಅರಸರ ಮೇಲ್ಮೆ, ದೌರ್ಬಲ್ಯ, ಉದಾತ್ತತೆ, ಪ್ರಜಾನುರಾಗ ಎಲ್ಲವನ್ನೂ ಸಂದರ್ಭೋಚಿತವಾಗಿ ನಾಟಕಕಾರರು ಕಾಣಿಸಿದ್ದಾರೆ. ಇಲ್ಲಿನ ಸಂಭಾಷಣೆಗಳು ನಾಟಕಕಾರರ ಇತರ ಎಲ್ಲ ನಾಟಕಗಳ

ಸಂಭಾಷಣೆಗಳಿಗಿಂತ ಚುರುಕಾಗಿವೆ; ಔಚಿತ್ಯಪೂರ್ಣವಾಗಿವೆ. ಕೆಲವೆಡೆಗಳಲ್ಲಿ ಸಣ್ಣ ಅಪವಾದಗಳಿರಬಹುದು. ಚೋದ್ಯವೆಂದರೆ ಅನಕ್ಷರಸ್ಥನಾಗಿದ್ದ ಹೈದರಾಲಿ, ಪರ್ಷಿಯನ್ ಭಾಷೆಯನ್ನು ಆಡಳಿತಭಾಷೆಯಾಗಿ ಮಾಡಿದ ಟಿಪ್ಪೂ ಇಲ್ಲಿ ಕನ್ನಡದ ಕಂದ ಪದ್ಯಗಳನ್ನು ಹಾಡುತ್ತಾರೆ. ಒಟ್ಟಾರೆಯಾಗಿ ಹೊಸಕೆರೆ ಚಿದಂಬರಯ್ಯನವರ ಲಭ್ಯವಿರುವ ಆರು ನಾಟಕಗಳ ಪೈಕಿ ಉತ್ತಮವೆನಿಸುವ ನಾಟಕವೆಂದರೆ 'ಕೃಷ್ಣಮಹೀಶ್ವರೀ' ಎಂದು ಹೇಳಬಹುದಾಗಿದೆ. ಬೇರೆಯವರು ಬರೆದಿರಬಹುದಾದ ಇತರ ಕೃತಿಗಳು ಸಿಗುವ ತನಕ ಇದು ಪ್ರಾಯಶಃ ಕನ್ನಡದ ಮೊದಲ ಐತಿಹಾಸಿಕ ನಾಟಕವೆಂದು ಹಾಗೂ ಮೈಸೂರು ಅರಸು ಮನೆತನಕ್ಕೆ ಸಂಬಂಧಿಸಿದ ಮೊದಲ ನಾಟಕವೆಂದು ದಾಖಲಿಸಬಹುದಾಗಿದೆ ಎಂದು ಸೂಚಿಸಬಯಸುತ್ತೇನೆ. ಹೊಸಕೆರೆ ಚಿದಂಬರಯ್ಯನವರ ಈ ಎಲ್ಲ ನಾಟಕಗಳನ್ನೂ ವಿದ್ವಾಂಸರು ಅಧ್ಯಯನ ಮಾಡುವ ಅಗತ್ಯವಿದೆ. ಅದರಿಂದ ಹೊಸಕೆರೆ ಚಿದಂಬರಯ್ಯನವರ ನಾಟಕಗಳ ಬಗ್ಗೆ ಇನ್ನಷ್ಟು ಸ್ಪಷ್ಟ ನೋಟ ದೊರೆಯಬಹುದು.

ಪರಾಮರ್ಶನ ಗ್ರಂಥಗಳು

೧ ಅನಂತಮೂರ್ತಿ ಸಿಂಧುವಳ್ಳಿ — ೧೯೭೭ ಗುಬ್ಬಿ ಕಂಪನಿ
ಮೈಸೂರು ಸುರುಚಿ ಪ್ರಕಾಶನ

೨ ಕೃಷ್ಣಭಟ್ಟ ಹೆರಂಜೆ ಮತ್ತು ಮುರಳೀಧರ ಉಪಾಧ್ಯ ಹಿರಿಯಡಕ (ಸಂ) — ೧೯೯೫ ಗೋವಿಂದಪೈ ಸಂಶೋಧನ ಸಂಪುಟ
ರಾಷ್ಟ್ರಕವಿ ಗೋವಿಂದಪೈ ಸಂಶೋಧನ ಕೇಂದ್ರ
ಉಡುಪಿ

೪ ಗೋವಿಂದ ಪೈ ಮಂ — ೧೯೪೬ 'ಕನ್ನಡ ನಾಟಕದ ಹಳಮೆ'
ನೋಡಿ: ಕೃಷ್ಣಭಟ್ಟ ಹೇರಂಜೆ
ಮುರಳೀಧರ ಉಪಾಧ್ಯ ಹಿರಿಯಡಕ
೧೯೯೫ : ೮೭-೯೩

೫ ಚಿದಂಬರಯ್ಯ ಹೊಸಕೆರೆ — ೧೮೯೯ ಸುಶೀಲಾ ಪರಿಣಯ
ಎಚ್. ಚಿದಂಬರಯ್ಯ ಹೆಡ್ಮಾಸ್ಟರ್ ಎ.ವಿ. ಸ್ಕೂಲ್
ದಾವಣಗೆರೆ

೬ — ೧೯೧೦ ಕೃಷ್ಣಮಹೀಶ್ವರೀ
ಎಚ್. ಚಿದಂಬರಯ್ಯ ಹೆಡ್ಮಾಸ್ಟರ್ ಎ.ವಿ. ಸ್ಕೂಲ್
ದಾವಣಗೆರೆ

೭ — ೧೯೩೨ ಶಾಂತಾದೇವಿಯ ಸಂಸಾರ,
ಅಧ್ಯಾತ್ಮ ಪ್ರಕಾಶ, ಸಂಪುಟ ೩ ಸಂಚಿಕೆ ೧೧,
ಜುಲೈ ಪು. ೩೯೨

೮ ನರಹರಿಶಾಸ್ತ್ರಿ ಬೆಳ್ಳಾವೆ — ೧೯೪೮ ಶ್ರೀ ಗುಬ್ಬಿ ಚನ್ನಬಸವೇಶ್ವರ ಕೃಪಾಪೋಷಿತ
ನಾಟಕ ಸಂಘ (ಚರಿತ್ರೆ)

			ನೋಡಿ: ಎನ್.ಎಸ್.ವೀರಪ್ಪ ೧೯೪೮: ೩೩–೫೨)
೮	ನಾಯಕ ಜಿ.ಎಚ್.(ಸಂ)	೨೦೦೦	ಶತಮಾನದ ಕನ್ನಡ ಸಾಹಿತ್ಯ: ಸಂ ೧ ಅಂಕೋಲಾ, ಪರಿಮಳ ಪ್ರಕಾಶನ
೯	ಪಂಡಿತಾರಾಧ್ಯ	೨೦೦೦	'ಕನ್ನಡ ನಾಟಕ ೧೯೨೫' ನೋಡಿ: ಜಿ.ಎಚ್. ನಾಯಕ ೨೦೦೦: ೬೦–೮೧
೧೦	ಬಸವರಾಜ ಮಲಶೆಟ್ಟಿ	೧೯೮೩	ಉತ್ತರ ಕರ್ನಾಟಕದ ಬಯಲಾಟಗಳು ಧಾರವಾಡ ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ
೧೧	ರಂಗನಾಥ್, ಎಚ್.ಕೆ.	೧೯೭೮	ಕರ್ನಾಟಕ ರಂಗಭೂಮಿ, ಮೈಸೂರು ಸುರುಚಿ ಪ್ರಕಾಶನ
೧೨	ವೀರಪ್ಪ ಎನ್.ಎಸ್. (ಸಂ)	೧೯೪೮	ಕನ್ನಡ ರಂಗಭೂಮಿ ಶತಮಾನೋತ್ಸವ ಸ್ಮಾರಕ ಗ್ರಂಥ, ಮೈಸೂರು ಕನ್ನಡ ರಂಗಭೂಮಿಯ ಶತಮಾನೋತ್ಸವದ ಸ್ಮಾರಕ ಸಮಿತಿ
೧೩	ವೈಕುಂಠರಾಜು ಬಿ.ವಿ.	೧೯೭೩	ನಾಟಕ ರತ್ನ ಗುಬ್ಬಿ ವೀರಣ್ಣ ಬೆಂಗಳೂರು ಐ.ಬಿ.ಹೆಚ್. ಪ್ರಕಾಶನ
೧೪	ಹರಿಕೃಷ್ಣ ಭಟ್ಟ ಭರಣ್ಯ	೧೯೯೦	ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ ಮಧುರೈ ಪ್ರಭಸ ಬಿಡುಗಡೆ

❒

ಉದಯರವಿ ಉಪಾಸಕ: ಕುವೆಂಪು

ವಿನೋದಾ

'ನಾಡಿನ ಪುಣ್ಯದ ದಿಗಂತದಿ ನವ ಅರುಣೋದಯ' ಮೂಡುತ್ತಲಿರುವಾಗ ಮೂಡಿ ಬಂದ ದೈತ್ಯ ಪ್ರತಿಭೆ ಶ್ರೀ ಕುವೆಂಪುರವರು. ಋಷಿ ಪ್ರಜ್ಞೆ-ಕವಿ ಪ್ರತಿಭೆಗಳ ಅದ್ವೈತದ 'ಕುವೆಂಪು' ಕಾವ್ಯನಾಮ ಕನ್ನಡಿಗರಿಗೆ ಒಂದು ರೋಮಾಂಚನ. ಕುವೆಂಪು ಎಂದಾಕ್ಷಣ ಕವಿತಾ ಪ್ರಪಂಚವೇ ನಮ್ಮೆದುರು ತೆರೆದು ನಿಲ್ಲುತ್ತದೆ. ಅದರಲ್ಲಿ ಅವರು ಎಷ್ಟೊಂದು ವೈವಿಧ್ಯವನ್ನು ಸಾಧಿಸಿದ್ದಾರೆ! ಶಿಶುಗೀತೆ, ವಚನಕಾವ್ಯ, ಚುಟುಕು, ಮಹಾಪ್ರಗಾಥ, ಅಷ್ಟಷಟ್ಪದಿ, ಭಾವಗೀತೆ, ಖಂಡಕಾವ್ಯ, ಮಹಾಕಾವ್ಯ –ಹೀಗೆ ಹಲವು ಪ್ರಯೋಗಗಳಲ್ಲಿ ಅವರ ಪ್ರತಿಭೆ ಅರಳಿ ನಿಂತಿದೆ. ಮಲೆನಾಡಿನ ಈ ಪ್ರತಿಭೆ ನಿಸರ್ಗಮುಖಿಯಾಗಿರುವುದು ಸಹಜವಾದರೂ, ವ್ಯಕ್ತಿ ನೆಲೆಯಿಂದ ವಿಶ್ವಮಾನವ ನೆಲೆಗೆ ವಿಸ್ತರಿಸಿಕೊಳ್ಳುವ ಅದರ 'ಜೀವನದೃಷ್ಟಿ'ಗಳು ಅನನ್ಯವೆಂಬಂತೆ ಗರಿಬಿಚ್ಚಿಕೊಂಡಿವೆ.

ಕುವೆಂಪುರವರಿಗೆ 'ಪ್ರಕೃತಿಯಾರಾಧನೆಯೇ ಪರಮನಾರಾಧನೆಯಾಗಿತು' ಎಂಬುದು ಸಾಹಿತ್ಯ ಪ್ರಿಯರಿಗೆಲ್ಲಾ ಗೊತ್ತಿರುವ ಸಾಮಾನ್ಯ ಸಂಗತಿ. ಪ್ರಕೃತಿಯ ಯಾವ ವಸ್ತು, ಘಟನೆ, ಸಂದರ್ಭಗಳಿಗೂ, ಕವಿಯ ಕಣ್ಣು ತಪ್ಪಿಸಲಿಕ್ಕೆ ಸಾಧ್ಯವಾಗಿಲ್ಲ. ರವಿಕಾಣದನ್ನು ತಾನು ಕಂಡೆನೆಂಬಂತೆ ಕವಿ ಪ್ರಕೃತಿಯ ವೈವಿಧ್ಯಮಯ ದೃಶ್ಯಾವಳಿಗಳನ್ನು ನೋಡಿ ಆನಂದಿಸಿ ಪರವಶರಾಗಿ ರಸವಶರಾಗಿ ಹಾಡಿದ್ದಾರೆ, ಕೇಳಿ ಸೋದರರೆ ನೀವು ನೋಡಿ ಆನಂದಿಸಿ ಎಂದು ಕರೆ ನೀಡಿದ್ದಾರೆ ಈ ರಸಋಷಿ. ಹೀಗೆ ಪ್ರಕೃತಿಯ ಸೌಂದರ್ಯಕ್ಕೆ ಮನಸೋತ ಕವಿ ಅದನ್ನು ತಮ್ಮ ಕವಿತೆಗಳಲ್ಲಿ ವಿಧವಿಧವಾಗಿ ಬಣ್ಣಿಸಿದ್ದಾರೆ, ಅಷ್ಟೆ ಅಲ್ಲ, "ಅವರ ದೃಷ್ಟಿಯಲ್ಲಿ ಪ್ರಕೃತಿ ಕೇವಲ ಪ್ರಕೃತಿಯಾಗಿ ಉಳಿಯದೆ ಪರಿವರ್ತನೆಗೊಳ್ಳುತ್ತದೆ, ಪ್ರತಿಮೆಯಾಗುತ್ತದೆ, ಮತ್ತೇನೋ ಒಂದಕ್ಕೆ ನಿಮಿತ್ತವಾಗುತ್ತದೆ. 'ಉದಯದೊಳೇನ್ ಹೃದಯವ ಕಾಣ್' ಎನ್ನುವ ಕುವೆಂಪು, ಬಹುತೇಕ ಎಲ್ಲವನ್ನೂ ಹೃದಯ ಗೋಚರವಾದಂತೆ ಅನುಭವಿಸಿ ನಿವೇದಿಸುತ್ತಾರೆ"(ಸಿ.ಪಿ.ಕೆ., ೧೯೭೭:೧೦೩).

ಕುವೆಂಪುರವರ ಪ್ರಕೃತಿ ವರ್ಣನೆಗಳ ಸೌಂದರ್ಯ ವೈವಿಧ್ಯಗಳಲ್ಲಿ ಬಹು ಪ್ರಮುಖವಾದದ್ದು ಮತ್ತು ಕವಿಯನ್ನು ಹೆಚ್ಚು ಆಕರ್ಷಿಸಿದ್ದು ಪ್ರಕೃತಿಯ ರಮ್ಯನೋಟಗಳಲ್ಲಿ ಒಂದಾದ ಸೂರ್ಯೋದಯ. ಇವರ ಪ್ರಕೃತಿ ಗೀತೆಗಳಲ್ಲಿ ಸೂರ್ಯೋದಯದ ಗೀತೆಗಳಿಗೆ ವಿಶಿಷ್ಟ ಸ್ಥಾನವಿದೆ. ಅವರ ಅತ್ಯುತ್ತಮ ಕವಿತೆಗಳಲ್ಲಿ ಸೂರ್ಯೋದಯ ಗೀತೆಗಳೇ ಮೊದಲ ಸಾಲಿನಲ್ಲಿ ನಿಲ್ಲುತ್ತವೆ ಎಂಬುದು ನಿರ್ವಿವಾದದ ಸಂಗತಿ. ಅವರು ಸೂರ್ಯೋದಯದ ಸುಂದರ ದೃಶ್ಯಾವಳಿಗೆ ಎಷ್ಟು ಮನಸೋತಿದ್ದರೆಂದರೆ ತಮ್ಮ ಸ್ವನಿವಾಸಕ್ಕೆ 'ಉದಯರವಿ' ಎಂಬ ಹೆಸರನ್ನೇ ಇಟ್ಟಿರುವುದರ ಹಿಂದೆ ಈ ಆಕರ್ಷಣೆಯೂ ಒಂದಾಗಿರಬೇಕೆಂದು ನನಗನಿಸುತ್ತದೆ. ಆದ್ದರಿಂದ ಪ್ರಸ್ತುತ ಲೇಖನದಲ್ಲಿ ಶ್ರೀ ಕುವೆಂಪುರವರ ಸೂರ್ಯೋದಯ ಗೀತೆಗಳಲ್ಲಿನ ವೈವಿಧ್ಯ, ವೈಶಿಷ್ಟ್ಯಗಳನ್ನು ಗುರುತಿಸುವ ಒಂದು ಸಣ್ಣ ಪ್ರಯತ್ನ ಮಾಡಲಾಗಿದೆ.

ಭಾರತೀಯ ಸಂಸ್ಕೃತಿಯಲ್ಲಿ ಸೂರ್ಯನಿಗೆ ವಿಶಿಷ್ಟ ಸ್ಥಾನವಿದೆ. ಸೂರ್ಯ, ರವಿ, ಭಾನು, ತರಣಿ ಹೀಗೆ ನಾನಾ ಹೆಸರುಗಳಿಂದ ಚಿರಪರಿಚಿತವಾಗಿರುವ ಸೂರ್ಯನನ್ನು ಸೂರ್ಯದೇವನೆಂದೇ ಪೂಜಿಸುತ್ತಾರೆ, ಆರಾಧಿಸುತ್ತಾರೆ. ಏಕೆಂದರೆ ಸೂರ್ಯನು ಶಕ್ತಿಯ ಬೆಳಕಿನ ತೇಜಸ್ಸಿನ ಉಗಮಕಾರಕ. ತಿರೆಯನ್ನು ಸಸ್ಯ ಸಿರಿ ಸಂಪದಗಳಿಂದ ಶೃಂಗರಿಸಿದವನೇ ಸೂರ್ಯ. ಸೂರ್ಯನ ಹೊನ್ನಿನ ಕಿರಣ ತಾಕದೆ ಧರಣಿಗೆ ಚೈತನ್ಯವಿಲ್ಲ. ಪ್ರಕೃತಿಯ ಅದ್ಭುತ ರಮ್ಯ ನೋಟಗಳಲ್ಲಿ ಸೂರ್ಯೋದಯವೂ ಒಂದು. ಈ ತಮೋಹಾರಿಯ ಉದಯಾಸ್ತ ದೃಶ್ಯಾವಳಿಗಳನ್ನು ಪ್ರತಿಯೊಬ್ಬರೂ ಒಂದಲ್ಲ ಒಂದು ಬಾರಿ ನೋಡಿ ಆನಂದಪಟ್ಟಿರುತ್ತಾರೆ.

ಇಂತಹ ಸೂರ್ಯೋದಯದ ಸುಂದರ ಚಿತ್ರವನ್ನು ವೇದಕಾಲದ ಋಷಿಗಳಿಂದ ಹಿಡಿದು ಜನಪದ ಕವಿಯವರೆಗೆ ಅನೇಕರು ವಿಧವಿಧವಾಗಿ ಬಣ್ಣಿಸಿದ್ದಾರೆ. ಸುಪ್ರಭಾತದ ಸಮಯವನ್ನು ದೈವಿಕ ನೆಲೆಯಲ್ಲಿ ಗುರುತಿಸಿ ಸೂರ್ಯದೇವನ ಆಗಮನವನ್ನು ವಿಧವಿಧವಾಗಿ ಹಾಡಿ ಹೊಗಳಿದ್ದಾರೆ. ಆದರೂ ನಮ್ಮ ಪ್ರಾಚೀನ ಕವಿಗಳು ಸೂರ್ಯೋದಯದ ವರ್ಣನೆಗಳಲ್ಲಿ ಅಷ್ಟಾಗಿ ಆಸಕ್ತಿ ತೋರದಿರುವುದು ಸೋಜಿಗದ ಸಂಗತಿಯಾದರೂ ಅಲ್ಲಲ್ಲಿ ಅಪರೂಪಕ್ಕೆ ಬಹುಸೊಗಸಾದ ವರ್ಣನೆಗಳನ್ನು ತಂದಿರುವುದನ್ನು ಗಮನಿಸಲೇಬೇಕು.

ಸೂರ್ಯೋದಯವು ಕಾವ್ಯದ ಒಂದು ವರ್ಣನಾಂಶ ಎಂದು ಶಾಸ್ತ್ರದಲ್ಲಿ ಉಕ್ತವಾಗಿದ್ದರೂ ಬಹುಜನ ಹಿಂದಿನ ಕವಿಗಳು ಕೇವಲ ಶಾಸ್ತ್ರಕ್ಕೆ ಸೂರ್ಯೋದಯದ ವರ್ಣನೆಗಳನ್ನು ತಂದಿರುವುದು ಕಾಣಬರುತ್ತದೆ. ಕೆಲವು ಮಂದಿ ಕಾಲಸೂಚಕವಾಗಿ ಇಲ್ಲವೇ ಶೃಂಗಾರಪೂರ್ಣವಾದ ಚಂದ್ರಿಕಾವಿಹಾರದ ಇರುಳಿನ ಮುಕ್ತಾಯದ ಸೂಚನೆಯಾಗಿ ಅಥವಾ ಕುಮುದ ಮುಚ್ಚಿತ್ತು, ಕಮಲ ಅರಳಿತು, ಚಕ್ರವಾಕಗಳು ಸೇರಿದವು, ಚಕೋರ ಕೊರಗಿತು, ತಾರೆ ಮಸಳಿದವು ಇತ್ಯಾದಿ ವರ್ಣನೆಗಳಿಂದಲೇ ಸೀಮಿತಗೊಳಿಸಿರುವುದು ಕಂಡಬರುತ್ತದೆ. ಆದರೂ ಅಲ್ಲಲ್ಲಿ ಸೂಕ್ಷ್ಮಗ್ರಾಹಿ ಕವಿಗಳು

ಸುಂದರ ಇನನ ಉದಯವನ್ನು ತಮ್ಮ ಕಾವ್ಯಗಳಲ್ಲಿ ಕಂಡರಿಸಿರುವುದು ಗಮನಿಸಲೇಬೇಕು. ಇಲ್ಲಿ ಒಂದೆರಡು ಸಂದರ್ಭಗಳನ್ನು ನೋಡಬಹುದು. ಜೈನಕವಿ ನಾಗಚಂದ್ರ ಸುಪ್ರಭಾತದ ವರ್ಣನೆಯನ್ನು ಶಾಂತರಸ ಸಂಬಂಧಿಯಾಗಿ ವರ್ಣಿಸಿರುವುದು ಪ್ರಶಂಸನೀಯ ವಾಗಿದೆ. ಮಲ್ಲಿನಾಥ ಪುರಾಣದಲ್ಲಿ, ವೈಶ್ರವಣ ಮಹಾರಾಜನು ಸಿಡಿಲು ಹೊಡೆದು ಬಿದ್ದ ಆಲದಮರವೊಂದನ್ನು ಕಂಡು ವಿರಾಗಿಯಾಗುತ್ತಾನೆ. ಆ ವೈರಾಗ್ಯ ಪರವಾದ ಚಿತ್ತಕ್ಕೆ ಸುಪ್ರಭಾತ ಕಂಡಪರಿ ಇದು:

ಮೂಡಣ ಸಂಜೆ ಕೆಂದಳಿರ ಕಾವಣದಂತಿರೆ, ಚಂದ್ರಮಂಡಲಂ
ಬಾಡಿದ ಮಾಧವೀ ಮಧುರ ಮಂಜರಿಯಂತಿರೆ, ತಾರಕಾಳಿ ನೀ
ರೋಡಿ ಕಟಿಲ್ದು ಬಿಟ್ಟು ಕಟಿವೂಗೆಣೆಯಾಗಿರೆ, ತಣ್ಣನಪೆಲರ್
ತೀಡೆ ತಪೋವನಂಬೊಲತಿ ಪಾವನವಾಯ್ತು ನಭಂ ಪ್ರಭಾತದೊಳ್

(ಮಲ್ಲಿನಾಥ ಪುರಾಣ, ೧೦– ೧೫)

ವೈರಾಗ್ಯಪರವಾದ ಚಿತ್ತಕ್ಕೆ ಪ್ರಭಾತದ ನಭ ತಪೋವನದಂತೆ ಅತಿ ಪಾವನವಾಯಿತೆಂದು ಕವಿ ಸುಪ್ರಭಾತದ ಶಾಂತರಮ್ಯ ಚಿತ್ರವನ್ನು ನೀಡಿದ್ದಾನೆ.

ರತ್ನಾಕರವರ್ಣಿ 'ಭರತೇಶ ವೈಭವ'ದಲ್ಲಿ ಸೂರ್ಯೋದಯದ ವ್ಯಾಪಾರವನ್ನು ನಾಲ್ಕೇ ಮಾತುಗಳಲ್ಲಿ ಬಹು ಸೊಗಸಾಗಿ ಚಿತ್ರಿಸಿದ್ದಾನೆ:

ತಂಗಾಳಿ ತೀಡಿತು ತಾರಗೆ ಮಸಳ್ದವು
ಹಿಂಗಿತು ಜಗಂದಂಧಕಾರಾ
ಮುಂಗಾರ ಮೊಳಗಿನಂದದಿ ಮೊಳಗಿದವು ವಾ
ದ್ಯಂಗಳು ಜಿನಗೃಹದೊಳಗೆ

ಎಳವಿಸಿಲಡರ್ದೇರಿ ಜಿನನಿಲಯದ ರತ್ನ
ಕಳಚದೊಳ್ಮಾಪಡೆ ಕಂಡು
ಬೆಳಗಾಯ್ತು ದೇವ ಕಣ್ದೆರೆ ಎಂದು ವನಿತೆಯ
ರೆಳಸಿ ಬಿನ್ನವಿಸಿದರಾಗ

(ಪರ್ವಯೋಗ ಸಂಧಿ, ೭– ೮)

ಇದೊಂದು ಸೊಗಸಾದ ಪ್ರಭಾತ ದೃಶ್ಯಾವಳಿಯ ವರ್ಣನೆ. ಕತ್ತಲು ಹಿಂಗಿತು, ತಾರೆಗಳು ಮಸಳಿ ತಂಗಾಳಿ ತೀಡುತ್ತಾ ಸೂರ್ಯ ತನ್ನ ಎಳೆಯ ಬಿಸಿಲ ಅಡರ್ದು ಮೇಲೇರಿ ಜಿನನಿಲಯದ ರತ್ನ ಕಳಸದೊಡನೆ ಮಾತಾಡಿದ ಎಂಬ ಕಲ್ಪನೆ ಸುಂದರವಾಗಿದೆ.

ಇಂಥ ಕೆಲವೇ ಕೆಲವು ಸೂರ್ಯೋದಯದ ವರ್ಣನೆಗಳನ್ನು ನಮ್ಮ ಹಿಂದಿನ ಕವಿಗಳು ಮಾಡಿದ್ದರೂ ಇಂದಿನ ಕವಿಗಳಂತೆ (ಅದರಲ್ಲೂ ನವೋದಯ ಕಾಲದ ಕವಿಗಳಂತೆ) ಋತು ಋತುಗಳಲ್ಲೂ ಸೂರ್ಯೋದಯದ ಸೌಂದರ್ಯ ಹೇಗೆ ವ್ಯತ್ಯಾಸವಾಗುತ್ತಾ ಹೋಗುತ್ತದೆ ಎನ್ನುವುದನ್ನು ಅಷ್ಟಾಗಿ ಗಮನಿಸಿಲ್ಲವೆನ್ನುವುದು ಗುರುತಿಸಬೇಕಾದ ಸಂಗತಿಯಾಗಿದೆ. "ಸೌಂದರ್ಯವನ್ನು ಕುರಿತ ಜಿಜ್ಞಾಸೆ ನವೋದಯ

ಕವಿಗಳ ವಿಶಿಷ್ಟತೆಯಾಗಿದೆ. ಹಿಂದಿನ ಕವಿಗಳು ತಮ್ಮ ಕಣ್ಣಿಗೆ ಕಂಡ ಮನಸ್ಸಿಗೆ ಮುಟ್ಟಿದ ಚೆಲುವಿನ ಪರಿಗಳನ್ನು ಬಣ್ಣಿಸಿದರಷ್ಟೇ ಹೊರತು ಜಿಜ್ಞಾಸೆಗೆ ತೊಡಗಲಿಲ್ಲ" (ಜಿ.ಎಸ್. ಶಿವರುದ್ರಪ್ಪ, ೧೯೯೯:೨೮೧).

ಪ್ರಸ್ತುತ ನವೋದಯ ಕಾವ್ಯದ ಅತಿ ಪ್ರಮುಖ ಕವಿಗಳಲ್ಲಿ ಒಬ್ಬರಾದ ಕುವೆಂಪುರವರು ತಾವು ಜೀವನದುದ್ದಕ್ಕೂ ನಡೆಸಿದ ಸೂರ್ಯೋಪಾಸನೆಯ ಫಲವಾಗಿ ಕಂಡುಂಡ ಸೂರ್ಯ ಸೌಂದರ್ಯದಿಂದಾದ ರಸಾನಂದವನ್ನು ಸೂರ್ಯೋದಯ ಗೀತೆಗಳಲ್ಲಿ ತುಂಬಿಕೊಟ್ಟಿದ್ದಾರೆ. ಕುವೆಂಪುರವರ ಸುಮಾರು ೩೫ಕ್ಕೂ ಹೆಚ್ಚು ಸೂರ್ಯಗೀತೆಗಳಲ್ಲಿ ಹಲವು ವೈಶಿಷ್ಟ್ಯಗಳಿವೆ.

ಮೊದಲನೆಯದಾಗಿ, ಕವಿ ಎಲ್ಲಿ, ಯಾವ ವೇಳೆಯಲ್ಲಿ ಈ ಕವಿತೆಗಳಿಗೆ ಪ್ರೇರಣೆ ಪಡೆದರೆಂಬುದನ್ನು ಈ ಗೀತೆಗಳ ಹೆಸರುಗಳೇ ಸೂಚಿಸಿರುವುದು ಒಂದು ವಿಶಿಷ್ಟ ಅಂಶವಾಗಿದೆ. ಉದಾ: ನವಿಲುಕಲ್ಲಿನಲ್ಲಿ ಉಷಾಃಕಾಲ, ಫಾಲ್ಗುಣ ಸೂರ್ಯೋದಯ, ಇಂದ್ರದಿಗಂತದಿ, ಶರತ್ಕಾಲದ ಸೂರ್ಯೋದಯ, ಬಾ ಫಾಲ್ಗುಣ ರವಿ ದರ್ಶನಕೆ, ಶಿವರಾತ್ರಿಯ ಸೂರ್ಯೋದಯ, ವೈಶಾಖ ಸೂರ್ಯೋದಯ, ಆಷಾಢ ಸೂರ್ಯೋದಯ, ಸಿಬ್ಬಲು ಗುಡ್ಡೆ, ರಾಜಧಾನಿ, ಈ ಮುಂತಾದ ಕವನಗಳನ್ನು ನೋಡಿದಾಗ ನಮಗೆ ಕವಿ ಯಾವ ಋತುವಿನ ಯಾವ ತಿಂಗಳಿನ ಯಾವ ಹೊತ್ತಿನಲ್ಲಿ, ಯಾವ ಸ್ಥಳದಲ್ಲಿ ಸೂರ್ಯನ ಉದಯವನ್ನು ದರ್ಶಿಸಿದರು ಎಂಬುದು ಮೊದಲ ನೋಟಕ್ಕೆ ಗೊತ್ತಾಗುತ್ತದೆ.

ಮಲೆನಾಡಿನಲ್ಲಿ ನವಿಲು ಕಲ್ಲಿನಲ್ಲಿ ಕಂಡ ಸೂರ್ಯೋದಯದ ಅನುಭವವೇ ಬೇರೆ, ಬಯಲು ಸೀಮೆಯಲ್ಲಿ ಮೈಸೂರಿನ ಒಂಟಿಕೊಪ್ಪಲಿನ ನೀರ್ದಿಬ್ಬದ ಮೇಲೆ ನಿಂತಾಗ ಕವಿ ಕಂಡ ಉಷಃಕಾಲದ ಕಾಣ್ಕೆಯೇ ಬೇರೆ. ಅಲ್ಲದೆ ಋತುವಿನಿಂದ ಋತುವಿಗೆ, ಸ್ಥಳದಿಂದ ಸ್ಥಳಕ್ಕೆ ಕವಿ ಕಂಡ ಸೂರ್ಯೋದಯದ ದರ್ಶನದ ಸೊಬಗೆ ಬೇರೆ ಬೇರೆಯಾಗಿರುವುದು ಕಂಡುಬರುತ್ತದೆ. ಒಂದೇ ದಿನದಲ್ಲಿ ಒಂದೇ ಹೊತ್ತಿನಲ್ಲಿ ಒಂದೇ ಎಡೆಯಲ್ಲಿ ನಿಂತು ನೋಡುತ್ತಿರುವಾಗ ಕಣ್ಣೆದುರಿನಲ್ಲಿಯೇ ಆ ಸೂರ್ಯೋದಯ ಕ್ಷಣ ಕ್ಷಣಕ್ಕೆ ಬದಲಾಗುತ್ತಾ ಹೊಸ ಹೊಸತನ್ನು ತೆರೆದು ತೋರುವ ಸೊಗಸನ್ನು ಕವಿ ತಮ್ಮ ಕವಿತೆಗಳಲ್ಲಿ ಕಂಡರಿಸಿದ್ದಾರೆ.

ಕುವೆಂಪು ಅವರ ಗೀತೆಗಳಲ್ಲಿ ಕಾಣಬರುವ ಎರಡನೇ ವಿಶಿಷ್ಟ ಲಕ್ಷಣವೆಂದರೆ, ಹಿಂದಿನ ಕವಿತೆಗಳಂತೆ ಕವಿ ಸಮಯಗಳಿಂದ ಕೂಡಿದ ಚತುರೋಕ್ತಿಗಳಿಂದಲೋ ಅಥವಾ ತಾವರೆ, ನೈದಿಲೆ, ದುಂಬಿ, ಚಕೋರ, ಚಕ್ರವಾಕ ಮುಂತಾದವುಗಳ ಜೊತೆಗೆ ಸೂರ್ಯೋದಯ ವರ್ಣನೆಗಳನ್ನು ಮಾಡದೇ ಇರುವುದು. ಕವಿ ಕಂಡ ವಾಸ್ತವಿಕ ಜಗತ್ತು, ಅದನ್ನು ನೋಡಿದಾಗ ಮನದಲ್ಲಿ ಮೂಡಿದ ಭಾವ, ಆ ಭಾವದ ಬಾಹ್ಯವನ್ನು ಮರೆತು, ಸೌಂದರ್ಯದ ಸನ್ನಿಧಿಯಲ್ಲಿ ತಲ್ಲೀನರಾಗಿ ರಸಾನಂದವನ್ನು ಪಡೆದು ಅದನ್ನು ಅಭಿವ್ಯಕ್ತಿಸಿರುವ ಸುಂದರ ವರ್ಣಮಯ ಭಾವಗೀತೆಗಳನ್ನೇ ನಾವು ಹೆಚ್ಚಾಗಿ

ನೋಡುತ್ತೇವೆ. "ಒಂದೊಂದು ಉದಯದ ಕಾಣ್ಕೆಯೂ ಕವಿಗೆ ಹಬ್ಬವಾಗಿ, ಆ ಹಬ್ಬವೇ ನಮಗೆ ಕಬ್ಬವಾಗಿ ಈ ಗೀತೆಗಳಲ್ಲಿ ಅಭಿವ್ಯಕ್ತಿ ತಳೆದಿದೆ. ಉದಯ ಕಾಲದ ದೃಶ್ಯ ವೈಕುಂಠದ ವಿವರವಾದ ವರ್ಣನೆಗಳಿಂದ ಈ ಗೀತಗಳು ಉಜ್ವಲವಾಗಿ ಬೆಳಗುತ್ತಿವೆ. ಕವಿಯ ಭಾವಾನುಭವದ ತೀವ್ರತೆಯಿಂದ ಇವು ಸ್ಪಂದಿಸುತ್ತಿವೆ. ಪ್ರಾತಃ ಕ್ರತು ಪುರುಷನ ದರ್ಶನದಿಂದ ಆನಂದೋನ್ಮತರಾದ ಕವಿವರ್ಯರ ವಾಣಿ ಕವನ ಮಾತ್ರವಾಗದೇ ಮಂತ್ರ ವಿಶೇಷವಾಗಿ ಪರಿಣಮಿಸಿದ ಗೀತಗಳೂ ಇಲ್ಲಿವೆ" (ಎಸ್.ವಿ. ಪರಮೇಶ್ವರ ಭಟ್ಟ, ೧೯೫೫:೫೧).

ಮೂರನೇ ವಿಶಿಷ್ಟ ಲಕ್ಷಣವೆಂದರೆ ಕವಿ ಕಂಡ ಉದಯರವಿಯ ಚಿತ್ರಗಳ ವೈವಿಧ್ಯ. ಕೆಲವು ಸಾಮಾನ್ಯ ಚಿತ್ರಗಳಾದರೆ, ಕೆಲವು ವರ್ಣ ತುಂಬಿದ ಚಿತ್ರಗಳು. ಇನ್ನೂ ಕೆಲವು ದರ್ಶನದೀಪ್ತ ಅನುಭಾವಿಕ ನೆಲೆಯ ಚಿತ್ರಗಳು. ಈ ವೈವಿಧ್ಯಮಯ ಸುಂದರ ಕವಿತಾ ಚಿತ್ರಗಳನ್ನು ಇಲ್ಲಿ ಒಂದೊಂದಾಗಿ ವಿವೇಚಿಸುತ್ತಾ ಹೋಗಬಹುದು. ಪ್ರಾರಂಭದ ಪದ್ಯಗಳು ಸಹಜ ಮುಗ್ಧ ಸೌಂದರ್ಯವನ್ನು ಬಿಂಬಿಸುತ್ತವೆ. ಪ್ರಕೃತಿಯ ಯಾವುದಾದರೊಂದು ಸುಂದರ ವಸ್ತುವನ್ನೋ, ದೃಶ್ಯವನ್ನೋ ನೋಡಿದ ತಕ್ಷಣ ಆಹಾ ಎಷ್ಟು ಚೆನ್ನಾಗಿದೆ! ಎಷ್ಟೊಂದು ಸುಂದರವಾಗಿವೆ! ಎಂಬ ಸಹಜ ಉದ್ಗಾರದ ಮಾತುಗಳ ಜೊತೆಗೆ ಬಾಲ್ಯದ ಮುಗ್ಧತನ ಬಿಂಬಿಸುತ್ತಾ ಬಾ ನೀನು ನೋಡು ಬಾ, ಆನಂದಿಸು ಬಾ ಎಂದು ಆತ್ಮೀಯವಾಗಿ ಸಹೃದಯನಿಗೆ ಕರೆ ನೀಡುವ ಕವಿತೆಗಳನ್ನು ಮೊದಲಿಗೆ ನೋಡಬಹುದು:

ಸುಂದರ ದಿನ, ಸುಂದರ ಇನ
ಸುಂದರವನ, ನೋಡು ಬಾ
ಎಳೆಬಿಸಿಲೊಳು ತಿಳಿಗೊಳದೊಳು
ಜಲದಲೆಗಳು ನಲಿನಲಿಯಲು
ನೋಡು ಬಾ, ಕೂಡು ಬಾ
ಬೇಗ ಬಾ. ಬಾ.. ಬಾ...

(ಕುವೆಂಪು ಸಮಗ್ರ ಕಾವ್ಯಸಂಪುಟ, ಪು. ೮೨೨)

ಈ ಸರಳವಾದ ಕವಿತೆಯಲ್ಲಿ ಎಲ್ಲರೊಡಗೂಡಿ ಪ್ರಕೃತಿಯ ಸೌಂದರ್ಯವನ್ನು ನೋಡಿ ಹಿಗ್ಗಿ ಆನಂದಿಸುವ ಉತ್ಸಾಹ ಮತ್ತು ತವಕವಿರುವುದು ಕಂಡು ಬರುತ್ತದೆ. 'ಪ್ರಾತಃಕಾಲ' ಎಂಬ ಪುಟ್ಟ ಕವಿತೆಯೂ ಇದೇ ಮಾದರಿಯಲ್ಲಿದ್ದು, ಸಗ್ಗವೇ ಧರೆಗಿಳಿದಿದೆ ನೋಡಿ ಬನ್ನಿ ಎಂದು ಸಹೃದಯನನ್ನು ಆಹ್ವಾನಿಸುತ್ತಾರೆ;

ಆಹಾ! ನಾಕವೆ ನಮ್ಮ ಲೋಕಕೆ
ಕಳಚಿ ಬಿದ್ದಿದೆ ಬನ್ನಿರಿ!
ತುಂಬಿಕೊಳ್ಳಲು ನಿಮ್ಮ ಹೃದಯದ
ಹೊನ್ನ ಬಟ್ಟಲು ತನ್ನಿರಿ!
ಬೇಗ ಬನ್ನಿ! ಬೇಗ ಬನ್ನಿ!

ಕರಗಿ ಹೋಗುವ ಮುನ್ನ ಬನ್ನಿ!
ತಡವ ಮಾಡದೆ ಓಡಿ ಬನ್ನಿ;
ಸ್ವರ್ಗ ಹರಿಯುತಿದೆ;
ಇಳೆಯ ಮಕ್ಕಳನೆಲ್ಲ, ಕೇಳಿರಿ,
ಕೂಗಿ ಕರೆಯುತಿದೆ"

(ಅಲ್ಲೆ ೨೭೫)

ಕವಿ ಕರೆಯುತ್ತಿಲ್ಲ, ಕೂಗುತ್ತಿದ್ದಾರೆ ಎಲ್ಲಾ ಇಳೆಯ ಮಕ್ಕಳೆಲ್ಲ (ಮಕ್ಕಳ ಮನಸಿನ ಮುಗ್ಧ ಮನದವರಿಗೆ ಮಾತ್ರ) ಓಡಿ ಬನ್ನಿ, ಬೇಗ ಬನ್ನಿ, ಎಲ್ಲರೂ ಈ ಸುಂದರ ದೃಶ್ಯವನ್ನು ನೋಡಬೇಕು ಸವಿಯಬೇಕು ಎಂಬ ತವಕ ಇಲ್ಲಿದೆ.

ಇನ್ನೊಂದು ಕಡೆ 'ಉದಯ' ಎಂಬ ಕವಿತೆಯಲ್ಲಿ;

ನೋಡಿ ತಳಿತ ತಳಿರ ನಡುವೆ
ಅರುಣ ಕಿರಣ ಸವಿಯ ಸುರಿಸಿ
ಉದಯ ರವಿಯು ಮೆರೆವನು
ಕವಿಯ ಮನವ ಮೋಹಿಸುತ್ತ

ಮೌನವಾಗಿ ಕರೆವನು
ಮನೆಗೆ ಬಂದ ಗೆಳೆಯರಂತೆ
ರವಿಯ ಕಿರಣಗಳನ್ನು ಧರೆಯು
ಉಪಚರಿಸುತಲಿರುವಳು"

(ಅಲ್ಲೆ, ಪು. ೭೧)

ಎಂದು ಹಾಡುತ್ತಾ, ವರ್ಣಿಸುತ್ತಾ...

ತೆರಳದಿರಲೆ ಉದಯವೆ!
ಇಹಕೆ ಬರುವ ಪರದ ಸೊಬಗ
ತೊರೆಯದಿರೆಲೆ ಹೃದಯವೆ!"

(ಅಲ್ಲೆ, ಪು. ೭೧)

ಎನ್ನುತ್ತಾರೆ. ಸೂರ್ಯೋದಯ ಒಂದು ಸುಂದರ ವರ್ಣಮಯ ಚಿತ್ರ. ಬಾಲ್ಯದಲ್ಲಿ ಮಕ್ಕಳು ಚಿತ್ರ ಬಿಡಿಸಲು ಹೇಳಿದರೆ ಹರಿವ ನದಿ, ಬೆಟ್ಟಗಳ ಸಾಲುಗಳ ಮಧ್ಯ ಕೇಸರಿ ಬಣ್ಣದಲ್ಲಿ ಸೂರ್ಯ ಇರುವ ಚಿತ್ರವನ್ನು ಸಾಮಾನ್ಯವಾಗಿ ಬಿಡಿಸುತ್ತಾರೆ. ಹೀಗೆ ಸೂರ್ಯೋದಯದ ವರ್ಣವೈವಿಧ್ಯಮಯ ಸುಂದರ ಚಿತ್ರಗಳನ್ನು ಕವಿ ತಮ್ಮ ಸೂರ್ಯೋದಯ ಕವಿತೆಗಳಲ್ಲಿ ಅತ್ಯುತ್ತಮವಾಗಿ ಚಿತ್ರಿಸುತ್ತಾರೆ. ಇಲ್ಲಿ ವರ್ಣಿಸಿದ ಚಿತ್ರಗಳು ನಮ್ಮ ಮನಃಪಟಲದ ಮೇಲೆ ಅಚ್ಚೊತ್ತಿದಂತೆ ಮೂಡಿ ನಿಲ್ಲುತ್ತವೆ. ಉದಾಹರಣೆಗೆ ಕೆಲವನ್ನು ಇಲ್ಲಿ ನೋಡಬಹುದು:

'ಸಿಬ್ಬಲುಗುಡ್ಡೆ' ಕವಿತೆಯಲ್ಲಿ ಬರುವ ಈ ಕೆಲವು ವಿವರಗಳನ್ನು ನೋಡಿ;

ಮೇಲೆ ಬಾನುಕ್ಕುನೀಲಿಯಲಿ ತೇಲುತಿದೆ ರವಿ;
ಸುತ್ತುಂ ದಿಗಂತಲೀನಮನಂತೆ ವನಪಂಕ್ತಿ
ರಾಜಿಸಿದೆ, ಹೊಳೆಗೆ ಹಸುರಂಚಾಗಿ..............

ಹಬ್ಬಿದ ಮಳಲು ಹಳದಿಯನ್ನಪ್ಪಿ
ಪ್ರವಹಿಸಿದೆ ತುಂಗಾ ಸಲಿಲ ನೀಲಿಮಾ ಪ್ರೀತಿ
ಪ್ರೇಮ ಸಂಗೀತಮಂ ಪಾಡಿ......ಏಂ ನಿರ್ಭೀತಿ
ಮೀಂಗಳಿಗೆ... ರಮ್ಯತೆಗೆ ತಿಲಕವಿಟ್ಟಂತೊಪ್ಪಿ
ಅದೋ ಹಾರಿ ಬರುತಲಿವೆ ನಿರ್ಭಾಗೆ ಬೆಳ್ಳಕ್ಕಿ
ನವಪಟದ ಭಿತ್ತಿಯಲಿ ನೂರು ಕರಿಬಿಳಿಚುಕ್ಕಿ
ಪ್ರಾಣವೇ ವರ್ಣಚಿತ್ರಂ ಬರೆಯುತ್ತಿರುವಂತೆ...

(ಅಲ್ಲೆ, ಪು. ೪೭೯)

ಮೇಲೆ ನೀಲಾಕಾಶದಲ್ಲಿ ತೇಲುತ್ತಿರುವ ರವಿ, ಹೊಳೆಗೆ ಹಸುರಂಚಾಗಿ ವನಪಂಕ್ತಿ, ಹಬ್ಬಿದ ಹಳದಿಯ ಮರಳರಾಶಿ ಹರಿವ ತುಂಗಾ ನದಿಯು ಪ್ರೀತಿಯಿಂದ ಹಾಡುತ್ತಿದೆ. ನಿರ್ಭಯವಾಗಿ ಮೀಂಗಳು ಆಡುತ್ತಿವೆ. ಅದೋ ಹಾರುತ್ತಿವೆ ಬೆಳ್ಳಕ್ಕಿ, ವನಪಟದ ಭಿತ್ತಿಯಲ್ಲಿ ಕರಿಬಿಳಿಚುಕ್ಕಿಗಳನ್ನು ಇಟ್ಟಂತೆ, ಚಿತ್ರಗಾರನಿಗೆ ಸುಂದರ ಸೂರ್ಯೋದಯದ ಚಿತ್ರಬಿಡಿಸಲು ಇದಕ್ಕಿಂತಲೂ ಮಿಗಿಲಾದ ವಿವರಣೆ ಬೇಕಿಲ್ಲ.

ವರ್ಣವೈವಿಧ್ಯಕ್ಕೆ ಇನ್ನೊಂದು ಉದಾಹರಣೆ 'ರಸಾನುಭೂತಿ' ಕವಿತೆಯ ಕೆಲವು ಸಾಲುಗಳು...

ಹಬ್ಬಿಹ ಸರೋವರಂ, ವನಸದೃಶ ತರುರಾಜಿ
ತರುಮಧ್ಯೆಯಲ್ಲಲ್ಲಿ ಭವ್ಯ ಸೌಧಾಗ್ರತತಿ
ನಕ್ಷತ್ರಮಾಲೆಯಿಂ ಮೆರೆವುದೆನೆ ಚಾಮುಂಡಿ,
ಮೇಣಾಚೆ, ಮೆಲ್ಲಮೆಲ್ಲನೆ ಬೆಳ್ಳಗಾಗುತಿಹ
ಮೂಡಣದ ಬಾನು, ಒಂದಾದ ಮೇಲೊಂದೆಲ್ಲ
ಚಿತ್ರದಲಿ ಬರೆದಂತೆ ಮನ ಸಂಮೋಹಿಸಿವೆ
ಕವಿಮನವನದ್ದಿ ರಸಸುಖ ಮಧುತಟಿನಿಯಲ್ಲಿ

(ಅಲ್ಲೆ, ಪು. ೯೭೮)

ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ನಕ್ಷತ್ರ ಮಾಲೆಯ ಸಿಂಗಾರ, ಹಬ್ಬಿರುವ ಸರೋವರ, ದಟ್ಟ ಮರಗಳ ಮಧ್ಯದಲ್ಲಿ ದೊಡ್ಡ ಸೌಧಗಳ ಸಮೂಹದ ಮಧ್ಯೆ, ಮೆಲ್ಲಮೆಲ್ಲನೆ ಚಿತ್ರದಲ್ಲಿ ಬರೆದಂತೆ ಸೂರ್ಯೋದಯ ಕಂಡ ಕವಿ ರಸಸುಖವನ್ನು ಅನುಭವಿಸುತ್ತಿದ್ದಾರೆ.

ನವಿಲು ಕಲ್ಲಿನಲ್ಲಿ ಉಷಃಕಾಲದ ಈ ಕೆಲವು ಸಾಲುಗಳು ಸಹ ವರ್ಣ ವೈವಿಧ್ಯಕ್ಕೆ ಉದಾಹರಣೆಯಾಗಬಲ್ಲವು;

ದತ್ತುರಿಯ ಹೂವು, ತಾವರೆ, ಕಿತ್ತಳೆಯ ಹಣ್ಣು,
ಕೇಸರಿ, ಗುಲಾಬಿ, ಕುಂಕುಮ ರಂಗು, ತರತರದ
ಫಲಕುಸುಮ ನವರತ್ನರಾಗ ಸಮನೋಹರವಾದ
ಭೋಗ ಮಂದಾಕಿನಿಯಂ ಪ್ರವಹಿಸುವಂತೆ ಉಷೆವೆಣ್ಣು
ಮೂಡುತಿಹಳದೊ ದೂರ ದಂತುರ ದಿಗಂಗದಲಿ

(ಅಲ್ಲೆ, ಪು. ೪೮೦)

ಬಣ್ಣದೋಕುಳಿಯ ರಂಗು, ಕೇಸರಿ, ವರ್ಣ, ಗುಲಾಬಿ, ತಾವರೆ, ಪಕಳೆಗಳಂತೆ ಎಳೆದಾದ ಮೃದುವಾದ, ಉಷೆವೆಣ್ಣು ದಿಗಂಗದಲ್ಲಿ ಮೂಡುತ್ತಿದ್ದಾಳೆ, ಅವಳ ಸುಕೋಮಲ ಚೆಲುವಿಗೆ ಕವಿ ಮನಸೋತಿದ್ದಾರೆ.

'ಇಂದ್ರದಿಗಂತದಿ' ಎಂಬ ಕವನವಂತೂ ಒಂದು ಸಾಕ್ಷಿ ಚಿತ್ರವೇನೋ ಎನಿಸುತ್ತದೆ;

ಮುಗಿಲಿನ ಬೂದಿಯ ಕುಂಕುಮಗೈಯುತೆ
ಮಳೆಬಿಲ್ ರೇಶ್ಮೆಯ ಚೆಂಬಲೆ ನೆಯ್ಯುತೆ
ಹೊಂದೊರೆ ಹರಿಯುತ್ತಿದೆ;
ಕಾಸಿದ ಚಿನ್ನದ ಪುತ್ತಲಿಯಂದದಿ
ಕವಿ ಮೆಯ್ ಮರೆಯುತಿದೆ

(ಅಲ್ಲೆ, ಪು. ೯೭೮)

ಇಲ್ಲಿ ಕವಿ ಉದಯಪೂರ್ವದ ಮತ್ತು ಉದಯೋತ್ತರದ ಪೂರ್ವ ದಿಕ್ಕಿನ ವರ್ಣವೈವಿಧ್ಯದ ವಿವರಗಳನ್ನು ಅಪೂರ್ವವಾಗಿ ವರ್ಣಿಸಿದ್ದಾರೆ. ಮುಗಿಲಿನ ಬೂದು ವರ್ಣ ಕುಂಕುಮದ ರಂಗನ್ನು ಪಡೆಯುತ್ತಿದೆ ಎಂಬ ಕಲ್ಪನೆ ಸೊಗಸಾಗಿದೆ. ಹಾಗೆಯೇ ಪೂರ್ವದಲ್ಲಿ ಉದಯಿಸಿದ ಸೂರ್ಯ ಚೆನ್ನಾಗಿ ಕಾಸಿದ ಚಿನ್ನದ ಪುತ್ಥಳಿಯಂತಿದೆ ಎಂಬ ಕಲ್ಪನೆ ವಿನೂತನವಾಗಿದೆ.

'ರಸಾನುಭೂತಿ'ಯ ಈ ಕೆಲವು ಸಾಲುಗಳು ಕವಿ ರಸಾನುಭೂತಿ ಹೊಂದಿದ ಸಂದರ್ಭವನ್ನು ಸಮರ್ಥವಾಗಿ ಚಿತ್ರಿಸುತ್ತವೆ.

ಉಷೆವೆಣ್ಣಿನ ಕೆನ್ನೆಯರಿಸಿನಕೆ ಕುಂಕುಮಂ
ನೆರೆದುದೆನೆ, ಸೂರ್ಯ ಸಾರಥಿಯರುಣನೈತರುವ
ತೇರ್ಗಾಲಿಯಿಂದೇಳ್ವ ಕೆಂಧೂಳಿ, ಮೂಡಲಲಿ
ಶೋಭಿಸುತ್ತಿಹುದೆಂತು ತುಂಬಿ ದಟ್ಟಿಯಿಸಿ"

(ಅಲ್ಲೆ, ಪು. ೯೭೮)

ಸೂರ್ಯ ಸಾರಥಿ ಅರುಣ ರಥ ಹೂಡಿದ್ದಾನೆ. ರಥದ ಗಾಲಿ ಮತ್ತು ಅಶ್ವದ ಓಟದಿಂದ ಕೆಂಧೂಳಿ ಮೂಡಲ ತುಂಬೆಲ್ಲ ದಟ್ಟೈಸಿದೆ. ಅದು ಉಷೆವೆಣ್ಣಿನ ಕೆನ್ನೆಯ ಅರಿಸಿನಕ್ಕೆ ಕುಂಕುಮವೆರೆಸಿದಂತೆ ರಂಗಾಗಿದೆ. ಇಲ್ಲಿ ಹೆಣ್ಣಿನ ಸಿರಿ ಅರಿಶಿನ ಕುಂಕಮ. ಮುಂಜಾನೆ ಎದ್ದು ನೀರೆರೆದು ಕೆನ್ನೆಗೆ ಅರಿಶಿನ ತೀಡಿ ಕೆಂಪು ಕುಂಕುಮ ಶೋಭಿತ ಮಹಿಳೆಯ ಚಿತ್ರದ ಅಪೂರ್ವ ಕಲ್ಪನೆ ಸೊಗಸಾಗಿ ಮೂಡಿ ಬಂದಿದೆ.

ಹೀಗೆ ಕವಿ ದಿನದಿನವೂ ಸೂರ್ಯನ ಉದಯದ ರಂಗನ್ನು ನೋಡಿ ಮನತಣಿಯೆ ಆನಂದಿಸಿದರೂ ಮತ್ತೆ ಮತ್ತೆ ನೋಡಬೇಕೆನ್ನುವ ತವಕ ಹೆಚ್ಚುತ್ತಲೇ ಇದೆ ಎನ್ನುತ್ತಾರೆ. ಏಕೆಂದರೆ ಪ್ರತಿಸಲವೂ ಉದಯಿಸುವ ಸೂರ್ಯನು ಹೊಸ ರೀತಿಯಲ್ಲಿ ಕಾಣುತ್ತಿದ್ದಾನೆ. 'ನಲಿದಿಹುದೆನೆ ಇಂತೀ ಪ್ರತಿಸಲವೂ ಅದೆ ಮೊದಲೆಂಬಂತೆ' ('ಇಂದ್ರದಿಗಂತದಿ')ಎನ್ನುತ್ತಾರೆ (ಅಲ್ಲೆ, ಪು. ೬೫೩).

ಪ್ರಕೃತಿ ಸೌಂದರ್ಯದ ರಸಪಾನಗೈದ ಕವಿ ಧರೆಗೆ ಸ್ವರ್ಗವೇ ಇಳಿಯಿತೇನೋ ಎನಿಸುತ್ತಿದೆ ಎನ್ನುತ್ತಾರೆ. ಅನಿರ್ವಚನೀಯ ಆನಂದ ಪಡೆದ ಕವಿ ಉದಯನ ಸೌಂದರ್ಯ ಸುಧೆ ಈಂಟುತ್ತಾ ಸ್ವರ್ಗ ಸುಖವೇ ದೊರೆಯಿತೆಂದು ಭಾವಿಸುತ್ತಾರೆ.

'ಶರತ್ಕಾಲದ ಸೂರ್ಯೋದಯದಲಿ ಸ್ವರ್ಗವು ಹೊಮ್ಮಿರೆ ಮರ್ತ್ಯ ಹೃದಯದಲಿ ಹೊರ ಹೊಂಟೆನು ನಾ ಸಂಚರಿಸೆ' ಎಂದು ಒಂದು ಕಡೆ ಹೇಳಿದರೆ, 'ಇಂದ್ರದಿಗಂತದ ದೂರಾದ್ದೂರಂ ಪ್ರಾತಃ ಸ್ವರ್ಗದ ಸ್ವರ್ಣದ್ವಾರಂ ನೋಡದೊ ತೆರೆಯುತಿದೆ!' ಎಂದು ಇನ್ನೊಂದು ಉದಯಗೀತದಲ್ಲಿ ಹೇಳುತ್ತಾರೆ. ಮತ್ತೊಂದು ಕಡೆ ಹಿಂದಿನ ದಿನ ಸಂಜೆಯ ವೇಳೆಗೆ ಬಿದ್ದ ಮಳೆಯಿಂದ ಮರುದಿನದ ಉದಯವು ಸುಂದರವಾಗಿ ಬೆಳಕಿನ ಮುಂಬೆಳಗಿನ ವೈಭವವನ್ನು ಕಣ್ಣಾರೆ ಕಂಡ ಕವಿ ಆ ಹಸುರ ಬಯಲು, ಆ ಹೊಂಬಿಸಿಲೂ, ಬಿಸಿಲೆಗೆ ಹೊಳೆದು ಕಿಡಿಯಂತೆ ಪ್ರಜ್ವಲಿಸುವ ಹಿಮಮಣಿ, ಸ್ಫಟಿಕದಂತಹ ಗಾಳಿಯ ಮಂಡಲ, ನೀಲ ನಭ ಅದರಲ್ಲಿ ತೇಲುವ ಮುಗಿಲಿನ ಪಟ ಇವುಗಳ ಸೊಬಗಿಗೆ ಮಾರುಹೋಗಿ 'ವೈಕುಂಠವಿದೆ ನಿಸರ್ಗದಲಿ' ಎಂದು ಹಾಡುತ್ತಾರೆ. ಇನ್ನೊಂದು ಪ್ರಾತಃಕಾಲದ ಅನುಭವವಂತೂ ಕವಿಯ ಕಲ್ಪನೆಯ ಔನ್ನತ್ಯವನ್ನೂ ಉಜ್ವಲತೆಯನ್ನು ರಮ್ಯಮಾತುಗಳಲ್ಲಿ ಸೆರೆಹಿಡಿಯುತ್ತದೆ. ಹಚ್ಚನೆಯ ಹುಲ್ಲಿನ ಬಯಲಿನಲ್ಲಿ ಬೆಳ್ಳನೆಯ ಹಿಮಮಣಿ ವಜ್ರದ ಕಿಡಿಯಂತೆ ಹೊಂಬಿಸಿಲಿನ ಕದಿರಿಗೆ ಮಿರುಗುವುದನ್ನು ನೋಡಿ ಕವಿ, 'ಸಗ್ಗದ ಸಿರಿಯೇ ನೆಲಕೆ ಬಿದ್ದು ಹುಡಿಹುಡಿಯಾಗಿದೆ, ಬುವಿಯ ಬಾಳು ಸಂತೋಷಕೆ ಕಿಡಿ ಕಿಡಿ ಕಿಡಿವೋಗಿದೆ!' ಎಂದು ಬೆರಗುಗೊಳ್ಳುತ್ತಾರೆ. ಪೃಥ್ವಿಯಲ್ಲಿ ಕ್ಲೇಶಕಷ್ಟಗಳೆಲ್ಲ ಕೊನೆಮುಟ್ಟಿ ಸರ್ವರೂ ರಸದ್ರಷ್ಟಾರರಾಗಿ ದರ್ಶನವನ್ನು ಪಡೆದು ಕಾವ್ಯದ ಆಸ್ವಾದನೆಗೆ ಸೌಂದರ್ಯ ಸಾಧನೆಗೆ ಕಲೆಯ ಆರಾಧನೆಗೆ ಮನವೀಯುವ ಆ ಪುಣ್ಯ ಸ್ವರ್ಗ ಎಂದು ಬರುವುದೋ ಕಾಣೆ, ಅದು ಬರಿಯ ಕನಸು ಎಂದು ತೋರುತಿದೆ, ಆದರೇನು! 'ಎಲ್ಲರೂ ಏಳುವವರೆಗೆ ಎಲ್ಲರೂ ಮಲಗಬೇಕೇನು! ಸೋದರನೇ! ಮೊದಲು ನೀನು ಎದ್ದು ಮನಸು ಮಾಡು. ಕಣ್ತೆರೆಯೆ ಸ್ವರ್ಗವಿದೆ, ಕಣ್ಮುಚ್ಚೆ ನರಕವಿದೆ' ಎಂದು ಎಚ್ಚರಿಸುವ ಮಾತು ಎಲ್ಲರ ಮನ ಮುಟ್ಟುವವರೆಗೆ ಕೇವಲ ಮಾತಾಗಿಯೇ ಉಳಿದುಬಿಡುತ್ತದೆ.

ಕುವೆಂಪುರವರ ಒಂದು ಅಪೂರ್ವ ಸಿದ್ಧಿ 'ಬಾ ಫಾಲ್ಗುಣರವಿ ದರ್ಶನಕೆ' ಎಂಬ ಕವನ ಸೃಷ್ಟಿ. ಬೆಳಗಿನ ಕ್ರಿಯಾತ್ಮಕ ಸನ್ನಿವೇಶವನ್ನು 'ಶರ' ಛಂದೋಧಾಟಿಯ ನಡಿಗೆಯೊಂದಿಗೆ ಈ ಕವನ ಚಿತ್ರಿಸುತ್ತದೆ. ಸೂರ್ಯನ ಉದಯದ ವಿಶಿಷ್ಟ ಹಂತಗಳು ಅದರೊಂದಿಗೆ ಮಿಲಿತವಾದ ಸಹೃದಯನ ಭಾವಸ್ತರಗಳು ಇವೆರಡೂ ಹೊಯ್‌ಕಯ್ಯಾಗಿ ಸಾಗುತ್ತವೆ. ಕವನದ ಪ್ರಾರಂಭದಲ್ಲೇ ಧೀರ ಗಂಭೀರ ನಡೆ ನಮ್ಮನ್ನು ಆಕ್ರಮಿಸಿ ತನ್ನ ಉದಾತ್ತ ಸುಂದರ ತೆಕ್ಕೆಗೆ ಸೆಳೆದುಕೊಳ್ಳುತ್ತದೆ.

ಶಿವಸುಂದರ ಸಮ ವನಸುಂದರ ಸುಮ ಶೃಂಗಾರದ ಗಿರಿಶೃಂಗಕೆ ಬಾ, ಬಾ ಫಾಲ್ಗುಣರವಿ ದರ್ಶನಕೆ!

ವನದ ಸುಂದರ ಪುಷ್ಪಗಳಿಂದ ಸಿಂಗರಿಸಿಕೊಂಡು ಶಿವಮಂದಿರ ಸಮವಾದ ಗಿರಿಶೃಂಗದಿಂದ ಶಿವರೂಪಿ ಚೈತನ್ಯ ದೀಪ್ತಿಯನ್ನು ಕವಿ ದರ್ಶಿಸುತ್ತಿದ್ದಾರೆ. ಪದಗಳ ಲಾಲಿತ್ಯ ಸುಂದರ ಸಮನ್ವಯದಿಂದ ಕೂಡಿದ ಸಾಲುಗಳು ಕವಿಯ ಪ್ರತಿಭೆಯ ಔನತ್ಯವನ್ನು ಸೂಚಿಸುತ್ತವೆ. ಮುಂದಿನ ಸಾಲುಗಲ್ಲಿ ಭವ್ಯದೃಶ್ಯ ಜಗನ್ಮನಂಗಳಕರವಾದ ದಿವ್ಯಯಜ್ಞವಾಗಿ ಅನುಭೂತವಾಗುತ್ತದೆ.

ಕುಂಕುಮಧೂಳಿಯ ದಿಕ್ತಟ ವೇದಿಯೋಳೋಕುಳಿಯಲಿ ಮಿಂದೇಳುವನು;
ಕೋಟಿ ವಿಹಂಗಮ ಮಂಗಲರವ ರಸನೈವೇದ್ಯಕೆ ಮುದ ತಾಳುವನು;
ಚಿನ್ನದ ಚೆಂಡೆನೆ ಮೂಡುವನು;
ಹೊನ್ನನೆ ಹೊಯ್‌ನೀರ್ ನೀಡುವನು;
ಸೃಷ್ಟಿಯ ಹೃದಯಕೆ ಪ್ರಾಣಾಗ್ನಿಯ ಹೊಳೆ ಹರಿಯಿಸಿ ರವಿ ದಯಮಾಡುವನು!"

(ಅಲ್ಲೆ ಪು.೬೪೨)

ಸೂರ್ಯೋದಯದ ದಿವ್ಯಕ್ರಿಯೆ ಯಜ್ಞವೊಂದರ ಮಂಗಳ ಚಿತ್ರವನ್ನು ಮನಸ್ಸಿಗೆ ತರುತ್ತದೆ. ಕುಂಕುಮ ಧೂಳಿಯ ದಿಕ್ತಟವೇದಿ ಎನ್ನುವ ಮಾತಿನಲ್ಲಿ ಅದು ಧ್ವನಿತವಾಗುತ್ತದೆ. ಮುಂಬೆಳಕಿನ ಕೆಂಪು ದಿಗಂತವನ್ನು ವ್ಯಾಪಿಸಿ ಕುಂಕುಮ ಧೂಳಿಯನ್ನು ರಚಿಸಿದೆ. ಆ 'ವೇದಿ'ಯಿಂದ ಓಕುಳಿಯಲ್ಲಿ ಮಿಂದ ಬಾಲರವಿ ಉದಯಿಸುತ್ತಿದ್ದಾನೆ. ಕೋಟ್ಯಂತರ ಪಕ್ಷಿಗಳ ಮಂಗಲಧ್ವನಿ ರವಿಯೊಂದಕ್ಕೆ ಸಮರ್ಪಿತವಾದ ರಸ ನೈವೇದ್ಯ, ಆ ರಸನೈವೇದ್ಯವನ್ನು ಸ್ವೀಕರಿಸಿ ರವಿ ಮುದ ತಾಳಿದ್ದಾನೆ. ಹೊನ್ನನ್ನೇ ಹರಿಸಿ ಚಿನ್ನದ ಚೆಂಡಿನಂತೆ ರವಿ ಮೂಡುತ್ತಿದ್ದಾನೆ. 'ಸೂರ್ಯೋದಯ ಸುಂದರ ಪ್ರಕೃತಿ ವ್ಯಾಪಾರ. ಅದರ ಹಿಂದೆ ಯಜ್ಞ ಪ್ರತಿಮೆ. ಅದಕ್ಕೂ ಹಿಂದೆ ಅಧ್ಯಾತ್ಮದ ಅನುಭೂತಿ –ಹೀಗೆ ಮೂರು ಭೂಮಿಕೆಗಳಲ್ಲಿ ಏಕಕಾಲದಲ್ಲಿ ಸಂಚರಿಸುತಾ ಆವಾರ್ಚೀನ ಕಾವ್ಯರಾಶಿಯಲ್ಲಾಗಲಿ, ಇದಕ್ಕೆ ಸಮನಾದ ಮತ್ತೊಂದು ಕವನವನ್ನು ಕಾಣುವುದು ಕಷ್ಟ'. ಈ ಕವನಕ್ಕೆ ಸಂಬಂಧಿಸಿದಂತೆ ಒಂದು ಘಟನೆಯನ್ನು ನಿರೂಪಿಸುವ ಅವಶ್ಯಕತೆಯಿದೆ. ಕುವೆಂಪುರವರ ಆತ್ಮೀಯ ಗುರುಗಳೂ, ಕನ್ನಡ ಅಶ್ವಿನೀ ದೇವತೆಗಳಲ್ಲಿ ಒಬ್ಬರೂ ಆದ, ಪ್ರಾಧ್ಯಾಪಕ ಟಿ.ಎಸ್. ವೆಂಕಣ್ಣಯ್ಯನವರು ಈ ಕವನವನ್ನು ಕುವೆಂಪು ಅವರಿಂದ ಓದಿಸಿ ಕೇಳಿ ದಿಗ್ಗನೆ ಎದ್ದು ನಿಂತು, ಭಾವವಿಷ್ಟರಾಗಿ "ಹೇಳಯ್ಯ ಪುಟ್ಟಪ್ಪ, ಹೇಳು, ಜಗತ್ತಿನ ಯಾವ ಸಾಹಿತ್ಯದಲ್ಲಿದೆ ಇಂಥ ಕವನ" ಎಂದು ಗಟ್ಟಿಯಾಗಿ ಸವಾಲಿನ ರೀತಿಯಲ್ಲಿ ಹೇಳಿದರಂತೆ, ಇದನ್ನು ನಾನು ಕೇಳಿದ್ದು ಶ್ರೀ ಕುವೆಂಪುರವರಿಂದಲೇ ಎಂದು ಡಾ. ಪ್ರಭುಶಂಕರರವರು ನೆನಪಿಸಿಕೊಂಡಿದ್ದಾರೆ (೨೦೦೦:೨೪೦).

ತೆರೆ ತೆರೆಯಾಗಿಹ ನೊರೆ ನೊರೆ ಕಡಲೆನೆ ನೋಡುವ ಕಣ್ಣೋಡುವವರಿಗೆ
ಬನಸಿರಿ ತುಂಬಿದ ಕಣಿವೆಯ ಹಂಬಿರೆ ಧೂಳಿ ಸಮಹಿಮ ಬಾನಕರೆಗೆ
ಪ್ರತಿಭೆಯ ಹೋಮಾಗ್ನಿಯ ಮೇಲೆ ಕವಿಮನ ತಾನುರಿದುರಿದೇಳೆ
ಮರಗಿಡದಲಿ ಜಡದೊಡಲಲಿ ಇದಕೊ ಸ್ಪಂದಿಸುತಿದೆ ಭಾವಜ್ವಾಲೆ"

(ಅಲ್ಲೆ, ಪು. ೬೪೨)

'ಪ್ರತಿಭೆಯ ಹೋಮಾಗ್ನಿಯ ಮೇಲೆ ಕವಿ ಮನ ತಾನುರಿದೇಳೆ' ಎಂಬ ಸಾಲುಗಳು ಸಂಕೀರ್ಣವಾದ, ವ್ಯಾಖ್ಯಾನಾತೀತವಾದ ಅರ್ಥವನ್ನೊಳಗೊಂಡಿದ್ದು, ಭವ್ಯ ಸ್ಫುಟತೆಯಿಂದ ಕೂಡಿವೆ. ಪ್ರಕೃತಿಯ ಅದ್ಭುತ ಪ್ರತಿಭೆಯಂತಿರುವ ಸೂರ್ಯನ ಮಹಾಯಜ್ಞ ದೃಶ್ಯದಲ್ಲಿ ತನ್ಮಯನಾದ ಕವಿಯ ಮನ ಜ್ವಲಿಸಿ ಊರ್ಧ್ವಮುಖಿಯಾದಂತೆ, ಮರ, ಗಿಡ, ಜಡಗಳ ಒಡಲಲ್ಲಿ, ನಿಸರ್ಗ ಸಮಸ್ತದಲ್ಲೂ ಜೀವಭಾವದ ಬಿಸಿ ಮೂಡಿದ ಕವಿ ಇಲ್ಲಿ 'ಸರ್ವಾತ್ಮನ ಸನ್ನಿಧಿಯಲ್ಲಿ ಸರ್ವೇಂದ್ರಿಯ ಸುಖಿನಿಧಿ'ಯಾಗಿದ್ದಾನೆ. 'ವರ್ಣನಿದಿಂದ್ರಿಯವನ್ನು ದಾಟಿ, ಸೌಂದರ್ಯ ಸಮಾಧಿಯೊಳಾನಂದವ ಹೀರಿ, ಮೈಮರೆತು ದರ್ಶನ ಮುಕ್ತಿ'ಯನ್ನು ಪಡೆಯುತ್ತಾನೆ. ಸೂರ್ಯೋದಯದ ವರ್ಣನೆಗಳಲ್ಲೇ ಅತ್ಯಪೂರ್ವ ವರ್ಣನೆಯಾಗಿರುವ ಈ ಕವಿತೆ ತನ್ನ ಕಲ್ಪನೆಯ ಮಹೌನ್ನತ್ಯದಿಂದ, ದರ್ಶನದ ಮಹತ್ತಿನಿಂದ ಅತ್ಯುತ್ತಮ ಭಾವಗೀತಗಳ ಸಾಲಿನಲ್ಲಿ ನಿಲ್ಲುವ ಕವಿತೆ ಎಂದು ಹೇಳಬಹುದು.

ಮತ್ತೊಂದು ಪ್ರಾತಃಕಾಲದ ಸೂರ್ಯೋದಯದಲ್ಲಿ ಹಸುರು ಗರಿಕೆಯ ತುದಿಯಲ್ಲಿ ಹೊಂಬಿಸಿಲಿಗೆ ಹೊಳೆಯುವ ಹಿಮಮಣಿಯನ್ನು ನೋಡಿದಾಗ ಕವಿ ಹೀಗೆ ಹೇಳುತ್ತಾರೆ...

ನಿಲ್ಲಿಲ್ಲಿ! ದಮ್ಮಯ್ಯ, ನಿಲ್ಲಿಲ್ಲಿ! ಕಾಲವೂ
ದೇಶವೂ ಸಂಧಿಸುವ ಈಗಿಲ್ಲಿ! ಸ್ವರ್ಗವೈ
ಈ ಸ್ಥಳ – ಯಮುನೆಯನೀ ಕ್ಷಣ – ಗಂಗೆ ಸಂಗಮಿಸೆ
ಈಗಿಲ್ಲಿ! ನಿಂತಿಲ್ಲಿ ನಿಂತೀಗ ನೋಡಿಲ್ಲಿ
ಹಸುರುಕ್ಕಿ ಹರಿಯುವಾ ಹುಲ್ಲೆಳಸ ಮುಡಿಯ
ಮಣಿದೀಪವೆನೆ ಉರಿವ ಉಜ್ವಲ ಹಿಮದ ಬಿಂದು!
ಸೌಂದರ್ಯದೇವತೆಯ ಮೂಗುತಿಯ ಹನಿಮುತ್ತು
ನೇಲುತಿದೆ ಜೋಲುತಿದೆ, ಮಿರುಮಿರುಗುತಿದೆ ನೋಡು!

ಹೆಜ್ಜೆ ಮುಂದಿಡೆ ಸೊನ್ನೆ; ಹೆಜ್ಜೆ ಹಿಂದಿಡೆ ಸೊನ್ನೆ;
ಚಣ ಮುಂಚಿದರೆ ಸೊನ್ನೆ, ಚಣ ಹಿಂಚಿದರೆ ಸೊನ್ನೆ;
ಕಾಲ ದೇಶ ಪ್ರಯಾಗ ಕ್ಷೇತ್ರದೀಗಿಲ್ಲಿ
ಮೀಯದರೆ ದೊರಕದೈ ಹಿಮಮಣಿ ತಿಲೋತ್ತಮೆಯ
ಸಗ್ಗಸಿರಿ, ತಿರೆಯೊಲಿಹ ಚೆಲುವೆಯರ ಚೆಲುವೆಲ್ಲ
ಸೇರಿ ಮೈವೆತ್ತೊಡಂ ಹಿಮಮಣಿ ತಿಲೋತ್ತಮೆಯ ಮುಂದೆ...
ಪೊ; ಸಾಕು ಬಣ್ಣನೆ ಮಾತು; ಹೋಲಿಕೆಯ
ಕಣ್ಣು ಕುರುಡಾದೀತು, ನಿಂತು ಸುಮ್ಮನೆ ನೋಡಿ,
ಮೈಯ್ಯ ಮರೆ, ಆಲೋಚನೆಯನತ್ತ ಕಡೆ ತಳ್ಳಿ! (ಅಲ್ಲೆ ಪು. ೭೮)

ಯಾವ ಅಪ್ಸರಾ ಸೌಂದರ್ಯಕ್ಕೂ ಮಿಗಿಲ್ಲದಂತೆ ಥಳಥಳನೆ ಹೊಳೆಯುವ ಹಿಮಮಣಿಯ ಸೌಂದರ್ಯವನ್ನು ನಿಂತಲ್ಲೇ ನಿಂತು ಮೈಮರೆತು ನೋಡುತ್ತಾ ಆನಂದಿಸುತ್ತಿರುವ ಕವಿ ಒಂದು ಕ್ಷಣ ಹಿಂದು ಮುಂದಾದರೂ ಸೌಂದರ್ಯ ಮಾಯೆಯೆನಿಸಿ

ಎಲ್ಲವೂ ಶೂನ್ಯವಾಗುತ್ತದೆ ಎಂಬಲ್ಲಿ ಕವಿಯ ಸೂಕ್ಷ್ಮಗ್ರಾಹಿ ನೋಟ ಕಾಣಿಸುತ್ತದೆ. ತಾವು ಕಂಡ ಚಿತ್ರ ನಮಗೂ ಕಾಣಬೇಕು ಎಂಬ ಕಾತರದ ಜೊತೆಗೆ ಪ್ರಕೃತಿಯ ಮುಂದೆ ಮಾನವ ಬುದ್ಧಿವಂತಾಗಿ ವರ್ತಿಸುವುದು ಬೇಡ, ಎಲ್ಲ ಆಲೋಚನೆಗಳತ್ತ ತಳ್ಳಿ ಸೌಂದರ್ಯ ಆಸ್ವಾದನೆಗೆ ಸಿದ್ಧವಾಗು ಎಂದು ಪ್ರಾರ್ಥಿಸುತ್ತಾರೆ.

ಹೀಗೆ ಇನೋದಯನ ದಿವ್ಯ ಸೌಂದರ್ಯವನ್ನು ಕಾಣುತ್ತಾ ಕಾಣುತ್ತಾ ಕವಿ ಶಿವನ ಇರುವಿಕೆ ಇಲ್ಲಿಯೇ ಅಲ್ಲವೇ? ಎಂದು ಆಲೋಚಿಸುತ್ತಾರೆ.

ಈಗ ಕವಿಗೆ ಬಿಸಿಲು ಬರಿಯ ಬಿಸಿಲಲ್ಲ, ಸೂರ್ಯನ ಕೃಪೆ, ದೇವರ ದಯವಲ್ಲವೇ? ಎನಿಸುತ್ತದೆ.

ಆನಂದಮಯ ಈ ಜಗಹೃದಯ
ಏತಕೆ ಭಯ? ಮಾಣೊ?
ಸೂರ್ಯೋದಯ ಚಂದ್ರೋದಯ
ದೇವರ ದಯ ಕಾಣೋ!

(ಅಲ್ಲೆ ಪು. ೭೨೮)

ಎಂದು ಹಾಡುತ್ತಾರೆ. 'ಸೂರ್ಯನು ಬರಿ ರವಿಯಲ್ಲವೋ, ಆ ಭ್ರಾಂತಿಯ ಮಾಣೊ!' ಎಂದು ಕವಿ ಹೇಳಿ ಮುಂದೆ 'ಕವಿವದನವೆ ಶಿವಸದನವೊ' ಎನ್ನುವ ಕವಿ ಶಿವನಿಲ್ಲದೆ ರವಿ ಇಲ್ಲ, ಸೌಂದರ್ಯವಿಲ್ಲ, ಸೌಂದರ್ಯವಿದ್ದಲ್ಲಿ ಶಿವನಿದ್ದಾನೆ, ಶಿವನೇ ಸೌಂದರ್ಯವಲ್ಲವೇ ಎಂಬ ತೀರ್ಮಾನಕ್ಕೆ ಬರುತ್ತಾರೆ. ಕವಿಗೆ ಪ್ರಕೃತಿ ಆರಾಧನೆಯೇ ಪರಮನಾರಾಧನೆಯಾಗುತ್ತದೆ.

'ಪ್ರಕೃತಿ ಉಪಾಸನೆ' ಕವಿತೆಯಲ್ಲಿನ ಈ ಕೆಲವು ಸಾಲುಗಳು ಪುಣ್ಯೋದಕದಿಂದ ಮಿಂದ ದೇವತೆ ಈ ದಿವಾಕರ ಎಂದು ಭಾವಿಸಿ ಬಣ್ಣಿಸಿರುವುದು ಬಹು ಸೊಗಸಾಗಿದೆ.

ಕಿರಣವಿಲ್ಲದ ರಕ್ತಬಿಂಬದ ದಿವಾಕರಂ
ಕುಂಕುಮದ ಪುಣ್ಯೋದಕದಿ ಮಿಂದುಬಂದಂತೆ
ಯಜ್ಞಕುಂಡದಿನೆದ್ದ ಕೆಂಡ ದೇವತೆಯಂತೆ,
ಮೂಷೆಯಲಿ ಕಾಯ್ದು ಕಬ್ಬಿಣದುಂಡೆ ಚೆಂಡಂತೆ,
ಕತ್ತಲಲಿ ಕತ್ತರಿಸಿದುರಿಯ ವರ್ತುಲದಂತೆ,
ಕವಿಯ ಭಾವಾವೇಶದೊಂದು ಹೆಗ್ಗಿಡಿಯಂತೆ

(ಅಲ್ಲೆ, ಪು. ೭೪೬)

ಇಲ್ಲಿಯ ಒಂದೊಂದು ಉಪಮೆ ಕವಿಯ ಉಜ್ವಲ ಪ್ರತಿಭೆಯನ್ನು ಅನಾವರಣಗೊಳಿಸುತ್ತದೆ. ಮುಂದೆ ಕವಿಗೆ ಭುವನವೇ ಶ್ರೇಷ್ಠತಮವಾದ ದೇವಾಲಯವಾಗಿ ತೋರುತ್ತದೆ. ಸೂರ್ಯನೆ ದೇವನಾಗಿ ಆವಿರ್ಭವಿಸಿದಂತೆ ಕವಿ ಭಾವಿಸುತ್ತಾರೆ.

ಯಾವ ಗುಡಿ
ಮಿಗಿಲು ಈ ಭುವನ ದೇವಾಲಯಕೆ? ಮೇಣಾವ
ವಿಗ್ರಹಂ ಮೀರಿರುವುದೀ ಚೈತ್ರ ಪಂಚಮಿಯ

4

ಪುಣ್ಯಪ್ರಭಾತದಲಿ, ದೂರ ದಿಗಂತದಿಂ
ಪ್ರತ್ಯಕ್ಷವಾಗಿರುವ ಭವ್ಯಸುಂದರ ದಿವ್ಯ
ಸೂರ್ಯದೇವನಿಗೆ? ಮೇಣಾವುದಾರಾಧನೆಯು
ಉಪಮಾನವೀ ನಿರುಪಮ ಕಲಾ ಉಪಾಸನೆಗೆ?

(ಅಲ್ಲೆ, ಪು. ೬೪೬–೪೭)

ದೂರ ದಿಗಂತದಿ ಪ್ರತ್ಯಕ್ಷವಾಗಿರುವ ಭವ್ಯ ಸುಂದರ ದಿವ್ಯ ಸೂರ್ಯದೇವನ ನೋಡಲು ಯಾವ ಪೂಜೆ ಜಪತಪಗಳೂ ಬೇಕಿಲ್ಲ, ಶಿವರೂಪಿ ರವಿಯ ಕಾಣಲು ಕವಿ ಮನವೊಂದೇ ಸಾಕು ಎನ್ನುತ್ತಾರೆ. 'ಸೊಬಗಿನಲಿ ಶಿವನಿಹನು; ಶಿವನೆ ಸೊಬಗಾಗಿಹನು' 'ಎನಿತೊರೆಯೆ ಈ ವಚನ ಪುನರುಕ್ತಿಯಾದೀತು? ಹಳಸೀತು? ಸತ್ಯಂ, ಶಿವಂ, ಸುಂದರಂ ಎಂಬ ತತ್ತ್ವ ಮತ್ತೆ ಮತ್ತೆ ಉಕ್ತವಾದರೂ ಹಳತಾಗುವುದಿಲ್ಲ ಎನ್ನುತ್ತಲೇ.... 'ಸತ್ಯದಲಿ ಶಿವವಿಹುದು, ಶಿವದಲ್ಲಿ ಸತ್ಯವಿದೆ, ಮೇಣೆರಡು ಸೌಂದರ್ಯದಲಿ ಲೀನವಾಗಿಹವು' ಎನಿಸುತ್ತದೆ ಕವಿಗೆ.

ಇಲ್ಲಿಯವರೆಗೆ ಕವಿ ವ್ಯಕ್ತ ಸೌಂದರ್ಯವನ್ನು ನೋಡಿ ಆವೇಶಪೂರ್ಣವಾಗಿ ಮಾತಿನ ವರ್ಣನಮಾಲೆ ಕಟ್ಟಿದರೆ ಮುಂದೆ ನೋಡುತ್ತಾ ನೋಡುತ್ತಾ ಪ್ರತಿಭೆಯ ಹೋಮಾಗ್ನಿಯ ಕಿಡಿ ಪ್ರಜ್ವಲಿಸಿದಂತೆ ಭಾವಾವೇಶ ಅಳಿದು ದರ್ಶನದೀಪ್ತರಾಗುತ್ತಾರೆ. "ಸೌಂದರ್ಯ ಸಮಾಧಿಯಲ್ಲಿ ಆನಂದವನ್ನು ಹೀರಿದ ವ್ಯಕ್ತಿತ್ವ ಮರೆಯುತ್ತದೆ. ಸರ್ವೇಂದ್ರಿಯಗಳ ಸುಖ ನಿಧಿಯಾದ ಸರ್ವಾತ್ಮನ ಸನ್ನಿಧಿಯಲ್ಲಿ ಕವಿ ಸಕಲಾರಾಧನ ಸಾಧನ ಬೋಧನಾನುಭವ ರಸವನ್ನುಂಡು ಆನಂದ ಪರವಶರಾಗುತ್ತಾರೆ" (ಎಸ್.ವಿ. ಪರಮೇಶ್ವರ ಭಟ್ಟ ೧೯೫೫:೫೯).

'ಪಕ್ಷಿಕಾಶಿ' ಸಂಕಲನದ ಈ ಕವಿತೆ ಅನಿರ್ವಚನೀಯವಾದ ಅಲೌಕಿಕವಾದ ಅತೀಂದ್ರಿಯವಾದ ಒಂದು ಅನುಭಾವಿಕ ನೆಲೆಗೆ ಕವಿ ಮುಟ್ಟಿ ದಿವ್ಯಾನುಭೂತಿಯನ್ನು ಹೊಂದಿದ ಪರಿಯನ್ನು ಚಿತ್ರಿಸುತ್ತದೆ. ಮಲೆಗಳಂಚೆ 'ಒಯ್ಯಸಿ'(ಪ್ರತ್ಯಕ್ಷಗೊಂಡ) ಆವಿರ್ಭವಿಸಿದ ತೇಜಸ್ವಿ ರವಿ ಸಾಕ್ಷಾತ್ ಶಿವನೇ ಮೈದೋರಿದಂತೆ ಕಾಣುತ್ತಿದೆ. ಕವಿ ಹೃದಯ ಭಾವ ಜಲಪಾತದ ಭೋರ್ಗರೆದು ಮೌನ ಸ್ತೋತ್ರ ಮಾಡುತ್ತಾ ಧ್ಯಾನಸ್ಥವಾಗಿದೆ. ಋಷಿ ಕವಿಯ ದರ್ಶನ ಚಿಂತನೆ ಮೇರುಮಟ್ಟಕ್ಕೇರಿದೆ.

ಶಿವನ ಮುಖ ಚಂದ್ರಿಕೆಯೆ ಸೌಂದರ್ಯ ರೂಪದಿಂ
ಪ್ರತ್ಯಕ್ಷವಾಗುತಿರೆ ಶಿವನೆ ಮೈದೋರ್ದಂತೆ
ಅಹ ನೋಡದೊ, ಮಲೆಗಳಾಚೆಯ ಸುದೂರದಲಿ
ಒಯ್ಯನಾವಿರ್ಭವಿಪನಮರ ತೇಜಸ್ವಿ ರವಿ!
ಹೃದಯ ಪ್ರಪಾತಕ್ಕೆ ಧುಮುಕುತಿದೆ ರಸದ ಧುನಿ
ಭಾವ ಜಲಪಾತದಿಂ! ಮೌನವೆ ಮಹಾಸ್ತೋತ್ರಂ"

"ಸೌಂದರ್ಯೋಪಾಸಕ ಏರುವ ಗುರಿ –ಈ ಶಿವದ ನೆಲೆ. ಸೌಂದರ್ಯದಲ್ಲಿ ಪರಮಸತ್ಯರೂಪಿಯಾದ ಶಿವನನ್ನು ಕಾಣುವುದೇ ಈ ಸೌಂದರ್ಯೋಪಾಸನೆಯ ಗುರಿ. ಇಲ್ಲಿ ಬರಿಯ ಕವಿಯಾಗದೆ ಅನುಭಾವಿಯಾಗುತ್ತಾರೆ." (ಅಲ್ಲೆ ಪು. ೭೦೬)

ಈ ಭೂಮ ಭವ್ಯ ಸೌಂದರ್ಯದಾರಾಧನೆಗೆ!
ನೋಡ ಸುಮ್ಮನೆ ನೋಡ; ಮಾತಿಲ್ಲದೆಯೆ ನೋಡ:
ಈ ದೃಶ್ಯ ಮಾಧುರ್ಯದಿದಿರಿನಲಿ ಕರ್ಕಶಂ
ಕವಿಯ ವಾಣಿಯು ಕೂಡ!
ನೋಡು, ಸುಮ್ಮನೆ ನೋಡು;
ದೃಶ್ಯದಲ್ಲಿ ತಲ್ಲೀನನಪ್ಪನ್ನೆಗಂ ನೋಡು!
ಅದರೊಳೊಂದಾಗುವುದೇ ಪರಮ ರಸಿಕತೆ; ಅದಕೆ
ಮಿಗಿಲಹ ರಸಾನಂದ ಮತ್ತೆ ಬೇರೊಂದಿಲ್ಲ!

(ಅಲ್ಲೆ ಪು. ೭೦೬)

ಎಂದು ಕವಿ ಹಾಡುತ್ತಾ ಹಾಡುತ್ತಾ ಆ ಆನಂದದಲ್ಲಿ ತಲ್ಲೀನರಾಗಿ ತನ್ಮಯರಾಗಿ ಕೊನೆಗೆ ತಾನೇ ಅದರೊಳೊಂದಾಗಿ ತನ್ನನ್ನು ಇಲ್ಲಗೈದುಕೊಳ್ಳುವುದೇ, ತಮ್ಮ ಜೀವಿತದ ಪರಮಗುರಿ ಎಂದು ಭಾವಿಸುತ್ತಾರೆ;

ಇಂತಹ ಸುಂದರ ಪ್ರಾತಃಕಾಲದಿ
ಜೀವಿಸುವುದಕ್ಕಿಂತಲೂ ಬೇರೆಯೇ ಗುರಿ
ಜೀವಕೆ ಬೇಕಿಲ್ಲ;
ಚಿರ ಸೌಂದರ್ಯ ಸಂಪದವಿದ್ದರೆ
ಧರ್ಮಕೆ ಚ್ಯುತಿಯಿಲ್ಲ,
ಮತಿಯಿಲ್ಲ;
ರಸಾನುಭೂತಿಯ ರಸಪಥವಲ್ಲದೆ
ಸತ್ಯಕೆ ಗತಿಯಿಲ್ಲ!

(ಅಲ್ಲೆ, ಪು. ೬೩೯)

ಎಂದು ಸಾರುತ್ತಾರೆ.

ಮುಂದೆ ಸೃಷ್ಟಿಯ ಸಚರಾಚರ ಸಮಸ್ತವೂ ಚೇತನಯುಕ್ತವಾದುದು, ಇದು ಜಡ, ಇದು ಚೇತನ ಎಂಬ ಭೇದ ಭಾವವು ಸಲ್ಲದು ಎಂಬ ಸುಂದರ ತತ್ತ್ವವು ಈ ಸೂರ್ಯೋದಯ ಗೀತಗಳಲ್ಲಿ ಮೇಲಿಂದ ಮೇಲೆ ಪ್ರಕಟಗೊಂಡಿರುವುದನ್ನು ಕಾಣುತ್ತೇವೆ. ಈ ತಾತ್ತ್ವಿಕ ದೃಷ್ಟಿ ಈ ಉದಯಗೀತೆಗಳ ಮತ್ತೊಂದು ವೈಶಿಷ್ಟ್ಯವೆಂದು ಹೇಳಬಹುದು. ಈ ಸಾಲುಗಳನ್ನು ಗಮನಿಸಿ;

ಕಲ್ಲಲಿ ಮಣ್ಣಲಿ, ಹುಲ್ಲಲಿ, ಹುಡಿಯಲಿ,
ನೀರಿನ ಹನಿಯಲಿ, ಬೆಂಕಿಯ ಕುಡಿಯಲಿ
ನನ್ನಲಿ, –ಎಲ್ಲಿಯು ಚೈತನ್ಯ!

(ಅಲ್ಲೆ ಪು. ೬೩೩)

ಎಂಬ ಮಾತುಗಳಲ್ಲಿ ಕವಿ ಅದ್ವೈತಿಯಾಗಿರುವುದನ್ನು ಕಾಣಬಹುದಾಗಿದೆ. 'ಕ್ರೌಂಚ ಪಕ್ಷಿ' ಎಂಬ ಕವನವಂತೂ ಕವಿಯ ಉತ್ಕೃಷ್ಟ ಕಲ್ಪನೆಯನ್ನು ಅದ್ಭುತವಾಗಿ ಸೆರೆಹಿಡಿಯುತ್ತದೆ. ಪುಷ್ಯಪ್ರಭಾತ ರವಿಯ ಉದಯಪೂರ್ವದ ಅರುಣಕಾಂತಿ ಲಲಿತಾದ್ರಿಯ ಹಿಂದಣ ದಿಶಾಭಿತ್ತಿಯಲ್ಲಿ ಹರಡುತ್ತಿರುವುದನ್ನು ನೋಡುತ್ತಾ ನಿಂತಿಹ

ಕವಿಗೆ ಆಕಾಶದಲ್ಲಿ ನೀಳವಾಗಿ ಹೆಣೆದ ಒಂದು ಜಡೆಯ ಹಾಗೆ ಕ್ರೌಂಚ ಪಕ್ಷಿಗಳ ಸಾಲು ಕಾಣಿಸಿತು. 'ನಭೋ ನೀಲ ವಾರಿಧಿಯ ವೀಚಿಮಯ ವಿಸ್ತಾರದಲಿ ಮೀಸುತಿರುವೊಂದು ತಿಮಿರದ ಸಲಾಕೆಯಂದದ ಕರಿಯುರಗನಂತೆ!' ಆ ಕೊಂಚೆಗೆರೆ ತೋರಿತು. ಆ ಕೊಂಚೆವಿಂಡಿನ ಸಾಲು ದೃಶ್ಯಪಥದಿಂದ ದೂರ ದೂರವಾಗಿ ಹಾರಿ ಹಾರಿ ಏನಿಲ್ಲವಾಗಿ ಹೋದಾಗ ಕವಿಯ ಆತ್ಮವೂ ಆ ದೃಶ್ಯದಲ್ಲೇ ತಲ್ಲೀನವಾಗುತ್ತಿರುವಾಗ ಆಯಿತು ಸೂರ್ಯೋದಯ! ಅದು ಎಂಥ ಶಿವೋದಯ ಕವಿಗೆ! ಇಂಥ ದಿವ್ಯ ದರ್ಶನ ಪಡೆದ ತಮ್ಮ ಭಾಗ್ಯವನ್ನು ಕವಿ ಮತ್ತೆ ಮತ್ತೆ ಮೆಲುಕು ಹಾಕುತ್ತಾರೆ.

'ಮನುಷ್ಯನೇ ನಿರ್ಮಿಸುವ ಕಲೆಗಿಂತ ಪ್ರಕೃತಿ ನಿರ್ಮಿಸುವ ಕಲೆ ದೊಡ್ಡದು' ಎಂಬುದನ್ನು ಅರಿತವರು ಕುವೆಂಪುರವರು. 'ವಿಶ್ವಕವಿವರನ ಕಾವ್ಯಂ ಭುವನವಿದು' ಎಂದು ಹೇಳುತ್ತಾರೆ. ಈ ಭಾವದ ವಿಸ್ತಾರ ಅನೇಕ ಸೂರ್ಯೋದಯ ಗೀತೆಗಳ ಸಾರವಾಗಿದೆ. ಒಟ್ಟಾರೆ ಈ ಸೂರ್ಯೋದಯ ಗೀತೆಗಳ ಪರಿಶೀಲನೆಯಿಂದ ಕುವೆಂಪುರವರು ಉದಯರವಿಯ ಉಪಾಸಕರಷ್ಟೇ ಅಲ್ಲ 'ರವಿದರ್ಶನವೇ ಶಿವದರ್ಶನ' ಎಂಬ ತತ್ತ್ವವನ್ನು ತಮ್ಮ ಗೀತೆಗಳಲ್ಲಿ ಪ್ರಕಟಪಡಿಸುವುದರ ಜೊತೆಗೆ ಕೇವಲ ಸೌಂದರ್ಯೋಪಾಸನೆಯೆ ಕವಿ ಗುರಿಯಲ್ಲ, ಸರ್ವರೂ ರಸದ್ರಷ್ಟಾರರಾಗಬೇಕು. 'ದರ್ಶನ' ಭಾಗ್ಯವನ್ನು ಪಡೆಯಬೇಕು. ಕಾವ್ಯದ ಆಸ್ವಾದನೆಗೆ ಸೌಂದರ್ಯ ಸಾಧನೆಗೆ ಪ್ರಕೃತಿಯ ಆರಾಧನೆಗೆ ಮುನ್ನುಗ್ಗಬೇಕು, ಹಾಗೆ ಪ್ರಕೃತಿಯ ಸತ್ಯ ಶಿವಮಯ ಸೌಂದರ್ಯವನ್ನು ಅರಿಯುತ್ತಾ ಆತ್ಮವಿಕಾಸವನ್ನು ಹೊಂದಬೇಕು ಎಂಬುದು ಕವಿಯ ಆಶಯವೆಂದು ಸ್ಪಷ್ಟವಾಗಿ ಹೇಳಬಹುದು. ಒಂದು ಕಡೆ ಎಚ್.ಎಸ್. ರಾಘವೇಂದ್ರರಾವ್ ಅವರು ಪು.ತಿ.ನ.ರವರ ಕವಿತೆಗಳಲ್ಲಿನ ಕತ್ತಲಿನ ವ್ಯಾಮೋಹವನ್ನು ಕುರಿತು ಹೇಳುತ್ತಾ 'ಕನ್ನಡದಲ್ಲಿ ಬೇಂದ್ರೆ ಬೆಳಕಿನ ಕವಿಯಾದರೆ, ಪು.ತಿ.ನ. ಕತ್ತಲಿನ ಕವಿ, ಆದರೆ ಇವೆರಡನ್ನೂ ಅವರು ಕ್ರಮವಾಗಿ ಚೈತನ್ಯದ ಮೂಲವಾಗಿ ಪರಿಗಣಿಸುತ್ತಾರೆ' ಎಂದಿದ್ದಾರೆ. ಆದರೆ ನಾವಿಲ್ಲಿ ಕುವೆಂಪುರವರ 'ಸೂರ್ಯೋದಯ ಗೀತೆ'ಗಳನ್ನು ಪರಿಶೀಲಿಸಿದಾಗ ಕುವೆಂಪು ಸಹ ಬೆಳಕಿನ ಕವಿಯಾಗಿದ್ದರು ಎಂದು ಸ್ಪಷ್ಟವಾಗಿ ಹೇಳಬಹುದಾದ್ದರಿಂದ ಈ ಹೇಳಿಕೆಯಲ್ಲಿ ಸ್ವಲ್ಪ ಮಾರ್ಪಾಡು ಮಾಡಿಕೊಂಡು ಒಪ್ಪಿಕೊಳ್ಳಬಹುದು. "ಕುವೆಂಪು, ಬೇಂದ್ರೆ ಬೆಳಕಿನ ಕವಿಗಳಾದರೆ, ಪು.ತಿ.ನ. ಕತ್ತಲಿನ ಕವಿ, ಆದರೆ ಇವೆರಡನ್ನೂ ಅವರು ಚೈತನ್ಯದ ಮೂಲವಾಗಿ ಪರಿಗಣಿಸುತ್ತಾರೆ."

ಒಟ್ಟಾರೆ ಕುವೆಂಪುರವರ ಪ್ರಕೃತಿಗೀತೆಗಳಲ್ಲಿ ಸೂರ್ಯೋದಯದ ಗೀತೆಗಳೇ ಹೆಚ್ಚು ಮಹತ್ವ ಪಡೆದುಕೊಂಡಿವೆ. ಏಕೆಂದರೆ "ಕುವೆಂಪು ಕಾವ್ಯದ ಮೊದಲ ನೆಲೆಯಾದ ನಿಸರ್ಗಪರ ಕವಿತೆಗಳ ಸಂದರ್ಭದಲ್ಲಿ, ಅವರು ತಮ್ಮ ಧ್ಯಾನ ಸ್ಥಿತಿಯ ಮೂಲಕ ನಿಸರ್ಗದೊಂದಿಗೆ ಏರ್ಪಡಿಸಿಕೊಳ್ಳುವ ಸಂವಾದ ಹಾಗೂ ತಲ್ಲೀನತೆಯಲ್ಲಿ ಅವರು ಪಡೆಯುವ ಅದ್ವೈತಾನುಭವದಲ್ಲಿ ಸೌಂದರ್ಯನಿಷ್ಠೆ ಹಾಗೂ ವೈಚಾರಿಕತೆಯೂ ಸಮ್ಮಿಳಿತವಾಗಿರುವುದನ್ನು ಗುರುತಿಸಬಹುದು. ಅವರ ಬಹುತೇಕ 'ಸೂರ್ಯೋದಯ

ಕವಿತೆ'ಗಳಲ್ಲಿ ಈ ಅನುಭವದ ಹಲವು ಹಂತಗಳನ್ನು ಕಾಣಬಹುದು. ಹಾಗೆ ನೋಡಿದರೆ ಕುವೆಂಪು ಅವರಷ್ಟು 'ಸೂರ್ಯೋದಯ'ವನ್ನು ಕುರಿತ ಕವಿತೆಗಳನ್ನು ಬರೆದ ಕವಿ ಮತ್ತೊಬ್ಬರಿಲ್ಲ. ಸೂರ್ಯೋದಯ 'ನವೋದಯ'ದ ಬಹು ಮುಖ್ಯವಾದ ರೂಪಕವೂ ಹೌದು. ಅಷ್ಟೆ ಅಲ್ಲ, ಹೊಸಗನ್ನಡ ಕಾವ್ಯವನ್ನು 'ರಮ್ಯ ಕಾವ್ಯ', 'ರೋಮ್ಯಾಂಟಿಕ್ ಕಾವ್ಯ' ಎಂದು ಸಾಹಿತ್ಯ ವಿಮರ್ಶಕರು ತಪ್ಪುತಪ್ಪಾಗಿ ಕರೆಯುತ್ತಿದ್ದ ಕಾಲದಲ್ಲಿ ಇಡೀ ಭಾರತೀಯ ಪುನರುಜ್ಜೀವನಕ್ಕೆ ಅನ್ವಯವಾಗಬಹುದಾದ 'ನವೋದಯ' ಎಂಬ ಹೆಸರನ್ನು ಕೊಟ್ಟವರು ಕುವೆಂಪು. 'ಸೂರ್ಯೋದಯ'ದಂಥ ಪ್ರಚಂಡ ಚೈತನ್ಯೋತ್ಕರ್ಷವನ್ನು ಕುರಿತ ಕವಿತೆಗಳ ಸಂದರ್ಭದಲ್ಲಿನ ಸೌಂದರ್ಯಾನುಭವದ ಹಂತದಲ್ಲಿಯೇ 'ಜಡ' ಮತ್ತು 'ಚೈತನ್ಯ'ಗಳ ವ್ಯತ್ಯಾಸ, ಏಕತೆಗಳನ್ನು ಕುರಿತು ಕಾವ್ಯದ ಚೌಕಟ್ಟಿನಲ್ಲಿ ಕುವೆಂಪು ನಡೆಸುವ ಚರ್ಚೆ ಅನೇಕ ದೃಷ್ಟಿಗಳಿಂದ ಅರ್ಥಪೂರ್ಣವಾದುದು"(ಜಿ.ಎಸ್. ಶಿವರುದ್ರಪ್ಪ, ೨೦೦೦:೨೭) ಎಂಬ ಮಾತಿನಲ್ಲಿ ತಥ್ಯವಿದೆ ಎಂಬುದು ಸೂರ್ಯೋದಯ ಗೀತೆಗಳ ಒಟ್ಟಾರೆ ಪರಿಶೀಲನೆಯಿಂದ ಸುವ್ಯಕ್ತವಾಗಿದೆ. ಒಟ್ಟಿನಲ್ಲಿ ಕುವೆಂಪುರವರ ಪರಮತತ್ತ್ವ 'ಪ್ರಕೃತಿಯಾರಾಧನೆಯೇ ಪರಮನಾರಾಧನೆ' ಎಂಬುದು ಇಲ್ಲಿಯೂ 'ರವಿವದನವೇ ಶಿವಸದನ' ಎಂಬ ಕಾಣ್ಕೆಯಲ್ಲಿ ಸ್ಪಷ್ಟಗೊಂಡಿದೆ.

ಪರಾಮರ್ಶನ ಗ್ರಂಥಗಳು

೧ ಕುವೆಂಪು ೨೦೦೦ ಕುವೆಂಪು ಸಮಗ್ರ ಕಾವ್ಯ ಸಂಪುಟ ೧
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

೨ ಪರಮೇಶ್ವರ ಭಟ್ಟ ಎಸ್.ವಿ. ೧೯೯೫ ರಸಋಷಿ ಕುವೆಂಪು
ಪ್ರಸಾರಾಂಗ
ಮಾನಸಗಂಗೋತ್ರಿ, ಮೈಸೂರು

೩. ಪ್ರಭುಶಂಕರ ೧೯೬೬ ಕನ್ನಡದಲ್ಲಿ ಭಾವಗೀತೆ
ಡಿ.ವಿ.ಕೆ. ಮೂರ್ತಿ ಮೈಸೂರು
೩ನೇ ಮು ೨೦೦೦

೪ ರಾಘವೇಂದ್ರರಾವ್ ಎಚ್.ಎಸ್. ೧೯೯೫ ಹಾಡೆ ಹಾದಿಯ ತೋರಿತು
ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು

೫ ಶಿವರುದ್ರಪ್ಪ ಜಿ.ಎಸ್. ೧೯೯೯ ಸೌಂದರ್ಯ ಸಮೀಕ್ಷೆ
ಕಾಮಧೇನು ಪ್ರಕಾಶ ಸಂಸ್ಥೆ ಬೆಂಗಳೂರು

೬ ಸಿ.ಪಿ.ಕೆ. ೧೯೭೨ ಸಾಹಿತ್ಯ ಮನನ
ಶಾರದಾ ಮಂದಿರ, ಮೈಸೂರು

ಶಿವರಾಮ ಕಾರಂತರ 'ಕರುಳಿನ ಕರೆ' ಮತ್ತು ಜೀವನ ಮೌಲ್ಯಗಳು

ಎಂ. ಬೈರಪ್ಪ

ಬದುಕಿನ ಅತ್ಯಮೂಲ್ಯ ಮೂಲದ್ರವ್ಯ ಪ್ರೇಮ. "ಮಾನವನ ಬಾಳು ತೃಪ್ತಿ ಪಡೆಯಬಹುದಾದ, ಸಂತೋಷಗೊಳ್ಳಬಹುದಾದ ವಿಧಾನಗಳು ಹಲವು. ನೋವುಗೊಳ್ಳಬಹುದಾದ ಪ್ರಸಕ್ತಿಗಳೂ ಕಡಿಮೆಯಿಲ್ಲ. ಸಂತೋಷಕಾರಕ ವಸ್ತುಗಳಲ್ಲಿ ಪ್ರೇಮವೆಂಬುದು ಅತ್ಯಮೂಲ್ಯ ವಸ್ತುವೆಂದು ನನ್ನ ಭಾವನೆ. ಅದಿಲ್ಲದ ಜೀವನವೇ ಬರಡು. ಅದನ್ನು ಕಳೆದುಕೊಂಡ ವ್ಯಕ್ತಿ ನೋವಿಗೂ ಗುರಿಯಾಗುತ್ತಾನೆ. ಮಾನವತೆ (ವಿಶಾಲಿಸಿ) ದೈವಿಕತೆಯನ್ನು ಹೊಂದುವುದು ಸಾಧ್ಯವಿದ್ದರೆ, ಅದು ಪ್ರೀತಿಸಬಲ್ಲ ಗುಣದಿಂದ. ಈ ಗುಣ ಬೆಳೆಯಲು ನೆಲ, ಕಾಲ, ಸಂಪತ್ತು ಇವುಗಳ ಅನುಕೂಲತೆಗಳಾಗಲಿ, ಅಂತರ, ಅಡಚಣೆಗಳಾಗಲೀ ಇಲ್ಲ. ನೆಲ, ಕಾಲ, ಸಂಪತ್ತು ಇವುಗಳು ತಂದೊಡ್ಡುವ ಅಡಚಣೆಗಳ ಹಿನ್ನೆಲೆಯಲ್ಲಿ ಪ್ರೇಮದ ವೈಖರಿ ಮತ್ತಷ್ಟು ಹೆಚ್ಚೀತೆ ವಿನಾ ಕಡಿಮೆಯಾಗಿ ಕಾಣಲಾರದು"(ಶಿವರಾಮ ಕಾರಂತ, ೧೯೪೯:೩). ಇಂತಹ ಪ್ರೇಮವು ಮಾತೃಪ್ರೇಮ, ಪಿತೃಪ್ರೇಮ, ಸೋದರಪ್ರೇಮ, ಮಿತ್ರಪ್ರೇಮ, ಸ್ವದೇಶಪ್ರೇಮ, ಪ್ರಣಯ ಮುಂತಾದವುಗಳಾಗಿ ಹಲವು ನೆಲೆಗಳಿಂದ ಬೆಳೆದರೂ ಅಂತಿಮವಾಗಿ ಜೀವನಪ್ರೇಮ, ಜೀವಪ್ರೇಮವಾಗಿಯೇ ನಿಲ್ಲುತ್ತದೆ. ಇಂತಹ ಜೀವನಪ್ರೇಮಿ–ಜೀವಪ್ರೇಮಿಗಳ ಕರುಳಿನ ಮೌಲ್ಯೀಕೃತ ಮಹಾಗಾಥೆಯೇ 'ಆಧುನಿಕ ಋಷಿ' ಎಂದೇ ಖ್ಯಾತಿ ಹೊಂದಿದ್ದ ಕೋಟ ಶಿವರಾಮ ಕಾರಂತರ 'ಕರುಳಿನ ಕರೆ' ಕಾದಂಬರಿ (೧೯೪೯).

'ಕರುಳಿನ ಕರೆ' ಕಾದಂಬರಿ ಮೂರು ತಲೆಮಾರುಗಳು ಮುಖಾಮುಖಿಯಾಗುವ ಕತೆ. ಒಂದು ತಲೆಮಾರಿನೊಳಗೆ, 'ಪ್ರೀತಿಯನ್ನು ಪಡೆದೂ ಪ್ರೀತಿಯನ್ನು ಅರಿಯದ' ಯಾರೋ ಒಬ್ಬಿಬ್ಬರು ತಂದೊಡ್ಡುವ ಕಷ್ಟಗಳ ಪರಂಪರೆಯು ಮುಂದಿನ ತಲೆಮಾರುಗಳಿಗೂ ಪಿತ್ರಾರ್ಜಿತವೆಂಬಂತೆ ಅಪ್ಪಿಕೊಳ್ಳುತ್ತದೆ. ಹೀಗೆ ಕಷ್ಟಗಳ ಪರಂಪರೆಯು

ಅಪ್ಪಿಕೊಂಡರೂ ಮೌಲ್ಯವಿರುವೆಡೆ ಜೀವನವು ಸ್ಥಗಿತಗೊಳ್ಳುವುದಿಲ್ಲ. ಪರಂಪರಾನುಗತವಾದ ಹಾಗೂ ಕಾಲಾನುಕ್ರಮದ ತಮ್ಮ ಅನುಭವಾತ್ಮಕ ಜೀವನಮೌಲ್ಯಗಳಿಂದ ಬದುಕು ಕಟ್ಟಿಕೊಳ್ಳುತ್ತಾ ತಲೆಮಾರುಗಳು ತಲೆಯೆತ್ತಿ ನಿಲ್ಲುತ್ತವೆ. ಇಂತಹ ಮೂರು ತಲೆಮಾರುಗಳನ್ನು 'ಕರುಳಿನ ಕರೆ' ಕಾದಂಬರಿಯು ಮುಖಾಮುಖಿಯಾಗಿಸಿ ಮೈದುಂಬಿಕೊಂಡಿದೆ.

ಬೆಟ್ಟಂಪಾಡಿ ಸುಬ್ರಾಯರ ನಾದಿನಿ–ಹೆಂಡತಿಯ ತಂಗಿ– ಗಂಗೆಗೆ ಬಂದ ಕಷ್ಟ ನಿವಾರಣೆಗಾಗಿ ಅವರ ಹೆಂಡತಿಯಾದ ಭಾಗೀರಥಿ ತನ್ನ ಗಂಡನಿಂದ ಕೊಡಿಸಿದ ಸಾಲವೇ ಕಷ್ಟಪರಂಪರೆಯ ಚಾಲಕ ಶಕ್ತಿಯಾಗುತ್ತದೆ. ವರ್ಷಗಳು ಕಳೆದು ಮೂರು ಆವೃತ್ತಿ ನೋಟು ಬರೆಸಿದರೂ ಹಣ ಬರಲಿಲ್ಲವೆಂದು ಸುಬ್ರಾಯರು ಬೇಸರಗೊಂಡರು. ಗಂಗೆಯ ಗಂಡ ಹಿರಣ್ಯನು ಯಾತ್ರೆ ಮುಗಿಸಿ ಬಂದು ಕಾಶೀ ಸಮಾರಾಧನೆಯನ್ನು ಏರ್ಪಡಿಸಿ ಊಟಕ್ಕೆ ಕರೆದಾಗ, ಸುಬ್ರಾಯರು ಸಮಾರಾಧನೆಯ ಮನೆಗೆ ಹೋಗಿ ಅಸಲು ಬಡ್ಡಿ ಸೇರಿ ಹತ್ತು ಸಾವಿರ ಕೊಡುವೆನೆಂದು ಹಿರಣ್ಯನು ಭಾಷೆ ಕೊಡದಿದ್ದರೆ ತಾವು ಊಟಕ್ಕೆ ಏಳುವುದಿಲ್ಲ ಎಂದು ಹಠ ಹಿಡಿದರು. ಇದರಿಂದ ಬ್ರಾಹ್ಮಣರ ಊಟವು ನಡೆಯದೆ ಸಂಭ್ರಮದ ಮನೆ ಸೂತಕದ ಮನೆಯಾಗುತ್ತದೆ. ಪರಿಣಾಮವಾಗಿ ಭಾಗೀರಥಿಯು ಮನೆಬಿಟ್ಟು ಬರುತ್ತಾಳೆ. ತಾಯಿಯನ್ನು ಅರಸುತ್ತಾ ಕಿರಿಮಗ ಶ್ಯಾಮನೂ ಬರುತ್ತಾನೆ. ಭಾಗೀರಥಿಯ ಅಣ್ಣ ಸೋಮನಾಥಯ್ಯನ ಆಸರೆಯಲ್ಲಿ ಭಾಗೀರಥಿ, ಗಂಗೆಯ ಕುಟುಂಬ, ವೆಂಕಟಮ್ಮನ ಕುಟುಂಬ ಬದುಕಲು ಯತ್ನಿಸುತ್ತಾರೆ. ಧನಲೋಭಿಯಾದ ಸುಬ್ರಾಯರ ಹಠದ ಮೇಲಾಟದಿಂದ ಗಂಗೆಯ ಗಂಡ ಹಿರಣ್ಯ ಸಾಯುತ್ತಾನೆ. "ಎಲ್ಲಿಗೆ ಹೋಗುತ್ತಾರೆ ನೋಡುವ, ಇನ್ನು ನನ್ನ ದೃಷ್ಟಿ ಬೀಳದಿರುವಲ್ಲಿಗೆ ಹೋಗಿ ಬಾಳಬೇಕು. ಬೀಳುವ ಊರಲ್ಲಿ ಎಂದೂ ಅವರನ್ನು ಇರಗೊಡಿಸಲಾರೆ...." (ಮಾಲಿನಿ ಮಲ್ಯ ಬಿ. ೨೦೦೨:೫೦) ಎನ್ನುವಷ್ಟರ ಮಟ್ಟಿಗೆ ಸುಬ್ರಾಯರು ಅಮಾನವೀಯರಾಗುತ್ತಾರೆ. ಇದಕ್ಕೆ ವಾಸುದೇವಯ್ಯನ ಕಾರಸ್ಥಾನದ ಮೌಲ್ಯಹೀನತೆಯೂ ಸೇರಿ ಉಳಿದವರ ಬದುಕು ಕಷ್ಟಕರವಾಗುತ್ತದೆ. ಆದರೂ ಈ ತಲೆಮಾರಿನ ಭಾಗೀರಥಿ, ಗಂಗೆ, ವೆಂಕಮ್ಮ ಮುಂತಾದವರು ಕಾಪಾಡಿಕೊಂಡು ಜೀವಿಸಿದ 'ತ್ಯಾಗ', 'ಸಹನಶೀಲತೆ', 'ಮಾತೃತ್ವ', 'ಮಾನವೀಯ ಅಂತಃಕರಣ', 'ಋಣತ್ವ' 'ಕಾಯಕ' ಮುಂತಾದ ಜೀವನಮೌಲ್ಯಗಳಿಂದ ಬದುಕು ಸಹನೀಯವಾಗುತ್ತ ಹೋಗುತ್ತದೆ.

ಕೇವಲ ಹಣಕ್ಕಾಗಿಯೇ ಬದುಕಿದ ಸುಬ್ರಾಯರ ಮೂರ್ಖತನ, ಲೋಭಿತನಗಳು ಮನೆಗಳನ್ನು ಒಡೆದ ಮೇಲೆ, ಎರಡನೆಯ ತಲೆಮಾರಿನ ಶಂಕರ–ನಾರಾಯಣ–ಶ್ಯಾಮರಲ್ಲಿ ಅವರನ್ನು ಒಂದುಗೂಡಿಸುವ ಮಧುರಬಾಂಧವ್ಯವಾದರೂ ಉಳಿದಿರುವುದಿಲ್ಲ. ಅವರು ಬೇಗನೆ ದೂರವಾಗುತ್ತಾರೆ. ತಾಯಿಯನ್ನು ಬಿಟ್ಟಿರಲಾರೆನೆಂದು ಓಡಿಬಂದ ಶ್ಯಾಮ ತಾರುಣ್ಯ ಬಲಿತಂತೆ ಹಲವು ವ್ಯಸನಗಳಿಗೆ ಬಲಿಯಾಗುತ್ತಾನೆ. ಸೋದರಮಾವನ ಮನೆಯಲ್ಲಿ, ಅಣ್ಣತಂಗಿಯರ ಪ್ರೀತಿಯೇ ತುಂಬಿರುವ ಮನೆಯ

ವಾತಾವರಣದಲ್ಲಿ ಬೆಳೆದು ಅಂತಃಕರಣವನ್ನು ಬೆಳೆಸಿಕೊಂಡ ಲಕ್ಷ್ಮಣನು ಸುಬ್ರಾಯರ ಜೊತೆಗೆ ತಾನು ಜಗಳವಾಡಿದಾಗ, ಅವರನ್ನು ತಾನೇ ಕೊಂದೆನೆಂದು ಗಾಬರಿಯಾಗಿ ಓಡಿಹೋಗುತ್ತಾನೆ. ಉಡುಪಿ ಕೃಷ್ಣಯಾತ್ರೆಗೆ ಬಿಜಾಪುರದಿಂದ ಬಂದ ಬಿಂದೂರಾಯ ಹಾಗೂ ಭಾಗ್ಯಲಕ್ಷ್ಮಿ ಎಂಬ ದಂಪತಿಗಳ ಸೇವೆಯನ್ನು ಲಕ್ಷ್ಮಣನು 'ಮಾನವೀಯ ಗಣಿ'ಯಾಗಿ ಕೈಗೊಳ್ಳುತ್ತಾನೆ. ಭಾಗ್ಯಲಕ್ಷ್ಮಿಯವರು ನ್ಯುಮೋನಿಯಾ ಬೇನೆಗೆ ತುತ್ತಾಗಿದ್ದಾಗ 'ಕೃಷ್ಣ'ನೆಂದು ನಾಮ ಬದಲಿಸಿ ಹೇಳಿಕೊಂಡು ಲಕ್ಷ್ಮಣನು ಅವರ ಸೇವೆಗೈಯ್ಯುತ್ತಾನೆ. ಅಡುಗೆ ಮಾಡುವ ಕೆಲಸದ ಜತೆಗೆ ಆಕೆಗೆ ಶಾಖಕೊಡುವುದು, ಕಫ ಎತ್ತಿ ಬಿಸಾಡುವುದು ಮಾತ್ರವಲ್ಲ ಮಲ–ಮೂತ್ರವನ್ನು ಎತ್ತಿ ಹಾಕುವ ಕೆಲಸವನ್ನು ಮಾಡುತ್ತಾನೆ. ಪ್ರತಿಯೊಂದು ಕೆಲಸಕ್ಕೂ ತಾನಾಗಿ ಮುಂದುವರಿದು ಬಂದು ಅಕ್ಕರೆಯಿಂದ 'ಏನು ಬೇಕು' 'ಏನು ಬೇಕು' ಎಂದು ಕೇಳಿ, ಸೇವೆ ಮಾಡುತ್ತಾನೆ. ಈ ಸೇವೆಯ ಫಲವಾಗಿ ಬೇನೆ ಸಂಪೂರ್ಣವಾಗಿ ನಿವಾರಣೆಯಾಗುತ್ತದೆ. ಆಗ ಕೃಷ್ಣನ ಸೇವೆಯ 'ಋಣ'ದ ಭಾರ ಮಾತ್ರ ದಂಪತಿಗಳ ಮನಸ್ಸಿನಲ್ಲಿ ಹೊರೆಯಾಗಿ ನಿಲ್ಲುತ್ತದೆ. ಕೃಷ್ಣನಿಗೆ ೫೦ ರೂಪಾಯಿಗಳನ್ನು ಕೊಡಬೇಕೆಂದು ಮನಸ್ಸಿನಲ್ಲಿ ನಿಶ್ಚಯ ಮಾಡಿಕೊಂಡೂ "ನಮ್ಮ ಹೊಟ್ಟೆಯ ಮಕ್ಕಳು ಇಷ್ಟು ಕೆಲಸಮಾಡಲಾರವು. ಇದ್ದ ಒಬ್ಬ ಹುಡುಗ ಹೋದ ಮೇಲೆ ನಮಗೆ ಯಾರಿದ್ದಾರೆ? ಇವನನ್ನು ಸಾಕಬಹುದು..."(ಪು.೧೨೯) ಎಂದು ಅಭಿಪ್ರಾಯಪಟ್ಟ ಭಾಗ್ಯಲಕ್ಷ್ಮಿಯವರಿಗೆ ಕಳೆದುಕೊಂಡ ಮಗನ ನೆನವರಿಕೆ ಆಗಿ ಆತನೇ ಈತ ಎಂಬ ಭ್ರಮೆಯೂ ಹುಟ್ಟುತ್ತದೆ. ಕೊನೆಗೆ ಲಕ್ಷ್ಮಣನು ಕೃಷ್ಣಾಚಾರ್ಯನಾಗಿ ಬಿಂದೂರಾಯರ ಮನೆಯಲ್ಲಿ ಬೆಳೆಯತೊಡಗುತ್ತಾನೆ.

ಲಕ್ಷ್ಮಣನು ಕೃಷ್ಣನಾಗಿ ಸಾಗಿಸಿದ ಹಲವು ವರ್ಷಗಳು ಅವನ ಬಾಳಿನಲ್ಲಿ ಅವನೆಣಿಸದ ಎಷ್ಟೋ ಪರಿವರ್ತನೆಗಳನ್ನು ಉಂಟು ಮಾಡುತ್ತವೆ. ಅನಾಥನಾಗಿ ಊರು ಬಿಟ್ಟು ಹೊರಟ ವ್ಯಕ್ತಿ, ನಿರಕ್ಷರಕುಕ್ಷಿಯಾಗಿದ್ದವ, ನಾಲ್ಕಾರು ವರ್ಷಗಳ ಪ್ರಯತ್ನದಿಂದ ಮೆಟ್ರಿಕ್ ಪಾಸಾಗಿದ್ದು ಸೋಜಿಗದ ಕೆಲಸವಲ್ಲವಾದರೂ ಬಿಂದೂರಾಯರ ಮಗಳಾದ ಜಾನಕಿಯನ್ನು ವಿವಾಹವಾಗಿ ಸಂಪತ್ತಿಗೆ ಉತ್ತರಾಧಿಕಾರಿಯಾದುದು ಸೋಜಿಗವೇ. ಕಾದಂಬರಿಕಾರರೇ ಹೇಳುವಂತೆ, "ಇಲ್ಲಿ ಆತನ ಪ್ರಯತ್ನವೇನಿಲ್ಲ. ಆಗಂತುಕರಾಗಿ ದೊರೆತ ಆ ದಂಪತಿಗಳಿಗೆ 'ನಿಃಸ್ವಾರ್ಥ ಸೇವೆ' ಸಲ್ಲಿಸಿದುದರ ಫಲ ಅದು. ಅದರಿಂದಾದ 'ಸ್ನೇಹ'ವು 'ಋಣಾನುಬಂಧ'ವನ್ನು ಹೊಸೆಯಿತು. ಹೊಸೆದು, ಚಿರವಾದ ಆದರ, ಪ್ರೇಮಗಳನ್ನು ಕಲ್ಪಿಸಿ, ಆತ ತಮ್ಮಿಂದ ದೂರವಾಗಬಾರದು. ಎಂಬ ಬಂಧನವನ್ನೂ ಉಂಟುಮಾಡಿತು"(ಪು.೧೩೩). ಇಷ್ಟಾದರೂ ಲಕ್ಷ್ಮಣನ ಜೀವ ತನ್ನ ಮಾತೆಯನ್ನು ಮರೆತಿರಲಿಲ್ಲ. 'ಎಷ್ಟೆಷ್ಟು ಮರೆಯಲೆತ್ನಿಸಿದರೂ ಅಷ್ಟಷ್ಟು ಬಲಿಯುತ್ತದೆ; ಮಾತೃವಾತ್ಸಲ್ಯ"(ಅಲ್ಲೆ). ತನ್ನೆದೆಯ ಬಯಲಲ್ಲಿ ಆಲದ ಮರದಂತೆ ಬೆಳೆದ ತಾಯಿಮರದ ಬೇರನ್ನು ಎಣಿಸಿದಷ್ಟೂ ಅದು ಅನಂತವಾಗಿ ಕಾಣುತ್ತದೆ. ಬೇರುಗಳು ಬಲವಾಗಿ ಊರಿದಂತೆ ಕಾಣುತ್ತವೆ"(ಅಲ್ಲೆ). ಲಕ್ಷ್ಮಣನಿಗೆ ಅಂತರಂಗದಲ್ಲಿ ತಾಯಿಯ ನೆನಪು ಚಿರಸ್ಮರಣೀಯವಾಗಿ ಉಳಿಯುತ್ತದೆ. "ಅಯ್ಯೋ ಇನ್ನೆಷ್ಟು

ಕಾಲ, ಇನ್ನೆಷ್ಟು ವರ್ಷ, ಗಳಿಗೆ, ದಿನ ಎಣಿಸಿ ನಾನಿರಬೇಕು. ತಾಯನ್ನು ಕಾಣುವುದೆಂದು?... ತಾಯ ಕಾಲನ್ನು ಹಿಡಿದು, ಅವಳನ್ನಗಲಿದ ಅಪರಾಧವನ್ನು ಕ್ಷಮಿಸು ಎಂದು ಎನ್ನುವ ಗಳಿಗೆಯೂ ಬಾರದೆಹೋದರೆ ಹೇಗೆ ? ಇಲ್ಲ, ಯಾರನ್ನಾದರೂ ಕೇಳುತ್ತೇನೆ. ಊರಿನವರನ್ನು ಸಂಧಿಸುತ್ತೇನೆ. ತಾಯಿಯ ಇರವನ್ನು ವಿಚಾರಿಸುತ್ತೇನೆ. ವೇಷಾಂತರದಲ್ಲಾದರೂ ಹೋಗುತ್ತೇನೆ. ಅಂತೂ ಈ ಅಜ್ಞಾತ ಸಹಿಸದ್ದು" ಎಂದು ತನ್ನಷ್ಟಕ್ಕೇ ನಿರ್ಧರಿಸುತ್ತಾನೆ(ಪು.೧೩೪). ಇಂತಹ ಮಾತೃಪ್ರೇಮಿ-ಮಾನವಪ್ರೇಮಿ ಲಕ್ಷ್ಮಣನಂತೆ ತಾಯಿ ವೆಂಕಮ್ಮನಿಗೂ ಅವರ ಮಾತೃತ್ವದೊಳಗಿನ ಪುತ್ರಪ್ರೇಮವೂ ಅಗಾಧವಾದುದು. ಆಕೆ ಭಾಗೀರಥಿಯೊಂದಿಗೆ, "...ಲಕ್ಷ್ಮಣನನ್ನು ಕಾಣಬೇಕು, ಸಾಯುವ ಮೊದಲಾದರೂ ಕಾಣಬೇಕು. ಅವನೇನೂ ಆಗಿರಲಿ, ಎಲ್ಲಿಯೂ ಇರಲಿ; ಬದುಕಿ, ಸುಖವಾಗಿದ್ದಾನೆ ಎಂದು ಕೇಳಿದರೆ ಅಷ್ಟು ಸಂತೋಷವಾಗುತ್ತಿತ್ತು.... ಮಗು ಹೋಗಿ ಹದಿನಾಲ್ಕು ವರ್ಷವಾಗುತ್ತದೆ. ಪಾಂಡವರ ವನವಾಸಕ್ಕಿಂತ ದೊಡ್ಡದಾಯಿತು. ನಿತ್ಯವೂ ದೇವರ ಮುಂದೆ ದೀಪ ಇರಿಸುವಾಗ, ನನ್ನ ಮಗುವಿನ ಚಿತ್ರವೇ ಕಾಣಿಸುತ್ತದೆ..." ಎಂದು ಅಳುತ್ತಾಳೆ(ಪು.೯೮). ಕಾಲಾನಂತರ ಲಕ್ಷ್ಮಣನ ಮಗನಾದ ಮಾಧವನು ತನ್ನ ಸ್ನೇಹಿತನಾದ ಗೋವಿಂದನೊಂದಿಗೆ ಪುತ್ತೂರಿನೆಡೆಗೆ ಬಂದು ತಂದೆಯ ಸೂಚನೆಯ ಮೇರೆಗೆ ವೆಂಕಮ್ಮನನ್ನು ಹುಡುಕಿ ಭೇಟಿಯಾಗುತ್ತಾನೆ. ಈ ಸಂದರ್ಭದಲ್ಲಿ ಮಾಧವನನ್ನು ಕಂಡ ವೆಂಕಮ್ಮನ ಮಾತೃಹೃದಯವಂತಿಕೆ ಮಾಧವನ ಮೈಯನ್ನು ತಬ್ಬಿಹಿಡಿದು, 'ನೀನು ನನ್ನ ಲಕ್ಷ್ಮಣನ ಮಗನಲ್ಲವೇ ?" ಎಂದು ಕಂಬನಿಗರೆಯುತ್ತಾಳೆ(ಪು.೧೫೯). "ಸಾಯುವ ಮೊದಲು ನಿನ್ನನ್ನು ಕಾಣುವ ಹಂಬಲದಲ್ಲೇ ಈ ಮುದುಕಿ ಜೀವ ಹಿಡಿದಿದ್ದಾಳೆ" ಎಂದು ಲಕ್ಷ್ಮಣನಿಗೆ ಹೇಳಲು ಮಾಧವನಿಗೆ ವೆಂಕಮ್ಮ ತಿಳಿಸುತ್ತಾಳೆ(ಪು.೧೬೧). ಹೀಗೆ ಮೂರನೇ ತಲೆಮಾರಿನ ಮಾಧವನವರೆಗೂ ತನ್ನ ಹಿಂದಿನ ತಲೆಮಾರುಗಳ ಮಾತೃತ್ವ ಮೌಲ್ಯವಾಗಲೀ, ಪುತ್ರತ್ವ ಮೌಲ್ಯವಾಗಲೀ, ಮಾನವತ್ವ ಮೌಲ್ಯವಾಗಲೀ ಕುಂದಿರುವುದಿಲ್ಲ. ಕೊನೆಗೆ ಈ ಮೌಲ್ಯಗಳು ಒಂದಾಗಿ ಕಟ್ಟಿಕೊಡುವುದು ಮಾಧವ ಹಾಗೂ ಶೀಲುವಿನ ಮೂರನೇ ತಲೆಮಾರಿನ ಪ್ರೇಮದ ಬದುಕನ್ನು. ಮೌಲ್ಯಗಳ ಮಹಾಯಾನದ ಬದುಕು ಪ್ರೇಮಪ್ರೇರಿತ ಬದುಕನ್ನು ಜೀವಂತವಾಗಿಸುತ್ತದೆ.

"ಕಾರಂತರಿಗೆ ಇಹ ಮುಖ್ಯ; ಇಹದ ಬದುಕು ಮುಖ್ಯ. ಬದುಕಿನೊಂದಿಗೆ ವ್ಯಕ್ತಿ ಅಥವಾ ವ್ಯಕ್ತಿಗಳು ಏರ್ಪಡಿಸಿಕೊಳ್ಳುವ ಸಂಬಂಧದ ಸ್ವರೂಪವನ್ನು ಶೋಧಿಸುವುದು ಹಾಗೂ ಆ ಶೋಧನೆಯ ಪ್ರಕ್ರಿಯೆಯಲ್ಲಿ ಬದುಕಿಗೆ ಮತ್ತು ಬದುಕಿನಲ್ಲಿ ಎದುರಾಗುವ ಸಮಸ್ಯೆ ಸನ್ನಿವೇಶಗಳಿಗೆ, ಅವು ಉಂಟು ಮಾಡುವ ಸಿಹಿ-ಕಹಿ ಅನುಭವಗಳಿಗೆ ವ್ಯಕ್ತಿ ಅಥವಾ ವ್ಯಕ್ತಿಗಳು ತೋರಿಸುವ ಪ್ರತಿಕ್ರಿಯೆ ಮುಖ್ಯ. ಆ ಮೂಲಕ ಆಯಾ ವ್ಯಕ್ತಿಗಳ ಬದುಕಿನ ಸಾರ್ಥಕತೆ ಅಸಾರ್ಥಕತೆಗಳನ್ನು ಕಲಾತ್ಮಕ ನೆಲೆಯಲ್ಲಿ ಕಾಣಿಸಲು, ವ್ಯಾಖ್ಯಾನಿಸಲು ಯತ್ನಿಸುವುದು ಕಾರಂತರ ರೀತಿ. ಏಕೆಂದರೆ, ಆಯಾ ವ್ಯಕ್ತಿಗಳು ತೋರಿಸುವ ಪ್ರತಿಕ್ರಿಯೆ ಅವರವರ ಸ್ವಂತದ ಬದುಕಿನ ಸುಖ-ದುಃಖ, ಶ್ರೇಯಸ್ಸು-

ಸೋಲುಗಳಿಗೆ ಮಾತ್ರ ಕಾರಣವಾಗದೆ ಅವರ ಜೊತೆಯಲ್ಲಿ ಬಾಳುವವರ, ಬಾಳಬೇಕಾದವರ, ಬಾಳಬಹುದಾದವರ ಸುಖ-ದುಃಖ ಶ್ರೇಯಸ್ಸು-ಸೋಲುಗಳಿಗೂ ಬಹುಪಾಲು ಕಾರಣವಾಗುತ್ತದೆ. ಅಂದರೆ ವ್ಯಕ್ತಿಯ ಬದುಕು ಸಾರ್ಥಕವಾಗುವುದು ಮತ್ತು ಸಮೂಹದ ಬದುಕು ಹಸನಾಗುವುದು ಬದುಕಿಗೆ ಮತ್ತು ಬದುಕಿನಲ್ಲಿ ಎದುರಾಗುವ ಸಮಸ್ಯೆಗಳಿಗೆ ವ್ಯಕ್ತಿ ಅಥವಾ ವ್ಯಕ್ತಿಗಳು ತೋರಿಸುವ ಪ್ರತಿಕ್ರಿಯೆಯನ್ನೇ ಅವಲಂಬಿಸಿರುತ್ತದೆ" ಎಂಬ ಜಿ.ಎಚ್. ನಾಯಕರ ಅಭಿಪ್ರಾಯ ಸಮಂಜಸವಾದುದು (೨೦೦೬:೨೮). ವೆಂಕಮ್ಮನಂತೆ ಭಾಗೀರಥಿಯು ತನ್ನೊಳಗೆ ತುಂಬಿಕೊಂಡು ತೋರುವ ಮಾತೃತ್ವ, ಕಾಯಕತ್ವ, ತ್ಯಾಗ, ಮಾನವೀಯ ಅಂತಃಕರಣ ಪ್ರತಿಕ್ರಿಯೆಗಳು ಹಸನಾದ ಬದುಕಿಗೆ ಅತ್ಯುತ್ತಮ ಜೀವನಮೌಲ್ಯಗಳಾಗುತ್ತವೆ. ಗಂಡನ ಲೋಭಿತನ, ಮೂರ್ಖತನದಿಂದ ನೊಂದು, ಅಡ್ಡದಾರಿ ಹಿಡಿದ ಶ್ಯಾಮನಿಂದ ನೊಂದು, ದಾಯಾದಿತ್ವದಿಂದ ಮರೆವ ಶಂಕರ-ನಾರಾಯಣರ ಬದುಕಿನಿಂದ ನೊಂದುಕೊಳ್ಳುತ್ತಾಳೆ. ಶ್ಯಾಮನಿಗೆ ವೆಂಕಮ್ಮನ ಮಗಳು ಸರಸಿಯನ್ನು ತಂದುಕೊಂಡದ್ದರಿಂದ, ಭಾಗೀರಥಿಯೊಂದಿಗೆ ಕಣ್ಣೀರು ಸುರಿಸಲು ಇನ್ನೊಂದು ಜೊತೆ ಕಣ್ಣುಗಳು ಮನೆಗೆ ಬಂದಂತಾಗುತ್ತದೆ ಅಷ್ಟೆ. ಭಾಗೀರಥಿಗೆ ಹೀಗೇಕಾಯಿತು ಎಂದು ಅರ್ಥವಾಗದು. "ನಾನು ಯಾರನ್ನು ಬಯ್ಯಬೇಕು? ನಾನೇನು ಅನ್ಯಾಯ ಮಾಡಿದ್ದೇನೆ? ನಾನು ಯಾರಿಗೆ ಏನೂ ಉಪಕಾರ ಮಾಡಿದವಳಲ್ಲ ಎಂಬುದು ನಿಜವಾದರೂ, ಉಪದ್ರ ಮಾಡಿಲ್ಲವಲ್ಲ....ಹೆಣ್ಣು ಜೀವ ಇರುವುದು ಗಂಡಸು ಕೊಡುವ ಸುಖವನ್ನಲ್ಲದಿದ್ದರೂ ದುಃಖವನ್ನುಣ್ಣುವುದಕ್ಕೆ..." ಎಂದು ಹಲುಬುತ್ತಾಳೆ(ಪು. ೯೪-೯೫). ಶ್ಯಾಮನು ತಾಯಿ, ಹೆಂಡತಿ, ಮಕ್ಕಳಲ್ಲಿ ಪೂರ್ಣ ಅನಾದರ ತಾಳಿ ಹೊರಟು ಹೋಗಿರುವಾಗ, ತನ್ನ ಸೊಸೆಯೊಂದಿಗೆ "...ಶ್ಯಾಮ ಸಣ್ಣದ್ದರಲ್ಲಿ ನನ್ನನ್ನು ಮುದ್ದಿಸಿದ್ದು ಸ್ವಲ್ಪವೇ?... ನಿಂತರೆ 'ಅಮ್ಮ' ಕುಳಿತರೆ 'ಅಮ್ಮ' ಎಂದು ನನ್ನದೇ ಜೀವಕ್ಕೆ ಅಂಟಿಕೊಂಡಿದ್ದ ಮಗು ಅದು. ಅದನ್ನೆಲ್ಲ ನೆನೆದು ನನ್ನಷ್ಟು ಪುಣ್ಯವಂತರು ಯಾರೂ ಇಲ್ಲ-ಎಂಬ ಹಿಗ್ಗು ಉಂಟಾಗುತ್ತಿತ್ತು. ಅಂದು ಹೇಗಿದ್ದ ಮಗು! ಇಂದು ಹೇಗಾಯಿತು ನೋಡು? ಪ್ರಾಯಶಃ ಅವನು ಸಲ್ಲಿಸಬೇಕಾಗಿದ್ದ ಮಾತೃಋಣವನ್ನು ಎಳೆತನದಲ್ಲಿಯೇ ಸಲ್ಲಿಸಿಬಿಟ್ಟ ಎಂದು ಕಾಣುತ್ತದೆ. ಇನ್ನೇನೂ ಸಲ್ಲಿಸುವುದಕ್ಕಿಲ್ಲ" ಎನ್ನುತ್ತಾಳೆ(ಪು.೧೦೦). ಮತ್ತೊಂದು ಸಂದರ್ಭದಲ್ಲಿ ತನ್ನ ಮೊಮ್ಮಗುವನ್ನು ಮುದ್ದಾಡುತ್ತಾ ವೆಂಕಮ್ಮನೊಂದಿಗೆ, "ನೋಡು ವೆಂಕಿ, ನಮಗೆ ಸುಖ ಇಲ್ಲ, ಇಲ್ಲ ಅನ್ನುತ್ತಿದ್ದೇವೆ. ಒಳಗೆಷ್ಟೇ ನೋವು ತುಂಬಿರಲಿ; ಈ ಮಕ್ಕಳ ಮುದ್ದು, ಆಟ, ನಗು ನೋಡಿದರೆ-ಯಾವ ಚಿಂತೆ ನೆನಪಿಗೆ ಬರುತ್ತದೆ ಹೇಳು? ಇದರ ಮುಂದೆ ಹಬ್ಬವೇ, ಮತ್ತೊಂದೇ? ಇದಕ್ಕೂ ದೊಡ್ಡ ಸಂತೋಷ ದೇವರೇನು ಕೊಟ್ಟಾನು? ಪ್ರಾಯಶಃ ಇದರಿಂದಲೇ ಮನುಷ್ಯನ ಜೀವಕ್ಕೆ ತೃಪ್ತಿ ಬರಬೇಕು. ನಾವು ಅತಿ ಆಸೆಮಾಡಬಾರದು. ಮಕ್ಕಳು ಎಳೆತನದಲ್ಲೇ ಹಿರಿಯರಿಗೆ ಸಲ್ಲಿಸುವ ಋಣವನ್ನೆಲ್ಲ ಸಲ್ಲಿಸಿಬಿಡುತ್ತವೆ. ಮತ್ತೆ ನಾವೇ ಅವಕ್ಕೆ ಕೊಡಬೇಕಾಗುತ್ತದೆಯೋ ಏನೋ" ಎಂದು ಹೃದಯಸ್ಪರ್ಶಿಯಾಗಿ ನುಡಿಯುತ್ತಾಳೆ (ಅಲ್ಲೆ).

ಹೀಗೆ ದುಃಖ, ದೀನತೆಗಳೇ ಕವಲಾಗಿ ಭಾಗೀರಥಿ, ವೆಂಕಮ್ಮ ಎಂಬ ಹೆಣ್ಣುಗಳಾಗಿ ನಿಂತಂತೆ ಭಾಸವಾಗುತ್ತದೆ. ಇಷ್ಟಾದರೂ ಶ್ಯಾಮ, ಲಕ್ಷ್ಮಣರಂತೆ ಓಡಿ ಹೋಗುವ ಯೋಚನೆಯನ್ನು ಇವರು ಮಾಡುವುದಿಲ್ಲ. ಆತ್ಮಹತ್ಯೆಯ ಯೋಚನೆಯಂತೂ ಹತ್ತಿರ ಸುಳಿಯದು. ಭಾಗೀರಥಿಯಂತೂ ಶ್ಯಾಮ ಓಡಿಹೋದ ಮೇಲೆ, ಸೊಸೆ ಸರಸಿಗಾಗಿ ಮೊಮ್ಮಗಳಾದ ಶೀಲುವಿಗಾಗಿ ತನಗಾಗುವ ಎಷ್ಟೋ ಅಪಮಾನವನ್ನು ನುಂಗಿಕೊಂಡು ಜೀವಿಸುತ್ತಾಳೆ. ಇವಳ ನೆರಳಾಗಿ, ಹೆಣ್ಣಿನ ತಾಳ್ಮೆ, ಮಾತೃತ್ವ ಮುಂತಾದ ಮೌಲ್ಯಗಳ ಮತ್ತೊಂದು ಪ್ರತೀಕವಾಗಿ ನಿಂತಿರುವವಳು ಸರಸಿ. ಈ ಕಾದಂಬರಿಯಲ್ಲಿ, ಮೌಲ್ಯಗಳನ್ನು ಜೀವಿಸುತ್ತ ಜೀವನಕ್ಕೆ ಕಳೆ ತಂದುಕೊಡುವ ಪಾತ್ರಗಳೆಂದರೆ ಸ್ತ್ರೀಪಾತ್ರಗಳೇ. ಇವರೊಂದಿಗೆ ಹೋಲಿಸಿದರೆ ಸುಬ್ರಾಯರಂತೂ ಮೌಲ್ಯಹೀನ ವ್ಯಕ್ತಿ. ಶಂಕರ-ನಾರಾಯಣ ಮುಂತಾದವು ಸ್ವಾರ್ಥ, ದಾಯಾದಿತನಗಳಿಗೆ ಹೇಳಿ ಮಾಡಿಸಿದ ಮೌಲ್ಯಹೀನ ವ್ಯಕ್ತಿತ್ವಗಳು. ಆದರೂ ತನ್ನ ತಂಗಿಯರಿಗೆ ಆಸರೆಯಾದ ಸೋಮನಾಥಯ್ಯನವರು ನಮ್ಮ ಮನಸ್ಸನ್ನು ತುಂಬಿಕೊಳ್ಳುತ್ತಾರೆ. ವಾಸುದೇವಯ್ಯ, ಲಕ್ಷ್ಮಣ, ಶ್ಯಾಮರ ವ್ಯಕ್ತಿತ್ವದ ಅಭಿವೃದ್ಧಿಯಾನವು-ಜೀವನ ಮೌಲ್ಯಗಳಿಗೆ ಕುತ್ತಾಗಿ ಕಾಲಾನಂತರ ಜೀವನಾನುಭವದ ಮೌಲ್ಯ ಮುತ್ತುಗಳಿಂದ ತುತ್ತನ್ನು ಉಂಡು ಜೀವಿಸಲು ಸಿದ್ಧರಾಗುವುದು-ಆಶ್ಚರ್ಯವೂ ಆಸಕ್ತಿದಾಯಕವೂ ಆಗಿದೆ. ಬಿಂದೂರಾಯರು ಹಾಗೂ ಅವರ ಪತ್ನಿ ಭಾಗ್ಯಲಕ್ಷ್ಮಿ ಅವರ 'ಮಾನವೀಯ ಅಂತಃಕರಣ', 'ಋಣತ್ವ'ವೆಂಬ ಜೀವನ ಮೌಲ್ಯಗಳು ಬದುಕನ್ನು ಭವ್ಯವಾಗಿ ಕಟ್ಟಿಕೊಳ್ಳುವ 'ದಿವ್ಯಪ್ರಭೆ'ಯಾಗುತ್ತವೆ. ಇವರ ಮಗಳು ಜಾನಕಿಯ ಪತಿಪ್ರೇಮ, ಜೀವನಪ್ರೇಮ, ಮಾನವ ಪ್ರೇಮಗಳಂತೂ ಚಲನಶಕ್ತಿಯುಳ್ಳದ್ದಾಗಿವೆ. ಜೊತೆಗೆ ಇವರೆಲ್ಲರ ಬದುಕಿನ ಒಂದು ಪ್ರಮುಖ ಅಂಗವಾಗಿ ಕಾಣಿಸಿಕೊಳ್ಳುವ 'ಆಳುಗಳ ಕಾಯಕತ್ವ'ವೂ ಜೀವನ ಮೌಲ್ಯಗಳ ಮಹತ್ವಕ್ಕೆ ಆಧಾರವಾಗಿರುವುದನ್ನು ಮರೆಯುವಂತಿಲ್ಲ. ಕಾದಂಬರಿಯ ಅನುಭವ ಪ್ರಪಂಚ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನದ ದೃಷ್ಟಿಯಿಂದ ತೀರಾ ಸಾಮಾನ್ಯವಾದುದಾದರೂ ಜೀವನ ಮೌಲ್ಯದ ಸದ್ಗುಣಗಳಿಂದ ಇಲ್ಲಿನ ಪಾತ್ರಗಳು ಅಸಾಮಾನ್ಯರೆಂಬಂತೆ ಕಾಣಿಸುತ್ತಾರೆ.

ಕಾರಂತರು 'ಕರುಳಿನ ಕರೆ'ಯಲ್ಲಿ ಕಾಣಿಸಿದ ಮತ್ತೊಂದು ವಿಶಿಷ್ಟವಾದ ಜೀವನಮೌಲ್ಯ 'ಸ್ವದೇಶಪ್ರೇಮ'. ಲಕ್ಷ್ಮಣನು ಕೃಷ್ಣಾಚಾರ್ಯನಾಗಿ ಬಿಜಾಪುರಕ್ಕೆ ಹೋದರೂ ತನ್ನ ಮಗ ಮಾಧವನಿಗೆ ಬಾಳಸಂಗಾತಿಯಾಗಿ ತನ್ನ ತಂಗಿ ಸರಸಿಯ ಮಗಳಾದ ಶೀಲುವನ್ನು ತಂದುಕೊಳ್ಳುತ್ತಾನೆ. ಲಕ್ಷ್ಮಣ, ಮಾಧವ, ಜಾನಕಿಯರ ಸಂಬಂಧವು ಬಿಜಾಪುರದಿಂದ ಕಡಿದು, ತನ್ನ ಜನ್ಮಭೂಮಿಯಲ್ಲೇ ಬೆಳೆಯುತ್ತದೆ; ಉಳಿಯುತ್ತದೆ. 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪೀ ಗರೀಯಸಿ'ಯೆಂಬಂತೆ ತನ್ನ ಜನನಿ-ಜನ್ಮಭೂಮಿಯಲ್ಲಿ ಲಕ್ಷ್ಮಣನ ಪ್ರೇಮದ ಬದುಕನ್ನು ಕಾರಂತರು 'ಸ್ವದೇಶ ಪ್ರೇಮ'ದ ಜೀವನ ಮೌಲ್ಯವನ್ನು ಎತ್ತಿಹಿಡಿಯುತ್ತಾರೆ. ಕಾದಂಬರಿಯ ಮುನ್ನುಡಿಯಲ್ಲಿ ಲೇಖಕರೇ ಹೇಳುವಂತೆ, "ಈ ಕಥಾರಂಗ ಕನ್ನಡ ಜಿಲ್ಲೆಯಿಂದ ಬಿಜಾಪುರದ ತನಕ ವಿಸ್ತರಿಸಿದರೂ ಲೇಖಕನ ಸ್ವದೇಶ ಪ್ರೇಮ ಕನ್ನಡ ಜಿಲ್ಲೆಯನ್ನೇ ಒಲಿಯುವುದೆಂದರೆ,

ಅದು ಆ ನಾಡಿನ ಹಸಿರುಹಚ್ಚೆ, ಗುಡ್ಡ ಬೆಟ್ಟ, ಕಡಲು, ನದಿಗಳು ಅವನ ಜೀವನಕ್ಕೆ ಕೊಡುತ್ತಲಿರುವ ಚಿದಾನಂದ ಕಾಣಿಕೆಯಿಂದಲ್ಲದೆ ಇನ್ನೇನಲ್ಲ. ಬೆಂಗಾಡಿನಲ್ಲಿ ಹುಲಿಯಾಗಿ ಮೆರೆಯುವುದಕ್ಕಿಂತ ಮಲೆನಾಡಿನಲ್ಲಿ ಹುಲ್ಲೆಯಾಗಿ ನಲಿಯುವ ಆಸೆ ಅವನಿಗೆ"(ಪು.೩).

ಕಾದಂಬರಿಯೊಳಗೆ, 'ಇಂಗ್ಲಿಷ್ ಶಿಕ್ಷಣದ'ದ ಪರಿಣಾಮವಾಗಿ ಗಂಗೆಯ ಮಕ್ಕಳು, ವಾಸುದೇವಯ್ಯನ ಮಕ್ಕಳು ಮುಂತಾದವರಲ್ಲಿ ತಲೆಮಾರಿನಿಂದ ತಲೆಮಾರಿಗೆ ಆದ ಬದಲಾವಣೆಗಳು ಕಾಣುತ್ತವೆ. ಶಿಕ್ಷಣ ಪ್ರೇರಿತ ಉದ್ಯೋಗಗಳಿಂದ ಬದುಕು, ವಾಸುದೇವಯ್ಯನ ಮಗನ ಸ್ವ-ಅನ್ವೇಷಿತ ಬಾಳಸಂಗಾತಿಯೊಂದಿಗಿನ ಮದುವೆ-ಮುಂತಾದವು ಸುಬ್ರಾಯರ ಇಂಗ್ಲಿಷ್ ಶಿಕ್ಷಣದ ದೃಷ್ಟಿಕೋನಕ್ಕಿಂತ ಭಿನ್ನವಾಗಿ ಬದುಕುವ ಮಾರ್ಗವನ್ನು ತೋರಿಸುತ್ತವೆ ಎಂಬುದು ಗಮನಾರ್ಹ. ಇಷ್ಟಾದರೂ ಓದಿನ ಗಂಧವಿಲ್ಲದ, ಶಾಲೆ ಪಾಠಗಳ ಸೋಂಕಿಲ್ಲದ, ನಾಗರಿಕ ಜೀವನ ಹತ್ತಿರ ಸುಳಿಯದ ಭಾಗೀರಥಿ, ಸರಸಿ, ವೆಂಕಮ್ಮ ಮುಂತಾದವರ 'ಅನುಭವವೇದ್ಯ ಬದುಕಿನ' ಮೌಲ್ಯ ಅದ್ಭುತವಾದುದು.

ಸಾಹಿತ್ಯವು ನಮ್ಮ ಬದುಕಿನ ಪ್ರತಿಬಿಂಬವೂ ಹೌದು ಗತಿಬಿಂಬವೂ ಹೌದು. ಹಾಗಾಗಿ ಬಿ.ಎಂ.ಶ್ರೀಯವರು ಹೇಳುವಂತೆ; 'ಸಾಹಿತ್ಯ ಕೇವಲ ವ್ಯವಹಾರಕ್ಕಲ್ಲ; ಹೃದಯ ಶುದ್ಧಿಗೂ ಕೂಡ'. ಪ್ರಸ್ತುತದಲ್ಲಿ ಜಾಗತೀಕರಣವೆಂಬ ಬಕಾಸುರ ಪ್ರಜ್ಞೆಯ ಪಡಿನೆಳಲಂತೆ ಬದುಕಲು ಹಾತೊರೆದು ಓಡುತ್ತಿರುವ ಮಾನವ ಮತಿಗೆ 'ಕರುಳಿನ ಕರೆ'ಯು ಬಿತ್ತರಿಸುವ 'ತ್ಯಾಗ', 'ಸಹನೆ', 'ಸೋದರತ್ವ', 'ಮಾತೃತ್ವ', 'ನಿಷ್ಕಾಮ ಪ್ರೇಮ', 'ನಿಃಸ್ವಾರ್ಥತೆ', 'ಕೃತಜ್ಞತೆ', 'ಋಣ', 'ಮಾನವೀಯ ಅಂತಃಕರಣ', 'ಪ್ರಾಯಶ್ಚಿತ್ತ' ಹಾಗೂ 'ಕಾಯಕ'ವೆಂಬ ಜೀವನಮೌಲ್ಯಗಳು ಮಾದರಿಯಾಗಬಲ್ಲವುಗಳಾಗಿವೆ. ಈ ಮೌಲ್ಯಮಾದರಿಗಳನ್ನು ಆಧರಿಸಿದಾಗ ಮಾನವಮತಿಯು 'ಕರುಳಿನ ಕರೆ'ಯ 'ನೈಜಗ್ರಹಿಕೆಯ ಕಟ್ಟಾಳು'ವಾಗುತ್ತದೆ.

ಪರಾಮರ್ಶನ ಗ್ರಂಥಗಳು

೧. ನಾಯಕ ಜಿ.ಎಚ್. ೨೦೦೬ ಕೃತಿ ಸಾಕ್ಷಿ,
ಬೆಂಗಳೂರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

೨. ಮಾಲಿನಿ ಮಲ್ಯ ಬಿ. ೨೦೦೨ 'ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ'
ಸಂಪುಟ-೮ ಕಾದಂಬರಿ-೩ [ಕರುಳಿನ ಕರೆ...]
ಬೆಂಗಳೂರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

❒

ಕೆ.ಎಸ್. ನರಸಿಂಹಸ್ವಾಮಿಯವರ ಕವಿತೆಗಳಲ್ಲಿ ಹೆಣ್ಣು

ಧನಲಕ್ಷ್ಮಿ ಡಿ.ಡಿ.

'ಪ್ರೇಮಕವಿ', 'ದಾಂಪತ್ಯಕವಿ' ಎಂದೆಲ್ಲಾ ಹೆಸರು ಪಡೆದ ಕೆ.ಎಸ್. ನರಸಿಂಹಸ್ವಾಮಿಯವರು ಪ್ರೀತಿ-ಪ್ರೇಮಕ್ಕೆ ಹೊಸ ಆಯಾಮವನ್ನು ನೀಡಿದವರು. ದಾಂಪತ್ಯದ ಪ್ರೇಮಕ್ಕೂ ಹೊಸ ಅರ್ಥವನ್ನು ಕಲ್ಪಿಸಿದವರು. ಜೀವನದ ಪರಿಪೂರ್ಣತೆಯ ಭಾವಕ್ಕೆ ಗಂಡು-ಹೆಣ್ಣು ಇಬ್ಬರೂ ಅವಿಭಾಜ್ಯ ಅಂಗ; ಗಂಡಿಲ್ಲದೆ-ಹೆಣ್ಣಿಲ್ಲ, ಹೆಣ್ಣಿಲ್ಲದೆ ಗಂಡಿಲ್ಲ ಎಂಬ ತತ್ವದ ಆಧಾರದಲ್ಲಿ ಪ್ರೇಮಕ್ಕೆ ಮುಪ್ಪಿಲ್ಲ ಎಂದು ತಮ್ಮ ಕವಿತೆಗಳ ಮೂಲಕ ಜೀವಂತಿಕೆಯ ಸೆಲೆಯನ್ನು ನಾಡಿನೊಳಗೆ ಹರಡಿದರು.

ಸೃಷ್ಟಿಯಲ್ಲಿ ಗಂಡು-ಹೆಣ್ಣು ಸಮಾನತೆ ಉಳ್ಳವರು. ಕೆ.ಎಸ್. ನರಸಿಂಹಸ್ವಾಮಿಯವರ ಕವಿತೆಗಳಲ್ಲಿ ಇದು ಮತ್ತೊಮ್ಮೆ ವ್ಯಕ್ತವಾಗುತ್ತದೆ. ಅವರು ಸ್ತ್ರೀ ಸಾಧ್ಯತೆಗಳನ್ನೆಲ್ಲ ಕಾವ್ಯಮಯವಾಗಿ, ಲಯಬದ್ಧವಾಗಿ ಕಡೆದಿಟ್ಟಿದ್ದಾರೆ. ಸೃಷ್ಟಿಯ ಮೂಲವಾದ ಸ್ತ್ರೀಯನ್ನು ಭೂಮಿತಾಯಿಯಾಗಿ ಕಲ್ಪಿಸಿಕೊಂಡು ಆಕೆಯನ್ನು ಜ್ವಾಲಾಮುಖಿ, ಚಂದ್ರಸಖಿ, ಸೂರ್ಯಪ್ರಿಯೆ, ರುದ್ರಸಖಿ, ಜಗನ್ಮಾಯೆಯಾಗಿ ಕಾಣಿಸುತ್ತಾರೆ('ಭೂಮಿಗೀತ').

ಅವರ ಬಹುಪಾಲು ಕವಿತೆಗಳಲ್ಲಿ ಸ್ತ್ರೀ ತಾಯಿಯಾಗಿ ಪತ್ನಿಯಾಗಿ, ಅಕ್ಕ-ತಂಗಿಯಾಗಿ, ಮಗಳಾಗಿ, ಭೂಮಿತಾಯಿಯಾಗಿ ವ್ಯಕ್ತವಾಗಿದ್ದಾಳೆ. ನಿರೂಪಕ ಸ್ಥಾನದಲ್ಲಿ ಕವಿ ನಿಂತು ಆಕೆಯ ತೊಳಲಾಟ, ಬವಣೆ, ಸುಖದುಃಖಗಳು, ನೋವು-ನಲಿವುಗಳನ್ನು ವಿವರಿಸಿದ್ದಾರೆ. ಆಕೆಯ ಅಂತರಂಗದ ನೋವುಗಳನ್ನು ಬಲು ಹತ್ತಿರದಿಂದ ಕಂಡ ಅನುಭವಗಳನ್ನು ಕವಿತೆಗಳು ಹೇಳುತ್ತವೆ.

ಕೆ.ಎಸ್. ನರಸಿಂಹಸ್ವಾಮಿ ಅವರ ಕವಿತೆಗಳಲ್ಲಿ ಹೆಣ್ಣು ಕೇವಲ ಪ್ರೇಮಮೂರ್ತಿಯಾಗಿಯೋ, ಸೌಂದರ್ಯಮೂರ್ತಿಯಾಗಿಯೋ ಏಕಮುಖವಾಗಿ ಚಿತ್ರಿತವಾಗಿಲ್ಲ. ಗಂಡು ಆಕೆಯ ಪ್ರೇಮದ ಆರಾಧಕನಾಗಿಲ್ಲ. ದೇಹ ಸೌಂದರ್ಯಕ್ಕೂ ಮಿಗಿಲಾದ ಆಕೆಯ ಅಂತರಂಗದ ಸೌಂದರ್ಯದ ಆರಾಧಕನೂ ಅರಸನೂ ಆಗುತ್ತಾನೆ.

ನಿನ್ನ ಪ್ರೀತಿಗೆ ಅದರ ರೀತಿಗೆ ಕಣ್ಣಹನಿಗಳೆ ಕಾಣಿಕೆ....

('ನಿನ್ನ ಪ್ರೀತಿಗೆ')

ಹೆಣ್ಣು ಗಂಡಿನ ಅಡಿಯಾಳಲ್ಲ. ಆತನ 'ಹೃದಯ ಸಾಮ್ರಾಜ್ಞೆ', 'ನನ್ನವಳು' ಎಂಬ ಆತ್ಮೀಯ ಭಾವ ಒಂದು ತೆರನಾದ 'ಅರ್ಧನಾರೀಶ್ವರ' ಪರಿಕಲ್ಪನೆಯನ್ನು ಅಭಿವ್ಯಕ್ತಿಸುತ್ತದೆ.

ನನ್ನವಳು ನನ್ನೆದೆಯ ಹೊನ್ನಾಡನಾಳುವವಳು....

('ಗೃಹಲಕ್ಷ್ಮಿ')

ಎನ್ನುವ ಮೂಲಕ ಗಂಡು-ಹೆಣ್ಣಿನ ಅವಿನಾಭಾವ ಸಂಬಂಧ; ಪ್ರೇಮದ ತುತ್ತತುದಿಯ ಸಂದರ್ಭ ಒಂದು ಹೊಸ ಸಾಮಾಜಿಕ ವ್ಯವಸ್ಥೆಯನ್ನು ತೋರುತ್ತಿದೆ.

ಅಂದಿನ ಸಮಕಾಲೀನ ಸಾಮಾಜಿಕ ಸ್ಥಿತಿಯಲ್ಲಿನ ಲಿಂಗತಾರತಮ್ಯ ವ್ಯವಸ್ಥೆಯನ್ನು ಸೂಕ್ಷ್ಮವಾಗಿ ವಿರೋಧಿಸುವ ಧ್ವನಿಯನ್ನು ನೋಡಬಹುದು. ಸ್ತ್ರೀಯ ಅಂತರಾಳವನ್ನು ಕಡೆಗಣಿಸಿ ಆನಂದದ ಸಂಭ್ರಮದಲ್ಲಿ

ಸೌಂದರ್ಯದ ಉತ್ಸವದಲ್ಲಿ ಒಳದೇವರ ತೊರೆದು ಮೈಮರೆತಿದ್ದಾರೆ....

('ಅನ್ನಪೂರ್ಣೆಗೆ')

ಎಂಬ ಮಾತುಗಳು ಸೃಷ್ಟಿಯಲ್ಲಿ ಗಂಡು-ಹೆಣ್ಣು ಇದ್ದರೂ ಸಮಾಜದ ಮುಖ್ಯವಾಹಿನಿಯಲ್ಲಿ ಪ್ರಾಬಲ್ಯವನ್ನು ಪಡೆದಿರುವವರು ಯಾರು ಎಂಬ ಸತ್ಯವನ್ನು ಮತ್ತೊಮ್ಮೆ ಹೇಳುತ್ತಾರೆ

ಗಂಡಿಲ್ಲವೆ? ಇಹುದಿಹುದು
ಹೆಣ್ಣಿಗೆ ಗಂಡಾಗಿ;
ಹೆಣ್ಣಿಲ್ಲವೆ? ಇಹುದಿಹುದು
ಬೆಳ್ಳಗೆ ಬೆಂಡಾಗಿ;

('ಅನ್ನಪೂರ್ಣೆಗೆ')

ಎನ್ನುವಲ್ಲಿ ಹೆಣ್ಣಿನ ಸ್ಥಿತಿ ಕೇವಲ ಅಲಂಕಾರದ ಕೊರಡಿನಂತೆ ಚಿಂತಾಜನಕವಾಗಿದೆ. ಪರಂಪರಾಗತವಾಗಿ ಬೆಳೆದು ಬಂದಿರುವ ಇಂತಹ ಪದ್ಧತಿ ವಿರುದ್ಧ ಸ್ತ್ರೀ ತಣ್ಣನೆಯ ಪ್ರತಿಭಟನೆಯನ್ನು ಮಾಡುತ್ತಾಳೆ.

ಅಧಿಕಾರ ಮಾತ್ರ ನಿಮ್ಮದೆ? ದುಡಿಮೆ ನನ್ನದು?

('ನಿಮ್ಮ ಸಂಸಾರ ಇದು')

ಸಾಂಸಾರಿಕ ವ್ಯಾಪ್ತಿಯಲ್ಲಿ ಇದು ವ್ಯಕ್ತವಾದರೂ ಇಡೀ ವ್ಯವಸ್ಥೆಯಲ್ಲಿ ಸ್ತ್ರೀಯ ಸ್ಥಾನಮಾನಗಳ ಪರಿಮಿತಿಗಳನ್ನು ಮತ್ತೆಮತ್ತೆ ನೆನಪಿಸುವಂತೆ, ಆ ಸಂಕೋಲೆಗಳನ್ನು ಬಿಡಿಸಿಕೊಂಡು ಸಮಾನತೆಯ ಹಾದಿಯಲ್ಲಿ ನಡೆಯುವ ಸಾಧ್ಯತೆಯ ಮಾತುಗಳನ್ನು ಕೆ.ಎಸ್.ನ. ಆಡಿಸಿದ್ದಾರೆ.

ಜಗತ್ತಿನ ಜಂಜಡದೊಳಗೆ ಸಿಲುಕಿ ಬಸವಳಿದು ಚಡಪಡಿಸುತ್ತಾ ಬರುವ ಗಂಡಿಗೆ ಸಾಂತ್ವನ ನೆಮ್ಮದಿ ದೊರಕುವುದು ಸ್ತ್ರೀಯ ಮಮತೆಯ ಮಡಿಲಲ್ಲಿಯೆ. ಆಕೆಯ ರೂಪಗಳು ಬೇರೆ ಬೇರೆ ಅಷ್ಟೆ. ಕೆ.ಎಸ್.ನ. ಕವಿತೆಗಳಲ್ಲಿ ಹೆಣ್ಣಿನಷ್ಟೇ ಪ್ರಾಧಾನ್ಯ ಗಂಡಿಗೂ ಇದೆ. ಹೆಣ್ಣು ಪ್ರತ್ಯಕ್ಷವಾಗಿ ಕಾಣಿಸುತ್ತಿದ್ದರೆ ಗಂಡು ಆಕೆಯ ಹಿಂದೆ ನಿಂತಿರುವಂತೆ ಭಾಸವಾಗುತ್ತದೆ. 'ಹಳ್ಳಿಯ ಚೆಲುವೆಗೆ', 'ಕುಣಿವ ಹೆಣ್ಣು', 'ತುಂಗಭದ್ರೆ', 'ಭೂಮಿಗೀತ', 'ಗೃಹಲಕ್ಷ್ಮಿ', 'ಸೀತೆಯ ಸಂದೇಶ' ಕವಿತೆಗಳು ಸ್ತ್ರೀ ಪ್ರಾಧಾನ್ಯವನ್ನು ತೋರಿದರೆ, 'ಕಲಿಯಾಗಿ ಬಾ ಕೃಷ್ಣ', 'ಹೆಜ್ಜೆ ಗುರುತು', 'ಬಳೆಗಾರನ ಹಾಡು' ಪುರುಷ ಪ್ರಧಾನತೆಯನ್ನು ತೋರುತ್ತವೆ.

'ನನ್ನವಳು' ಎಂಬ ಭಾವ ಸ್ತ್ರೀಯನ್ನೇ ಭಾವಿಸುತ್ತಿರುವುದು ಗೋಚರಿಸುತ್ತಿದ್ದರೂ ವಾಸ್ತವವಾಗಿ ಆ ಭಾವವಿರುವುದು ತನ್ನವಳನ್ನಾಗಿಸಿಕೊಂಡ ಗಂಡಿನೊಳಗೆ, ಆತ ಇಲ್ಲಿ ವಿಶಾಲ ಹೃದಯಿ, ತನ್ನಂತೆ ಅವಳು ಎಂಬ ಮನೋಭಾವವುಳ್ಳವನು, ಅಂತಃಕರಣವುಳ್ಳವನು. ತಾನು ಹೊರ ಪ್ರಪಂಚದಲ್ಲಿ ದುಡಿಯುವಂತೆ ಆಕೆ ಸಂಸಾರ ಪ್ರಪಂಚದಲ್ಲಿ ದುಡಿಯುವವಳು ಎಂಬ ಸಮಾನತೆಯ ತತ್ವವನ್ನು ಅರಿತವನು.

ತನ್ನ ಹೆಂಡತಿ ಮಕ್ಕಳ ನಿರೀಕ್ಷೆಯಲ್ಲಿ ಅವರು ಬರುವುದು ಕೊಂಚ ತಡವಾದರೂ ದುಗುಡದಿಂದ ಪರಿತಪಿಸುತ್ತಾ, ಅವರಿಗಾಗಿ ತವಕಿಸುವ ಮಮತೆಯ ತಂದೆಯಾಗಿ, ಪತಿಯಾಗಿ 'ಅರಸೀಕೆರೆಯಲ್ಲಿ' ಕವಿತೆಯಲ್ಲಿ ಕಾಣುವನು.

ನೀನಿಲ್ಲದ ಮನೆಮನೆಯಲಿ ಏನಿದ್ದೂ ವ್ಯರ್ಥ

('ಅನ್ನಪೂರ್ಣೆಗೆ')

ಎಂಬ ಮಾನವ ಜೀವನದ ಪರಿಪೂರ್ಣತೆಯ ರಹಸ್ಯವನ್ನು ಅರಿತ ಪ್ರಬುದ್ಧ ಪುರುಷ ಪಾತ್ರಗಳು ಕೆ.ಎಸ್.ನ.ರವರ ಕವಿತೆಗಳಲ್ಲಿವೆ.

'ಹೆಜ್ಜೆಗುರುತು' ವೀರ ಮಗನೊಬ್ಬನ ಚಿತ್ರಣ. ತನ್ನ ತಂದೆಯ ಮುಂದೆ ತಾಯಿಯ ಹಿರಿಮೆಯನ್ನು ಕೊಂಡಾಡುವ ಪಾತ್ರ ಪುರುಷ ಸಾಧ್ಯತೆಗಳನ್ನು ತೆರೆದಿಡುತ್ತದೆ. ತಾಯಿ–ಮಗನ ಅಪೂರ್ವ ಮಿಲನದೊಂದಿಗೆ ಕವಿತೆ ಮುಕ್ತಾಯವಾಗುತ್ತದೆ.

'ತೊರೆದ ಗಂಡ ಬರಲಿಲ್ಲ ಮನೆಗೆ, ಓ ಬಂದೆಯಲ್ಲ ಮಗುವೇ?' ಎಂಬಲ್ಲಿ ಎರಡು ಭಿನ್ನ ಪುರುಷ ಪಾತ್ರಗಳ ಮುಖಾಮುಖಿಯಾಗುವಿಕೆಯನ್ನು ನೋಡುತ್ತೇವೆ. ಸ್ತ್ರೀಯನ್ನು ಕಡೆಗಣಿಸಿದುದು ಒಂದು ಪಾತ್ರವಾದರೆ, ಮತ್ತೊಂದು ಅದೇ ಸ್ತ್ರೀಯನ್ನು ಅರಸಿ, ಆಕೆಯ ಮಮತೆಯನ್ನು, ಆಶ್ರಯವನ್ನು ಬೇಡುವ ಪಾತ್ರ, ಮಗನನ್ನು ಮರಳಿ ಪಡೆದ ತಾಯಿಯ ಸಂತೃಪ್ತಿಯ ಭಾವ ಕೊನೆಗೆ ಕವಿತೆಯಲ್ಲಿ ನೆಲೆಸುತ್ತದೆ. ಮಾತೃವಾತ್ಸಲ್ಯ, ತಾಯ್ತನದ ಹಂಬಲ, ಸಾರ್ಥಕ್ಯಭಾವ ಚಿರಸ್ಥಾಯಿ ಎನಿಸುತ್ತದೆ. ಪ್ರಕೃತಿಯೊಂದಿಗಿನ ಹೆಣ್ಣಿನ ಹೋಲಿಕೆಯು ಕವಿತೆಗಳಲ್ಲಿ ಲವಲವಿಕೆಯನ್ನು ತುಂಬುತ್ತದೆ. ಆದರೆ 'ಕುಣಿವ ಹೆಣ್ಣು' ಸಂಪ್ರದಾಯದ ಬೇಗೆಯೊಳಗೆ ಸಿಲುಕಿ ಬಾಡಿಹೋಗುವ ಹೆಣ್ಣಿನ ಕಥೆ.

ಹೀಗೆ ಕೆ.ಎಸ್.ನ. ಅವರ ಕವಿತೆಗಳಲ್ಲಿ ಹೆಣ್ಣು ಅನ್ನಪೂರ್ಣೆಯೂ ಆಗುತ್ತಾಳೆ. ಪುಟ್ಟ ಮಗಳೂ ಆಗುತ್ತಾಳೆ. ಪ್ರೀತಿಯ ಹುಡುಗಿ ಮನೆ ಮತ್ತು ಮನ ತುಂಬಿದ ಮೆಚ್ಚಿನ ಮಡದಿಯೂ ಆಗುವಳು. ಎಲ್ಲಕ್ಕಿಂತ ಹೆಚ್ಚು ನಮ್ಮನ್ನೆಲ್ಲ ಹೊತ್ತು ಸಲಹುತ್ತಿರುವ ಭೂಮಿತಾಯಿಯೇ ಆಗುತ್ತಾಳೆ. ಗಂಡು– ಹೆಣ್ಣು, ಹೆಣ್ತನದ ಹಿರಿಮೆಯನ್ನು ಬೆಳಗುವ ಪೂರಕ ಅಂಶವಾಗಿ ಅವಳ ಪೋಷಕನೂ, ಮಮತೆಯ ತಂದೆಯೂ, ಪ್ರೇಯಸಿಯ ಆರಾಧಕನೂ, ನಲ್ಮೆಯ ಪ್ರಿಯಕರನೂ ಮಡದಿಯ ಸಕಲ ಸುಖದುಃಖಗಳಲ್ಲಿ ಭಾಗಿಯಾಗುವ ಹೃದಯವಂತ ಪತಿಯೂ, ಆದಿಶೇಷನೂ, ಮಮತೆಯ ತಂದೆಯೂ, ಮಮತೆಯ ಮಗನೂ ಆಗಿ ಅಭಿವ್ಯಕ್ತಗೊಂಡಿದ್ದಾನೆ. ಕವಿ ಹೆಣ್ಣು ಗಂಡಿನ ಅಸ್ತಿತ್ವಕ್ಕೆ ಗುರುತ್ವಯುತ ಸಮಾನ ಸ್ಥಾನಮಾನಗಳನ್ನು ನೀಡಿದ್ದಾರೆ.

ಕೆ.ಎಸ್.ನ. ಅವರ ಕವಿತೆಗಳಲ್ಲಿ ಹೆಣ್ಣು ಗಂಡೆಂಬ ಭೇದಭಾವವಿಲ್ಲವೆಂಬ ಸಾರ್ವಕಾಲಿಕ ತತ್ವ ಧ್ವನಿಸುತ್ತದೆ. ಕವಿತೆಗಳು ಜೀವಂತಿಕೆಯ ಕಲೆಯ ಸೆಲೆಯನ್ನು ಪಡೆದಿರುವುದರಿಂದ ಬದುಕಿನ ಸ್ವಾರಸ್ಯವೆಲ್ಲವೂ ಪ್ರೀತಿಯ ರಸವಾಗಿ, 'ಸಮರಸವೇ ಜೀವನ' ಎಂಬ ತತ್ವವನ್ನು ಪ್ರತಿಪಾದಿಸುತ್ತವೆ. ಪ್ರೀತಿ–ಪ್ರೇಮಕ್ಕೆ ವಯಸ್ಸಿನ ಅಂತರವಿಲ್ಲ, ಮುಪ್ಪಿಲ್ಲ. ಅವು ಸಕಲ ಜೀವಾತ್ಮಗಳ ಅಂತರಂಗದ ಧ್ವನಿ.

❐

ದಲಿತ ಬಂಡಾಯ ಚಳವಳಿ ಮತ್ತು ಗಾಂಧಿವಾದ

ಜಿ.ಆರ್. ತಿಪ್ಪೇಸ್ವಾಮಿ

ಕಾಲಗರ್ಭದಲ್ಲಿ ಮನುಷ್ಯನು ತನ್ನ ಬದುಕು ಸಂಕೀರ್ಣಗೊಂಡಂತೆಲ್ಲ ಸಮಸ್ಯೆಗಳ ಮಹಾಪೂರವನ್ನೇ ಎದುರಿಸಬೇಕಾಯಿತು. ಸಮಸ್ಯೆಗಳನ್ನು ಈಡೇರಿಸಿಕೊಳ್ಳಲು ಹಲವಾರು ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕಾಯಿತು. ಅಂಥವುಗಳಲ್ಲಿ ಹೋರಾಟದ ಹಾದಿಯೂ ಒಂದು. ದಕ್ಕಬೇಕಾದುದನ್ನು ಹಕ್ಕಿನ ಮೂಲಕ ದಕ್ಕಿಸಿಕೊಳ್ಳಲು ಸತತ ಪ್ರಯತ್ನಗಳೇ ಜರುಗಿರುವುದನ್ನು ಚರಿತ್ರೆಯುದ್ದಕ್ಕೂ ಗಮನಿಸಬಹುದು. ಅಜ್ಞಾನ, ಅಸ್ಪೃಶ್ಯತೆ, ಜಾತಿಯ ನಿಷೇಧ, ಬಾಲ್ಯವಿವಾಹ –ಮುಂತಾದ ಸಾಮಾಜಿಕ ಪಿಡುಗುಗಳ ನಿವಾರಣೆಗಾಗಿ ಬ್ರಹ್ಮಸಮಾಜ, ಆರ್ಯಸಮಾಜ, ರಾಮಕೃಷ್ಣ ಮಿಷನ್– ಮುಂತಾದವುಗಳ ಮೂಲಕ ಸುಧಾರಣಾ ಚಳವಳಿಯೇ ನಡೆಯಿತು. ರೈತರಿಗೆ ಅನ್ಯಾಯವಾದಾಗಲೆಲ್ಲ ಹಲವಾರು ರೀತಿಯ ಹೋರಾಟಗಳೇ ಜರುಗಿವೆ. ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಚಂಪಾರಣ್ಯ ಸತ್ಯಾಗ್ರಹ, ಖೇಡಾ ಸತ್ಯಾಗ್ರಹ, ಬಾರ್ಡೋಲಿ ಸತ್ಯಾಗ್ರಹ– ಮುಂತಾದ ರೈತ ಚಳವಳಿಗಳು ಗಮನಾರ್ಹ. ಕಾಲಕ್ರಮದಲ್ಲಿ ಆರ್ಥಿಕ ಚಳವಳಿ, ಜಾತಿವರ್ಗಗಳ ಚಳವಳಿ, ಮಹಿಳಾ ಚಳವಳಿ, ಬುಡಕಟ್ಟು ಚಳವಳಿ, ಪರಿಸರ ಚಳವಳಿ, ಭಾಷಾ ಚಳವಳಿ, ವಿದ್ಯಾರ್ಥಿ ಚಳವಳಿ –ಹೀಗೆ ಚಳವಳಿಗಳು ಅನೇಕ ರೀತಿಯಲ್ಲಿ ಆವಿರ್ಭವಿಸಿವೆ. ಸೃಜನಾತ್ಮಕ ವ್ಯಕ್ತಿತ್ವವುಳ್ಳ ನಾಯಕನೊಬ್ಬ ಇಂಥ ಹೋರಾಟಗಳನ್ನು ಹಿಂಸೆ ಇಲ್ಲವೆ ಅಹಿಂಸೆಯ ಮಾರ್ಗವನ್ನೂ ಅನುಸರಿಸಿ ಮುನ್ನಡೆಸಿರುವುದನ್ನು ಸುಲಭವಾಗಿ ಗ್ರಹಿಸಬಹುದಾಗಿದೆ. ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಭಾರತದ ರಾಜಕೀಯ ಸ್ವಾತಂತ್ರ್ಯ ಹೋರಾಟವೂ ಇದಕ್ಕೆ ಹೊರತಲ್ಲ. ಸಾಮಾನ್ಯವಾಗಿ ಬಹುತೇಕ ಎಲ್ಲ ಚಳವಳಿಗಳೂ ರಾಜಕೀಯ ಸ್ವರೂಪವನ್ನೂ ಹೊಂದುತ್ತಲೇ ಬಂದಿರುವುದನ್ನು ಗಮನಿಸಬಹುದು.

ಭಾರತದ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಗಾಂಧೀಜಿ ಬುದ್ಧನ ಅಂಶಗಳನ್ನು ಒಳಗೊಂಡೇ ಬಂದವರು. ಯಾವ ಅಧಿಕಾರದ ಕುರ್ಚಿಗೂ ಅವರು

5

ಆಸೆಪಟ್ಟವರಲ್ಲ. ಅವರು ದಕ್ಷಿಣ ಆಫ್ರಿಕಾದಲ್ಲಿ ಚಾಲ್ತಿಯಲ್ಲಿದ್ದ ಕರಿಯ-ಬಿಳಿಯ ಎಂಬ ವರ್ಣಭೇದ ನೀತಿಯ ವಿರುದ್ಧ ಹೋರಾಡಿದವರು. ಆ ವೇಳೆಗಾಗಲೆ ಮೊದಲನೇ ಮತ್ತು ಎರಡನೇ ಜಾಗತಿಕ ಮಹಾಯುದ್ಧಗಳು ಜರುಗಿ ಎಲ್ಲೆಲ್ಲೂ ಪ್ರಕ್ಷುಬ್ಧ ವಾತಾವರಣ ಉಂಟಾಗಿತ್ತು. ಭಾರತವೂ ಇದಕ್ಕೆ ಹೊರತಾಗಿರಲಿಲ್ಲ. ವಸಾಹತುಶಾಹಿಗೆ ಒಳಪಟ್ಟಿದ್ದ ಪ್ರದೇಶಗಳೆಲ್ಲ ಬಿಡುಗಡೆಗಾಗಿ ಹಾತೊರೆಯುತ್ತಿದ್ದವು. ಚೈನಾ, ರಷ್ಯಾ - ಮುಂತಾದ ರಾಷ್ಟ್ರಗಳ ಗುರಿಯೂ ಇದೇ ಆಗಿತ್ತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಇಂಥ ವಿದ್ಯಮಾನಗಳು ಜರುಗುತ್ತಿರುವಾಗ ಗಾಂಧೀಜಿಯವರಲ್ಲಿ ಸತ್ಯ, ಅಹಿಂಸೆ, ಬ್ರಹ್ಮಚರ್ಯ, ಸಂಯಮ, ಪರಿಶುದ್ಧತೆ - ಮುಂತಾದ ಮೌಲ್ಯಗಳು ಗೋಚರಿಸುತ್ತಿದ್ದವು. ಅವರು ಬೌದ್ಧ ಮತ್ತು ಜೈನಧರ್ಮಗಳ ಪರಿಕಲ್ಪನೆಯ 'ಸತ್ಯಾಗ್ರಹ' ಎಂಬ ಅಸ್ತ್ರವನ್ನು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬಳಸಿ ಯಶಸ್ವಿಯಾದದ್ದು ಚಾರಿತ್ರಿಕ ಸಂಗತಿ. ಅದರಲ್ಲೂ ಅಹಿಂಸೆ, ಉಪವಾಸ ಮುಂತಾದ ಪರಿಕಲ್ಪನೆಗಳು ಅವರ ಹೋರಾಟದ ಜಯಕ್ಕೆ ಕಾರಣೀಭೂತವಾದವು. ತಾನು ಸರಿ ಇದ್ದರೆ ತನ್ನ ಮಾತುಗಳಿಗೆ ಬೆಲೆ ಬರುತ್ತದೆಂದು ಭಾವಿಸಿದವರು ಗಾಂಧೀಜಿ. ಅದಕ್ಕಾಗಿಯೇ ಮೇ ೨೯, ೧೯೧೫ರಂದು ಸಬರಮತಿ ನದಿ ತೀರದಲ್ಲಿ ಸ್ಥಾಪಿಸಿದ ಆಶ್ರಮಕ್ಕೆ 'ಸತ್ಯಾಗ್ರಹ ಆಶ್ರಮ' ಎಂದು ನಾಮಕರಣ ಮಾಡಿದರು. ಮುಂದೆ ಅದು 'ಸಬರಮತಿ ಆಶ್ರಮ' ಎಂದಾಯಿತು.

ಹಿಂಸೆಗೆ ಬದಲಾಗಿ ಅಹಿಂಸೆ ಎಂಬ ಪರಿಕಲ್ಪನೆಯನ್ನು ಗಾಂಧೀಜಿ ಎತ್ತಿ ಹಿಡಿದರು. ಅದನ್ನು ಸತ್ಯಾಗ್ರಹದ ಮುಖ್ಯ ಅಸ್ತ್ರವನ್ನಾಗಿ ಬಳಸಲು ಮುಖ್ಯವಾದ ಕಾರಣವೆಂದರೆ ಜಗತ್ತಿನಾದ್ಯಂತ ಹಬ್ಬಿದ ಯುದ್ಧದ ಹಿಂಸೆ ಮತ್ತು ಅದರ ಪರಿಣಾಮವಾಗಿ ಹರಡಿದ ಕ್ಷಾಮ, ಬಡತನ, ಕೊಲೆ ಸುಲಿಗೆಗಳು. ಹಿಂಸೆಯ ಮೂಲಕವೇ ಅಧಿಕಾರ ಪಡೆಯಬೇಕೆಂಬ ಅನ್ಯರಾಷ್ಟ್ರಗಳ ಉದ್ದೇಶವೂ ಕಾರಣವಾಗಿದ್ದಿರಬಹುದು. ಒರಟು ಸಂಸ್ಕೃತಿಯನ್ನು ಒರಟು ಸಂಸ್ಕೃತಿಯ ಮೂಲಕವೇ ನಿರ್ನಾಮ ಮಾಡಬೇಕೆಂದು ವಾದಿಸುತ್ತಿದ್ದ ಮಾರ್ಕ್ಸ್‌ವಾದವೂ ಕಾರಣವಾಗಿದ್ದಿರಬಹುದು. ಇಂಥ ಸಂದರ್ಭದಲ್ಲಿ ಗಾಂಧೀಜಿ ಅಹಿಂಸಾಮಾರ್ಗವನ್ನು ಅನುಸರಿಸಿದರು. ಅದರ ಮಹತ್ವವನ್ನು ತಮ್ಮ ಕಾರ್ಯ ಚಟುವಟಿಕೆಗಳ ಮೂಲಕ ಎತ್ತಿ ಹಿಡಿದರು. ಹೃದಯ ಸಂವಾದದ ಮೂಲಕವೇ ಜನಮನ್ನಣೆ ಸಾಧ್ಯವಾಗಬೇಕು ಎಂಬ ಅಭಿಪ್ರಾಯ ಗಾಂಧೀಜಿಯಿಂದ ವ್ಯಕ್ತಗೊಳ್ಳಲು ಮುಖ್ಯ ಕಾರಣ ಅವರು ಕಂಡುಕೊಂಡ ಅಧ್ಯಯನದ ಮಾದರಿಗಳು. ಅವು ಭಾರತೀಯವಾಗಿರಬಹುದು ಇಲ್ಲವೇ ಪಾಶ್ಚಾತ್ಯವಾಗಿರಬಹುದು. ಉಪನಿಷತ್ತುಗಳು, ಭಗವದ್ಗೀತೆ, ಮ್ಯಾಕ್ಸ್‌ಮುಲ್ಲರನ ಪುಸ್ತಕಗಳು, ಮಹಮ್ಮದನ ಜೀವನಚರಿತ್ರೆ, ಬೈಬಲಿನ ಸಂದೇಶ, ಅಮೆರಿಕಾದ ಹೆನ್ರಿ ಡೇವಿಡ್ ಥೋರೊನ 'ವಾಲ್ಡೆನ್'(೧೮೫೪) ಹಾಗೂ ಜಾನ್ ರಸ್ಕಿನ್ ಬರೆದ 'ಅನ್‌ಟು ದಿಸ್ ಲಾಸ್ಟ್'(೧೮೬೪) -ಮುಂತಾದುವುಗಳ ಪ್ರೇರಣೆ ಪ್ರಭಾವದಿಂದ ಅವರ ಆಲೋಚನೆಗಳು ಪರಿಪಕ್ವಗೊಳ್ಳಲು ಸಾಧ್ಯವಾಗಿರಬೇಕು.

ಗಾಂಧೀಜಿ 'ರಘುಪತಿ ರಾಘವ ರಾಜಾರಾಂ ಪತಿತಪಾವನ ಸೀತಾರಾಮ್' ಎಂದು ಪಠಿಸುತ್ತಲೇ ಜನಸಾಮಾನ್ಯರ ಬಳಿಗೆ ಹೋದರು. ಆ ವೇಳೆಗಾಗಲೆ ಬ್ರಿಟಿಷ್ ಆಳ್ವಿಕೆಯ ನೀತಿ ಹಳ್ಳಿಯ ಜೀವನವನ್ನು ಉಲ್ಲೋಲಕಲ್ಲೋಲ ಮಾಡಿಬಿಟ್ಟಿತು. ಉತ್ಪಾದನಾಶಕ್ತಿ ಕೇಂದ್ರೀಕೃತವಾಗಲಾರಂಭಿಸಿತ್ತು. ಯಾಂತ್ರಿಕ ಕೃಷಿಪದ್ಧತಿ, ಅದಕ್ಕೆ ತಕ್ಕಂತೆ ರಸಗೊಬ್ಬರ ಬಳಕೆ ಹೆಚ್ಚಾಯಿತು. ಇದರಿಂದ ಶ್ರೀಮಂತ ರೈತರು ಮತ್ತಷ್ಟು ಶ್ರೀಮಂತರಾದರು. ಸಣ್ಣ ಹಿಡುವಳಿದಾರರು ತಮ್ಮ ಹೊಲಗಳನ್ನು ಮಾರಿಕೊಂಡು ದೊಡ್ಡ ದೊಡ್ಡ ರೈತರಲ್ಲಿ ಕೂಲಿಕಾರರಾದರು. ಇದರ ಪರಿಣಾಮದಿಂದ ಜಮೀನ್ದಾರ ಮತ್ತು ಕೂಲಿಕಾರ ಎಂಬ ಎರಡು ವರ್ಗಗಳು ಸೃಷ್ಟಿಯಾದವು. ಸುಲಿಗೆ ಅನ್ಯಾಯಗಳು ಯಥೇಚ್ಛವಾಗಿ ಕಾಣಿಸಿಕೊಂಡವು. ಕೃಷಿಗೆ ಬೇಕಾಗಿದ್ದ ಶಕ್ತಿ ಕಡಿಮೆಯಾದಂತೆಲ್ಲ ಕೃಷಿಗೆ ಪೋಷಕವಾಗಿದ್ದ ಬಡಗಿತನ, ಕಮ್ಮಾರಿಕೆ, ಕುಂಬಾರಿಕೆ, ನೇಕಾರಿಕೆ, ಚರ್ಮಗಾರಿಕೆ – ಮುಂತಾದ ಪೂರಕ ಉದ್ಯೋಗಗಳು ನಾಶವಾಗತೊಡಗಿದವು. ಹೀಗಾಗಿ ಗ್ರಾಮ ಬದುಕಿನ ಆರ್ಥಿಕ ಪರಿಸ್ಥಿತಿಯೇ ಬುಡಮೇಲಾಯಿತು. ಭದ್ರತೆ ಇಲ್ಲದಂತಾಯಿತು. ಎಷ್ಟೋ ಹಳ್ಳಿಗರು ನಗರಗಳಿಗೆ ವಲಸೆ ಹೋಗುವಂತಾಯಿತು. ಇದರಿಂದ ಗ್ರಾಮ ಬದುಕು ಅಸ್ತವ್ಯಸ್ತವಾಗುತ್ತ ಜೀವನದಲ್ಲಿ ಜುಗುಪ್ಸೆ ದ್ವೇಷಾಸೂಯೆಗಳಿಗೆ ಕಾರಣವಾಯಿತು.

ಗಾಂಧೀಜಿ ಯಂತ್ರಗಳ ವಿರೋಧಿಯಾಗಿದ್ದರು. ಮನುಷ್ಯ ತನ್ನ ದುರಾಸೆಯ ಪ್ರತೀಕವಾಗಿ ಯಂತ್ರಗಳಿಗೆ ಮಾರುಹೋಗುತ್ತಿದ್ದಾನೆಂದೂ ಕೈಗಾರಿಕೀಕರಣ, ಔದ್ಯಮೀಕರಣ, ನಗರೀಕರಣ – ಇವೆಲ್ಲ ಮನುಷ್ಯನನ್ನು ಪರಕೀಯ ಭಾವನೆಗೆ ತಳ್ಳುತ್ತವೆಂದೂ ಅವರು ಭಾವಿಸಿದ್ದರು. ವ್ಯಕ್ತಿಯ ದುಃಸ್ಥಿತಿಗೆ ಅವನಲ್ಲಿರುವ ಈ ಬಗೆಯ ದುರಾಸೆಯೇ ಕಾರಣವೆಂದರು. ಇದರಿಂದ ಪಾರಾಗಬೇಕಾದರೆ 'ಅಕ್ರೋಡೀಕರಣ ತತ್ವ'ವನ್ನು ಪಾಲಿಸಬೇಕೆಂದು ಕರೆಕೊಟ್ಟರು. ಅಂದರೆ ಯಾವುದೇ ಒಬ್ಬ ವ್ಯಕ್ತಿ ಶ್ರಮದಿಂದ ಸಂಪಾದಿಸಬೇಕು. ಅಂದಂದಿನ ದುಡಿಮೆಯನ್ನು ಅಂದಂದೇ ಸಂಪಾದಿಸಬೇಕು. ಆದರೆ ಕೂಡಿಡಬಾರದು. ಕೂಡಿಡುವುದರಿಂದ ಮನುಷ್ಯ ಸೋಮಾರಿಯಾಗಿಬಿಡುತ್ತಾನೆ. ಅಗತ್ಯಕ್ಕೆ ತಕ್ಕಂತೆ ಆದರ್ಶಮಾರ್ಗದಲ್ಲಿ ಸಂಪಾದನೆ ಇರಬೇಕು. ಶ್ರೀಮಂತರು ಬಡವರ ಉದ್ಧಾರವನ್ನು ಗಮನದಲ್ಲಿರಿಸಿಕೊಳ್ಳಬೇಕು. ಸ್ವಯಂಪ್ರೇರಣೆಯಿಂದ ಮುನ್ನುಗ್ಗಿ ಸಾರ್ವಜನಿಕರ ಒಳಿತಿಗಾಗಿ ತನ್ನ ಸಂಪತ್ತನ್ನು ವಿನಿಯೋಗಿಸಬೇಕು. ಆಗ ಮಾತ್ರ ಲೋಕಕಲ್ಯಾಣ ಸಾಧ್ಯ ಎಂದರು.

ಭಾರತದ ಬೆನ್ನೆಲುಬಾಗಿದ್ದ ಹಳ್ಳಿಗಳ ಬಗೆಗೆ ಗಾಂಧೀಜಿ ವ್ಯಕ್ತಪಡಿಸಿದ ಭಾವನೆಗಳೂ ಮಹತ್ತರವೇ. ಅವುಗಳ ಉದ್ಧಾರವಿಲ್ಲದೆ ದೇಶದ ಉದ್ಧಾರ ಅಸಾಧ್ಯ ಎಂಬ ಧೋರಣೆ ಅವರದು. ಅಂಬೇಡ್ಕರ್ ಅವರಿಗೆ ಭಾರತದ ಹಳ್ಳಿಗಳು ನರಕದ ಕೂಪಗಳಾಗಿ, ಲೋಹಿಯಾ ಅವರಿಗೆ ಕುಷ್ಠರೋಗಿಯಂತೆ ಕಂಡರೆ, ಗಾಂಧೀಜಿಯವರಿಗೆ ಸ್ವಯಂಪೂರ್ಣ ಘಟಕಗಳಂತೆ ಗೋಚರವಾದವು. ಅಂಬೇಡ್ಕರ್ ಅವರಿಗೆ ಹಳ್ಳಿಗಳು ನರಕದ ಕೂಪಗಳಾಗಿ ಕಂಡರೆ ಗಾಂಧೀಜಿಯವರಿಗೆ ನಗರಗಳು ನರಕಸದೃಶವಾಗಿ

ಕಂಡವು. ಆಧುನಿಕ ಭಾರತದ ಸಮಗ್ರ ಅಭಿವೃದ್ಧಿಯನ್ನೂ ಹಳ್ಳಿಗಳಲ್ಲಿ ಕಾಣಬೇಕೆಂಬುದು ಗಾಂಧೀಜಿಯ ಅಭಿಪ್ರಾಯ. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಗ್ರಾಮ ಸಮುದಾಯವೂ ತನ್ನ ಅವಶ್ಯಕತೆಗಳನ್ನು ತಾನೇ ಈಡೇರಿಸಿಕೊಳ್ಳುವಂತಿರಬೇಕು. ಶಿಕ್ಷಣದ ಸವಲತ್ತುಗಳು ದೊರಕಬೇಕು. ಅದರಲ್ಲಿಯೂ ಪ್ರಾಥಮಿಕ ಶಿಕ್ಷಣ ಮಕ್ಕಳಿಗೆ ಕಡ್ಡಾಯವಾಗಬೇಕು. ಆಡಳಿತ ಚಟುವಟಿಕೆ ಸುಗಮವಾಗಲು ಪಂಚಾಯಿತಿ ಹಾಗೂ ರಾಜ್ಯಪದ್ಧತಿ ಜಾರಿಗೆ ಬರಬೇಕು. ಜಾತಿಪದ್ಧತಿ ನಾಶವಾಗಬೇಕು. ಗುಡಿಕೈಗಾರಿಕೆ ಕುಶಲ ಕೈಗಾರಿಕೆಗಳು ಪುನರುಜ್ಜೀವನಗೊಳ್ಳಬೇಕು –ಇವೆಲ್ಲ ಹಳ್ಳಿಗಳ ಉದ್ಧಾರದ ಬಗೆಗೆ ಗಾಂಧೀಜಿ ಕಂಡ ಕನಸುಗಳಾಗಿದ್ದವು.

ಗ್ರಾಮೀಣ ಪರಿಸರಗಳೂ ಅವಕಾಶಗಳಿಂದ ವಂಚಿತವಾಗಿದ್ದವು. ರಸ್ತೆ, ವಾಹನ ಸೌಕರ್ಯ, ಸಂಪರ್ಕ ಸಾಧನ, ಆಸ್ಪತ್ರೆ– ಇವು ಯಾವುವೂ ಸರಿಯಾಗಿರಲಿಲ್ಲ. ಆದರೆ ಶಾಲಾ ಕಾಲೇಜುಗಳು ನಗರಗಳಲ್ಲಿ ಆರಂಭವಾದವು. ಈ ನಗರೀಕರಣ ಧೋರಣೆಯಿಂದ ಹಳ್ಳಿಗಳು ದುರವಸ್ಥೆಗೆ ಬಲಿಯಾದವು. ಬ್ರಿಟಿಷರ ಶಿಕ್ಷಣದ ಧೋರಣೆಯು ಅವರಿಗೆ ಅನುಕೂಲಕರವಾಗಿತ್ತು. ಅದು ತನ್ನಆಡಳಿತಕ್ಕೆ ಅನುಕೂಲವಾಗುವಂತೆ ನೌಕರರನ್ನು ಆಯ್ಕೆಮಾಡಿಕೊಳ್ಳುತ್ತಿತ್ತು. ನೌಕರರು ಆಂಗ್ಲರ ಭಾಷೆ ಮತ್ತು ಉಡುಪುಗಳ ವ್ಯಾಮೋಹಕ್ಕೆ ಒಳಗಾಗಿ ಕೇವಲ ಅನುಕರಣೆಗೆ ಅಣಿಯಾದರು. ಇದರಿಂದ ಭಾರತೀಯ ಸಂಸ್ಕೃತಿಯೇ ಕಣ್ಮರೆಯಾಗುವಂತಾಯಿತು. ಇವನ್ನೆಲ್ಲ ಗಮನಿಸಿದ ಗಾಂಧೀಜಿ ಸ್ವರಾಜ್ಯದ ಕನಸನ್ನೂ ಕಂಡರು. ಸುಶಿಕ್ಷಿತ ಯುವಕರು ನೌಕರಿಯ ಆಸೆಯನ್ನು ಬಿಟ್ಟು ಹಳ್ಳಿಗಳಲ್ಲಿ ನೆಲೆಸಿ ರಚನಾತ್ಮಕ ಕೆಲಸಗಳಲ್ಲಿ ತೊಡಗಿಕೊಳ್ಳಬೇಕೆಂದು ಕರೆಕೊಟ್ಟರು. ಖಾದಿ, ಗ್ರಾಮನೈರ್ಮಲ್ಯ, ಶಿಕ್ಷಣ, ಪಾನನಿರೋಧ, ಗುಡಿಕೈಗಾರಿಕೆ, ಅಸ್ಪೃಶ್ಯತಾ ನಿವಾರಣೆ, ಭಾವೈಕ್ಯ, ಗ್ರಾಮ ಸುಧಾರಣೆ – ಮುಂತಾದ ರಚನಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿದರು. ಸತ್ಯ, ಧರ್ಮ, ಅಹಿಂಸೆ, ಸರಳತನ, ಸಹನೆ, ಭಜನೆ, ಸೇವಾಶ್ರಮ – ಇತ್ಯಾದಿ ಗುಣಗಳಿಂದ ಭಾರತೀಯ ಜನಮನವನ್ನು ಬಹುಸುಲಭವಾಗಿ ಗೆದ್ದರು.

ಗಾಂಧೀಜಿ ಜನಸಾಮಾನ್ಯರ ಸಂಕಟಗಳನ್ನು ಅರಿತಿದ್ದರು. ಅದಕ್ಕೆ ಅವರ ಬದುಕಿನಿಂದ ಹಲವಾರು ಉದಾಹರಣೆಗಳನ್ನು ನೀಡಬಹುದು. ಮೂರನೆಯ ತರಗತಿಯ ಪ್ರಯಾಣಿಕ ಟಿಕೇಟನ್ನು ಕೊಳ್ಳುವುದಕ್ಕಾಗಿ ಎಷ್ಟು ಕಷ್ಟಪಡಬೇಕೆಂಬುದರ ಬಗ್ಗೆ ವರ್ಧಾದಲ್ಲಿನ ಸ್ವಂತ ಅನುಭವವನ್ನು ಅವರ ಆತ್ಮಚರಿತ್ರೆ 'ಸತ್ಯಶೋಧನೆ'(೧೯೨೫–೨೯)ಯಲ್ಲಿ ದಾಖಲಿಸಿದ್ದಾರೆ. "ಮೂರನೆಯ ತರಗತಿಯ ಟಿಕೇಟುಗಳನ್ನು ಇಷ್ಟು ಬೇಗ ಕೊಡುವುದಿಲ್ಲ' ಎಂದು ನಮಗೆ ಹೇಳಿದರು. ನಾನು ಸ್ಟೇಷನ್ ಮಾಸ್ತರನ್ನು ಹೋಗಿ ನೋಡಿದೆ, ಅದೂ ಸಹ ಕಷ್ಟವೇ ಆಯಿತು. ನಮ್ಮ ಕಷ್ಟವನ್ನು ನಾನು ಅವರಿಗೆ ಹೇಳಿದೆ. ಅವರೂ ಅದೇ ಉತ್ತರವನ್ನು ಕೊಟ್ಟರು. ಟಿಕೆಟ್ ಕೊಡುವ ಕಿಟಕಿ ತೆರೆದ ಕೂಡಲೆ ನಾನು ಟಿಕೆಟ್ ಕೊಳ್ಳಲು ಹೋದೆನು. ಆದರೆ ಟಿಕೆಟ್ ತೆಗೆದುಕೊಳ್ಳುವುದು

ಸುಲಭದ ಮಾತಾಗಿರಲಿಲ್ಲ. ಯಾರು ಬಲಿಷ್ಠನೋ ಅವನದೇ ಸರಿ, ಬಲಶಾಲಿಗಳೂ ಇತರರ ವಿಷಯವನ್ನು ಲಕ್ಷಿಸದೆ ಒಬ್ಬರ ಮೇಲೆ ಒಬ್ಬರು ನುಗ್ಗುತ್ತಿದ್ದ ಪ್ರಯಾಣಿಕರೂ ನನ್ನನ್ನು ಹಿಂದೆ ಹಿಂದಕ್ಕೆ ತಳ್ಳಿದರು. ಆದುದರಿಂದ ಮೊದಲನೆಯ ಗುಂಪಿನಲ್ಲಿ ಟಿಕೇಟನ್ನು ತೆಗೆದುಕೊಳ್ಳಲು ನಾನೇ ಹೆಚ್ಚು ಕಡಿಮೆ ಕಡೆಯವನಾದೆನು". ರೈಲು ಬಂದಿತಾದರೂ ಅದನ್ನು ಹತ್ತುವುದಕ್ಕೆ ಗಾಂಧಿಗೆ ಕಷ್ಟವಾಯಿತು. ಜನರ ನೂಕುನುಗ್ಗಲು, ಕುಳಿತುಕೊಳ್ಳಲು ಸ್ಥಳವೇ ಸಿಗದು. ಗಾರ್ಡ್‌ಗೂ ಅವರಿಗೂ ಈ ಬಗೆಗೆ ಚರ್ಚೆ ನಡೆಯಿತು. ಆತನ ಕಿರುಕುಳವನ್ನು ಸಹಿಸಲಾರದ ಗಾಂಧೀಜಿ ರೈಲಿನಲ್ಲಿ ನಡೆಯುವ ಅನ್ಯಾಯವನ್ನು ಸಹಿಸಲಿಲ್ಲ.

ಮೂರನೇ ತರಗತಿಯ ಪ್ರಯಾಣಿಕರ ಸಂಕಟಗಳಿಗೆ ರೈಲ್ವೆ ಅಧಿಕಾರಿಗಳ ಉದ್ಧಟ ವರ್ತನೆಯೇ ಕಾರಣವೆಂಬುದನ್ನು ಗಾಂಧೀಜಿ ಖಚಿತಪಡಿಸಿದರು. ಗ್ರಾಮಾಂತರ ಪ್ರದೇಶಗಳ ರಚನಾತ್ಮಕ ಕೆಲಸಗಳ ಬಗೆಗೆ ಕೂಲಿಕಾರರ ಸಮಸ್ಯೆಗಳ ಬಗೆಗೆ ತುಂಬ ಚಿಂತಿಸಿದವರು ಗಾಂಧೀಜಿ. "ನಮ್ಮ ದೇಶದ ದಾರಿದ್ರ್ಯ ಜನರನ್ನು ಅರೆದು ಹಾಕುತ್ತಿದೆ. ಪ್ರತಿ ವರುಷವೂ ಹೆಚ್ಚು–ಹೆಚ್ಚು ಜನರನ್ನು ಭಿಕ್ಷುಕರನ್ನಾಗಿ ಮಾಡುತ್ತಿದೆ. ಅನ್ನಕ್ಕಾಗಿ ಅವರು ಪಡುವ ಅತ್ಯಂತ ಕಷ್ಟ ಅವರನ್ನು ಪೂರ್ಣ ನಿರಾಶರನ್ನಾಗಿ ಮಾಡಿ ಆತ್ಮಗೌರವ, ಮಾನ ಇವುಗಳ ಭಾವನೆಯನ್ನೇ ಅವರಲ್ಲಿ ತೊಡೆದುಹಾಕುತ್ತಿದೆ. ನಮ್ಮ ಧನಿಕರಾದ ದಾನಿಗಳು ಅವರಿಗೆ ಕೆಲಸವನ್ನು ಒದಗಿಸಿಕೊಟ್ಟು ಅವರು ಕೆಲಸಮಾಡಬೇಕೆಂದು ಒತ್ತಾಯಪಡಿಸುವುದಕ್ಕೆ ಬದಲಾಗಿ ಅವರಿಗೆ ಭಿಕ್ಷೆಯನ್ನೀಯುತ್ತಾರೆ". ಗಾಂಧೀಜಿ ಕನಸು ರಾಮರಾಜ್ಯದ ಕನಸು. ಹರಿಜನರ ಉದ್ಧಾರ, ಹಳ್ಳಿಗಳ ಪ್ರಗತಿ, ಗುಡಿಕೈಗಾರಿಕೆಗಳ ಅಭಿವೃದ್ಧಿ – ಮುಂತಾದ ಹಲವು ಸಂಗತಿಗಳು ಅದರ ಪ್ರಮುಖ ಅಂಶಗಳಾಗಿದ್ದವು. ಆದರೆ ಅವರ ರಾಜಕೀಯ, ಧಾರ್ಮಿಕ, ಸಾಮಾಜಿಕ ಚಟುವಟಿಕೆಗಳೆಲ್ಲ ಹಿಂದೂ ಧರ್ಮ ಪರಂಪರೆಯಿಂದ ಹೊರತಾಗಿರಲಿಲ್ಲ.

ಗಾಂಧೀಜಿ ನೇತೃತ್ವದಲ್ಲಿ ನಡೆದ ರಾಷ್ಟ್ರೀಯ ಚಳವಳಿ ಕೇವಲ ರಾಜಕೀಯ ಬಂಧನದಿಂದ ಬಿಡುಗಡೆಗೊಳ್ಳುವುದಷ್ಟೇ ಆಗಿರಲಿಲ್ಲ. ದೇಶದ ಸರ್ವಾಂಗೀಣ ಪ್ರಗತಿಯನ್ನು ಅದು ಉದ್ದೇಶವಾಗಿರಿಸಿಕೊಂಡಿತ್ತು. ಹಾಗಾಗಿ ಗಾಂಧಿ ಸಂತ ಸದೃಶರೂ ಬುದ್ಧಿವಂತರಷ್ಟೇ ಆಗಿರಲಿಲ್ಲ. ಅವರೊಂದು ಸಂಸ್ಥೆ ಎನಿಸಿದ್ದರು. ಅವರ ಬಗೆಗೆ ಅಂಥ ಅಭಿಪ್ರಾಯ ಮೂಡಿದ್ದರಿಂದ ಅವರ ವರ್ಚಸ್ಸು ಹೆಚ್ಚಿತು. ಅವರ ವ್ಯಕ್ತಿತ್ವ ಮತ್ತು ಆದರ್ಶಗಳು ಭಾರತೀಯ ಭಾಷೆಗಳ ಮಹಾನ್ ಸಾಹಿತಿಗಳನ್ನೂ ಆಕರ್ಷಿಸದೆ ಬಿಡಲಿಲ್ಲ. ಬರಗೂರು ರಾಮಚಂದ್ರಪ್ಪನವರು ತಮ್ಮದೊಂದು ಲೇಖನದಲ್ಲಿ ಪ್ರಸ್ತಾಪಿಸಿರುವಂತೆ ಬ್ರಿಟಿಷ್ ವಿರೋಧಿ ಚಳವಳಿಯ ಸಂದರ್ಭದಲ್ಲಿ ಮೂರು ಮುಖ್ಯ ಮಾದರಿಗಳು ಕಾಣಿಸುತ್ತವೆ(೨೦೦೧:೫೫೨):

೧. ಗಾಂಧೀಜಿ ನೇತೃತ್ವದ ಬ್ರಿಟಿಷ್ ವಸಾಹತುಶಾಹಿ ವಿರೋಧಿ ಆಂದೋಲನ

೨. ಅಂಬೇಡ್ಕರ್ ನೇತೃತ್ವದ ವರ್ಣಾಶ್ರಮ ವಿರೋಧಿ ಸಾಮಾಜಿಕ ಆಂದೋಲನ

೩. ಸಮತಾವಾದಿಗಳ ನೇತೃತ್ವದ ಊಳಿಗಮಾನ್ಯ ಪದ್ಧತಿಯನ್ನು ವಿರೋಧಿಸುವ ಆರ್ಥಿಕ ಆಂದೋಲನ.

ಈ ಮೂರು ನೆಲೆಗಳು ಪ್ರಬಲವಾಗಿದ್ದ ಅಂದಿನ ಸನ್ನಿವೇಶದಲ್ಲಿ ಆದ್ಯತೆಯ ಪ್ರಶ್ನೆ ಮುಖ್ಯವಾಯಿತು. ಗಾಂಧೀಜಿ ನೇತೃತ್ವದ 'ಸ್ವಾತಂತ್ರ್ಯ ಹೋರಾಟ'ದಲ್ಲಿ ಇತರೆ ಅಂಶಗಳು ಇದ್ದರೂ ಬ್ರಿಟಿಷ್ ವಸಾಹತುಶಾಹಿ ವಿರೋಧಕ್ಕೆ ಆದ್ಯತೆ – ಸಮತಾವಾದಿ ನೇತೃತ್ವಕ್ಕೆ ಬಾಹ್ಯ ಶತ್ರುವಾದ ಬ್ರಿಟಿಷ್ ವಸಾಹತುಶಾಹಿ ಮತ್ತು ಆಂತರಿಕ ಶತ್ರುವಾದ ಊಳಿಗಮಾನ್ಯ ಪ್ರಭುತ್ವ ಹಾಗೂ ಬಂಡವಾಳಶಾಹಿ ಪ್ರವೇಶದ ಸಮಾನ ವಿರೋಧ ಮುಖ್ಯ. ಅಂಬೇಡ್ಕರ್ ಅವರದು ಸಾಮಾಜಿಕ ಸಮಾನತೆಯ ಆದ್ಯತೆ. ಒಟ್ಟಾರೆ ಈ ಮೂರೂ ಮಾದರಿಗಳಲ್ಲಿಯೂ ಸ್ವಾತಂತ್ರ್ಯದ ಕಲ್ಪನೆ ಇದೆ. ಇವು ಪರಸ್ಪರ ವಿರೋಧಿ ನೆಲೆಗಳಲ್ಲದಿದ್ದರೂ ನಿರ್ದಿಷ್ಟ ಚಾರಿತ್ರಿಕ ಸಂದರ್ಭದಲ್ಲಿ ರೂಪುಗೊಂಡ ಆಲೋಚನಾ ಕ್ರಮಗಳಾಗಿರುವುದನ್ನು ಗಮನಿಸಬೇಕು. ಸಮಷ್ಟಿ ಕ್ರಿಯಾಶೀಲತೆ ಗಾಂಧೀಜಿಯವರ ಹೋರಾಟ ಮನೋಭಾವನೆಯಲ್ಲಿ ಕಾರ್ಯೋನ್ಮುಖವಾಗಿರುವುದನ್ನು ಗುರುತಿಸಬಹುದು.

ವಸಾಹತುಶಾಹಿ ವಿರುದ್ಧದ ಹೋರಾಟವನ್ನು ನಡೆಸುತ್ತಲೇ ಗಾಂಧೀಜಿ ಜಾತಿಪದ್ಧತಿಯ ಸುಧಾರಣೆಯ ಬಗೆಗೂ ಚಿಂತಿಸುತ್ತಿದ್ದರು. ಅದಕ್ಕಾಗಿ 'ಹರಿಜನ'(೧೯೩೩) ಎಂಬ ಪತ್ರಿಕೆಯನ್ನು ಆರಂಭಿಸಿದರು. ಪತ್ರಿಕೋದ್ಯಮ ಬೆಳೆದಿರದಿದ್ದ ಕಾಲದಲ್ಲಿ ಜಾತಿ ಪದ್ಧತಿಯ ವಿರುದ್ಧ ಬರೆಯುವುದು ಸುಲಭದ ಮಾತಾಗಿರಲಿಲ್ಲ. ಅಂಥ ಸಂದರ್ಭದಲ್ಲಿ ಅಸ್ಪೃಶ್ಯರ ಪರವಾಗಿ ಚಿಂತಿಸಲು, ಹೋರಾಡಲು, ಬರೆಯಲು ಪತ್ರಿಕೆಯನ್ನು ಆರಂಭಿಸಿದುದ್ದು ಮಹತ್ವದ ವಿಷಯ. ಸರ್ವರ ಹಿತದ ಜೊತೆಯಲ್ಲಿಯೇ ಅಸ್ಪೃಶ್ಯರ ಹಿತವನ್ನು ಬಯಸಿದ್ದು ಮಾತ್ರ ವಿಶೇಷ ಸಂಗತಿ. ವ್ಯಷ್ಟಿ ನೆಲೆಯ ಮುಕ್ತಿಗಿಂತ ಸಮಷ್ಟಿ ನೆಲೆಯ ಮುಕ್ತಿ ಗಾಂಧೀಜಿಯವರ ಧ್ಯೇಯೋದ್ದೇಶವಾಗಿತ್ತು. ಹೀಗೆ ಸರ್ವರನ್ನೂ ಒಳಗೊಂಡಂತೆ ದೇಶವನ್ನು ಕಟ್ಟುವ ಚಿಂತನೆಯಲ್ಲಿ ಅವರ ಮನಸ್ಸು ಗಟ್ಟಿಗೊಂಡಿತ್ತು.

ಗಾಂಧೀಜಿ ಮತ್ತು ಅಂಬೇಡ್ಕರ್ ಒಂದೇ ಹಾದಿಯಲ್ಲಿ ಹೊರಟ ಸಾಧಕರು. ಆದರೆ ಎರಡು ವಿಭಿನ್ನ ಧಾರೆಗಳಿಂದ ಪರಿಹಾರವನ್ನು ಕಂಡುಕೊಂಡವರು. ಇಬ್ಬರಲ್ಲಿಯೂ ಸ್ವಾತಂತ್ರ್ಯ ಹೋರಾಟದ ಅದಮ್ಯ ಉತ್ಸಾಹವಿತ್ತು ನಿಜ. ಗಾಂಧೀಜಿ ಮಾತ್ರ ಎಲ್ಲವನ್ನೂ ಸ್ವಾತಂತ್ರ್ಯದ ತಕ್ಕಡಿಯಲ್ಲಿಟ್ಟು ತೂಗಿ ನೋಡುತ್ತ ಬಂದರು. ಹಾಗೆ ನೋಡುವುದರಿಂದ ನಮ್ಮ ಸಮಸ್ಯೆಗಳೇನೂ ಬಗೆಹರಿಯುವುದಿಲ್ಲ ಎಂಬ ತೀರ್ಮಾನಕ್ಕೆ ಅಂಬೇಡ್ಕರ್ ಬರಬೇಕಾಯಿತು. ಹೀಗೆ ಅವರಿಬ್ಬರಲ್ಲೂ ತಾತ್ವಿಕ ಭಿನ್ನಾಭಿಪ್ರಾಯಗಳು ಬೆಳೆದವು. ಮುಂದೆ ಅಂಬೇಡ್ಕರ್ ಹೋರಾಟ ತೀವ್ರಗೊಂಡಂತೆಲ್ಲ ಗಾಂಧೀಜಿಯ ಹಿಂದೂಧರ್ಮದ ಬಗೆಗಿನ ಚಿಂತನೆಯಲ್ಲಿಯೂ ಆರೋಗ್ಯಕರವಾದ ಬದಲಾವಣೆಗಳು ಗೋಚರವಾದುವು. ೧೯೩೩ರ ಹೊತ್ತಿಗೆ ಗಾಂಧೀಜಿ 'ಅಸ್ಪೃಶ್ಯತೆಯನ್ನು ತಿರಸ್ಕರಿಸಬೇಕು' ಎನ್ನುವ ಮಟ್ಟವನ್ನು ಮುಟ್ಟಿದ್ದು ಗಮನಾರ್ಹ ಸಂಗತಿ.

ಹರಿಜನ ಪತ್ರಿಕೆ, ಹರಿಜನ ಸೇವಾಸಂಘ, ಅಸ್ಪೃಶ್ಯತಾ ವಿರೋಧಿ ಸಂಘ–ಮುಂತಾದ ಅಸ್ಪೃಶ್ಯರ ಬಗೆಗಿನ ಕಳಕಳಿ ಗಾಂಧೀಜಿ, ಅವರಿಗೆ ಮೊದಲಿನಿಂದಲೂ ಇತ್ತು. ಆದರೆ ಪೂನಾ ಒಪ್ಪಂದದ ಅನಂತರ ಗಾಂಧೀಜಿ ಅಸ್ಪೃಶ್ಯರ ಏಳಿಗೆಯ ವಿಷಯದಲ್ಲಿ ಹೆಚ್ಚಿನ ಆಸಕ್ತಿಯನ್ನು ತಳೆದದ್ದನ್ನು ಗಮನಿಸಬಹುದು.

ಗಾಂಧೀಜಿ ಮತ್ತು ಅಂಬೇಡ್ಕರ್ – ಇಬ್ಬರೂ ದಲಿತ ಸಮಸ್ಯೆಯನ್ನು ಕುರಿತು ತೀವ್ರವಾಗಿ ಆಲೋಚಿಸುತ್ತ ಬಂದವರು. ಅಂಬೇಡ್ಕರ್ ತಮ್ಮ ವಿದ್ವತ್ಪೂರ್ಣ ಬರವಣಿಗೆ, ಕಟುವಿಮರ್ಶೆ ಮತ್ತು ಸಂಘಟಿತ ಯತ್ನಗಳಿಂದ ಸಮಸ್ಯೆಯನ್ನು ಬಹಿರಂಗಗೊಳಿಸಿ ಪರಿಹಾರಕ್ಕೆ ಹೋರಾಡಿದರೆ ಗಾಂಧೀಜಿ ಸಮಸ್ಯೆಯನ್ನು ತಮ್ಮದೇ ಆಗಿಸಿಕೊಂಡು ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದರು.

ಸ್ವಾತಂತ್ರ್ಯಪೂರ್ವದಲ್ಲಿ ಗಾಂಧೀಜಿಯ ಅನುಯಾಯಿಗಳಾದ ಗೋಪಾಲಸ್ವಾಮಿ ಅಯ್ಯರ್, ತಗಡೂರು ರಾಮಚಂದ್ರರಾಯ, ಕುದ್ಮಲ್ ರಂಗರಾಯ, ಹರ್ಡೇಕರ್ ಮಂಜಪ್ಪ, ಕಾರ್ನಾಡ ಸದಾಶಿವರಾಯ –ಮೊದಲಾದವರು ದಲಿತರನ್ನು ಉದ್ಧರಿಸುವ ಕೆಲವು ಪ್ರಗತಿಪರ ಕೆಲಸಗಳಲ್ಲಿ ತೊಡಗಿದ್ದು ಚಾರಿತ್ರಿಕ ಸಂಗತಿ. ಈ ರೀತಿಯ ಇವರ ಕ್ರಿಯಾಶೀಲ ವ್ಯಕ್ತಿತ್ವ ದಲಿತರಲ್ಲಿ ಸ್ವಾಭಿಮಾನ ಮೂಡಿಬರಲು ಕಾರಣವಾಯಿತು. ಇಂಥ ಚಟುವಟಿಕೆಗಳಿಗೆ ಬಲಬರುವ ವಾತಾವರಣ ಕರ್ನಾಟಕದಲ್ಲಿ ಹೆಚ್ಚಾಯಿತು. ಭೀಮಸೇನೆ ಮತ್ತು ಕಮ್ಯುನಿಸ್ಟ್ ಪಕ್ಷದ ಚಟುವಟಿಕೆಗಳೂ ದಲಿತರ ಜಾಗೃತಿಗೆ ಕಾರಣವಾದವು. ೧೯೭೪ರಿಂದೀಚೆಗೆ ಜರುಗಿದ ಕೆಲವು ಘಟನೆಗಳು, ಚಳವಳಿಗಳು ದಲಿತ ಬಂಡಾಯದ ಮೇಲೆ ಪರಿಣಾಮವನ್ನು ಬೀರಿದ್ದುಂಟು. ಅವನ್ನು ಚಾರಿತ್ರಿಕ ಮಹತ್ವದ ದೃಷ್ಟಿಯಿಂದ ಗಮನಿಸಲೇಬೇಕಾಗಿದೆ.

ಭೂಆಕ್ರಮಣ ಹೋರಾಟಗಳು, ವೆಂಕಟಸ್ವಾಮಿ ಆಯೋಗದ ವರದಿ, ಮುನಿವೆಂಕಟಪ್ಪನವರ 'ಕೆಂಡದ ನಡುವೆ ಪ್ರಕರಣ', ಗಾಂಧಿ ಚಲನಚಿತ್ರದ ಬಹಿಷ್ಕಾರ, ಖೋಟಾ ಜಾತಿಪತ್ರಗಳ ಹಂಚಿಕೆ ವಿರುದ್ಧದ ಹೋರಾಟ, ಬೆತ್ತಲೆ ಸೇವೆ, ದೇವದಾಸಿ ಪದ್ಧತಿ ವಿರುದ್ಧದ ಹೋರಾಟ, ದಲಿತರಿಗೆ ಮಲ ತಿನ್ನಿಸಿದ ಪ್ರಕರಣ, ಬೆಲ್ಚಿ, ಕುದುರೆ ಮೋತಿ ಪ್ರಕರಣ, ಬೆಂಡಿಗೇರಿ ಪ್ರಕರಣ ಚುನಾವಣಾ ಬಹಿಷ್ಕಾರ – ಮುಂತಾದ ಘಟನೆಗಳು ದಲಿತ ಚಳವಳಿಗೆ ಹೆಚ್ಚು ಚಾಲನೆ ನೀಡಿದ್ದಲ್ಲದೆ ದಲಿತ ಸಾಹಿತ್ಯ ರಚನೆಯ ಸಂದರ್ಭದಲ್ಲೂ ಪರಿಣಾಮಕಾರಿಯಾದ ಕೆಲಸ ಮಾಡಿವೆ.

ಸ್ವಾತಂತ್ರ್ಯಪೂರ್ವದಲ್ಲಿ ದಲಿತರು ಹೀನಾಯ ಸ್ಥಿತಿಯಲ್ಲಿದ್ದರು. ಸಂಪೂರ್ಣ ಅನಕ್ಷರಸ್ಥರಾಗಿದ್ದ ಇವರು ಬೇರೆಯವರ ಕೈಕೆಳಗೆ ದುಡಿದೂ ದುಡಿದೂ ಕಂಗಾಲಾಗಿದ್ದರು. ಗುಲಾಮಗಿರಿಯನ್ನು ಮಾನಸಿಕವಾಗಿ ಒಪ್ಪಿಕೊಂಡೇಬಿಟ್ಟಿದ್ದರು. ಇವರಿಗೆ ತಮ್ಮ ಬದುಕಿನ ಬಗೆಗೆ ತಿಳಿವಳಿಕೆ ಇರಲಿಲ್ಲ. ಸ್ವಾತಂತ್ರ್ಯಾನಂತರದ ತಲೆಮಾರಿನವರಲ್ಲಿ ವ್ಯವಸ್ಥೆಯ ಜೊತೆ ಹೊಂದಿಕೊಳ್ಳುವುದನ್ನು ರೂಢಿಸಿಕೊಂಡದ್ದನ್ನು ಗಮನಿಸಬಹುದು. ಇವರು ಅಕ್ಷರಾಭ್ಯಾಸ ಮಾಡಿದ್ದರೂ ತಾವು ಸಿಲುಕಿರುವ ಅನ್ಯಾಯ, ಅಸಮಾನತೆಗಳನ್ನು

ಪ್ರತಿಭಟಿಸಬೇಕೆಂದು ಗೊತ್ತಿದ್ದರೂ ಪ್ರತಿಭಟಿಸಲಾಗದ ಸ್ಥಿತಿಯಲ್ಲಿದ್ದವರು. ಇಂಥ ಸಮೂಹದ ನಡುವೆ ಅಲ್ಪಸ್ವಲ್ಪ ಶ್ರಮವಹಿಸಿ ಸಣ್ಣಪುಟ್ಟ ಕೆಲಸಗಳನ್ನು ಬೆರಳೆಣಿಕೆಯ ಮಂದಿ ಹುಡುಕಿಕೊಂಡಿದ್ದುಂಟು. ಆಧುನಿಕ ವಿದ್ಯಮಾನಗಳ ಫಲಿತದಿಂದಾಗಿ ಈ ವರ್ಗದಲ್ಲಿ ಅಕ್ಷರ ಕಲಿಯುವವರ ಸಂಖ್ಯೆ ಜಾಸ್ತಿಯಾಗುತ್ತ ಬಂತು. ವ್ಯವಸ್ಥೆಯ ಬಗೆಗೆ ಅರಿವು ಮೂಡಿತು. ಅನ್ಯಾಯಗಳನ್ನು ಕಂಡು ಪ್ರತಿಭಟಿಸಬೇಕೆಂಬ ಪ್ರಜ್ಞೆ ಬೆಳೆಯಿತು. ತಮ್ಮ ಅನುಭವಗಳಿಗೆ ಅಭಿವ್ಯಕ್ತಿ ನೀಡುವ ಪ್ರಯತ್ನದಲ್ಲಿ ತೊಡಗಿದರು. ಇವರು ಬರೆದ ಸಾಹಿತ್ಯ ಅಭಿವ್ಯಕ್ತಿ ಸ್ವಾತಂತ್ರ್ಯದಿಂದ, ಸೈದ್ಧಾಂತಿಕ ನಿಲುವಿನಿಂದ ವಿಶಿಷ್ಟವೆನಿಸಿತು. ಸಮಾನತೆಯನ್ನು ಬಯಸುವ ಈ ಸಾಹಿತ್ಯ ಶ್ರಮಜೀವಿಗಳ ಬದುಕಿನ ಸ್ಪಂದನವಾಯಿತು.

ಸ್ವಾತಂತ್ರ್ಯಾನಂತರದ ದಿನಗಳಲ್ಲಿ ರೂಢಿಗೆ ಬಂದ ಶಿಕ್ಷಣ ಕ್ರಮ, ಗಾಂಧೀಜಿ, ಲೋಹಿಯಾ ವಿಚಾರಧಾರೆ ಮತ್ತು ಅಂಬೇಡ್ಕರ್ ಚಳವಳಿಯ ಪ್ರಭಾವ ಮತ್ತು ಆಧುನಿಕ ವಿದ್ಯಮಾನಗಳಿಂದಾದ ದೃಷ್ಟಿಕೋನ ಇವುಗಳಿಂದಲೂ ದಲಿತರಲ್ಲಿ ಜಾಗೃತಿ ಮೂಡಿತು.

ಹಾಗೆಯೇ ಶತಮಾನಗಳಿಂದ ಅವರನ್ನು ಕಾಡುತ್ತ ಬಂದಿರುವ ಅಸ್ಪೃಶ್ಯತೆ, ಧಾರ್ಮಿಕ, ಸಾಮಾಜಿಕ ಅಮಾನುಷ ಪದ್ಧತಿಗಳು, ಅಪಮಾನದ ಸಂಗತಿಗಳು ಸಾಹಿತ್ಯದಲ್ಲಿ ಅನಾವರಣಗೊಂಡವು. ದಲಿತನೊಬ್ಬನ ಸಂಕಷ್ಟಗಳು ಸಾಹಿತ್ಯ ಸಾಮಾಜಿಕ ಸಂಘರ್ಷವೊಂದಕ್ಕೆ ಪ್ರೇರಣೆಯಾಗಬೇಕು. ಇದು ಸಾಹಿತ್ಯದ ಮುಖ್ಯ ಲಕ್ಷಣವೆನಿಸಿತು. ಪೂರ್ಣವಾಗಿ ದಲಿತ ಲೋಕವನ್ನು ದಲಿತ ಸಂಸ್ಕೃತಿಯ ಸೂಕ್ಷ್ಮಗಳನ್ನು ತೆರೆದಿಡುವುದೇ ಇಲ್ಲಿ ಪ್ರಮುಖ ವಿಷಯವಾಯಿತು.

ಕನ್ನಡದ ದಲಿತ ಲೇಖಕರಲ್ಲಿ ಅಂಬೇಡ್ಕರ್ ಚಿಂತನ ಕ್ರಮವಿರುವಂತೆ ಗಾಂಧೀ ಚಿಂತನ ಕ್ರಮವೂ ಇದೆ. ಈ ಎರಡೂ ಚಿಂತನ ಕ್ರಮಗಳ ನಡುವೆ ದಲಿತ ಹಾಗೂ ದಲಿತೇತರರ ಮಧ್ಯೆ ಮುಖಾಮುಖಿಯಾದ ಸಂಘರ್ಷದ ಸನ್ನಿವೇಶಗಳೂ ಇವೆ.

ಮೊದಲ ತಲೆಮಾರಿನ 'ದಲಿತ ಲೇಖಕರನ್ನು ಗಮನದಲ್ಲಿರಿಸಿಕೊಂಡು ಹೇಳುವುದಾದರೆ ಉತ್ತರ ಕರ್ನಾಟಕದ ದಲಿತ ಲೇಖಕರ ಮೇಲೆ ಅಂಬೇಡ್ಕರ್ ಚಿಂತನೆ ಪ್ರಭಾವ ಬೀರಿದ್ದರೆ ದಕ್ಷಿಣ ಕರ್ನಾಟಕದ ದಲಿತ ಲೇಖಕರ ಮೇಲೆ ಗಾಂಧೀಜಿ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಭಾವವಿರುವುದನ್ನೂ ಗುರುತಿಸಬಹುದು. ದಲಿತ ಪ್ರಜ್ಞೆಯನ್ನಾಗಲೀ, ದಲಿತ ಪರಿಭಾಷೆಯನ್ನಾಗಲೀ ಹೆಸರಿಸದೆ ಜನಸಾಮಾನ್ಯರ ಕಷ್ಟ ಸುಖಗಳ ಬಗ್ಗೆ ಸರಳ ಸಾಮಾನ್ಯ ಭಾಷೆಯಲ್ಲಿ ಸಾಹಿತ್ಯ ರಚಿಸಿದವರೂ ಇದ್ದಾರೆ.

ಅಪಾರ ಸಂಖ್ಯೆಯಲ್ಲಿ ಪತ್ತೇದಾರಿ ಕಾದಂಬರಿಗಳನ್ನು ನೀಡಿದ ಎನ್. ನರಸಿಂಹಯ್ಯ, ಮೇಲ್ವರ್ಗದ ಲೇಖಕರ ನಡುವೆ ಉತ್ತಮ ರೀತಿಯ ಸಾಹಿತ್ಯ ಕೃತಿಗಳನ್ನು ನೀಡಿದ ಜಿ. ವೆಂಕಟಯ್ಯ, ದೇವೇಂದ್ರ ನಾಯಕರಂತಹ ದಲಿತ ಲೇಖಕರನ್ನು ಇಲ್ಲಿ ಸ್ಮರಿಸಬಹುದು.

ಮೊದಲ ತಲೆಮಾರಿನವರ ವಿಷಯವಿರಲಿ, ಎಪ್ಪತ್ತರ ದಶಕದ ವಾತಾವರಣವೂ ಈಗ ಇಲ್ಲವಾಗಿದೆ. ದಲಿತ ಬಂಡಾಯ ಚಳವಳಿ, ಸಂಘರ್ಷಗಳಿಗೆ ಇದ್ದ ಕಾರಣಗಳೂ ಈಗ ಇಲ್ಲ. ರಾಜಕೀಯವಾದ, ಸಾಮಾಜಿಕವಾದ ಸವಲತ್ತುಗಳೇನೋ ಲಭ್ಯವಾಗುತ್ತಿವೆ. ಹಾಗಾಗಿ ಬರಹಕ್ಕೆ ಒತ್ತಡ ಇಲ್ಲದಂತಾಗಿದೆ. ಒತ್ತಡ ಇದ್ದಾಗ, ಕಾವು ಇದ್ದಾಗ ಮಾತ್ರ ಕಾವ್ಯ ಇರುತ್ತದೆ. ಸಾಹಿತ್ಯದ ವಿಷಯದಲ್ಲಿ ಮಾತ್ರವಲ್ಲ ಒಟ್ಟಾರೆಯಾಗಿ ನೋಡಿದರೆ ನಮ್ಮಲ್ಲಿ ಸೃಜನಶೀಲತೆಯೇ ಬತ್ತಿಹೋಗಿದೆ. ಗಮನ ಇನ್ನೆತ್ತಲೋ ಹೋಗಿದೆ. ಜಾಗತೀಕರಣ, ಮುಕ್ತ ಮಾರುಕಟ್ಟೆ, ಆರ್ಥಿಕ ಉದಾರೀಕರಣ, ಬಹುರಾಷ್ಟ್ರೀಯ ಕಂಪನಿಗಳ ಆಗಮನದ ಪರಿಣಾಮ, ಪ್ರಾಧಾನ್ಯ ನಮ್ಮ ಜೀವನದ ರೀತಿನೀತಿಗಳ ಆದ್ಯತೆಗಳ ಮೇಲಾಗಿದೆ. ನಮ್ಮ ಆಲೋಚನಾ ವಿಧಾನವೇ ಕುಂಠಿತವಾಗಿದೆ. ಇವುಗಳಿಂದ ಸಾಮಾಜಿಕ, ಆರ್ಥಿಕ ಕ್ಷೇತ್ರದ ಸಮಸ್ಯೆಗಳು ಹುಟ್ಟಿಕೊಂಡಿವೆ. ಹಂಗರವಳ್ಳಿಯಂಥ ಪ್ರಕರಣಗಳು ಜರುಗಿದ್ದರೂ ದಲಿತ ಲೇಖಕರು ಇವುಗಳ ಬಗ್ಗೆ ಚಕಾರ ಎತ್ತಲಿಲ್ಲ. ಇದಕ್ಕೆ ಮುಂಚೆ ಬೆಲ್ಚಿ, ಕುದುರೆ ಮೋತಿ ಪ್ರಕರಣ ಜರುಗಿದಾಗ ಕಾವ್ಯ, ಕತೆ, ನಾಟಕಗಳೇ ಹುಟ್ಟಿಕೊಂಡಿದ್ದವು. ಮೊದಲಿನ ಹಾಗೆ ಸೃಜನಾತ್ಮಕ ಪ್ರಕ್ರಿಯೆ ಏಕೆ ಸಾಧ್ಯವಾಗುತ್ತಿಲ್ಲ ಎಂಬ ಪ್ರಶ್ನೆ ವಿಪರೀತವಾಗಿ ಕಾಡುತ್ತಿದೆ.

ಪರಾಮರ್ಶನ ಗ್ರಂಥಗಳು

೧. ಮೋಹನದಾಸ್ ಕರಮ ಚಂದ್ ಗಾಂಧಿ (ಅನು: 'ಇಬ್ಬರು ಕನ್ನಡಿಗರು') — ೧೯೨೫ — ಸತ್ಯ ಶೋಧನೆ, ಸತ್ಯಶೋಧನ ಪುಸ್ತಕಾಲಯ, ಬೆಂಗಳೂರು

೨. ಗೊರೂರು ರಾಮಸ್ವಾಮಿ ಅಯ್ಯಂಗಾರ್ (ಅನು) — ೧೯೯೫ — ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆ, ನವಜೀವನ ಪ್ರಕಾಶನ ಮಂದಿರ, ಅಹಮದಾಬಾದ್

೩. ಬರಗೂರು ರಾಮಚಂದ್ರಪ್ಪ — ೨೦೦೧ — ಸಂಸ್ಕೃತಿ, ಶ್ರಮ ಮತ್ತು ಸೃಜನಶೀಲತೆ, ಅಂಕಿತ ಪುಸ್ತಕ, ಬೆಂಗಳೂರು

೪ ಚಂದ್ರಶೇಖರ್ ಎಸ್. — ೧೯೯೨ — ಅಂಬೇಡ್ಕರ್ ಮತ್ತು ಗಾಂಧಿ, ಅಕ್ಷರ ಪ್ರಕಾಶನ, ಹೆಗ್ಗೋಡು

□

ಡಾ. ಗೀತಾ ನಾಗಭೂಷಣ ಅವರ 'ಹಸಿಮಾಂಸ ಮತ್ತು ಹದ್ದುಗಳು'

ವಿನೋದಮ್ಮ

ಎಪ್ಪತ್ತರ ದಶಕದಿಂದ ಈಚೆಗೆ ಕನ್ನಡ ಕಾದಂಬರಿ ಸಾಹಿತ್ಯದಲ್ಲಿ ಭಿನ್ನ ಭಿನ್ನ ಪ್ರದೇಶಗಳ ಗ್ರಾಮೀಣ ಬದುಕಿನ ತಳಸಮುದಾಯಗಳ ವಾಸ್ತವ ಚಿತ್ರಣಗಳು ಹೆಚ್ಚು ಹೆಚ್ಚು ದಾಖಲಾಗತೊಡಗಿವು. ಈ ಮುಖೇನ ಗ್ರಾಮಭಾರತದ ಸಮಗ್ರ ಸಾಮಾಜಿಕ ಸ್ಥಿತಿಯ ಆಳ-ಅಗಲಗಳು ಸಾಹಿತ್ಯ ಲೋಕಕ್ಕೆ ನಿಧಾನವಾಗಿ ಪ್ರವೇಶಿಸತೊಡಗಿದವು.

ಹೈದರಾಬಾದ್ ಕರ್ನಾಟಕ ಮತ್ತು ಆಧುನಿಕ ಕನ್ನಡ ಸಾಹಿತ್ಯ ಎಂದಾಗಲೆಲ್ಲ ಥಟ್ಟನೆ ನೆನಪಾಗುವ ಬೆರಳೆಣಿಕೆಯಷ್ಟು ಹೆಸರುಗಳಲ್ಲಿ ಶ್ರೀಮತಿ ಗೀತಾ ನಾಗಭೂಷಣ ಅವರ ಹೆಸರು ಅಗ್ರಪಂಕ್ತಿಯಲ್ಲಿ ನಿಲ್ಲುತ್ತದೆ. ಕನ್ನಡ ಸಾಹಿತ್ಯದ ಎರಡು ಸಾವಿರ ವರ್ಷಗಳ ದೀರ್ಘ ಇತಿಹಾಸದಲ್ಲಿ ಮಹಿಳೆಯರ ಪಾಲುಗಾರಿಕೆ ತೀರ ಗೌಣ ಎಂದು ಹೇಳಿಬಿಟ್ಟೊಡನೆಯೇ ಸಾಹಿತ್ಯ ಪ್ರಪಂಚದ ಮೌಲ್ಯಮಾಪನ ಮಾಡಿದಂತಾಗಲಾರದು. ಬರವಣಿಗೆಯಂತಹ ಕ್ರಿಯಾಶೀಲ ಚಟುವಟಿಕೆಗಳು ಒಂದು ಜನಾಂಗದ ಬದುಕಿನಲ್ಲಿ ಸೃಷ್ಟಿಯಾಗುವುದು ಸುಲಭ ಸಾಧ್ಯವಲ್ಲ. ಹೀಗೆಂತಲೇ ಪುರುಷ ಪ್ರಧಾನ ವ್ಯವಸ್ಥೆಯು ಬಹುಕಾಲದಿಂದಲೂ ಅನೂಚಾನವಾಗಿ ನಡೆದುಕೊಂಡು ಬರುತ್ತಿರುವುದು ಅಪರಿಹಾರ್ಯ ಸತ್ಯವೆನಿಸಿದೆ. ವರ್ಣಾಶ್ರಮ ಪದ್ಧತಿಯನ್ನು ಒಪ್ಪಿಕೊಂಡು ಬಂದ ಭಾರತದಂತಹ ಶ್ರೇಣೀಕೃತ ಸಮಾಜದಲ್ಲಿ ಬೌದ್ಧಿಕ ಸಾಮರ್ಥ್ಯ ಮತ್ತು ಶಾರೀರಿಕ ಸಾಮರ್ಥ್ಯಗಳನ್ನು ಎರಡು ವಿಭಿನ್ನ ಗುಂಪುಗಳಿಗೆ ಆರೋಪಿಸಿ ಶ್ರೇಷ್ಠತೆ-ಕನಿಷ್ಠತೆಯ ಹಣೆಪಟ್ಟಿಗೂ ಒಳಗಾಗಿಸಲಾಗಿದೆ.

ಅಕ್ಷರಾಧ್ಯಯನ-ಅಧ್ಯಾಪನ, ಸೃಷ್ಟಿಶೀಲ ಕಲೆಗಳೆಲ್ಲ ಆಯಾ ಜಾತಿ, ಮತ, ಧರ್ಮದ ಅನಿರ್ಬಾಧಿತ ಸೊತ್ತುಗಳಾಗಿ ಬೆಳೆದುಬಂದಿರುವ ಸಂದರ್ಭದಲ್ಲಿ ಸಹಜವಾಗಿಯೇ ವರ್ಣವ್ಯವಸ್ಥೆಯ ಕೆಳಹಂತದಲ್ಲಿರುವ ಶೂದ್ರರು ಮತ್ತು ಸ್ತ್ರೀಯರನ್ನು ಉದ್ದೇಶಪೂರ್ವಕವಾಗಿಯೇ ಸೃಜನಶೀಲ ಕಾರ್ಯಗಳಿಂದ ದೂರವಿಟ್ಟರು. ದುಡಿಯುವ

ವರ್ಗದ ಜನತೆಯಲ್ಲಿ(ಸ್ತ್ರೀಯರೂ ಸೇರಿದಂತೆ) ಅಪಾರ ಕ್ರಿಯಾತ್ಮಕ ಸಾಧ್ಯತೆ ಇದ್ದಾಗಲೂ ಲಾಭಕೋರ ಜಮೀನ್ದಾರಿ ವ್ಯವಸ್ಥೆ ಹಲವಾರು ಹುನ್ನಾರಗಳನ್ನು ಹೂಡಿ, ಅದನ್ನು ಚಿವುಟಿ ಹಾಕುವ ಕ್ರೌರ್ಯ ಎಸಗಿದುದು ಈಗ ಚರಿತ್ರೆ. ಆದರೆ ಕ್ರಿಯಾತ್ಮಕತೆ ಈ ಎಲ್ಲ ಅವಾಂತರ, ಅಡ್ಡಿಆತಂಕಗಳನ್ನು ಕಿತ್ತೊಗೆದು ಪುಟಿದೇಳುವ ಜೀವದ್ರವ್ಯ. ಈ ಕಾರಣವಾಗಿಯೇ ದೇಶೀ ಸಂಸ್ಕೃತಿಯ ಜಾನಪದೀಯತೆ ಹತ್ತಾರು ಕಲಾಪ್ರಕಾರಗಳಲ್ಲಿ ಅನಾಮಧೇಯವಾಗಿಯೇ ಹರಿದು ಬಂದಿದೆ. ಎಂತಲೇ ಕನ್ನಡ ಸಾಹಿತ್ಯದ ಮೌಖಿಕ ಪರಂಪರೆಯ ಭಂಡಾರದಲ್ಲಿ ಮಹಿಳೆಯರ ಪಾಲು ಇಂತಿಷ್ಟೆ ಎಂದು ನಿರ್ಧರಿಸಲು ಆಧಾರಗಳಿಲ್ಲ. ಸ್ತ್ರೀಪರ ಧೋರಣೆಯುಳ್ಳ ಹಲವು ತ್ರಿಪದಿಗಳು ಇಂದಿಗೂ ಮಹಿಳಾ ಶೋಷಣೆಯ ವಿಭಿನ್ನ ಆಯಾಮಗಳನ್ನು ದಿಗ್ದರ್ಶಿಸುತ್ತದೆ. ಆದಾಗ್ಯೂ ಶಿಷ್ಟ ಸಾಹಿತ್ಯದ ಧಾರೆಯಲ್ಲಿ ಮಹಿಳೆಯರ ಸಹಭಾಗಿತ್ವದ ಕೊರತೆ ಎದ್ದು ಕಾಣಿಸುತ್ತದೆ. ಈ ಕೊರತೆಗಿರುವ ಚಾರಿತ್ರಿಕ ಕಾರಣಗಳ ಚರ್ಚೆ ಇಲ್ಲಿ ಅನಗತ್ಯ. ಆಧುನಿಕ ಕನ್ನಡ ಸಾಹಿತ್ಯದ ಸುಗ್ಗಿಯ ಸಂದರ್ಭದಲ್ಲಿ, ಮುಖ್ಯ ಬೆಳೆಯ ನಡುವೆ ಎಲ್ಲೊ ತಪ್ಪಿಸಿಕೊಂಡು ಬಿದ್ದ ಸೂರ್ಯಕಾಂತಿಯ ಬೀಜಗಳು ಹೊಡೆಮುರಿದು ಬೆಳೆದಂತೆ ಕೆಲವು ಮಹಿಳೆಯರು ಬರವಣಿಗೆಗೆ ಇಳಿದಿದ್ದಾರೆ. ಈ ಮಾತು ಬೆಂಗಳೂರು, ಮೈಸೂರು, ಮಂಗಳೂರು ಭಾಗಗಳಿಗೆ ಅನ್ವಯವಾದರೂ ಹೈದರಾಬಾದ್ ಕರ್ನಾಟಕವೆಂಬುದು ಆ ಹೊತ್ತಿಗೆ ಕನ್ನಡಕ್ಕೆ ಅಪರಿಚಿತವೆಂಬಂತಹ ವಿಷಾದನೀಯ ಸ್ಥಿತಿಯಲ್ಲಿತ್ತು. ಉರ್ದುವಿನ ಶೇರ-ಶಾಹೇರಿ, ಸರ್ಕಾರಿ ದಸ್ತಾವೇಜುಗಳ 'ಜೀ ಹುಜೂರ್' ಸಂಸ್ಕೃತಿಯಲ್ಲಿ ದುಡಿಯುವವರ, ಕೂಲಿಕಾರರ ನೆಲದ ಭಾಷೆಯಾಗಿ ಕನ್ನಡ ಉಳಿದದ್ದೇ ದೊಡ್ಡ ಸಾಹಸ. ಅ ಕನ್ನಡದಲ್ಲಿ ಬರೆದು ಬದುಕುವುದು ಅಥವಾ ಸಾರ್ವಜನಿಕವಾಗಿ ಗುರುತಿಸಿಕೊಳ್ಳುವುದು ಸುಲಭದ ಮಾತಾಗಿರಲಿಲ್ಲ.

"ನಮ್ಮ ಭಾಗದ ಹಿರಿಯ ತಲೆಮಾರಿನ ಹೆಣ್ಣುಮಕ್ಕಳು ಪರದೆಯಿಂದ ಹೊರಬಂದು ಪಿಳಿಪಿಳಿ ಕಣ್ಣು ಬಿಡುತ್ತ ಶಾಲೆ ಎಂಬ ಜಗತ್ತಿಗೆ ತೆರೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಕನ್ನಡವು ನವೋದಯ, ಪ್ರಗತಿಶೀಲ, ನವ್ಯದಂತಹ ಚಳವಳಿಗಳ ಭರಾಟೆಯಲ್ಲಿತ್ತು. ಇದೇ ಹೊತ್ತಿನಲ್ಲಿ ಮಹಿಳಾ ಸಂವೇದನೆ ಎಂಬುದೊಂದು ಧ್ವನಿ ಎದ್ದು ಎಂ.ಕೆ. ಇಂದಿರಾ, ತ್ರಿವೇಣಿ, ಎಚ್.ಎಸ್. ಪಾರ್ವತಿ, ಅನುಪಮಾ ನಿರಂಜನ ಮುಂತಾದ ಒಬ್ಬಿಬ್ಬರಾದರೂ ಗಟ್ಟಿ ಬರಹಗಾರ್ತಿಯರು ಹುಟ್ಟಿಕೊಂಡದ್ದು ಈಗಲೂ ಖುಷಿಕೊಡುವ ಸಂಗತಿ" (ಮೀನಾಕ್ಷಿ ಬಾಳಿ, ೨೦೧೦:೬೬).

ಈ ಖುಷಿಗೆ ಗರಿಮೂಡಿಸಿ ಹದಿಹರೆಯದ ಹುಡುಗಿಯರಲ್ಲಿ ಕನಸುಗಳನ್ನು ತುಂಬಿದವರೆಂದರೆ ಶ್ರೀಮತಿ ಗೀತಾ ನಾಗಭೂಷಣ. ಅವರು ಈವರೆಗೆ ೨೦ ಕಾದಂಬರಿಗಳನ್ನು, ೫೦ ಬಿಡಿ ಕತೆಗಳನ್ನು, ೧೫ ನಾಟಕಗಳನ್ನು ಬರೆದಿದ್ದಾರೆ.

ನಾನು ವಿಶ್ಲೇಷಿಸುವ ಅವರ ಕಾದಂಬರಿ 'ಹಸಿಮಾಂಸ ಮತ್ತು ಹದ್ದುಗಳು' (೧೯೯೫) ಶೀರ್ಷಿಕೆಯೇ ಕ್ರೌರ್ಯವನ್ನು ಸೂಚಿಸುವಂಥದು. ಹಸಿಮಾಂಸ ಅಂದರೆ

ಮಾಂಸದ ಮುದ್ದೆಯಾದ ಹೆಣ್ಣಿನ ದೇಹ. ಹದ್ದುಗಳೆಂದರೆ ಹೆಣ್ಣಿನ ದೇಹವೆಂಬ ಮಾಂಸಕ್ಕಾಗಿ ದಾಳಿಯಿಡುವ ಆಕ್ರಮಣಕಾರಿ ಸ್ವಭಾವದ, ಅಧಿಕಾರಸ್ಥ ಮತ್ತು ಬಲಾಢ್ಯರಾದ ಪುರುಷರು.

"ಗ್ರಾಮ ಜಗತ್ತು ಎಂದಿಗೂ ತನ್ನ ಆಂತರ್ಯದಲ್ಲಿ ಭಾವನಾತ್ಮಕವಾದ ಗಾಢಸಂಬಂಧ ಸಾಂಸ್ಕೃತಿಕ ಅನನ್ಯತೆಗಳನ್ನು ಒಳಗೊಂಡಿರುತ್ತದೆ. ಆದರೆ ಜಾತಿಪದ್ಧತಿ, ಸಾಂಪ್ರದಾಯಿಕ ಜೀವನಕ್ರಮ ಹಾಗೂ ಜಮೀನ್ದಾರಿಕೆಯ ಗತ್ತಿನ ಪರಿಸರದಲ್ಲಿ ಮನುಷ್ಯ–ಮನುಷ್ಯರ ನಡುವೆ ಅನಂತ ಬಿರುಕು, ಕ್ರೌರ್ಯ, ದೌರ್ಜನ್ಯಗಳೇ ಮುಖ್ಯವಾಗಿ ಬಿಡುತ್ತವೆ. ಮನುಷ್ಯ ತಾನೇ ರೂಢಿಸಿಕೊಂಡ ಸಾಂಪ್ರದಾಯಿಕ ಸಂಕೋಲೆಗಳು ಮಾನವೀಯತೆಗೆ ಬಹು ದೊಡ್ಡ ತೊಡಕಾಗಿವೆ" (ಎಂ.ಎಸ್. ಶೇಖರ್, ೨೦೦೫:೩೬).

ಈ ಕಾದಂಬರಿಯ ಉದ್ದಕ್ಕೂ ಊಳಿಗಮಾನ್ಯ ಸಂಸ್ಕೃತಿಯ ವಕ್ತಾರರಾದ ಗೌಡ, ಕುಲಕರ್ಣಿ ಸಾಹುಕಾರ ಮೊದಲಾದ ಶ್ರೀಮಂತರ ದಬ್ಬಾಳಿಕೆ, ದೌರ್ಜನ್ಯಗಳ ಅಟಾಟೋಪಗಳು ವಿಜೃಂಭಿಸಿವೆ. ಶ್ರೇಣೀಕೃತ ಸಮಾಜ ವ್ಯವಸ್ಥೆಯ ಜಾತಿಪದ್ಧತಿ ಪ್ರಧಾನವಾಗಿ ಬೇರುಬಿಟ್ಟಿದೆ.

ಈ ಕೃತಿಯ ಕಥಾವಸ್ತು ತೀರ ತೆಳುವಾಗಿದ್ದು ಔಪಚಾರಿಕ ನೆಲೆಯಲ್ಲಿ ಸಾಗುತ್ತದೆ ಎನಿಸಿದರೂ ಹೊಲೆ ಮಾದಿಗ ಸ್ತ್ರೀಯರ ಬದುಕಿನ ನಗ್ನ ಸತ್ಯಗಳು ವರದಿ ರೂಪದಲ್ಲಾದರೂ ಕಾಣಿಸಿಕೊಂಡಿರುವುದು ಇಲ್ಲಿಯ ಹೆಚ್ಚುಗಾರಿಕೆ. ಮಾದಿಗ ಫಕೀರಪ್ಪನ ಮಗಳು ಲಚ್ಚಿ, ಚಿಕ್ಕ ಹರೆಯದಲ್ಲಿ ತಾಯಿ, ತಂದೆಯರನ್ನು ಕಳೆದುಕೊಂಡು ಅನಾಥಳಾಗಿ ಬೀದಿಗೆ ಬಿದ್ದು ಕಾಮುಕ ಕುಲಕರ್ಣಿಯ ಕ್ರೂರದೃಷ್ಟಿಗೆ ಬಲಿಯಾಗಿ ಚಿಕ್ಕಂದಿನ ಪ್ರಿಯಕರ ಕಾಸಿನಾತನಿಂದಲೂ ವಂಚಿತಳಾಗಿ ಕಳ್ಳತನದ ಅಪವಾದಕ್ಕೆ ಬಲಿಯಾಗಿ ಜೈಲು ಸೇರುತ್ತಾಳೆ. ಜೈಲಿನಲ್ಲಿ ಪೊಲೀಸರಿಂದ ಬಲತ್ಕಾರಕ್ಕೆ ಒಳಗಾಗುವ ಇವಳು ಅನಂತರ 'ಸ್ತ್ರೀನಿಕೇತನ'ದ ಅಧಿಕಾರಿಗಳ ಒತ್ತಾಯದಿಂದ ಮೈ ಮಾರುವಿಕೆಗೆ ಇಳಿಯುತ್ತಾಳೆ. ಕೊನೆಗೆ ಬಸೆಣ್ಣಿ ಎಂಬ ಅಬ್ಬೇಪಾರಿ, ವಿಧುರ ಚಪರಾಸಿಯಿಂದ ಒತ್ತಾಯಪೂರ್ವಕ ತಾಳಿ ಕಟ್ಟಿಸಿಕೊಂಡು ಅಲ್ಲಿಯೂ ದೈಹಿಕ ಹಿಂಸೆಗೆ ಒಳಗಾಗುತ್ತಾಳೆ. ತನ್ನದಲ್ಲದ ತಪ್ಪಿಗಾಗಿ ಗಂಡ ಹೊರದಬ್ಬಿದಾಗ, ಬಸುರಿಯಾಗಿದ್ದ ಅವಳು ರಸ್ತೆಯ ಮೇಲೆ ದಿನಗಳನ್ನು ಕಳೆದು ಗಂಡುಮಗುವೊಂದಕ್ಕೆ ಜನ್ಮ ನೀಡುತ್ತಾಳೆ. ಅದು ಅವಳಿಗೆ ಮಗುವಾಗಿ ಕಾಣಿಸದೆ ತನ್ನ ಬದುಕಿನಲ್ಲಿ ಬಂದ ಎಲ್ಲ ಕ್ರೂರ ಗಂಡಸರ ಪ್ರತಿನಿಧಿ ಎಂಬಂತೆ ಕಾಣುತ್ತದೆ. ಮಗು ಸಹಿತ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿಗಾಗ, ಮಗು ಸತ್ತು ಅವಳು ಉಳಿದಾಗ 'ಬದುಕು' ಇನ್ನಷ್ಟು ಭಯಂಕರ ಎನಿಸುತ್ತದೆ. ಹೆಣ್ಣೆಂಬ ಹಸಿಮಾಂಸಕ್ಕೆ ಹದ್ದುಗಳಾಗಿ ಎರಗಿ ಬಂದ ಗಂಡಸರಿಗೆ, ಹೆಣ್ಣು ಕೂಡ ಒಬ್ಬ ವ್ಯಕ್ತಿ, ಅವಳಿಗೊಂದು ಬದುಕು–ಅಸ್ತಿತ್ವ ಇದೆ ಎಂದೆನಿಸುವುದಿಲ್ಲ. ಅವರು ಹೆಣ್ತನದ ಮೇಲೆರಗುವ ಕ್ರೌರ್ಯವೇ ಈ ಕಾದಂಬರಿಯ ತಿರುಳು. ಒಂದರ ಹಿಂದೊಂದು ಸರಣಿಯಂತೆ ನಡೆಯುವ ಅತ್ಯಾಚಾರಗಳು ಅಸಹನೀಯವಾದರೂ, ವಾಸ್ತವ ಸತ್ಯಗಳೇ ಆಗಿವೆ.

ಹಳ್ಳಿಗೆ ದೌಡಾಯಿಸಿ ಬಂದ ಬರಗಾಲದಿಂದಾಗಿ "ಹೊಟ್ಟೆಗಾಗಿ ಜನ ದೇವರ ಮೂರ್ತಿಗಳನ್ನು ತಂದು ಬಜಾರಿನಲ್ಲಿ ಹರಾಜಿಗೆ ಹಿಡಿದರು. ಅನ್ನದೇವರ ಮುಂದೆ ಅನ್ಯದೇವರಿನ್ನೆಲ್ಲಿಯದು? ಎಳೆಹರೆಯದ ಹೆಣ್ಣುಗಳ ಶೀಲ ಕಲ್ಬುರ್ಗಿಯ ಮಾರ್ಕೆಟ್ಟಿನ ಬೀದಿಬೀದಿಗಳಲ್ಲಿ ಬೆತ್ತಲಾಗತೊಡಗಿತು. ಏರುಜವ್ವನೆಯರಾದ ಹಳ್ಳಿಯ ಮುಗ್ಧ ಹೆಣ್ಣುಗಳು ಬರೀ ಒಂದು ಹೊತ್ತಿನ ಅನ್ನಕ್ಕಾಗಿ ನಗರದ ಸಿರಿವಂತ ಕಾಮುಕ ರಣಹದ್ದುಗಳ ಕೈದಿಗಳಾದರು. ಕಚ್ಚೆ ಹರುಕರ ಕಾಲ ಕೆಳಗೆ ತಮ್ಮ ಸೆರಗು ಹಾಕಿದರು"(ಪು.೪೮). ಇಂತಹ ವ್ಯವಸ್ಥೆಯಲ್ಲಿ ಸಾಮಾಜಿಕ ಶೋಷಣೆಯೆಂಬುದು ವ್ಯಕ್ತಿಗತವಾಗಿ ನಡೆಯುತ್ತಲೇ ಇರುತ್ತದೆ. ಲಚ್ಚಿಯ ಅಪ್ಪ ಫಕೀರಪ್ಪ ಯುವಕನಾಗಿದ್ದಾಗ ಗುರ್ಲಿಂಗವ್ವನನ್ನು ಮದುವೆಯಾಗಿ ಬಂದಾಗ ಹಿಂದಿನ ಕುಲಕರ್ಣಿ, "ಏ ಹಾದರಕ್ಕ ಹುಟ್ಟಿದವ್ನೇ ನಿನ್ ಹೆಣ್ತಿಗಿ ಕರ್ಕೊಂಡು ಬಾರ್ಲೆ... ಗೌಡ ಕುಲಕರ್ಣಿರು ರುಚಿನೋಡ್ದಮ್ಯಾಲೇ ನೀ ಸೋಬಾನ ಮಾಡ್ಕೋಮಾದು. ಇದು ಈ ಹಳ್ಳಿ ರೀತಿ ರಿವಾಜ ಅಂತ ಗೊತ್ತಿಲ್ಲೇನೋ ಸೂಳ್ಯಾಮಗನೆ?"(ಪು.೧೬) ಎಂದು ಗದರಿಸುವಲ್ಲಿ ಲೈಂಗಿಕ ಶೋಷಣೆಗೆ ಮಾತ್ರ ಯಾವ ಅಸ್ಪೃಶ್ಯತೆಯ ಅಡ್ಡಿಯೂ ಇಲ್ಲದಂಥ ಜಮೀನ್ದಾರಿ ಪದ್ಧತಿಯ ಕ್ರೌರ್ಯದ ಅಟ್ಟಹಾಸವನ್ನು ಗಮನಿಸಬಹುದು. ಆಗ ಗುರ್ಲಿಂಗಿಯೊಂದಿಗೆ ಊರುಬಿಟ್ಟ ಫಕೀರಪ್ಪ ಕುಲಕರ್ಣಿ ಸತ್ತ ನಂತರವೇ ಲಚ್ಚಿ ಎಂಬ ಮಗುವಿನೊಂದಿಗೆ ಮತ್ತೆ ಹಳ್ಳಿಗೆ ಬಂದದ್ದು, ಕಾಲಾನುಕ್ರಮದಲ್ಲಿ ಕ್ರೌರ್ಯದ ಶೋಷಣೆಯ ಮಜಲುಗಳು ಬೇರೆ ಬೇರೆ ರೂಪ ತಾಳಿದವೇ ಹೊರತು ಸಂಪೂರ್ಣವಾಗಿ ನಿಲ್ಲಲಿಲ್ಲವೆಂಬುದು ವಿಪರ್ಯಾಸ!

ಆಳುವ ವರ್ಗಗಳಿಂದ ಕೆಳವರ್ಗದ ಹೆಣ್ಣಿನ ಮೇಲಾಗುವ ಅತ್ಯಾಚಾರ, ಮೇಲ್ವರ್ಗದ ಹೆಣ್ಣಿನ ಜೊತೆಯ ಕೆಳವರ್ಗದವರ ಲೈಂಗಿಕ ಸಂಬಂಧ –ಈ ಎರಡೂ ಸಂದರ್ಭಗಳಲ್ಲಿ ಹೆಣ್ಣು ಲೈಂಗಿಕ ಹಲ್ಲೆಗೆ ಒಳಗಾಗುತ್ತಾಳೆ.

ತಮ್ಮ ನಿಸರ್ಗ ಸಹಜ ಬಯಕೆಗಳನ್ನು ತಾವೇ ಮುಂದಾಗಿ ಪೂರೈಸಿಕೊಳ್ಳುವ ಎದೆಗಾರಿಕೆಯನ್ನು ಕಾದಂಬರಿಯ ಸ್ತ್ರೀ ಪಾತ್ರಗಳು ಪ್ರದರ್ಶಿಸುವುದನ್ನು ಗೀತಾನಾಗಭೂಷಣ ಅವರು ಸ್ತ್ರೀವಾದಿನೆಲೆಯಲ್ಲಿ ಅಭಿವ್ಯಕ್ತಿಸಿದ್ದಾರೆ. ಉದಾ: ಹಳೆಯ ತಲೆಮಾರಿನ ಕುಲಕರ್ಣಿಯ ಹೆಂಡತಿ ಮೀರಾಬಾಯಿ ಮತ್ತು ಆಳುಮಗ ಕಾಳ್ಯಾನ ಸಂಬಂಧವನ್ನು ಗಮನಿಸಬಹುದು. "ದುಡಿಯುವ ಜನಗಳಲ್ಲಿ ಅಪಾರ ಕ್ರಿಯಾತ್ಮಕ ಸಾಧ್ಯತೆಗಳಿದ್ದಾಗ್ಯೂ ಲಾಭಕೋರ ಜಮೀನ್ದಾರೀ ವ್ಯವಸ್ಥೆ ಹಲವು ಹುನ್ನಾರಗಳನ್ನು ಹೂಡಿ ಚಿವುಟಿ ಹಾಕುವ ಕ್ರೌರ್ಯ ಎಸಗಿದ್ದು ಈಗ ಚರಿತ್ರೆ"(ಮೀನಾಕ್ಷಿ ಬಾಳಿ, ೨೦೧೦:೬೬). ಹಳ್ಳಿಯ ದಲಿತವರ್ಗದ ಜನಸಮುದಾಯದ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಕೊಡದಿರುವುದು, ಈಗಾಗಲೇ ಕೊಟ್ಟ ಸಾಲಕ್ಕೆ ಬಡ್ಡಿ ಚಕ್ರಬಡ್ಡಿ ವಿಧಿಸಿ ಅಳಿದುಳಿದ ಜಮೀನನ್ನೇ ನುಂಗಿ ಜೀವನ ಪರ್ಯಂತ ಜೀತದಾಳುಗಳನ್ನಾಗಿ ಮಾಡಿಕೊಳ್ಳುವುದು ತಮ್ಮ ಅಧಿಕಾರವೇನೋ ಎಂಬಂತೆ ವರ್ತಿಸುವ ಜಮೀನ್ದಾರರನ್ನು ಇಲ್ಲಿ ಕಾಣಬಹುದು.

ಅನಾಥೆ ಲಚ್ಚಿ ಕೂಡ ಕೂಲಿ ಮಾಡಿ ವಾಪಸ್ಸಾಗುವಾಗ ನೀರಡಿಕೆಯಿಂದ ಕುಲಕರ್ಣಿಯ ತೋಟದೆಡೆ ಬರುವಾಗ ಅಲ್ಲೇ ಕೆಲಸಮಾಡುತ್ತಿದ್ದ ಕಾಸಿನಾಥ ಅವಳನ್ನು ಕರೆಯುತ್ತಾನೆ. ನಿನ್ನೆಯಿಂದ ಹಸಿವಿನಿಂದ ಬಾಡಿಹೋದ ಪ್ರಿಯತಮೆಯ ಮುಖನೋಡಿ ಮನಕರಗಿ ರಾಮಗುಂಬಳ ಕಾಯಿಯೊಂದನ್ನು ಕಿತ್ತು ತಂದು ಅವಳ ಉಡಿಯಲ್ಲಿಟ್ಟು, ಏನಾದರೂ ಮಾಡಿ ತಿನ್ನು ಎನ್ನುವನು. ಲಚ್ಚಿ ವಿಧಿಯಿಲ್ಲದೆ ಮನೆಕಡೆ ಹೊರಡುವ ಕಾಲುದಾರಿಯಲ್ಲಿ ಇದ್ದಕ್ಕಿದ್ದಂತೆ ಕುಲಕರ್ಣಿ ಎದುರಾಗುವನು. ವಿಕೃತ ಮನಸ್ಸಿನಿಂದ ಅವಳ ಕೈ ಸವರಿದಾಗ ಕುಂಬಳಕಾಯಿ ಕೆಳಗುರುಳಿತು. ಆಗ ಕುಲಕರ್ಣಿ ಆಡುವ ಮಾತುಗಳಲ್ಲಿ ನಯವಾದ ಕ್ರೌರ್ಯವಿದೆ: "ಓ! ನನ್ ತ್ವಾಟದಾಗಿನ ಕುಂಬಳಕಾಯಿ ಕಳುಮಾಡ್ಕೊಂಡು ಹೊಂಟದೇನು? ಇಲ್ಲಿಬಿಡು. ಇವತ್ತ ರಾತರಿ ನಮ್ ತ್ವಾಟದ ಮನೀಗಿ ಬಾ... ನಿನಗೇನು ಹೇಳಿಕೇಳಿ ಯಾರೂ ಇಲ್ಲ" ಎಂದು ವಿಚಿತ್ರ ರೀತಿಯಲ್ಲಿ ನಗುತ್ತಾನೆ(ಪು. ೫೧).

ಇಲ್ಲಿ ಅಧಿಕಾರ ಬಲ ಹಾಗೂ ಹಣಬಲದಿಂದಾಗಿ ಅಸಹಾಯಕ, ಅನಾಥೆಯಾದ ಲಚ್ಚಿಯನ್ನು ತನ್ನ ಕಾಮತೃಷೆ ತೀರಿಸಿಕೊಳ್ಳಲು ಯಾವ ಸಂಕೋಚವೂ ಇಲ್ಲದೆ ದಾರ್ಷ್ಟ್ಯದಿಂದ ಕುಲಕರ್ಣಿ ಕರೆದಾಗ, ಅವಳು ಹಸಿವಿನ ಕಾರಣದಿಂದಾಗಿ ಬಲವಂತವಾಗಿ ತೆಗೆದುಕೊಂಡಿದ್ದ ಕುಂಬಳಕಾಯಿಯನ್ನು ವಾಪಸ್ಸು ಕೊಡಲು ಮುಂದಾಗುತ್ತಾಳೆ. ಲಚ್ಚಿ "ಕುಲಕರ್ಣ್ಣೀರೇ ನಿಮ್ ಕುಂಬಳಕಾಯಿ ನನಗೆ ಬ್ಯಾಡ್ರಿಯಪ್ಪಾ... ಈಕಾ ತಗೋರಿ, ನಾ ರಾತರಿ ನಿಂಬಲ್ಲಿ ಬರಂಗಿಲ್ಲಾ" ಎನ್ನುತ್ತಾಳೆ (ಪು.೫೧). "ಹೆಣ್ಣು ಬದುಕಿನುದ್ದಕ್ಕೂ ಪ್ರತಿಭಟಿಸುತ್ತಲೆ ನಿರಾಶೆಯಿಂದ ಪ್ರಚಾರದ ಮಟ್ಟಕೇರಿ ವ್ಯಕ್ತಿಗತ ಸೇಡಿನಲ್ಲಿ ಸಮಸ್ಯೆಗೆ ಉತ್ತರ ಕಂಡುಕೊಳ್ಳುವುದು ಸೈದ್ಧಾಂತಿಕ ಸಂಘರ್ಷದ ಅರಿವಿನ ಕೊರತೆಯೆನ್ನಬಹುದು"(ಮಲ್ಲಿಕಾಘಂಟಿ, ೨೦೦೬:೧೮೬) ಲಚ್ಚಿಗೆ ಹೊಟ್ಟೆಯ ಹಸಿವಿದೆ; ಕುಲಕರ್ಣಿಗೆ ಲೈಂಗಿಕ ಹಸಿವಿದೆ. ಶ್ರೀಮಂತರಿಗೆ, ಅಧಿಕಾರವುಳ್ಳವರಿಗೆ ಲೈಂಗಿಕ ಹಸಿವು ನೀಗುವುದಿಲ್ಲ. ಹಾಗೆಯೇ ದಲಿತರ ಹೊಟ್ಟೆ ಹಸಿವೂ ನೀಗುವುದಿಲ್ಲ ಎಂಬುದು ಎಂಥ ವಿಪರ್ಯಾಸ!

ಕುಲಕರ್ಣಿಯಿಂದಾಗಿ ಜೈಲು ಸೇರಿದ ಲಚ್ಚಿಯನ್ನು ಒಂದು ದಿನ ಕಾಸಿನಾತ ಭೇಟಿಯಾಗಲು ಬಂದಾಗ ಮದುವೆಯ ಮಾತಾಡುತ್ತಾನೆ. ಆದರೆ ಮುಗ್ಧಳಾದ ಸ್ವಾಭಿಮಾನಿ ಲಚ್ಚಿ "ಅವತ್ತ ಅವತ್ತ ಪೊಲೀಸ್ ಠಾಣೇದಾಗ ನಂದು ಎಲ್ಲೋರು ಕಸಗೊಂಡು ಬಿಟ್ರೋ ಕಸಗೊಂಡು ಬಿಟ್ರೋ ಕಾಸೀ... ನನಗ ಜೀಂವಾಯಿಟ್ಟೇ ಕೊಲ್ಲಿಬಿಟ್ರೋ.... ನನ್ ಮ್ಯಾಲ್ ಅತ್ಯಾಚಾರ ಮಾಡಿಬಿಟ್ರು"(ಪು. ೫೮) ಎಂದು ತನ್ನ ಮೇಲಾದ ಮಾನಸಿಕ, ದೈಹಿಕ ಲೈಂಗಿಕ ಶೋಷಣೆಯ ತೀವ್ರತೆಯನ್ನು ತನಗಾಗಿರುವ ದಾರುಣ ಸ್ಥಿತಿಯನ್ನು ಹೇಳಿದ ತಕ್ಷಣವೇ ಕಾಸಿನಾತನ ಮುಖಚಹರೆಯೇ ಬದಲಾಗಿ, ಅಲ್ಲಿಂದ ಹೊರಟವನು ಮತ್ತೆಂದೂ ಅವಳ ಕಡೆ ಸುಳಿಯಲಿಲ್ಲ! ಪ್ರಾಮಾಣಿಕತನ ಮಾನಸಿಕ ಪಾವಿತ್ರ್ಯಕ್ಕೆ ಸೋಲು ತಪ್ಪಿದ್ದಲ್ಲ ಎಂಬುದು ಕಾಸಿನಾತನ ವರ್ತನೆಯಿಂದ ಸಾಬೀತಾಗುತ್ತದೆ.

"ಹೆಂಗಸಿನ ಅವನತಿಯೊಂದಿಗೆ ಬಲವಾಗಿ ಬೆಳೆದ ಕಲ್ಪನೆ 'ಪಾವಿತ್ರ್ಯದ ಕಲ್ಪನೆ'. 'ಪಾವಿತ್ರ್ಯ' ಹೆಂಗಸಿನ ಮೌಲ್ಯವಾಯಿತು. ಅತ್ಯಾಚಾರಿಯಾದವನಿಗೆ ಮನುಷ್ಯರಿಗಿರುವ ಹಕ್ಕಿರುವಾಗ, ಹೆಂಗಸು ಬಲವಂತವಾಗಿ ಅತ್ಯಾಚಾರಕ್ಕೊಳಗಾದರೂ ಏಕೆ ಆ ಹಕ್ಕಿಲ್ಲ? ಆದ್ದರಿಂದ ಸಂವಿಧಾನ ಹೇಳುವ ಸಮಾನತೆ ಏನಾದರೂ ಸ್ವಲ್ಪ ಚಾಲ್ತಿಯಲ್ಲಿದ್ದರೆ ಅದು ಹೆಂಗಸಿನ ವಿಷಯದಲ್ಲಿ ಬೇಷರತ್ತಾದುದಲ್ಲ. ಬದಲಿಗೆ 'ಪಾವಿತ್ರ್ಯ'ದ ಷರತ್ತನ್ನು ಒಪ್ಪುವವರಿಗೆ ಮಾತ್ರ ಅದು ಅನ್ವಯಿಸುತ್ತದೆ. ಈ ಪಾವಿತ್ರ್ಯದ ಒಮ್ಮುಖ ಹೇರಿಕೆಯನ್ನು ಸ್ತ್ರೀವಾದಿಪ್ರಜ್ಞೆ ವಿರೋಧಿಸುತ್ತದೆ" (ವಿಜಯಾ ದಬ್ಬೆ, ೨೦೦೬:೧೧).

ಸೆರೆಮನೆಯಿಂದ ಬಿಡುಗಡೆಯಾದಾಗ ಲಚ್ಚಿಯ ಎದೆಯಲ್ಲಿ ಯಾತನೆಯ ಎಳೆಯೊಂದು ಅಡ್ಡಾದಿಡ್ಡಿಯಾಗಿ ಹೊಯ್ದಾಡಿ, ಮೈಯ ಸಂದಿಸಂದಿಗಳಲ್ಲಿ ನೋವು ಬೀರಿತು. ಕಾರಣ ಅವಳಿಗೆ ಗಂಡಿನ ಕ್ರೌರ್ಯ, ದೌರ್ಜನ್ಯದ, ಅತ್ಯಾಚಾರದ ಅನುಭವ ಗಾಢವಾಗೇ ಆಗಿತ್ತು. ಆದರೆ ಇಂದು ದಿಕ್ಕಿಲ್ಲದ ಲಚ್ಚಿ ಎಲ್ಲಿಗೆ ಹೋದಾಳು? ಜೈಲಿನೊಳಗೆ ಸುರಕ್ಷಿತವಾಗಿದ್ದ ಅವಳು "ನಾ ಒಲ್ಲೆಪ್ಪೊ....ಇಲ್ಲಿಂದ ನಾನ ಹೊರಗ ಹೋಗಂಗಿಲ್ಲ" (ಪು. ೬೧) ಎನ್ನುವಲ್ಲಿ ಕ್ರೂರ ಹೊರಜಗತ್ತಿನ ಜೊತೆ ಸೆಣಸಲು ಸಾಧ್ಯವಿಲ್ಲದ ಅಸಹಾಯಕ, ಶೋಚನೀಯ ಸ್ಥಿತಿ ವ್ಯಕ್ತವಾಗುತ್ತದೆ.

ಜೈಲರಿನಿಗೆ ಕೈಮುಗಿದು ವಂದಿಸಿದ ಲಚ್ಚಿ "ನನಗ್ಯಾರೂ ಇಲ್ರಿ ಸಾಬ್ರೇ... ನಾ ಹುಟ್ಟಿನಿಂದ ಹಿಡ್ದು ಪರದೇಶಿ ಹೀನಿ. ಈಗ ನಾ ಎಲ್ಲಿಗಿ ಹೋಗ್ಲಿರೀಯಪ್ಪಾ...ನಾ ಇಲ್ಲೇ ಇರ್ತೀನ್ರಿ"(ಪು. ೬೧) ಎನ್ನುತ್ತಾ ಹೃದಯ ಕಿತ್ತುಬರುವಂತೆ ಅಳುವಳು. ಹೆಣ್ಣಿನ ದಿಕ್ಕಿಲ್ಲದ ಪರಿಸ್ಥಿತಿ ಹೇಗೆ ಅಧಿಕಾರವರ್ಗದವರಿಗೆ ಲಾಭವಾಗುತ್ತದೆ ಎಂಬುದು ಲಚ್ಚಿಗೆ ತಿಳಿಯಲು ಬಹಳ ದಿನ ಕಾಯಬೇಕಾಗಿರಲಿಲ್ಲ. ನೊಂದ ಹೆಣ್ಣುಗಳ ಬಾಳಿಗೆ ಆಶಾಕಿರಣವೆಂಬಂತಿದ್ದ 'ಸ್ತ್ರೀನಿಕೇತನ'ಕ್ಕೆ ಲಚ್ಚಿಯ ಸೇರ್ಪಡೆಯಾಯಿತು. 'ಬಾಣಲಿಯಿಂದ ಬೆಂಕಿಗೆ' ಎಂಬಂತಾಯಿತು ಲಚ್ಚಿಯ ಬಾಳಹಾದಿ.

ಪೊಲೀಸ್....ಸೆರೆಮನೆ...ಸ್ತ್ರೀನಿಕೇತನಗಳೆಂಬ ಪ್ರಪಾತಗಳೆಡೆಗೆ ಅವಳ ಬದುಕು ರಬ್ಬರ್ ಚೆಂಡಿನಂತೆ ನೂಕಲ್ಪಟ್ಟಿತು. ಹಳ್ಳಿಯ ಅಮಾಯಕ ಮುಗ್ಧಬಾಲೆಯ ಮೇಲೆ ಸ್ತ್ರೀನಿಕೇತನದ ಒಡತಿಯ ಕಣ್ಣು ಬೀಳಲು ಹೆಚ್ಚು ದಿನಗಳು ಬೇಕಾಗಿರಲಿಲ್ಲ. ಒಂದು ವಾರದಲ್ಲೇ ಮೇಲ್ವಿಚಾರಕಿ ತನ್ನ ಸಾಹೇಬರುಗಳಿಗೆ.. "ಇವಳು ಮೊನ್ನೆ ಹೊಸದಾಗಿ ಬಂದು ನಮ್ಮಲ್ಲಿ ಸೇರಿಕೊಂಡಿರೋ ಹುಡುಗಿ, ಲಚ್ಚಿ ಏಕದಂ ಹೊಸ ಹುಡುಗೀ... ತಾಜಾ ತಾಜಾ ಹೆಣ್ಣು"(ಪು. ೬೫) ಎನ್ನುವಲ್ಲಿ ಹೆಣ್ಣಿಗೆ ಹೆಣ್ಣೇ ಶತ್ರುವೆ? ಎಂಬುದನ್ನು ವಿಶ್ಲೇಷಿಸಬೇಕಾಗುತ್ತದೆ. "ಆದರೆ ನಿಜವಾದ ಅರ್ಥದಲ್ಲಿ ಪುರುಷಪ್ರಧಾನ ವ್ಯವಸ್ಥೆಯೆಂಬುದು ಒಂದು ಮೌಲ್ಯವ್ಯವಸ್ಥೆ ಮತ್ತು ಅದನ್ನಾಧರಿಸಿದ ಒಂದು ಹೊರ ರಚನೆ. ಈ ಮೌಲ್ಯವ್ಯವಸ್ಥೆಯು ಪುರುಷರನ್ನು, ಪುರುಷರ ಹಿತವನ್ನು ಕೇಂದ್ರವಾಗಿ ಉಳ್ಳದ್ದು, ಮಹಿಳೆಯ ಹಿತಾಸಕ್ತಿಗಳನ್ನು ನಿರ್ಲಕ್ಷಿಸುವಂಥದ್ದು ಇಲ್ಲವೆ ಅದನ್ನು

ಹತ್ತಿಕ್ಕುವಂಥದು. ಇದನ್ನು ಸ್ತ್ರೀ-ಪುರುಷರಿಬ್ಬರೂ ರೂಢಿಸಿಕೊಂಡು ಬರುತ್ತಿದ್ದಾರೆ. ಅಪಾಯಕ್ಕೆ ಸಿಲುಕಿದ ಹೆಣ್ಣನ್ನು ಕಂಡು ಸಹಾಯ ಹಸ್ತ ಚಾಚದೆ ತಮ್ಮ ಕ್ಷೇಮ ದೃಷ್ಟಿಯಿಟ್ಟುಕೊಂಡು ಬೀಗುತ್ತ ಕುಳಿತ ಹೆಂಗಸರಿದ್ದಾರೆ. ತಮ್ಮ ಅಧಿಕಾರ, ರೂಪ, ಹಣದ ಮದದಲ್ಲಿ ಹೆಂಗಸರನ್ನು ತುಳಿಯುವ ಹೆಂಗಸರು ಎಲ್ಲೆಂದರಲ್ಲಿ ನಮಗೆ ಕಾಣುತ್ತಾರೆ. ಭ್ರಷ್ಟಾಚಾರ ವ್ಯಾಪಕವಾಗಿ ಹರಡಿ, ಬೆಳೆದ ಮೇಲೆ ಮಹಿಳಾ ಪೊಲೀಸ್‌ಠಾಣೆ, ಮಹಿಳಾ ಇಲಾಖೆಗಳು ಕೂಡ ಹಣಕ್ಕೆ ಬಾಯ್ಬಿಟ್ಟು ಮಹಿಳೆಯರ ನ್ಯಾಯಕ್ಕೆ ಕುರುಡಾಗುವುದೇ ಸಾಮಾನ್ಯವಾಗುವ ಸ್ಥಿತಿ ತಲುಪುತ್ತಿದ್ದೇವೆ/ತಲುಪಿದ್ದೇವೆ. ಹೀಗೇಕಾಗಿದೆ ಎಂಬುದನ್ನು ಆಳಕ್ಕಿಳಿದು ನೋಡದಿದ್ದರೆ ತುಂಬ ಅಪಾಯಕಾರಿಯಾದ ಸಂದರ್ಭಗಳು ನಿರ್ಮಾಣವಾಗುತ್ತವೆ. ಮಹಿಳಾ ಸಮಸ್ಯೆಗಳನ್ನು ಕುರಿತಂತೆ ಪುರುಷರ ಮೇಲಿನ ಜವಾಬ್ದಾರಿಯನ್ನು ಸ್ತ್ರೀಯರ ಕಡೆಗೆ ದೂಡಲು ಈ ಅಭಿಪ್ರಾಯ ಸಹಾಯುವಮಾಡುತ್ತದೆ. ಪುರುಷರ ವಿರುದ್ಧ ಏನನ್ನೂ ಹೇಳಬಯಸದ ಗೋಸುಂಬೆಗಳಿಗೂ ಅವಕಾಶವಾದಿಗಳಿಗೂ ವ್ಯವಸ್ಥೆಯ ಮೌಲ್ಯಗಳ ಕುರುಡು ಆರಾಧಕರಿಗೂ ಈ ಮಾತು ಆಧಾರಸ್ತಂಭವಾಗುತ್ತದೆ"(ವಿಜಯಾ ದಬ್ಬೆ, ೧೯೯೭:೧೬೮-೬೯).

ಬಸೆಣ್ಣಿಯೆಂಬ ವಿಧುರನೊಡನೆ ಲಚ್ಚಿಯ ವಿವಾಹವಾಗಿ, ಅವನೂ ಗಿಡುಗನಂತೆ ಅಪ್ಪಿ, ಕಾಗೆಯಂತೆ ಕುಕ್ಕಿ, ಹಸಿಮಾಂಸಕ್ಕೆ ಎರಗುವ ರಣಹದ್ದಿನಂತೆ ಅವಳ ದೇಹದ ಮೇಲೆ ಎರಗುವುದನ್ನು ಕಂಡು, ಲಚ್ಚಿಗೆ ತಿರಸ್ಕಾರ ಹೆಚ್ಚಾಗಿ, ಗಂಡು ಜಾತಿಯ ಬಗ್ಗೆ ಜುಗುಪ್ಸೆ ಉಂಟಾಗುತ್ತದೆ. ವೈದ್ಯರ ಸಲಹೆಯಂತೆ ಬಸುರಿ ಲಚ್ಚಿಗೆ ವಿಶ್ರಾಂತಿ ಅಗತ್ಯವಾಗಿದ್ದರೂ, ಕಟುಕನಂತೆ ಅವಳ ಮೇಲೆ ಆಕ್ರಮಣ ಮಾಡಿ, ತನ್ನ ಕಾಮದಾಸೆ ನೀಗಿಕೊಳ್ಳುವ ಬಸೆಣ್ಣಿಯ ಕ್ರೌರ್ಯ ಅಪಾರವಾದುದು!

ಲಚ್ಚಿ ಐದು ತಿಂಗಳ ಬಸರಿಯಾದಾಗ ಬಸೆಣ್ಣಿ ಅವಳ ಹಿಂದಿನ ಬದುಕಿನ ಬಗೆಗೆ ತಿಳಿದು, ತಾಳಿ ಕಿತ್ತುಕೊಂಡು, ಅವಳನ್ನು ಝಾಡಿಸಿ ಒದ್ದು, ಅವಾಚ್ಯ ಶಬ್ದಗಳಿಂದ ಬೈದು ಹೋದವನು, 'ಮಲ್ಲಿ' ಎಂಬುವವಳನ್ನು ಮದುವೆಯಾಗಿ ಬರುತ್ತಾನೆ. ಆಗ ಲಚ್ಚಿ "ಆಕೀನೂ ಇರಲ್ಯಾಕ ಬಸ್ಸಣ್ಣೀ ನಾನೂ ಇರ್ತೀನಿ.. ನಿಮಗನಾ ಯಾವದಕ್ಕನೂ ಅಡ್ಡ ಬರಂಗಿಲ್ಲ. ಕಸಮುಸುರಿ ಮಾಡ್ಕೊಂಡು ನೀವು ಹಾಕಿದ್ದು ತಿಂದು ಬಾಳಿನಿ, ನನಗೆ ಹೊರಗ ಹಾಕ್ಬ್ಯಾಡ ಬಸೆಣ್ಣೀ... ನನ್ ಹೊಟ್ಯಾಗ ನಿನ್ ಕೂಸ ಅದಾ"(ಪು.೮೦) ಎಂದು ಅವನ ಪಾದದ ಬಳಿ ಬಿದ್ದು ಹೊರಳಾಡಿ ಅಳುತ್ತಾಳೆ. "ಗ್ರಾಮೀಣ ಪ್ರದೇಶದ ಕೆಳವರ್ಗಗಳ ಜನರ ಮೇಲಾಗುವ ಅನ್ಯಾಯ ಅತ್ಯಾಚಾರಗಳ ಜೊತೆಗೆ ಗೀತಾ ನಾಗಭೂಷಣ ಇನ್ನೊಂದು ಸತ್ಯವನ್ನು ಪ್ರತಿಪಾದಿಸುತ್ತಾರೆ. ಅದು ಕೆಳವರ್ಗದ ಹೆಣ್ಣುಗಳ ಮೇಲೆ ನಡೆಯುವ ದ್ವಿಮುಖೀ ಶೋಷಣೆ(Double incedence of exploitation) ಅಂದರೆ ಹೆಂಗಸರನ್ನು ಮೇಲ್ಜಾತಿಯ ಪುರುಷರು ಮತ್ತು ಈ ವ್ಯವಸ್ಥೆ ಶೋಷಿಸುತ್ತ ಬಂದಿರುವುದು ನಿಜ. ಅದರೊಂದಿಗೆ ಇದೇ ಜನಾಂಗದ ಗಂಡಸರೂ ಕೂಡ ಅರಿತೋ

ಅರಿಯದೆಯೋ ಹಿಂಸಿಸುತ್ತ ಬಂದಿರುವುದು ಅಷ್ಟೇ ನಿಜ"(ಎಸ್.ಆರ್. ಪರಶುರಾಮಪ್ಪ, ೨೦೧೦:೬೮).

ನೆರೆಹೊರೆಯವರ ಸಹಾಯದಿಂದ ಸರ್ಕಾರಿ ಆಸ್ಪತ್ರೆಯಲ್ಲಿ ಬಸೆಣ್ಣಿಯ ತದ್ರೂಪದ ಮಗು ಜನಿಸಿದಾಗ, ಲಚ್ಚಿಗೆ ಅದು ಗಂಡು ಎಂಬ ಕಾರಣದಿಂದ ತಿರಸ್ಕಾರ. ಆದರೂ ತಾಯ್ತನ ಅವಳನ್ನು ಬಿಡಲಿಲ್ಲ! ಹತ್ತು ದಿನಗಳಾದರೂ ಬಸೆಣ್ಣಿಯ ಸುಳಿವೇ ಇಲ್ಲದಾಗ, ಮಗುವನ್ನು ಏನು ಮಾಡುವುದು ಎಂಬ ವಿಚಾರ ಚಕ್ರ ಸುತ್ತ ತೊಡಗುತ್ತದೆ. "ಗಂಡುಜಾತಿ ಹುಟ್ಟಿರಾದೇ ಹೆಂಗಸರ ಕುತಗಿ ಕೊಯ್ದು, ಪಿರೀತಿ ನಾಟಕಾ ಆಡಿ, ಆಕಿನ ಎದ್ಯಾಗ ಚಾಕು ಚುಚಿ ಹಸಿ ರಗತಾ ಹೀರಿ ಕುಡಿಲಕ್ಕ...ಗಂಡಸರಲಿಂದ ಖರೇ ಪಿರೀತಿ ಬೇಡಾದೂ ಹುಲಿ ಮುಂದ ನಿಂತು ಜಿಂವದ ಭಿಕಶ್ಯಾ ಬೇಡಾದೂ ಒಂದೇ ಅದಾ...ಅದರ ಈ ಕೂಸಗಿ ಏನು ಮಾಡ್ಬೇಕು? ಇದರ ಕುತಗಿ ಒತ್ತಿ ಬಿಕಾಟ್ರ ಖರೇ ಮತ್ತ ನಿನಗ ಗಂಡಸ್ರು ಸುಮ್ಮನ ಬಿಡಂಗಿಲ್ಲ. ಮತ್ತ ನೀ ಬಸಿರಾಗ್ತಿ, ಮತ್ತ ನೀ ಹಡೀತಿ, ಹೀಂಗೇ ಏಸ ಮಕ್ಕಳ ಕುತಗಿ ಒತ್ತಾಕಿನೀ"(ಪು. ೮೫-೮೬) ಎಂದೆಲ್ಲಾ ಯೋಚಿಸಿ ಮತ್ತೆ ಬಸೆಣ್ಣಿಯ ಹತ್ತಿರ ಹೋದಾಗ, ಅವನು ಅವಾಚ್ಯ ಶಬ್ದಗಳಿಂದ ಬೈದು ದೂರಮಾಡುತ್ತಾನೆ.

"ಹೆಂಗಸಿನ ಬಹುಮುಖ್ಯ ಪಾತ್ರವೆಂದು ಪರಿಗಣಿಸಲ್ಪಟ್ಟ ತಾಯ್ತನದ ಸುತ್ತ ಹೆಣೆಯಲಾಗಿರುವ ಪೌರಾಣಿಕ ಬಲೆಗಳನ್ನು ಇಂದು ಸ್ತ್ರೀವಾದಿ ಪ್ರಜ್ಞೆ ಪ್ರಶ್ನೆಗೀಡುಮಾಡಿದೆ. ಹೆಂಗಸರೆಲ್ಲರೂ ತಾಯಿಯರಾಗಲು ಹಂಬಲಿಸುವರೆಂಬುದು ನಿಜವೇ? ಅಥವಾ ತಾಯಿಯಾಗದ ಹೆಂಗಸಿನ ಜೀವನ ಹೇಗಿದ್ದರೂ ಅಪೂರ್ಣವೇ? ತಾಯ್ತನಕ್ಕೆ ಬೇಕಾದ ಜೀವಪ್ರೀತಿ, ಜೀವನಶ್ರದ್ಧೆ, ಅಂತಃಕರಣಗಳು ನಮ್ಮ ಹೆಣ್ಣು ದೇಹಗಳೊಂದಿಗೇ ಬಂದು ಬಿಡುತ್ತವೆಯೇ? ತಾಯ್ತನದ ಇಕ್ಕಟ್ಟು, ಆಯಾಸ, ಕ್ಲೇಶಗಳಿಂದ ಯಾರೂ ಯಾವತ್ತೂ, ರೋಸಿ ಹೋಗಿಲ್ಲವೆ? ಬಹಳ ಜನಕ್ಕೆ ಒಂದು ಅನಿವಾರ್ಯವಾದ ಜೈವಿಕ ಕ್ರಿಯೆಯಾಗಿ ಮಾತ್ರ ತಾಯ್ತನ ಬಂದಿದೆಯೆ? ಆಯ್ಕೆಯ ಅವಕಾಶವನ್ನು ಮುಕ್ತವಾಗಿ ಕೊಟ್ಟರೂ ಸ್ತ್ರೀಯರೆಲ್ಲರೂ ತಾಯಂದಿರಾಗಲು ಓಡಿಹೋಗುತ್ತಾರೆಯೇ? ಇಂಥ ಪ್ರಶ್ನೆಗಳನ್ನು ಕೇಳುವುದೇ ಅಸಂಭವವೆಂಬ ರೀತಿಯಲ್ಲಿ ತಾಯ್ತನವನ್ನು ಹೆಣ್ಣಿನೊಂದಿಗೆ ಸಮೀಕರಿಸಲಾಗಿತ್ತು; ಆಗಿದೆ. ಅದನ್ನು ವೈಭವೀಕರಿಸಲಾಗುತ್ತದೆ"(ವಿಜಯಾ ದಬ್ಬೆ, ೨೦೦೬:೪).

"ಹೆಂಗಸನ್ನು ಆಳುವ ಮತ್ತು ತುಳಿಯುವ ಪ್ರವೃತ್ತಿಯಿಂದ ಗಂಡಸು ಹಾಗೂ ದಾಸ್ಯ ಮತ್ತು ಕೀಳರಿಮೆಯ ಪ್ರವೃತ್ತಿಯಿಂದ ಹೆಂಗಸೂ ಮುಕ್ತವಾಗಬೇಕಿದೆ. ತನಗೆ ವಿನಾಶಕಾರಿಯಾದ ಈಗಿನ ಮೌಲ್ಯಗಳನ್ನು ತಿರಸ್ಕರಿಸಲು ನಿಷೇಧಾತ್ಮಕ ಜ್ಞಾನವೂ ತನ್ನ ಪಾತ್ರದ ಬಗ್ಗೆ ಸರಿಯಾದ ದೃಷ್ಟಿಕೋನ ತಳೆಯಲು ರಚನಾತ್ಮಕ ಜ್ಞಾನವೂ ಹೆಂಗಸಿಗೆ ಬೇಕಾಗಿದೆ. ಸ್ತ್ರೀವಾದಿ ಪ್ರಜ್ಞೆ ಲಿಂಗಾಧಾರಿತವಾದ ಶೋಷಣೆಯನ್ನು ವಿರೋಧಿಸುತ್ತದೆ. ದ್ವಿಲಿಂಗಿ ದೃಷ್ಟಿಕೋನದ ಮೇಲೆ ರೂಪಿತವಾದ ಆರೋಗ್ಯಕರ

6

ಸಮಾಜವನ್ನಾಗಿ ಈ ಸಮಾಜವನ್ನು ಬದಲಾಯಿಸಲು ಅದು ಉದ್ದೇಶಿಸಿದೆ. ಕುಟುಂಬವೆಂಬುದು ಮಹಿಳೆಗೆ ಅನಿವಾರ್ಯವಾಗಬಾರದು. ಆಯ್ಕೆಯ ಪ್ರಶ್ನೆಯಾಗಬೇಕು ಹಾಗೂ ಕೌಟುಂಬಿಕ ಜವಾಬ್ದಾರಿಗಳು ಸಮನಾಗಿ ಹಂಚಿಕೆಯಾಗಬೇಕು. ತನ್ನ ಲೈಂಗಿಕ ಬದುಕಿನ ಮೇಲೆ ಮಹಿಳೆಗೆ ಸ್ವಾಮ್ಯ, ಜೀವೋತ್ಪಾದನೆಯಲ್ಲಿ ನಿರ್ಣಾಯಕ ಪಾತ್ರ, ದುಡಿಮೆ ಹಾಗೂ ದುಡಿಮೆಯ ಪ್ರತಿಫಲದ ಮೇಲೆ ಸಮಾನ ಹಕ್ಕು ಬೇಕು -ಇವೇ ಮೊದಲಾದವು ಸ್ತ್ರೀವಾದಿ ಪ್ರಜ್ಞೆಯ, ಸ್ತ್ರೀವಾದಿ ಚಳುವಳಿಯ ಪ್ರಮುಖ ಹಕ್ಕೊತ್ತಾಯಗಳು" (ವಿಜಯಾ ದಬ್ಬೆ, ೧೯೯೭:೧೩). ಈ ದಿಕ್ಕಿನಲ್ಲಿ ಮಹಿಳೆಯರು ಸ್ವಂತಿಕೆಯುಳ್ಳವರಾಗಬೇಕು.

ಲಚ್ಚಿ ತನ್ನ ಗಂಡುಮಗುವಿನೊಂದಿಗೆ ನೀರಿರುವ ಕಂದಕಕ್ಕೆ ಬೀಳುವ ಮೂಲಕ ವೈಯಕ್ತಿಕ ನೆಲೆಯಲ್ಲಿ ಪುರುಷ ಪ್ರಧಾನ ಸಮಾಜಕ್ಕೆ ಪ್ರತಿಭಟನೆ ತೋರುತ್ತಾಳೆ. ಆದರೆ ಸೈಕಲ್ ಸವಾರನೊಬ್ಬನ ನೆರವಿನಿಂದ ಅವಳು ಬದುಕಿ, ಮಗು ಸಾಯುತ್ತದೆ. ಗಂಡುಮಗುವು ಸಾಯುವುದರ ನೆಲೆಯಲ್ಲಿ ಪ್ರತಿಭಟನಾತ್ಮಕವಾಗಿ ಲಚ್ಚಿ ಕಂಡುಬರುತ್ತಾಳೆ. ತನ್ನ ತಾಯ್ತನದ ಪ್ರಾಕೃತಿಕ ಮಮಕಾರವನ್ನು ನಿರ್ನಾಮ ಮಾಡಿರುವುದನ್ನು ಗಮನಿಸಿದಾಗ ಗೀತಾ ನಾಗಭೂಷಣ ಅವರು ಸ್ತ್ರೀವಾದಿ ನೆಲೆಯಲ್ಲಿ ತಮ್ಮ ಬರವಣಿಗೆಯ ಕೌಶಲವನ್ನು ಮೆರೆದಿದ್ದಾರೆ ಎನ್ನಬಹುದು. ಮಗುವನ್ನು ಕೊಂದ ಅಪರಾಧಕ್ಕೆ ಜೀವಾವಧಿ ಶಿಕ್ಷೆಯಾಗುವುದನ್ನು ನೋಡಿದಾಗ ಅಧಿಕಾರದ ದೌರ್ಜನ್ಯ ನಿರಂತರವೆಂಬುದೂ ಮನದಟ್ಟಾಗುತ್ತದೆ.

"ಗೀತಾ ನಾಗಭೂಷಣ ಅವರು ಬರೆಯುವಾಗಿನ ಕಾಲದಲ್ಲಿ ಹೈದ್ರಾಬಾದ ಕರ್ನಾಟಕವು ಪಾಳೇಯಗಾರಿಕೆ ಜಮೀನ್ದಾರಿ ಮತ್ತು ಪುರುಷ ಪ್ರಧಾನ ಮೌಲ್ಯಗಳನ್ನು ಗಾಢವಾಗಿ ಅಪ್ಪಿಕೊಂಡ ಪ್ರದೇಶವಾಗಿತ್ತು. ಈಗ ಒಂದಿಷ್ಟು ಬದಲಾದಂತೆ ಕಂಡುಬಂದರೂ ಸಹಜವಾಗಿಯೇ ಇನ್ನು ಎಲ್ಲ ತೆರನ ತಾರತಮ್ಯಗಳು ಇಲ್ಲಿ ಹಾಸುಹೊಕ್ಕಾಗಿವೆ. ಅದರಲ್ಲೂ ಮಹಿಳೆಯರನ್ನು ಅನೇಕ ನಿರ್ಬಂಧಗಳ ಚೌಕಟ್ಟಿನಲ್ಲಿ ಪೋಷಿಸುತ್ತಿರುವ ಪ್ರದೇಶ. ಅವಳ ಭಾಷೆ, ನಡೆ-ನುಡಿ, ಉಡುಗೆ-ತೊಡಿಗೆ ಹೀಗೆ ಎಲ್ಲವನ್ನೂ ನಿಯಂತ್ರಿಸುವ ಅಥವಾ ಇತಿಮಿತಿಗಳನ್ನು ಹೇರಿರುವ ಹೊತ್ತಲ್ಲಿ, ಗೀತಾ ಅವರು ತಮ್ಮ ಕೃತಿಗಳಲ್ಲಿ ಬಳಸುವ ಭಾಷೆಯು ವ್ಯವಸ್ಥೆಗೊಂದು ಸವಾಲಿನಂತೆ ಕಾಣುತ್ತದೆ. ನೆಲ ಮೂಲದ ಬದುಕು ಇವರ ಭಾಷೆಯ ಮೂಲಕ ನೆಮ್ಮದಿಯ ಮತ್ತು ಸ್ವಾಭಿಮಾನದ ಜೀವನಕ್ಕಾಗಿ ಹಂಬಲಿಸುತ್ತ ಹರಿದಾಡುತ್ತದೆ" (ನೀಲಾ ಕೆ, ೨೦೧೦:೪೨).

ಹೆಣ್ಣನ್ನು ಭೋಗವಸ್ತುವನ್ನಾಗಿ ಪರಿಭಾವಿಸುವ ಮನೋಭಾವಕ್ಕೆ ನಮ್ಮ ಸಂಸ್ಕೃತಿಯ ಬೇರುಗಳಲ್ಲಿಯೇ ಸಮರ್ಥನೆಗಳಿವೆ. ಅವು ಕಾನೂನು, ನ್ಯಾಯಾಂಗ, ಧಾರ್ಮಿಕ ವ್ಯವಸ್ಥೆಗಳೊಳಗೆ ತಮ್ಮ ಬೇರಿನ ಕುಡಿಗಳನ್ನು ಚಾಚುತ್ತ ಭದ್ರಗೊಳ್ಳುತ್ತವೆ. ಇತಿಹಾಸದುದ್ದಕ್ಕೂ ಹೆಣ್ಣು ಭೋಗವಸ್ತುವಾಗಿ ಜನಪ್ರಿಯ ಕಲೆ, ಸಾಹಿತ್ಯ ಶಿಲ್ಪಗಳಲ್ಲಿ

ಬಿಂಬಿತಳಾಗುತ್ತ ಬಂದಿದ್ದಾಳೆ. ಹೆಣ್ಣನ್ನು ಬಾಹ್ಯ ಸೌಂದರ್ಯದ ಅತಿ ಅಪೇಕ್ಷೆಯ ಮಾದರಿಯಲ್ಲಿಟ್ಟು ನೋಡುವ ಕಣ್ಣುಗಳು ಬರೇ ಗಂಡಿನದು ಮಾತ್ರವಲ್ಲ, ಅದೇ ನೋಟವನ್ನು ಹೆಣ್ಣು ತನ್ನ ಸ್ವಂತ ದೇಹದ ಕಡೆ ಬೀರುವಂತೆ ಮಾಡುವ ಸಾಮಾಜಿಕ ನಿಯಂತ್ರಣಗಳಿವೆ. ಸ್ತ್ರೀ–ಪುರುಷ ಸಂಬಂಧವು ಎಲ್ಲಿಯವರೆಗೆ ಭೋಗ್ಯ–ಭೋಜಕ ಸಂಬಂಧದ ನೆಲೆಯಲ್ಲಿರುತ್ತದೆಯೋ ಅಲ್ಲಿಯವರೆಗೆ ಹೆಣ್ಣು ಸಮಾನತೆಯ ನೆಲೆಯ ಗೌರವಾದರಗಳನ್ನು ಗಂಡಿನಿಂದ ಪಡೆಯಲು ವಿಫಲಳಾಗುತ್ತಾಳೆ (ಪ್ರೀತಿ ಶುಭಚಂದ್ರ, ೨೦೦೨:೨೮೯).

"ಗೀತಾ ಅವರ ಬರವಣಿಗೆಯ ಮೂಲ ನೆಲೆಯು ಪ್ರಜ್ಞಾಪೂರ್ವಕವಾದ ಸಾಮಾಜಿಕ ನ್ಯಾಯ ಅಥವಾ ಲಿಂಗ ರಾಜಕಾರಣದ ದೃಷ್ಟಿಕೋನಗಳಿಂದ ಪ್ರೇರಿತವಾದ ಬರವಣಿಗೆ ಮಾತ್ರ ಅಲ್ಲ. ದಲಿತರ ನೋವಿನ ಇತಿಹಾಸಕ್ಕೂ ಹೆಣ್ಣಿನ ನೋವಿನ ಇತಿಹಾಸಕ್ಕೂ ನೂರು ಸಾಮ್ಯಗಳಿರುವಂತೆಯೇ ನಿರ್ಣಾಯಕವಾದ ಕೆಲವು ಸೂಕ್ಷ್ಮ ವ್ಯತ್ಯಾಸಗಳೂ ಇವೆ. ಈ ವ್ಯತ್ಯಾಸಗಳ ಕಾರಣಕ್ಕಾಗಿ ಹೆಣ್ಣಿನ ಸಂಕಥನವು ದಲಿತರಿಗಿಂತ ಹೆಚ್ಚು ಆಳವಾದದ್ದು ಮತ್ತು ತೀವ್ರವಾದದ್ದು. ಈ ಆಳ ಮತ್ತು ತೀವ್ರತೆಗಳ ಕಡೆ ಗೀತಾ ಅವರ ಬರವಣಿಗೆ ಮುಖಮಾಡುತ್ತದೆ"(ಎಂ.ಎಸ್. ಆಶಾದೇವಿ, ೨೦೧೦: ೧೦೦). ಶೋಷಣೆ ಕೊನೆಯಾಗಬೇಕು ಎನ್ನುವ ಆಶಯ, ಇನ್ನೂ ಕೊನೆಗಾಣಲಿಲ್ಲವಲ್ಲ ಎನ್ನುವ ವ್ಯಗ್ರತೆ, ಕೊನೆಗಾಣುವುದು ಸಾಧ್ಯವೇ ಇಲ್ಲ ಎನ್ನುವ ವಿಷಾದಗಳೂ ಇಲ್ಲಿ ಅಷ್ಟೇ ದಟ್ಟವಾಗಿವೆ. ಅಲ್ಲದೆ ಇದು ಈ ಸಮುದಾಯದಲ್ಲಿ ಮುಂದುವರಿಯುವ ಸೂಚನೆಗಳೂ ಅಷ್ಟೇ ಢಾಳವಾಗಿರುವುದನ್ನು ಅಪಾರ ನೋವಿನಿಂದ ಗೀತಾನಾಗಭೂಷಣ ಗುರುತಿಸಿದ್ದಾರೆ.

ಸ್ತ್ರೀಪುರುಷರ ನಡುವಿನ ಅಸಮಾನತೆ ಸಾಂಸ್ಕೃತಿಕ ಹಿನ್ನೆಲೆಯದೇ ಹೊರತು ಅದು ಪ್ರಕೃತಿ ಸಹಜವೂ ಅಲ್ಲ, ಜೈವಿಕವೂ ಅಲ್ಲ ಎಂಬುದನ್ನು ಅರಿಯುವ ತುರ್ತು ಇಂದು ಇದೆ. ಸ್ತ್ರೀಯರನ್ನು ಗ್ರಹಿಸುವ ಪುರುಷ ನೆಲೆ ಬದಲಾಗಬೇಕು. ಹೆಣ್ಣನ್ನು ಹೆಣ್ಣಾಗಿ ಮಾತ್ರ ನೋಡುವ ದೃಷ್ಟಿಕೋನ ಹೋಗಿ, ತನ್ನಂತೆ 'ವ್ಯಕ್ತಿ' ಎಂಬುದಾಗಿ ನೋಡಿದಾಗ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ನೂರಾರು ಸಾಧ್ಯತೆಗಳಿವೆ ಎಂಬುದು ಅರಿವಾಗುತ್ತದೆ. ಈ ಕಾದಂಬರಿಯಲ್ಲಿ ಬರುವ 'ಸ್ತ್ರೀನಿಕೇತನ'ದಂಥ ಸಮಾಜಸೇವಾ ಸಂಸ್ಥೆಗಳು ಸ್ತ್ರೀಪರ ಕಾಳಜಿಗಳನ್ನು ಮೂಲಭೂತವಾಗಿ ಇಟ್ಟುಕೊಂಡು ಅವರ ಬದುಕಿಗೆ ಆಶಾಕಿರಣವಾಗಬೇಕು. ಗಂಡನ್ನು ಗಂಡಾಗಿ, ಹೆಣ್ಣನ್ನು ಹೆಣ್ಣಾಗಿ ಬೆಳೆಸದೆ/ನೋಡದೆ ಮನುಷ್ಯ ನೆಲೆಯಲ್ಲಿ ಪರಿಗಣಿಸಬೇಕು. ಸಮಾಜದ ಕಣ್ಣಾದ ಕುಟುಂಬದಿಂದಲೇ ಈ ಜವಾಬ್ದಾರಿಯುತವಾದ ಕೆಲಸ ಆರಂಭವಾಗಬೇಕು. ಸಮಸ್ಯೆಗಳು ಹೆಚ್ಚಾದಂತೆ ಹೆಣ್ಣು ಅಧೀರಳಾಗದೆ ಗಟ್ಟಿಗೊಳ್ಳಬೇಕು. ಅತ್ಯಾಚಾರ, ದೌರ್ಜನ್ಯಗಳನ್ನು ಮಾಡಿದರೂ ಗಂಡು ಸಮಾಜದಲ್ಲಿ ಅಟ್ಟಹಾಸದಿಂದ ಮೆರೆಯುತ್ತಾನೆ. ಅದಕ್ಕೆ ಒಳಗಾದ ಹೆಣ್ಣು ತಾನು ತಪ್ಪಿತಸ್ಥಳಲ್ಲ, ತನಗೂ ಬದುಕಲು ಉತ್ತಮ ದಾರಿಗಳು ಇದ್ದೇ ಇವೆ

ಎಂಬುದನ್ನು ಅರಿತು, ಆತ್ಮಹತ್ಯೆಯಂಥ ಹೀನ ಕೆಲಸಕ್ಕೆ ಎಂದೂ ಮುಂದಾಗಬಾರದು. ಮಾನಸಿಕವಾಗಿ ತಪ್ಪುಮಾಡದ ಯಾವ ಕೆಲಸವೂ ಹೀನವಲ್ಲ, ಅಪರಾಧವಲ್ಲ. ಮನಸ್ಸು ಶುದ್ಧವಾಗಿರಬೇಕು ಎಂದು ಬದುಕುವುದನ್ನು ಕಲಿಯಬೇಕು. ಇಡೀ ಕುಟುಂಬವನ್ನು ಸುಭದ್ರವಾಗಿ ಕಟ್ಟುವ ಚತುರತೆ ಇರುವ ಹೆಣ್ಣು ಖಂಡಿತ ಅಬಲೆಯಲ್ಲ, ಸಬಲೆ ಎಂಬುದನ್ನು ಬಾಳುವುದರ ಮೂಲಕ ಸಾಬೀತುಪಡಿಸಬೇಕು.

ಪರಾಮರ್ಶನ ಲೇಖನಗಳು ಮತ್ತು ಗ್ರಂಥಗಳು

೧. ಆಶಾದೇವಿ. ಎಂ.ಎಸ್. ೨೦೧೧ 'ಸಹಜ ಬಂಡಾಯದ ಲೇಖಕಿ', ನೋಡಿ: ಷರೀಫಾ ಕೆ ಮತ್ತು ಬಸವರಾಜ ಸೂಳಿಭಾವಿ ೨೦೧೧:೧೯–೧೧

೨. ಗೀತಾ ನಾಗಭೂಷಣ ೧೯೯೫ ಹಸಿಮಾಂಸ ಮತ್ತು ಹದ್ದುಗಳು, ಗದಗ, ವಿದ್ಯಾನಿಧಿ ಪ್ರಕಾಶನ (೨೦೧೦)

೩. ನೀಲಾ ಕೆ. ೨೦೧೧ 'ಗೀತಾ ನಾಗಭೂಷಣ ಅವರ ಭಾಷಾ ಸೊಗಡು' ನೋಡಿ: ಷರೀಫಾ ಕೆ ಮತ್ತು ಬಸವರಾಜ ಸೂಳಿಭಾವಿ ೩೯–೪೨

೪. ಪರಶುರಾಮಪ್ಪ ಎಸ್.ಆರ್. ೨೦೧೧ 'ಗೀತಾನಾಗಭೂಷಣ ಅವರ ಕಾದಂಬರಿಗಳಲ್ಲಿ ಶೋಷಣೆ' ಸಂಕ್ರಮಣ ಪು. ೬೩–೬೯

೫. ಪ್ರೀತಿ ಶುಭಚಂದ್ರ ೨೦೦೨ 'ಸ್ವಾತಂತ್ರ್ಯೋತ್ತರ ಕಾಲದಲ್ಲಿ ಮಹಿಳಾ ಚಳುವಳಿ' ಪ್ರೀತಿ ಶುಭಚಂದ್ರ, ೨೦೦೨:೨೭೪–೯೬

೬. ಪ್ರೀತಿ ಶುಭಚಂದ್ರ(ಸಂ) ೨೦೦೨ ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭. ಬರಗೂರು ರಾಮಚಂದ್ರಪ್ಪ ೧೯೯೩ ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು (೨೦೦೬)

೮. ಮಲ್ಲಿಕಾ ಘಂಟಿ ೧೯೯೩ 'ದಲಿತ ಬಂಡಾಯ ಸಾಹಿತ್ಯದಲ್ಲಿ ಬದಲಾವಣೆಯ ಆಶಯ ಮತ್ತು ಸ್ತ್ರೀ' ನೋಡಿ: ಬರಗೂರು ರಾಮಚಂದ್ರಪ್ಪ ೧೯೯೫:೧೮೦–೮೭

೯. ಮೀನಾಕ್ಷಿ ಬಾಳಿ	೨೦೧೦	'ಗೀತಾ ನಾಗಭೂಷಣ ಅವರ ಕಾದಂಬರಿಗಳಲ್ಲಿ ಮಹಿಳಾ ಸಂವೇದನೆ' ಷರೀಫಾ.ಕೆ ಮತ್ತು ಬಸವರಾಜ ಸೂಳಿಭಾವಿ ೨೦೧೦:೬೬–೭೮
೧೦. ವಿಜಯಾ ದಬ್ಬೆ	೧೯೯೩	'ಆಶಯ ಲೇಖನ' ನೋಡಿ: ಬರಗೂರು ರಾಮಚಂದ್ರಪ್ಪ ೧೯೯೩:೧–೨೩
೧೧. ವಿಜಯಾ ದಬ್ಬೆ (ಸಂ.)	೧೯೯೭	ಸ್ತ್ರೀವಾದ ಮತ್ತು ಸ್ತ್ರೀವಾದಿ ವಿಮರ್ಶೆ ರಚನಾ ಪ್ರಕಾಶನ, ಮೈಸೂರು
೧೨. ಷರೀಫಾ.ಕೆ ಮತ್ತು ಬಸವರಾಜ ಸೂಳಿಭಾವಿ (ಸಂ.)	೨೦೧೦	ಮಹಿಳಾ ಮಾರ್ಗ ಲಡಾಯಿ ಪ್ರಕಾಶನ, ಗದಗ

❐

ಕನ್ನಡ ದಲಿತ ಆತ್ಮಕಥೆಗಳಲ್ಲಿ ಜಾತಿಯತೆಯ ಪರಿಕಲ್ಪನೆ

ಹೊಂಬಯ್ಯ ಹೊನ್ನಲಗೆರೆ

ಭಾರತೀಯ ಸಾಹಿತ್ಯಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಕನ್ನಡ ಸಾಹಿತ್ಯವೂ ಸಾಮಾನ್ಯ ಪೂರ್ವ ಶತಮಾನದಷ್ಟು ಹಳೆಯದು. ಆದರೂ ಅದು ಸಮಗ್ರವಾಗಿ ಭಾರತೀಯರ ಜೀವಾನುಭವಗಳ ಅಭಿವ್ಯಕ್ತಿಯಾಗಿಲ್ಲ. ದಲಿತ ಸಮುದಾಯದ ಬದುಕು–ಊರ ಹೊರಗೆ ಉಳಿದಂತೆ ದಲಿತರ ಅನುಭವಗಳೂ ಭಾರತೀಯ ಸಾಹಿತ್ಯದಿಂದ ಹೊರಗಡೆಯೇ ಉಳಿದವು. ಸಂಪ್ರದಾಯಸ್ಥರ ಸಂಕುಚಿತ ಮನೋಧರ್ಮದಿಂದ ದಲಿತ ಸಾಹಿತ್ಯವು ಟೀಕೆ, ಅಸಮಾಧಾನ, ಆರೋಪಗಳನ್ನು ಎದುರಿಸಬೇಕಾಯಿತು. ದಲಿತ ಸಾಹಿತ್ಯ ಭಾರತೀಯ ಸಾಹಿತ್ಯದಲ್ಲಿ ದಾಖಲಾಗುವುದಕ್ಕೆ ೨೦ನೇ ಶತಮಾನದವರೆಗೆ ಕಾಯಬೇಕಾಯಿತು. ಇಂದು ದಲಿತ ಸಾಹಿತ್ಯ ಖಚಿತ ತಾತ್ವಿಕ, ಸೈದ್ಧಾಂತಿಕ ನೆಲೆಯ ಅಸ್ತಿತ್ವವನ್ನು ಕಂಡಿದೆ. ಇದಕ್ಕೆ ಜ್ಯೋತಿಬಾ ಫುಲೆ(೧೮೨೭), ಶಾಹು ಮಹಾರಾಜ್(೧೮೭೪) ಪೆರಿಯಾರ್(೧೮೭೯), ಅಂಬೇಡ್ಕರ್(೧೮೯೧), ಲೋಹಿಯ(೧೯೧೦) ಇವರುಗಳ ಚಿಂತನೆಗಳು ಮೂಲ ನೆಲೆಯಾಗಿವೆ.

ಕನ್ನಡದಲ್ಲಿ ದಲಿತ–ಬಂಡಾಯ ಸಾಹಿತ್ಯ ಚಳವಳಿಯ ಅನಂತರ ದಲಿತ ದೃಷ್ಟಿಯಿಂದಲೆ ಸಾಹಿತ್ಯ ಪರಂಪರೆಯನ್ನು ನೋಡುವ ಪದ್ಧತಿ ಪ್ರಾರಂಭವಾಯಿತು. ಅದರಲ್ಲಿಯೂ ಇತ್ತೀಚೆಗೆ ದಲಿತ ಆತ್ಮಕಥೆಗಳ ಪರಂಪರೆಯೇ ಪ್ರಾರಂಭವಾಗಿದೆ. ಈ ಪ್ರಕಾರವನ್ನು ಪ್ರತ್ಯೇಕವಾಗಿಯೇ ಪರಿಶೀಲಿಸುವ ಅವಶ್ಯಕತೆ ತಲೆದೋರಿದೆ. ಹಿಂದಿನ ಆತ್ಮಕಥೆಗಳ ರೀತಿಗೆ ಹೋಲಿಸಿದರೆ ದಲಿತ ಆತ್ಮಕಥೆಗಳು ಕೆಲವು ವಿಶಿಷ್ಟತೆಗಳನ್ನು ಮೈಗೂಡಿಸಿಕೊಂಡು ಬೆಳೆದಿರುವುದು ಗೋಚರಿಸುತ್ತದೆ.

ಹಿಂದಿನ ಹಿರಿಯ ಆತ್ಮಚರಿತ್ರೆಕಾರರೆಲ್ಲ ಪ್ರತಿಷ್ಠಿತರು, ಪ್ರಸಿದ್ಧರು, ಸ್ವಾತಂತ್ರ್ಯ ಸಂಗ್ರಾಮ, ಸಮಾಜ ಸುಧಾರಣೆ, ಸಾಹಿತ್ಯ, ಸಾಂಸ್ಕೃತಿಕ ಸುಧಾರಣೆ, ಧಾರ್ಮಿಕ ಸುಧಾರಣೆ ಮುಂತಾದ ರಂಗಗಳಲ್ಲಿ ಸಕ್ರಿಯವಾಗಿ ತೊಡಗಿ ಆಧುನಿಕ ಕರ್ನಾಟಕವನ್ನು

ಕಟ್ಟಿದ ಮಹನೀಯರು. ಅವರ ಅನುಭವಗಳಿಗೆ ಚಾರಿತ್ರಿಕ ಮಹತ್ವವಿದೆ. ಅವು ಮುಂದಿನ ಪೀಳಿಗೆಗೆ ದಾರಿದೀಪವಾಗಬಲ್ಲವು. ಅವರೆಲ್ಲ ಸಮಾಜದ ಮೇಲುವರ್ಗದಿಂದ ಬಂದವರು. ಆದರೆ ಅವರ ಕೃತಿಗಳಲ್ಲಿ ಕೆಳವರ್ಗಗಳ ಅದರಲ್ಲಿಯೂ ದಲಿತ ವರ್ಗದ ಜೀವನ ಚಿತ್ರಣ ದೊರೆಯಲಾರದು. ಇದುವರೆಗೆ ಸಮಾಜದಲ್ಲಿ ತುಳಿತಕ್ಕೆ ಒಳಗಾಗಿ ಮೂಕವೇದನೆಯನ್ನು ಅನುಭವಿಸುತ್ತ ಬಂದ ಅಸಂಖ್ಯ ಜೀವಿಗಳ ಧ್ವನಿಯೇ ಇರಲಿಲ್ಲ. ಅವರ ಜೀವನದ ಸ್ವರೂಪ, ನೋವು-ಅಪಮಾನಗಳ ಪರಿಸ್ಥಿತಿಗಳು, ಅವರದೇ ಆದ ನಂಬಿಕೆಗಳು, ಸಂಸ್ಕೃತಿ, ಜೀವನ ವಿಧಾನಗಳು ಸಾಹಿತ್ಯದಲ್ಲಿ ದಾಖಲಾಗಲು ಸಾಧ್ಯವಾಗಿರಲಿಲ್ಲ. ಇಂತಹ ವರ್ಗಗಳಿಗೆ ಸ್ವತಂತ್ರ ಭಾರತದಲ್ಲಿ ಶೈಕ್ಷಣಿಕ ಮತ್ತು ಸಾಮಾಜಿಕ ಸೌಲಭ್ಯಗಳಿಂದ ಅಕ್ಷರ ಜ್ಞಾನ ದೊರೆತು ಜಾಗೃತಿಯಾಗಿ ಅವರ ಅನುಭವಗಳ ಅಭಿವ್ಯಕ್ತಿಗೆ ಅವಕಾಶ ದೊರೆಯಿತು.

ಅದುವರೆಗೆ ಅಜ್ಞಾತವಾಗಿದ್ದು, ತಿರಸ್ಕಾರಕ್ಕೆ ಒಳಗಾಗಿದ್ದ ಲೋಕವೊಂದು ಅಕ್ಷರ ಪ್ರಪಂಚಕ್ಕೆ ತೆರೆದುಕೊಂಡಿತು. ಕವನ, ಕಥೆ, ನಾಟಕ, ಕಾದಂಬರಿಗಳ ಮೂಲಕ ಈ ಲೋಕ ಕನ್ನಡದಲ್ಲಿ ಮೊಟ್ಟಮೊದಲ ಬಾರಿಗೆ ಅನಾವರಣಗೊಂಡಿತು. ಅನಂತರ ದಲಿತ ಬರಹಗಾರರು ಆತ್ಮಕಥೆಗಳಲ್ಲಿ ತಮ್ಮ ಪ್ರತ್ಯಕ್ಷ ಅನುಭವ ನೋವು ಸಂಕಟ ಜಾತೀಯತೆಯ ಅವಮಾನ -ಹೀಗೆ ಹತ್ತು ಹಲವು ನೈಜ ಪ್ರಸಂಗಗಳನ್ನು ಮುಕ್ತವಾಗಿ ತೆರೆದಿಟ್ಟರು. ಇದರಿಂದ ಪ್ರತಿಷ್ಠಿತ ಪರಂಪರೆಗೆ ಬೆಚ್ಚಿ ಬೀಳುವಂಥ ಅನುಭವವೇ ಆಯಿತು.

ಕನ್ನಡ ದಲಿತ ಆತ್ಮಕಥೆಗಳನ್ನು ಓದಿ ಪ್ರತಿಕ್ರಿಯಿಸಿರುವ ಓದುಗರು ಮತ್ತು ವಿಮರ್ಶಕರು ಅವುಗಳಿಗೆ ಮೂಲ ಪ್ರೇರಣೆ ಡಾ.ಬಿ.ಆರ್. ಅಂಬೇಡ್ಕರ್ ಅವರ ಸೈದ್ಧಾಂತಿಕ ಚಿಂತನೆಗಳು ಹಾಗೂ ಮರಾಠಿ ದಲಿತ ಆತ್ಮಕಥನಗಳು ಎಂದು ಗುರುತಿಸಿದ್ದಾರೆ. ಮರಾಠಿಯಲ್ಲಿ ಅನೇಕ ದಲಿತ ಲೇಖಕರು ಸ್ವಾನುಭವಗಳ ನೆಲೆಯಲ್ಲಿ ತಮ್ಮ ಸಮುದಾಯದ ಬದುಕನ್ನು ಆತ್ಮಕಥನಗಳ ಮೂಲಕ ದಾಖಲಿಸಿದ್ದಾರೆ. ಇದರಿಂದಾಗಿ ಮರಾಠಿಯಲ್ಲಿ ಸಮೃದ್ಧವಾಗಿ ಆತ್ಮಕಥನಗಳು ಬಂದಿವೆ.

ಶಂಕರರಾವ್ ಖರಾತ್ ಅವರ *ತರಾಳ ಅಂತರಾಳ*, ನಾಮದೇವ ವಟಿಕರ್ ಅವರ *ಕಥಾ ಮಾಝೂ ಜನ್ಮಾಚೀ*, ಪ್ರೊ. ಕೇಶವ ಮೇಶ್ರಾಮ ಅವರ *ಹಕೀಕತ್, ಜಟಾಯು*, ದಯಾಪವಾರ್ ಅವರ *ಬಲೂತ*, ಲಕ್ಷ್ಮಣಮಾನೆಯವರ *ಉಪಾರ*, ಸೋನ್‌ಕಾಂಬ್‌ಳೆಯವರ *ಆಠವಣೀಂಚೆ ಪಕ್ಷಿ*, ಮಾಧವ ಕೊಂಡವಿಲಕರ್ ಅವರ *ಮುಕ್ಕಾಮ್ ಪೋಸ್ಟ್ ದೇವಾಚೆ ಗೊಠಣೆ*, ದಾದಾ ಸಾಹೇಬ ಮೋರೆಯವರ *ಗಬಾಳ*, ಶರಣಕುಮಾರ ಲಿಂಬಾಳೆಯವರ *ಅಕ್ಕರಮಾಶಿ ಸಂತಾನ*, ಲಕ್ಷ್ಮಣ ಗಾಯಕವಾಡರ *ಉಚಾಲ್ಯ* ಹೀಗೆ ಹಲವಾರು ಮರಾಠಿ ದಲಿತ ಆತ್ಮಕಥೆಗಳಿವೆ.

ಈ ಹಿನ್ನಲೆಯಲ್ಲಿ ಕನ್ನಡ ದಲಿತಲೋಕ ತನ್ನ ಅನುಭವವನ್ನು ಆತ್ಮಕಥನಗಳ ಮೂಲಕ ತೆರೆದುಕೊಂಡಿತು. ಸ್ವಾತಂತ್ರ್ಯ ಪೂರ್ವದಲ್ಲಿ ಮೊದಲ ತಲೆಮಾರಿನ ದಲಿತ

ಕವಿ ಡಿ. ಗೋವಿಂದದಾಸ್ ಅವರ ದಲಿತ ಆತ್ಮಕಥನವನ್ನು ಗುರುತಿಸಬಹುದು. ಇವರು ತಮ್ಮ ಜೀವನದ ಪ್ರಮುಖ ಘಟನೆಗಳನ್ನು ತಮ್ಮ ಕಥನಗಳಲ್ಲಿ ದಾಖಲಿಸಿದ್ದಾರೆ. ಈ ದಾಖಲೆಯ ಅನುಭವವನ್ನು ಪ್ರೊ. ಎಂ.ಎಸ್. ಶೇಖರ್ ಅವರು *ಡಿ. ಗೋವಿಂದದಾಸ್ ಸಮಗ್ರ ಸಾಹಿತ್ಯ* ಎಂಬ ಕೃತಿಯಲ್ಲಿ ದಾಖಲಿಸಿದ್ದಾರೆ. ಅನಂತರ ಅಧಿಕೃತವಾಗಿ ಕನ್ನಡ ಸಾಹಿತ್ಯದಲ್ಲಿ ದಲಿತ ಆತ್ಮಕಥೆಗಳ ಕೃಷಿ ಪ್ರಾರಂಭಗೊಂಡಿದ್ದು, ಅರವಿಂದ ಮಾಲಗತ್ತಿ ಅವರ *ಗೌರ್ಮೆಂಟ್ ಬ್ರಾಹ್ಮಣ* ಕೃತಿಯಿಂದ. ಈ ಕೃತಿಯನ್ನು ಮೊದಲ ದಲಿತ ಆತ್ಮಕಥೆ ಎಂದು ಕರೆಯುತ್ತಾರೆ. ಈ ಆತ್ಮಕಥನ ಚಲನಚಿತ್ರವಾಗಿದೆ. ಸಿದ್ಧಲಿಂಗಯ್ಯನವರ *ಊರುಕೇರಿ*, ತುಂಬಾಡಿ ರಾಮಯ್ಯ ಅವರ *ಮಣೆಗಾರ*, ಕೆ. ಗೋವಿಂದರಾಜ್ ಅವರ *ಮನವಿಲ್ಲದವರ ಮಧ್ಯೆ*, ಲಕ್ಷ್ಮಣ್ ಅವರ *ಸಂಬೋಳಿ*, ಮುಳ್ಳೂರು ನಾಗರಾಜ್ ಅವರ *ಮಾಮರದ ಮೇಲೊಂದು ಕೋಗಿಲೆ*, ದು. ಸರಸ್ವತಿಯವರ *ಹೀಗೇನ್ ಮಾಡಿರಿ?*, ಹನುಮಂತರಾವ್ ಬಿ. ದೊಡ್ಡಮನಿ ಅವರ *ಪಂಚಮ*, ಯಲ್ಲಪ ಕೆ.ಕೆ.ಪುರ ಅವರ *ಕೇರಿಯಿಂದ ತೇರಿಗೆ*, ಎಂ.ಎಸ್. ಪರಶಿವಮೂರ್ತಿ ಅವರ *ಗೆರೆದಾಟಿದ ಮೇಲೆ* ಹೀಗೆ ಹಲವಾರು ದಲಿತ ಆತ್ಮಕಥೆಗಳು ಕನ್ನಡದಲ್ಲಿ ರಚನೆಗೊಂಡಿವೆ, ರಚನೆಗೊಳ್ಳುತ್ತಿವೆ.

ಕನ್ನಡ ದಲಿತ ಆತ್ಮಕಥೆಗಳು ದಲಿತ ಕೇರಿಯ ಕತ್ತಲೆ ಬದುಕಿನ ನೋವು, ಅಪಮಾನ, ಅಸಮಾನತೆ, ಬಡತನ, ಜಾತಿಯತೆ, ಸಂಕಟಗಳನ್ನು ಕಟ್ಟಿಕೊಟ್ಟಿವೆ. ಸಾಮಾಜಿಕ ವ್ಯವಸ್ಥೆಯ ವಿರುದ್ಧ ತಾತ್ವಿಕ ಸಂಘರ್ಷ ನಡೆಸಿವೆ. ಮೌಢ್ಯ, ಆಚರಣೆಗಳ ವಿರುದ್ಧ ದನಿ ಎತ್ತಿವೆ. ವ್ಯಕ್ತಿಯ ನೆಲೆಯಲ್ಲಿ ಅನುಭವಗಳನ್ನು ಬಿಚ್ಚಿಡುತ್ತಲೆ ಸಮುದಾಯದ ಯಾತನೆಗಳನ್ನು ಅನಾವರಣಗೊಳಿಸಿವೆ. ಅವು ಸಾಂಸ್ಥಿಕ ರೂಪದ ಅನ್ಯಾಯಗಳ ವಿರುದ್ಧ ವೈಯಕ್ತಿಕ ನೆಲೆಯಿಂದ ಮಾತನಾಡಿದರೂ ಅದು ಸಮುದಾಯದ ದನಿಯಾಗಿ ಅಭಿವ್ಯಕ್ತವಾಗಿದೆ. ರಹಮತ್ ತರೀಕೆರೆಯವರು ಹೇಳುವ ಹಾಗೆ "ಜನಾಂಗವಾದ ಇರುವ ಸಮಾಜದಲ್ಲಿ, ಕಪ್ಪು ವರ್ಣೀಯ ಜಾತಿ ಸಮಾಜದಲ್ಲಿ ಒಬ್ಬ ಅಸ್ಪೃಶ್ಯ ಆತ್ಮಕಥೆ ಬರದಾಗ ಅದು ಒಬ್ಬ ವ್ಯಕ್ತಿಯ ಕಥನವಾಗಿರುವುದಿಲ್ಲ, ಅದು ಇಡೀ ಸಮುದಾಯವೇ ಚರಿತ್ರೆಯಲ್ಲಿ ಅಪಮಾನದಿಂದ ಬದುಕುಳಿಯಲು ಮಾಡಿದ, ಸೆಣಸಾಡಿದ ಕಥನವಾಗಿರುತ್ತದೆ." (ಪ್ರಜಾವಾಣಿ ೨೬ ಫೆಬ್ರವರಿ ೧೯೯೫). ಕನ್ನಡ ದಲಿತ ಆತ್ಮಕಥೆಗಳು ಸಮುದಾಯದ ನೆಲೆಯಲ್ಲಿ ಜಾತಿ, ಅಸ್ಪೃಶ್ಯತೆ, ಬಡತನಗಳ ವಿರುದ್ಧ ನಡೆಸಿದ ಹೋರಾಟದ ಕಥನವಾಗಿವೆ.

ಕನ್ನಡದ ಆತ್ಮಚರಿತ್ರೆಗಳಲ್ಲಿ ಜಾತೀಯತೆಯ ಸಮಸ್ಯೆಯ ಹಲವಾರು ವಿನ್ಯಾಸಗಳು, ಸ್ತರಗಳು, ವೈರುಧ್ಯದ ನೆಲೆಗಳು ದಾಖಲೆಗೊಂಡಿವೆ. ಕೆಲವು ಆತ್ಮಚರಿತ್ರೆಗಳು ಜಾತಿಯನ್ನು ಸಾಮಾಜಿಕ ನೆಲೆಯಲ್ಲಿ ನಿಂತು ಅರ್ಥಮಾಡಿಕೊಂಡಿದ್ದರಿಂದ ಜಾತಿಯ ಒಳವಿನ್ಯಾಸಗಳ ಪರಿಣಾಮಗಳನ್ನು ಮೀರಬಹುದಾದ ಸಾಧ್ಯತೆಗಳ ಕಡೆ ಹೆಚ್ಚು ಒಲವು ತೋರದೆ ಹೋಗಿವೆ. ಅಂಬೇಡ್ಕರ್ ಮತ್ತು ಮರಾಠಿ ಆತ್ಮಕಥನಗಳ ಪ್ರಭಾವಗಳಿಂದ

ಬರೆದ ಕನ್ನಡ ದಲಿತ ಆತ್ಮಕಥನಕಾರರು ಜಾತಿಯನ್ನು ರಾಜಕೀಯ, ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ನೆಲೆಗಳಿಂದ ಅರ್ಥಮಾಡಿಕೊಂಡಿದ್ದರು. ಅದರಿಂದ ಅವರು ಜಾತಿ ಮೂಲದ ಅನ್ಯಾಯಗಳನ್ನು ಅತ್ಯಂತ ಭಿನ್ನ ನೆಲೆಯಿಂದ ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. ೭೦ರ ದಶಕದ ಅನಂತರ ಬಂದ ಎಲ್ಲ ದಲಿತ ಲೇಖಕರು ಮತ್ತು ಆತ್ಮಕಥನಕಾರರು ಜಾತಿ ಮೂಲದ ಅನ್ಯಾಯಗಳನ್ನು ಅತ್ಯಂತ ಪ್ರಧಾನ ಪ್ರಶ್ನೆಯಾಗಿ ವಿಶ್ಲೇಷಿಸಿದ್ದಾರೆ. ಜಾತ್ಯತೀತ ಸಮಾಜದ ಆಶೋತ್ತರಗಳನ್ನು ಅಭಿವ್ಯಕ್ತಿಸಿರುವ ಈ ಆತ್ಮಚರಿತ್ರೆಗಳು ಮುಖ್ಯವಾಗಿ ಅಂಬೇಡ್ಕರ್ ನೆಲೆಯಿಂದಲೆ ಬಾಲ್ಯದ ನೆನಪುಗಳು, ಹಸಿವು, ಬಡತನ, ಜಾತಿಯತೆ, ಅಸ್ಪೃಶ್ಯತೆಯಂತಹ ಸಂಗತಿಗಳನ್ನು ಬಿಚ್ಚಿಟ್ಟಿವೆ.

ಅರವಿಂದ ಮಾಲಗತ್ತಿಯವರು ತಮ್ಮ ಆತ್ಮಕಥನದಲ್ಲಿ ಅನೇಕ ಬಾರಿ ಅಂಬೇಡ್ಕರ್ ಅವರನ್ನು ಉಲ್ಲೇಖಿಸಿದ್ದಾರೆ. ಜಾತೀಯತೆ ಎಂಬುದು ಸದಾಕಾಲ ಯಾಥಾರ್ಥತೆಯಲ್ಲಿ ಉಳಿದು ಬಿಡುವಂತದ್ದು. ಅದು ಬೌದ್ಧಧರ್ಮಕ್ಕೆ ಮತಾಂತರಗೊಂಡು ಬೌದ್ಧ ಧರ್ಮೀಯರಾಗದೆ ನವಬೌದ್ಧರಾಗಿ ಉಳಿದಂತೆ ತಮ್ಮವರು ವೀರಶೈವ ಧರ್ಮಕ್ಕೆ ಮತಾಂತರಗೊಂಡು ವೀರಶೈವ ಹರಿಜನರಾಗಿ ಉಳಿದವರ ಬಗ್ಗೆ ಅವರು ವಿಷಾದಿಸಿದ್ದಾರೆ. ಶೋಷಿತರಿಗೆ ಜಾತಿಯತೆ ಎನ್ನುವುದು ಸದಾಕಾಲ ಬೆಂಬಿಡದೆ ಉಳಿದುಬಿಡುವ ಸಾಧ್ಯತೆಯೇ ಹೆಚ್ಚು. ಅದ್ದರಿಂದ ಮತಾಂತರ ಜಾತಿ ಸಮಸ್ಯೆಗೆ ಪರಿಹಾರವಾಗಲಾರದು ಎಂಬ ಅಭಿಪ್ರಾಯವು ವ್ಯಕ್ತವಾಗಿದೆ. ಬಾಲ್ಯದುದ್ದಕ್ಕೂ ಕಾಡುತ್ತಲೇ ಬಂದಿದ್ದ ಜಾತಿಯ ಕೀಳರಿಮೆ ಶೈಕ್ಷಣಿಕವಾಗಿ ಪ್ರಗತಿಹೊಂದಿದ ಮೇಲೆ ಕಳೆದು ಸ್ವಾಭಿಮಾನದ ನೆಲೆಯ ಸಾಧ್ಯತೆಗಳು ಕೃತಿಯಲ್ಲಿ ಕಾಣಿಸಿಕೊಳ್ಳುತ್ತವೆ. "ಈಗ ಎಲ್ಲೆಂದರಲ್ಲೇ ನಾನು ಡಂಗೂರ ಸಾರಿದಂತೆ ನಾನು ಜಾತಿಯನ್ನು ಹೇಳಿಕೊಂಡು ತಿರುಗುತ್ತೇನೆ." ನನ್ನ ಹುಟ್ಟು ಜಾತಿ ಸಂಸ್ಕೃತಿ ಮೈಬಣ್ಣದ ಬಗ್ಗೆ ಅಭಿಮಾನದಿಂದ ಮಾತನಾಡಲು ಸಾಧ್ಯವಾಗಿದ್ದು ಅಂಬೇಡ್ಕರ್ ಅವರ ಚಿಂತನೆಯಿಂದ ಎಂದು ಅವರು ಹೇಳುತ್ತಾರೆ.

ದಲಿತರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಎಷ್ಟೇ ಪ್ರಗತಿ ಹೊಂದಿದರೂ ಜಾತೀಯತೆ ಅಸಮಾನತೆಗಳು ಅಳಿಯಾಲಾರವು ಎಂಬ ಸಂಗತಿ ಕನ್ನಡ ದಲಿತ ಆತ್ಮಕಥನಗಳು ತೆರದಿಟ್ಟಿವೆ. ಮಾಲಗತ್ತಿಯವರು ತಮ್ಮ *ಗೌರ್ಮೆಂಟ್ ಬ್ರಾಹ್ಮಣ*ದಲ್ಲಿ ಇಂತಹ ಸಂಗತಿಯೊಂದನ್ನು ವಿವರಿಸಿದ್ದಾರೆ. ಪ್ರಗತಿಪರ ಕಾಳಜಿ ಇರುವ ಗೆಳೆಯರ ಮನೆಗೆ ಒತ್ತಾಯದಮೇರೆಗೆ ಊಟಕ್ಕೆ ಹೋಗಲೇಬೇಕಾಗಿರುತ್ತದೆ. ಊಟದ ಅನಂತರ ತಟ್ಟೆಯನ್ನು ತಾನೇ ತೊಳೆಯಬೇಕಾದುದು, ತಾನು ಮುಟ್ಟಿದ ಪಾತ್ರೆಗಳನ್ನು ಒಳಗೆ ಒಯ್ಯದಂತೆ ಅಲ್ಲೆ ಇರಿಸಿದ್ದನ್ನು ವಿವರಿಸುತ್ತಾರೆ. ಸಿದ್ದಲಿಂಗಯ್ಯನವರು ತಮ್ಮ *ಊರುಕೇರಿ*ಯಲ್ಲಿ ಜಾತೀಯತೆ ಮತ್ತು ಅಸಮಾನತೆಗಳ ಘೋರ ಚಿತ್ರಣವನ್ನು ವಿವರಿಸುತ್ತ ಜಾತಿ ವಿರುದ್ಧದ ಹೋರಾಟದ ಅಗತ್ಯವನ್ನು ತಿಳಿಸುತ್ತಾರೆ. ಸಿದ್ದಲಿಂಗಯ್ಯ ವಿದ್ಯಾರ್ಥಿಯಾಗಿದ್ದಾಗಲೆ ಅಂಬೇಡ್ಕರ್ ವಿಚಾರಧಾರೆಗಳನ್ನು ಓದಿಕೊಂಡಿದ್ದವರು.

ಅಧಿಕೃತವಾಗಿ ಮಾತನಾಡುವವರು. ಒಮ್ಮೆ ಮೈಸೂರಿನ ದಲಿತ ವಿದ್ಯಾರ್ಥಿನಿಲಯಕ್ಕೆ ಭಾಷಣ ಮಾಡಲು ಆಹ್ವಾನಿಸಲಾಗಿರುತ್ತದೆ. ವಿದ್ಯಾರ್ಥಿನಿಲಯಕ್ಕೆ ಹೋಗಿ ಮಾತನಾಡಿದ ಮೇಲೆ ನಿಲಯದ ಅಡಿಗೆ ಮನೆಗೆ ದಲಿತ ವಿದ್ಯಾರ್ಥಿಗಳಿಗೆ ಪ್ರವೇಶ ನೀಡದಂತೆ ತಡೆ ನೀಡಿರುವ ವಿಚಾರ ತಿಳಿಯುತ್ತದೆ. ಇದಕ್ಕೆ ಮುಖ್ಯ ಕಾರಣ ನಿಲಯದಲ್ಲಿ ಅಡುಗೆ ಮಾಡುವವರು ಮೇಲು ಜಾತಿಯವರಾಗಿದ್ದುದು. ಈ ವಿಷಯವನ್ನು ತಿಳಿದ ಸಿದ್ದಲಿಂಗಯ್ಯನವರು ಕೈಯಲ್ಲಿ ಗಂಧದ ಕಡ್ಡಿಯನ್ನು ಹಿಡಿದು ಅಂಬೇಡ್ಕರ್‌ಗೆ ಜೈ ಎಂಬ ಘೋಷಣೆಗಳನ್ನು ಕೂಗಿ ದಲಿತ ವಿದ್ಯಾರ್ಥಿಗಳಿಗೆ ಅಡುಗೆ ಮನೆ ಪ್ರವೇಶ ದೊರೆಯುವಂತೆ ಮಾಡುತ್ತಾರೆ. ಈ ತರಹದ ಅಸ್ಪೃಶ್ಯತೆಯ ಜಾತಿ ನಿಂದನೆಯ ವಿಷಯದಲ್ಲಿ ಸಿದ್ದಲಿಂಗಯ್ಯನವರು ಕೆಂಡಕಾರಿರುವ ಹಲವಾರು ಪ್ರಕರಣಗಳನ್ನು ಗಮನಿಸಬಹುದು.

ಮುಳ್ಳೂರು ನಾಗರಾಜು ಅವರ *ಮಾಮರದ ಮೇಲೊಂದು ಕೋಗಿಲೆ* ಆತ್ಮಕಥನವು ಜಾತೀಯತೆಯ ಅನೇಕ ಸಂಗತಿಗಳನ್ನು ಅನಾವರಣಗೊಳಿಸುತ್ತದೆ. ದಲಿತರ ಏಳಿಗೆಗಾಗಿ ನಿರಂತರವಾಗಿ ಹೋರಾಡಿದ ಗಾಂಧೀಜಿ ದಲಿತರನ್ನು 'ಹರಿಜನ' ಎಂದು ಕರೆದರು. ಗಾಂಧೀಜಿಯ ಈ ಮಾತು ಅಂಬೇಡ್ಕರ್ ಅವರಿಗೆ ನಾಟಕೀಯವೆನಿಸಿತು. ದಲಿತರನ್ನು ಹೀಗೆ ಭಾವನಾತ್ಮಕವಾಗಿ ನೋಡುವುದರಿಂದ ದಲಿತರ ಯಾವ ಸಮಸ್ಯೆಯೂ ಪರಿಹಾರವಾಗಲು ಸಾಧ್ಯವಿಲ್ಲ ಎಂಬ ಅಭಿಪ್ರಾಯ ಅಂಬೇಡ್ಕರ್ ಅವರದಾಗಿತು. ಮುಳ್ಳೂರರು ತಮ್ಮ ಆತ್ಮಕಥನದಲ್ಲಿ ದಲಿತರ ಸಮಸ್ಯೆಗಳನ್ನು ಭಾವನಾತ್ಮಕವಾಗಿ ನೋಡುವುದರ ಬಗ್ಗೆ ಅಸಮ್ಮತಿ ಸೂಚಿಸಿದ್ದಾರೆ. 'ದಲಿತ' ಎಂಬ ಪದವೆ ಚಲಾವಣೆಯಲ್ಲಿ ಇರಲಿಲ್ಲ, ನಮ್ಮನ್ನು ಹರಿಜನ–ಗಿರಿಜನ ಎಂದು ಕರೆಯುತ್ತಿದ್ದರು. ನಾವು ಹರಿಯ ಮಕ್ಕಳಾದರೆ ಉಳಿದವರೆಲ್ಲಾ ಯಾರು ಎಂಬುದೇ ನನ್ನ ಸಮಸ್ಯೆಯಾಗಿದೆ ಎಂದು ಸಮಾಜದ ವ್ಯವಸ್ಥೆಯ ಬಗ್ಗೆ ವ್ಯಂಗ್ಯದ ಮಾತುಗಳನ್ನು ಹಾಡುತ್ತಾರೆ.

ಲಕ್ಷ್ಮಣ್ ಅವರು ತಮ್ಮ ಆತ್ಮಕಥನದಲ್ಲಿ ಅಸಮಾನತೆಗಳ ವಿರುದ್ಧ ದನಿ ಎತ್ತಿದ್ದಾರೆ. ಈಗ ನಮ್ಮ ಮುಂದಿರುವ ಒಂದೇ ಒಂದು ಪ್ರಶ್ನೆ ಎಂದರೆ ಅಸಮಾನತೆ ಹೀಗೇ ಉಳಿಯಬೇಕಾ? ಬೆಳೆಯಬೇಕಾ? ಎಂಬುದು. ಈ ಅಸಮಾನತೆಯ ವಿರುದ್ಧ ಬದುಕಿದವರೆಲ್ಲಾ ಒಂದಾಗಿ ಹೋರಾಟ ಮಾಡದಿದ್ದರೆ ಈ ದೇಶದ ಅಸ್ಪೃಶ್ಯರು ಪ್ರತಿಕ್ಷಣವೂ ಸಾಯುತ್ತಾರೆ. ಗುಲಾಮಿತನ ಇರುವವರೆಗೆ ನಾಯಿ ನರಿಗಳಿಗಿಂತ ಕೀಳಾಗಿ ಬಾಳಬೇಕಾಗುತ್ತದೆ. ಎಂದು ಹೇಳುತ್ತಾರೆ.

ಅಸ್ಪೃಶ್ಯತೆಯ ಸಮಸ್ಯೆಯನ್ನು ಚಿಂತಕರು ಭಿನ್ನ ಭಿನ್ನ ನೆಲೆಗಳಲ್ಲಿ ಅರ್ಥಮಾಡಿಕೊಂಡಿದ್ದಾರೆ. ಶೋಷಿತರೆಲ್ಲ ಒಂದಾಗಿ ಹೋರಾಟ ಮಾಡದೆ ಹೋದರೆ ಜಾತೀಯತೆಯ ಸೋಂಕಿನಿಂದ ಹೊರಬರಲು ಸಾಧ್ಯವಾಗುವುದಿಲ್ಲ. ಅಲ್ಲದೇ ಬಹಳ ಪ್ರಮುಖವಾಗಿ ಮೇಲು ವರ್ಗದ ಸಮುದಾಯದವರು ದಲಿತ ಸಮುದಾಯದವರ ಬಗ್ಗೆ ಸಮಾನತೆಯ ಮನಃಸ್ಥಿತಿಯನ್ನು ಹೊಂದುವುದು ಅಷ್ಟೆ ಮುಖ್ಯ. ಇಲ್ಲವಾದರೆ

ಅಸ್ಪೃಶ್ಯತೆಯ ಸೋಂಕಿನಿಂದ ಬಿಡುಗಡೆ ಹೊಂದಲು ಸಾಧ್ಯವಾಗುವುದಿಲ್ಲ. ಲಕ್ಷ್ಮಣ್ ಅವರು ಅಂಬೇಡ್ಕರ್ ಹೋರಾಟದ ದಾರಿಯಲ್ಲಿಯೇ ಭರವಸೆಗಳನ್ನು ಕಾಣುತ್ತಾರೆ. "ಇಂದು ನಮ್ಮ ಸಮಾಜಕ್ಕೆ ಜಾತಿ ಎಂಬ ಕ್ಯಾನ್ಸರ್ ತಗುಲೈತೆ. ಈ ಕಾಯಿಲೆಯ ಗುಣಲಕ್ಷಣವೆಂದರೆ ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯನ್ನು ಗೌರವಿಸದೆ ಇರುವುದು. ಇನ್ನೊಬ್ಬರನ್ನು ಸಮಾನತೆಯಿಂದ ಕಾಣ್ದೆ ಇರೋದು" ಎಂದು ಹೇಳಿದ್ದಾರೆ. ಒಬ್ಬರು ಮತ್ತೊಬ್ಬರನ್ನು ಗೌರವಿಸುವಂತಹ, ಸಮಾನತೆಯಿಂದ ಕಾಣುವಂತಹ ವ್ಯವಸ್ಥೆ ಸ್ಥಾಪನೆಯಾಗಬೇಕಾದರೆ ಕ್ಯಾನ್ಸರ್ ರೂಪದಲ್ಲಿರುವ ಈ ಜಾತಿ ವ್ಯವಸ್ಥೆ ನಾಶಹೊಂದಬೇಕು. ಆಗ ಜಾತ್ಯತೀತ ವ್ಯವಸ್ಥೆಯ ಸಮಾನತೆ ಸ್ಥಾಪನೆಯಾಗಲು ಸಾಧ್ಯವಾಗುತ್ತದೆ ಎಂದಿದ್ದಾರೆ.

ಕೆ. ಗೋವಿಂದರಾಜು ಅವರ *ಮನವಿಲ್ಲದವರ ಮಧ್ಯೆ* ಆತ್ಮಕಥನವು ಜಾತೀಯತೆಯ ಸಮಸ್ಯೆಯನ್ನು ಪ್ರಶ್ನಿಸಿದೆ. ಮೈಸೂರಿನ ದೊಡ್ಡಲಗೇರಿಯವರು ಎಂದರೆ ಅಸ್ಪೃಶ್ಯರು ಎಂದರ್ಥ. ದೊಡ್ಡಲಗೇರಿಯವರು ಆರ್ಥಿಕವಾಗಿ, ರಾಜಕೀಯವಾಗಿ ಪ್ರಗತಿಹೊಂದಿದ್ದರೂ ಅವರನ್ನು ಜಾತಿಯ ಕಾರಣಕ್ಕಾಗಿ ಪ್ರತ್ಯೇಕವಾಗಿ ನೋಡಲಾಗುತ್ತಿತ್ತು. "ದೊಡ್ಡಲಗೇರಿಯವರು ಎಂದರೇ ಸಾಕು ಬೇರೆ ಲೋಟ, ತಟ್ಟೆಗಳನ್ನು ಕೊಡುತ್ತಿದ್ದರು. ನಾವುಗಳು ಎಷ್ಟೇ ಬಾಳಾಟ ಮಾಡ್ದ್ರೆ ಏನು ಬಂತು, ದನದ ಕೊಟ್ಟಿಗೇಲಿ ಕೂರಿಸಿ ಊಟ ಹಾಕಿದ ಸಂದರ್ಭಗಳನ್ನು ತುಂಬಾ ನೊಂದುಕೊಂಡು ಮನೆಗೆ ಬಂದಾಗ ಎಲ್ಲರಿಗೂ ಹೇಳುತ್ತಿದ್ದರು. ನಾವು ಬೆಳೆಯುವ ಚಿಗುರೆಲೆ ಮೈಸೂರು ಮಹಾರಾಜರ ಅರಮನೆಗೆ ತಲುಪುತ್ತದೆ. ನಾವು ಬೆಳೆಯುವ ವೀಳೆದೆಲೆಗಳು ಇಲ್ಲದೆ ಹೋದರೆ ಪೂಜಾಕಾರ್ಯಗಳೇ ನಡೆಯುವುದಿಲ್ಲ. ನಾವು ಊರಿಗೆ ಪಟೇಲರಾದ್ರೂ ಏನೂ ಪ್ರಯೋಜನ ಎನ್ನುತ್ತಿದ್ದರು. ವಸ್ತುಸ್ಥಿತಿಯೇ ಹಾಗಿರುವಾಗ ಇದೊಂದು ವಿಷಯದಲ್ಲಿ ಮಾತ್ರ ಏಕೆ, ಏನು, ಎಂಬ ವಿಚಾರಗಳು ಕಾಡುತ್ತಿದ್ದವು." ಅಸ್ಪೃಶ್ಯರ ಶ್ರಮ ಮೂಲದಿಂದ ಉತ್ಪಾದಿಸಲಾದ ವಸ್ತುಗಳು ಮೇಲ್ಜಾತಿಯವರಿಗೆ ಒಪ್ಪಿತವಾದುದು. ತಳಜಾತಿಗಳು ಎಷ್ಟೇ ಪ್ರಗತಿಹೊಂದಿದ್ದರೂ ಜಾತಿ ಅಸಮಾನತೆ ಎಂಬುವುದು ನಿರಂತರವಾಗಿ ಉಳಿದು ಬಿಡುವುದರ ಬಗ್ಗೆ ಅಪಾರ ವಿಷಾದ ವ್ಯಕ್ತಪಡಿಸುತ್ತಾರೆ.

ಗೋವಿಂದರಾಜು ಅವರು ಮತ್ತೆರಡು ಪ್ರಸಂಗಗಳನ್ನು ನಿರೂಪಿಸಿದ್ದಾರೆ. ಮ್ಯಾಲಗೇರಿಯವರು ಕುಸ್ತಿ ಪಂದ್ಯಾವಳಿಯಲ್ಲಿ ಹೆಸರುವಾಸಿಗಳು. ಅವರಂತೆಯೇ ದೊಡ್ಡಲಗೇರಿಯವರು ಸಹ ಕುಸ್ತಿಯಲ್ಲಿ ಪ್ರವೀಣರಾಗಿದ್ದರು. ಆದರೆ ಇವರು ಯಾವಾಗಲು ಮುಸ್ಲಿಮರೊಂದಿಗೆ ಸ್ಪರ್ಧೆಗಿಳಿಯಬೇಕಾಗುತ್ತಿತ್ತು. ಏಕೆಂದರೆ ದೊಡ್ಡಲಗೇರಿಯವರು ದಲಿತರು ಎಂಬ ಕಾರಣಕ್ಕೆ ಇವರೊಂದಿಗೆ ಮ್ಯಾಲಗೇರಿಯವರು ಕುಸ್ತಿಯ ಪಂದ್ಯಕ್ಕೆ ಬರುತ್ತಿರಲಿಲ್ಲ. ಹಾಗೆಯೇ ಗೋವಿಂದರಾಜುಗೆ ಬ್ಯಾಂಕಿನಲ್ಲಿ

ಕೆಲಸ ಸಿಕ್ಕಿ ಮೊದಲ ದಿನ ಕೆಲಸಕ್ಕೆ ಹೋದಾಗ ನಿನ್ನ ಜಾತಿ ಯಾವುದೆಂದು ಕೇಳಿ ಅವಮಾನಿಸಿದ ಪ್ರಸಂಗವನ್ನು ದಾಖಲಿಸುತ್ತಾರೆ.

ಜಾತೀಯತೆಯ ಇಂತಹ ಘೋರ ಆಚರಣೆಗಳನ್ನು ನಾವು ದಲಿತ ಆತ್ಮಕಥನಗಳಲ್ಲಿ ಗಮನಿಸುವುದಷ್ಟೇ ಅಲ್ಲ, ಅವುಗಳಿಂದ ಇಂದಿಗೂ ನಮ್ಮ ಸಮಾಜದಲ್ಲಿ ದಲಿತರು ಸೌಹಾರ್ದಯುತ ಸಹಬಾಳ್ವೆಯ ಜೀವನ ನಡೆಸಲು ಸಾಧ್ಯವಾಗುತ್ತಿಲ್ಲ. ಸಮಾಜದಲ್ಲಿ ಜಾತೀಯತೆಯ ಸೋಂಕು ಆಳವಾಗಿ ಬೇರುಬಿಟ್ಟಿರುವುದರಿಂದ ಶೋಷಣೆಗಳು ಪ್ರತಿನಿತ್ಯ ನಡೆಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ನಾವೆಲ್ಲರೂ ಒಂದು ಎಂಬ ಮನೋಭಾವನೆ ಮೂಡಬೇಕಾಗಿದೆ. ಪಂಪನ ಮಾತಿನಂತೆ 'ಮನುಷ್ಯ ಜಾತಿ ತಾನೊಂದೇ ವಲಂ' ಎಂಬ ಸತ್ಯವನ್ನು ಸಮಾಜದ ಪ್ರತಿಯೊಬ್ಬರೂ ತಿಳಿಯಬೇಕಾಗಿದೆ.

□

ಕನ್ನಡ ಕಾವ್ಯ ಮೀಮಾಂಸೆ ಮತ್ತು ಪ್ರೊ. ಕಿ.ರಂ. ನಾಗರಾಜ

ಕಾ.ವೆಂ. ಶ್ರೀನಿವಾಸಮೂರ್ತಿ

ಕನ್ನಡದ ಶೈಕ್ಷಣಿಕ ವಲಯದಲ್ಲಿ ಕನ್ನಡ ಛಂದಸ್ಸು, ಕನ್ನಡ ಭಾಷಾವಿಜ್ಞಾನ ಮುಂತಾದ ಪರಿಕಲ್ಪನೆಗಳು ಪ್ರತ್ಯೇಕ ಜ್ಞಾನಶಾಖೆಗಳಾಗಿ ಅಸ್ತಿತ್ವ ಪಡೆದಿವೆ. ಇವುಗಳ ಹಿಂದೆ ಕನ್ನಡ ಭಾಷೆಯಲ್ಲಿ ನಿರ್ವಚನಗೊಳ್ಳುತ್ತಿದ್ದರೂ ಇವು ಸಂಸ್ಕೃತದ ಪ್ರಭಾವದಿಂದ ಮುಕ್ತಿ ಹೊಂದಿರಲಿಲ್ಲ. ಆದ್ದರಿಂದ ಸಂಸ್ಕೃತದ ಪಾಠಗಳನ್ನೇ ಕನ್ನಡಕ್ಕೂ ಬಹುತೇಕ ಆರೋಪಿಸಿ ಹೇಳಲಾಗುತ್ತಿತ್ತು. ಈ ಪರಿಪಾಠ ಇಂದಿಗೂ ಪೂರ್ಣವಾಗಿ ತಪ್ಪಿಲ್ಲ. ಆದರೂ ಇಂದು ಈಗಾಗಲೇ ಪ್ರಸ್ತಾಪಸಿರುವಂತೆ ಪ್ರತ್ಯೇಕವಾಗಿ ಕನ್ನಡ ಛಂದಸ್ಸು, ಕನ್ನಡ ಭಾಷಾ ವಿಜ್ಞಾನ ಎಂಬುದು ರೂಪುಗೊಂಡು, ಅವನ್ನು ಯಥಾವತ್ತಾಗಿ ಶೈಕ್ಷಣಿಕ ವಲಯದಲ್ಲಿ ವಿಶೇಷವಾಗಿ ಕಾಲೇಜು ಮತ್ತು ವಿಶ್ವವಿದ್ಯಾನಿಲಯದ ಪಠ್ಯಕ್ರಮದಲ್ಲಿ ನೆಲೆಗೊಳಿಸಲಾಗಿದೆ. ಇಂತಹ ನೆಲೆ ಕನ್ನಡದ ಕಾಯಮೀಮಾಂಸೆಗೆ ಯಾಕೆ ದಕ್ಕಿಲ್ಲ ಎಂಬ ಪ್ರಶ್ನೆ ಮೂಡುತ್ತದೆ.

ಕನ್ನಡಕ್ಕೊಂದು ಪ್ರತ್ಯೇಕ ಗುರುತು ಸಾವಿರಾರು ವರ್ಷಗಳಿಂದ ಇದೆ. ಇದರ ಭಾಗವಾಗಿ ಶ್ರೀಮಂತ ಸಾಹಿತ್ಯ ರಚನೆಯೂ ಆಗಿದೆ. ಇಂತಹ ಸಾಹಿತ್ಯಸೃಷ್ಟಿಗೆ ಹಿನ್ನೆಲೆಯಾಗಿ ಕಾವ್ಯಮೀಮಾಂಸೆಯೊಂದು ಇದ್ದಿರಲೇಬೇಕು. ಆದರೆ ಈ ಸಂಬಂಧದ ಪೂರ್ಣರೂಪದ ಕೃತಿಗಳು ಅಲ್ಲೊಂದು ಇಲ್ಲೊಂದು ಸಿಗುತ್ತವೆ. ಉದಾಹರಣೆಗೆ 'ಕವಿರಾಜಮಾರ್ಗ'(೮೫೦). ಇಂತಹ ಒಂದೆರಡು ಕೃತಿಗಳು ಸಮಸ್ತ ಕನ್ನಡ ಸಾಹಿತ್ಯ ಸೃಷ್ಟಿಯನ್ನು ರೂಪಿಸಿವೆಯೇ ಎಂಬ ಪ್ರಶ್ನೆಗೆ 'ಇಲ್ಲ' ಎಂಬುದೇ ಉತ್ತರವಾಗುತ್ತದೆ. ಕಾರಣ, ಕಾವ್ಯಮೀಮಾಂಸೆಯೆಂಬುದು ಕವಿಗಳಿಗೆ ಮಾರ್ಗಸೂಚಿಯಲ್ಲ. ಇದರಂತೆಯೇ ನಡೆದವರು ದೊಡ್ಡ ಕವಿಗಳಾದ ನಿದರ್ಶನಗಳೂ ಇಲ್ಲ. ಹಾಗಾಗಿ ಕಾವ್ಯದ ಸಂದರ್ಭಕ್ಕೆ ಕಾವ್ಯಮೀಮಾಂಸೆಯೆಂಬುದು ಸಾಪೇಕ್ಷವಷ್ಟೇ.

ಏನೇ ಆದರೂ ಕನ್ನಡ ಸಾಹಿತ್ಯವು ಕಾಲದಿಂದ ಕಾಲಕ್ಕೆ ಪ್ರಕಾರದಿಂದ ಪ್ರಕಾರಕ್ಕೆ, ಕವಿಯಿಂದ ಕವಿಗೆ ಶಾಸ್ತ್ರಕಾರನಿಂದ ಶಾಸ್ತ್ರಕಾರನಿಗೆ ವೈವಿಧ್ಯಮಯವಾಗಿ ಬೆಳೆದಿದೆ. ಇದಕ್ಕೆ ಮುಖಗಳು ಅಸಂಖ್ಯ. ಇದು ಜಂಗಮರೂಪಿ. ಹಾಗಾಗಿ ಇದನ್ನು ಹಿಂಬಾಲಿಸುತ್ತಿರುವ ಅಥವಾ ಮುನ್ನಡೆಯುತ್ತಿರುವ ಕಾವ್ಯಮೀಮಾಂಸೆಯೂ ಸ್ಥಾವರವಲ್ಲ.

ಹೀಗೆ ಕಾವ್ಯದ ಗರ್ಭದಲ್ಲಿಯೇ ಕಾವ್ಯಮೀಮಾಂಸೆ ಅರಳಿದೆ. ಇಂತಹ ಕಾವ್ಯಮೀಮಾಂಸೆಗೆ ಲಕ್ಷ್ಯ ಕೃತಿಗಳಾಗಿ ಒಟ್ಟು ಕೃತಿಗಳನ್ನು ಪರಿಭಾವಿಸಬೇಕು. ಇದಕ್ಕೆ ಹೊರತಾದ ಇನ್ನೊಂದು ನೆಲೆಯಲ್ಲಿ ಕಾವ್ಯದ ವಿವಿಧ ತತ್ವಗಳಾದ ಕವಿ, ಸಹೃದಯ, ವಿಮರ್ಶಕ, ಪ್ರತಿಭೆ, ವ್ಯುತ್ಪತ್ತಿ ಮುಂತಾದವು. ಕವಿಯೋ ಲಾಕ್ಷಣಿಕನೊ ತನ್ನ ಕೃತಿಯನ್ನು ಕುರಿತು ನೀಡುವ ಹೇಳಿಕೆಗಳು ಕಾವ್ಯದ ಮೀಮಾಂಸೆಯನ್ನೇ ಮೂಡಿಸುತ್ತವೆ ಎಂದು ಹೇಳುವಂತಿಲ್ಲ. ಕಾರಣ ಇದು ಈ ಕವಿ ಅಥವಾ ಲಾಕ್ಷಣಿಕನು ಆದರ್ಶ ಕಾವ್ಯವನ್ನು ಕುರಿತ್ತ ಹೇಳಿಕೆಗಳಾಗಿರುವ ಸಾಧ್ಯತೆಯೇ ಹೆಚ್ಚಾಗಿರುತ್ತದೆ. ಆದ್ದರಿಂದ ಇಂತಹ ಹೇಳಿಕೆಗಳಿಂದಲೇ ಕನ್ನಡ ಕಾವ್ಯಮೀಮಾಂಸೆಯನ್ನು ಕಟ್ಟುವುದು ಉಚಿತವೆನಿಸದು. ಆದ್ದರಿಂದ ಇಂತಹ ಹೇಳಿಕೆ ಮತ್ತು ಕೃತಿಯ ಅಂತರ್ಗತ ಮೀಮಾಂಸೆಯ ದ್ರವ್ಯದಿಂದ ಕಾವ್ಯಮೀಮಾಂಸೆಯನ್ನು ಕಟ್ಟುವುದು ಸೂಕ್ತವೆನಿಸುತ್ತದೆ. ಈ ತಾತ್ವಿಕ ನೆಲೆಯಲ್ಲಿ ಕನ್ನಡ ಕಾವ್ಯಮೀಮಾಂಸೆಯನ್ನು ಕಟ್ಟುವ ಪ್ರಯತ್ನವನ್ನು ಕಳೆದ ನೂರು ವರ್ಷಗಳಿಂದ ಕಾಣಲು ಸಾಧ್ಯವಿದೆ.

ಹಿಂದೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಎ.ಆರ್. ಕೃಷ್ಣಶಾಸ್ತ್ರಿಗಳ ಕಾಲದಲ್ಲಿ 'ಅಲಂಕಾರಶಾಸ್ತ್ರ' ಎಂಬ ಹೆಸರಿನಲ್ಲಿ ಕಾವ್ಯಮೀಮಾಂಸೆಯ ಬೋಧನೆ ನಡೆದಿತ್ತು. ಇದು ತೀನಂಶ್ರೀ, ಕುವೆಂಪು ಅವರ ಕಾಲದಲ್ಲಿ ಕಾವ್ಯಮೀಮಾಂಸೆ ಎಂದಾಯಿತು. ಆನಂತರದ ಕಾಲಘಟ್ಟದಲ್ಲಿ ಭಾರತೀಯ ಕಾವ್ಯಮೀಮಾಂಸೆ, ಪಾಶ್ಚಾತ್ಯ ಕಾವ್ಯಮೀಮಾಂಸೆ, ತೌಲನಿಕ ಕಾವ್ಯಮೀಮಾಂಸೆ ಎಂಬ ಪರಿಭಾಷೆ, ಪರಿಕಲ್ಪನೆಗಳಲ್ಲಿ ಇದು ಬೆಳೆಯಿತು. ಆದರೆ ಈ ಹಂತದಲ್ಲಿ ಈ ವಿವಿಧ ಕಾವ್ಯಮೀಮಾಂಸೆಗಳ ತತ್ವಗಳು ನೆಲೆ ಪಡೆದಿರುವ ಕನ್ನಡ ಕಾವ್ಯವನ್ನು ಅನುಲಕ್ಷಿಸಿ, ಕಾವ್ಯಮೀಮಾಂಸೆಯನ್ನು ಚರ್ಚಿಸಲಾಗುತ್ತಿತ್ತು. ಆದರೆ ಈ ಹಂತದಲ್ಲಿ ಈ ವಿವಿಧ ಕಾವ್ಯಮೀಮಾಂಸೆಗಳ ತತ್ವಗಳು ನೆಲೆ ಪಡೆದಿರುವ ಕನ್ನಡ ಕಾವ್ಯವನ್ನು ಅನುಲಕ್ಷಿಸಿ, ಕಾವ್ಯಮೀಮಾಸೆಯನ್ನು ಚಿರ್ಚಿಸಲಾಗುತ್ತಿತ್ತು. ಆದರೆ ಈ ಹಂತದಲ್ಲಿ ಈ ಪ್ರಬಂಧದ ಆರಂಭದಲ್ಲಿ ಪ್ರಸ್ತಾಪಿಸದಂತಹ ಕನ್ನಡ ಛಂದಸ್ಸು, ಕನ್ನಡ ಭಾಷಾವಿಜ್ಞಾನದಂತೆ ಕನ್ನಡ ಕಾವ್ಯ/ಸಾಹಿತ್ಯ ಮೀಮಾಂಸೆಯೆಂಬ ಜ್ಞಾನಶಾಖೆಯೊಂದು ಏಕೆ ಅಸ್ತಿತ್ವ ಪಡೆಯಲಿಲ್ಲ ಎಂಬ ಪ್ರಶ್ನೆ ಸಹಜವಾಗಿ ಹುಟ್ಟುತ್ತದೆ. ಈ ಪ್ರಶ್ನೆಗೆ ಉತ್ತರವಾಗಿ ಸಂಸ್ಕೃತ ಮತ್ತು ಕನ್ನಡ ಕಾವ್ಯತತ್ವಗಳ ನಡುವೆ ಸ್ಪಷ್ಟ ಗೆರೆ ಎಳೆಯಲು ಸಾಧ್ಯವಾಗದ ಸ್ಥಿತಿಯನ್ನು ನೀಡಬಹುದು. ಆದರೂ ಪಂಡಿತ ಪ್ರೇರಣೆ ಮತ್ತು ಜನರನ್ನು ಗುರಿಯನ್ನಾಗಿ ಹೊಂದಿದೆ

ಕನ್ನಡ ಕಾವ್ಯ ಮತ್ತು ಅದರ ಮೀಮಾಂಸೆಯಲ್ಲಿ ಒಂದಷ್ಟು ಪ್ರತ್ಯೇಕಾಗಿ ಗುರುತಿಸಲು ಸಾಧ್ಯವಿತ್ತೇನೋ ಎನ್ನಿಸುತ್ತದೆ. ಇಂತಹ ಪ್ರಯತ್ನಗಳು ಅಂದು ನಡೆದಿವೆ; ಇಂದಿಗೂ ನಡೆಯುತ್ತ ಬಂದಿವೆ. ಏನೇ ಆದರೂ ಈ ಬಗೆಯ ಸಾಹಿತ್ಯ ಸೃಷ್ಟಿ ಪ್ರತ್ಯೇಕವಾಗಿ ರಚನೆಗೊಳ್ಳುತ್ತಿದ್ದರೂ ಇದನ್ನು ಆಧರಿಸಿ 'ಕನ್ನಡ ಕಾವ್ಯಮೀಮಾಂಸೆ' ಎಂಬ ಜ್ಞಾನಶಾಖೆಯಂತೂ ಕನ್ನಡವನ್ನು ಉಪಸರ್ಗವನ್ನಾಗಿ ಹೊಂದಿದ ಸಾಹಿತ್ಯ, ಸಂಸ್ಕೃತಿಯ ಇತರೆ ಜ್ಞಾನಶಾಖೆಗಳಂತೆ ಮೂಡಿಲ್ಲ. ಇದು ಶೈಕ್ಷಣಿಕ ರಂಗದ ಕತೆ.

ಇನ್ನು ಸಾಹಿತ್ಯರಂಗದಲ್ಲಿ ಕನ್ನಡ ಕಾವ್ಯಮೀಮಾಂಸೆಯನ್ನು ಸ್ವೋಪಜ್ಞವಾಗಿ ಕಟ್ಟುವ ಪ್ರಯತ್ನವು ಕಳೆದ ನೂರು ವರ್ಷಗಳಿಂದ ಅಲ್ಲಲ್ಲಿ ನಡೆದಿರುವುದನ್ನು ನಾವು ಚಾರಿತ್ರಿಕವಾಗಿ ಗುರುತಿಸಬೇಕು.

ಇಲ್ಲಿ ಮೊದಲಿಗೆ ಮಾಸ್ತಿಯವರ 'ಸಾಹಿತ್ಯ ವಿಮರ್ಶೆಯ ಕಾರ್ಯ' ಮುಂತಾದ ಲೇಖನವನ್ನು ಒಳಗೊಂಡ ಇವರ ವಿಮರ್ಶೆಯ ಮೊದಲ ಸಂಪುಟದ ಅನೇಕ ಲೇಖನಗಳು ಕನ್ನಡ ಕಾವ್ಯಮೀಮಾಂಸೆಯ ಉತ್ತಮ ಕವಿ, ಉತ್ತಮವಲ್ಲದ ಕವಿ, ಸಹೃದಯ, ವಿಮರ್ಶಕ ದೃಷ್ಟಿ ಮುಂತಾದ ತತ್ವಗಳನ್ನು ಕನ್ನಡ ಸಂಸ್ಕೃತಿಯ ಭಿತ್ತಿಯನ್ನು ಹಿನ್ನೆಲೆಯನ್ನಾಗಿಟ್ಟುಕೊಂಡು ತಮ್ಮ ವಿಚಾರಗಳನ್ನು ಮಂಡಿಸಿದ್ದಾರೆ. ಅಂತೆಯೇ 'ಬಡತನವು ಸಾಹಿತ್ಯದ ವಸ್ತುವೇಕಾಗಿದೆ?' ಎಂಬ ಲೇಖನದಲ್ಲಿ ಬೇಂದ್ರೆಯವರು ಯಾವಾಗ ಕಾವ್ಯಗಳು ಹುಟ್ಟುತ್ತವೆ ಮತ್ತು ವರ್ಣಕ ಕಾವ್ಯಗಳ ಉಕ್ಕು ಯಾವಾಗ ಹೆಚ್ಚು ಎಂಬುದನ್ನು ಸಂಸ್ಕೃತಿಯ ಸಂದರ್ಭದ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ.

ಹೀಗೆ ನವೋದಯ ಸಂದರ್ಭದ ಅನೇಕ ಲೇಖಕರು ತಮ್ಮ ಕಾಲದ ಹಾಗೂ ತಮ್ಮ ಪೂರ್ವಕಾಲದ ಸಾಹಿತ್ಯ ಸೃಷ್ಟಿಗೆ ಹಿನ್ನೆಲೆಯಾಗಿದ್ದ ಹಾಗೂ ಈ ಸಾಹಿತ್ಯಸೃಷ್ಟಿಯೊಳಗೆ ಅಂತರ್ಗತವಾಗಿದ್ದ ಬಹುಮುಖಿ ಕಾವ್ಯತತ್ವವನ್ನು ಅನಾವರಣಗೊಳಿಸಿದ್ದಾರೆ. ಇಂತಹ ಅನಾವರಣ ಪ್ರಗತಿಶೀಲ, ನವ್ಯ, ದಲಿತ–ಬಂಡಾಯ, ಸ್ತ್ರೀವಾದ ಮುಂತಾದ ಎಲ್ಲ ಪಂಥಗಳ ಸಂದರ್ಭದಲ್ಲಿಯೂ ಆಗಿದೆ. ಇಂತಹ ಅನಾವರಣ ವಿಶ್ವವನ್ನು ಹಿಂಬಾಲಿಸುವ ಹರ್ಕ್ಯುಲಸ್‌ನಂತೆ ಭವಿಷ್ಯದಲ್ಲಿಯೂ ಮುಂದುವರೆಯುತ್ತದೆ. ಈ ಚಾರಿತ್ರಿಕ ಮತ್ತು ತಾತ್ವಿಕ ಧಾರೆಯಲ್ಲಿ ಪ್ರೊ. ಕಿ.ರಂ. ನಾಗರಾಜ ಅವರಿಗೆ ಮಹತ್ವ ಸ್ಥಾನವಿದೆ.

ಕನ್ನಡ ಕಾವ್ಯಮೀಮಾಂಸೆಯನ್ನು ಮೂರು ಧಾರೆಗಳಲ್ಲಿ ಕಟ್ಟಲಾಗಿದೆ ಎಂದು ಭಾವಿಸಿದ್ದೇನೆ.

೧. ಲಕ್ಷಣದ ನೆಲೆ. ಇಲ್ಲಿ 'ಕವಿರಾಜಮಾರ್ಗ' ಮುಂತಾದ ಒಂದೆರಡು ಕೃತಿಗಳಿವೆ.

೨. ಹೇಳಿಕೆಗಳ ನೆಲೆ; ಇಲ್ಲಿ ಶ್ರೀವಿಜಯ, ಪಂಪನಿಂದ ಇಲ್ಲಿಯವರೆಗಿನ ಕವಿ–ಸಾಹಿತಿಗಳು ತಮ್ಮ ಕೃತಿಗಳ ಸಂದರ್ಭದಲ್ಲಿ ತಮ್ಮನ್ನು ಕಾಡಿದ ವಿವಿಧ ಕಾವ್ಯತತ್ವಗಳನ್ನು ಕುರಿತು ನೀಡಿದ ಹೇಳಿಕೆಗಳಿವೆ.

೩. ಲಕ್ಷ್ಯದ ನೆಲೆ : ಇಲ್ಲಿ ಒಟ್ಟು ಸಾಹಿತ್ಯರಾಶಿಯಿದೆ. ಇದರಲ್ಲಿ ಉತ್ತಮ ಮತ್ತು ಉತ್ತಮವಲ್ಲದ ಎಲ್ಲ ಬಗೆಯ ಸಾಹಿತ್ಯ ಕೃತಿಗಳಿವೆ.

೪. ಮೇಲ್ಕಂಡ ಮೂರು ನೆಲೆಗಳನ್ನು ಕ್ರಮಾನುಗತವಾಗಿ ಸಂಘಟಿಸಿ ವಿವರಿಸಿದ ಕ್ರಮವೊಂದಿದೆ. ಇಲ್ಲಿ ಈಗಾಗಲೇ ಪ್ರಸ್ತಾಪಿಸಲ್ಪಟ್ಟ ಮಾಸ್ತಿ, ಬೇಂದ್ರೆ ಮೊದಲಾದವರೊಂದಿಗೆ ಆಧುನಿಕ ಸಂದರ್ಭದ ಎಲ್ಲ ಸಾಹಿತ್ಯ ಪಂಥಗಳ ಸಂದರ್ಭದಲ್ಲಿ ತಮ್ಮ ತಮ್ಮ ಸಾಹಿತ್ಯ ಪಂಥಗಳನ್ನು ವಿವಿಧ ಬರಹಗಾರರು ಮಂಡಿಸಿದ ಲೇಖನಗಳಿವೆ. ಈ ಲೇಖನಗಳನ್ನು ದಾಟಿದ ನೆಲೆಯಲ್ಲಿ ಅಂದರೆ ಪೂರ್ಣ ಪ್ರಮಾಣದಲ್ಲಿ ಪುಸ್ತಕವನ್ನೇ ಬರೆದ ನೆಲೆಯಲ್ಲಿ ಜಿ.ಎಸ್. ಶಿವರುದ್ರಪ್ಪ, ಹಿ.ಶಿ. ರಾಮಚಂದ್ರೇಗೌಡ, ವೀರಣ್ಣದಂಡೆ, ಎಂ.ಎಸ್. ಹಿರೇಮಠ ಮುಂತಾದವರು ಕ್ರಮವಾಗಿ ಬರೆದ 'ಕನ್ನಡ ಕವಿಗಳ ಕಾವ್ಯ ಕಲ್ಪನೆ', 'ಜನಪದ ಕಾವ್ಯಮೀಮಾಂಸೆ' 'ಕನ್ನಡ ಕಾವ್ಯಮೀಮಾಂಸೆ' ಮುಂತಾದ ಕೃತಿಗಳಿವೆ. ಈ ಭಾಗದಲ್ಲಿಯೇ ಪ್ರಸ್ತುತವಾದ ಪ್ರೊ. ಕಿ.ರಂ. ನಾಗರಾಜ ಅವರ ಬರಹಗಳಿವೆ. ಅವು 'ಜಾನಪದ ಮತ್ತು ಆಧುನಿಕ ಸಾಹಿತ್ಯ', 'ಕನ್ನಡ ಕಾವ್ಯ ಪರಂಪರೆ' 'ಸಂಸ್ಕೃತ ಕಾವ್ಯ ಮೀಮಾಂಸೆ' (ಸಂಬಂಧ-ಸಂಘರ್ಷದ ನೆಲೆಗಳು)', 'ಕನ್ನಡ ಕಾವ್ಯರಚನಾ ಪರಂಪರೆಯ ವಿಶಿಷ್ಟತೆ' ಮುಂತಾದ ಲೇಖನಗಳನ್ನು ಗಮನಿಸಬಹುದು.

'ಜಾನಪದ ಮತ್ತು ಆಧುನಿಕ ಸಾಹಿತ್ಯ' ಎಂಬ ಬರಹದಲ್ಲಿ ಶಿಷ್ಟ ಮತ್ತು ಅಶಿಷ್ಟ ಸಾಹಿತ್ಯದ ನಡುವೆ ಇರುವ ಗೆರೆ ಅತ್ಯಂತ ತೆಳುವಿನದು ಎಂದು ಭಾವಿಸಿದ್ದಾರೆ. ಇದಕ್ಕೆ ಪೂರಕವಾಗಿ ಗ್ರಾಮೀಣ ಸಂಸ್ಕೃತಿಯಲ್ಲಿ ಮಹತ್ವದ ಭಾಗವಾಗಿ ಬೆಸೆದುಕೊಂಡಿರುವ ವಚನಕಾರರು, ಹರಿಹರ, ರಾಘವಾಂಕ, ಕುಮಾರವ್ಯಾಸ, ಕೀರ್ತನಕಾರರು, ಲಕ್ಷ್ಮೀಶ, ಸರ್ವಜ್ಞ ಮುಂತಾದವರನ್ನು ಉಲ್ಲೇಖಿಸಿದ್ದಾರೆ. ಅಲ್ಲದೆ ಶಿಶುನಾಳ ಷರೀಫ, ನಾಗಲಿಂಗಯತಿ, ಸರ್ಪಭೂಷಣ ಶಿವಯೋಗಿ, ಬಂಡೆಗವಿಸಿದ್ಧ, ಗೋವಿಂದಭಟ್ಟ ಮುಂತಾದ ಅಸಂಖ್ಯ ಅನುಭಾವಿ ಕವಿಗಳು ಪ್ರಾದೇಶಿಕ ಸಂಸ್ಕೃತಿಯ ಆಂತರ್ಯದಲ್ಲಿ ಜೀವಂತವಾಗಿ ಸೇರಿಕೊಂಡಿರುವುದನ್ನು ಗುರುತಿಸಿದ್ದಾರೆ. ಇಂಥವರ ರಚನೆಗಳು ವಿವಿಧ ವಾಚನ ಸಂಪ್ರದಾಯಗಳನ್ನು ನಿರ್ಮಿಸಿರುವುದನ್ನು ಸಂಸ್ಕೃತಿಯ ಸಂದರ್ಭದಲ್ಲಿ ಪ್ರಸ್ತಾಪಿಸಿದ್ದಾರೆ. ಇಂತಹ ಅನೇಕ ಮಹತ್ವದ ಕೃತಿಗಳು ಅನಕ್ಷರಸ್ಥರ ಸಂಸ್ಕೃತಿಯ ಬಗೆಗೆ ಗಾಢವಾದ ತಿಳಿವಳಿಕೆಯಿಂದ ಕೂಡಿವೆ ಎಂಬ ನಿಲುವಿಗೆ ಬಂದಿದ್ದಾರೆ. ಅಂತೆಯೇ ಇಂತಹ ಅನೇಕ ಕವಿಗಳ ರಚನೆಗಳನ್ನು ಕನ್ನಡ ಕಾವ್ಯ ಪರಂಪರೆ ಮತ್ತು ಜನಪದ (ಜನಪ್ರಿಯ) ಪರಂಪರೆಯ ಸೃಜನಶೀಲ ಒಪ್ಪಂದವೆಂದು ವ್ಯಾಖ್ಯಾನಿಸಿದ್ದಾರೆ. ಮುಂದುವರೆದ ಇನ್ನೊಂದು ನೆಲೆಯಲ್ಲಿ ಜನಪದದ ಅಭಿವ್ಯಕ್ತಿಯು ಪ್ರಾಚೀನವೂ ಅಲ್ಲ, ಹೊಸದೂ ಅಲ್ಲ; ಅದು ಸದ್ಯಕಾಲೀನ ಎಂದು ಜನಪದ ರಚನೆಗಳನ್ನು ವ್ಯಾಖ್ಯಾನಿಸಿದ್ದಾರೆ.

ಹೀಗೆ ಕನ್ನಡದ ದೇಸಿ ಕಾವ್ಯ, ಜನಪದ ಮತ್ತು ಜನಪ್ರಿಯ ಕಾವ್ಯ ಮುಂತಾದ ಕಾವ್ಯಗತಿಗಳಿಗೆ ಇರುವ, ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಅಂತರ್ಗತವಾಗಿರುವ ಕನ್ನಡ ಕಾವ್ಯತತ್ವವನ್ನು ರೂಪಿಸುವ ಪ್ರಯತ್ನವನ್ನು ಕಿ.ರಂ. ಅವರು ಇಲ್ಲಿ ಮಾಡಿದ್ದಾರೆ. ಇಂಥಹದ್ದೇ ಪ್ರಯತ್ನವು ಕನ್ನಡದ ಶಿಷ್ಟ ಅಥವಾ ಮಾರ್ಗ ಸಾಹಿತ್ಯ ಎಂದು ಗುರುತಿಸಬಹುದಾದ ಸಾಹಿತ್ಯವನ್ನು ಮುಖ್ಯವಾಗಿ ಅನುಲಕ್ಷಿಸಿ 'ಕನ್ನಡ ಕಾವ್ಯ ಪರಂಪರೆ; ಸಂಸ್ಕೃತ ಕಾವ್ಯಮೀಮಾಂಸೆ (ಸಂಬಂಧ ಸಂಘರ್ಷದ ನೆಲೆಗಳು)' ಎಂಬ ಬರಹದಲ್ಲಿ ಕಾಣುತ್ತದೆ. ಇದನ್ನು ಹೀಗೆ ಪರಿಕಲ್ಪನಾತ್ಮಕವಾಗಿ ವಿವರಿಸಬಹುದು:

ಕಾವ್ಯಮೀಮಾಂಸೆಯ ಮಿತಿಯ ಪ್ರತಿಪಾದನೆ ಇಲ್ಲಿದೆ. ಇದು ಕಾವ್ಯಗಳ ಮಾರ್ಗದರ್ಶಿ ಅಲ್ಲ; ಅಂತೆಯೇ ಓದುಗರ ಕೈಪಿಡಿಯೂ ಅಲ್ಲ.

ಇಂತಹ ಕಾವ್ಯಮೀಮಾಂಸೆ ಅಸಂಖ್ಯ ಕೃತಿಗಳ ರಚನಾ ನೆಲೆಗಳನ್ನು ಕ್ರಮಬದ್ಧವಾಗಿ ಸಂಘಟಿಸಿ, ವಿವರಿಸುವ ಪ್ರಯತ್ನವನ್ನು ಮಾಡುತ್ತದೆ.

ಒಂದು ಕೃತಿಗೆ ಅನೇಕರಿಂದ ಅನೇಕ ಓದುಗಳು, ಕೆಲವೊಮ್ಮೆ ಒಬ್ಬನಿಂದಲೇ ಅನೇಕ ಓದುಗಳು ಇರುತ್ತವೆ. ಅಂತೆಯೇ ಕಾಲದ ಅವಸ್ಥಾಂತರದಲ್ಲಿ, ಭಿನ್ನ ಶಾಖೆಗಳ ಬೆಳವಣಿಗೆಯಲ್ಲಿ ಈ ಓದು ವ್ಯತ್ಯಸ್ತವಾಗುತ್ತದೆ.

ಇಂತಹ ಕಾವ್ಯತತ್ವ ವೈವಿಧ್ಯಮಯ. ಉದಾಹರಣೆಗೆ ಕಾವ್ಯವನ್ನು ಕುರಿತಂತೆ ಕಾವ್ಯತತ್ವ, ಕಾದಂಬರಿಯನ್ನು ಕುರಿತಂತೆ ಕಾದಂಬರಿತತ್ವ, ಹೀಗೆ ಇದು ವಿವಿಧ ಸಾಹಿತ್ಯ ಪ್ರಕಾರಗಳನ್ನು ಆವರಿಸುತ್ತದೆ. ಅಂತೆಯೇ ಪಂಥಗಳನ್ನು ಅನುಲಕ್ಷಿಸಿ ನವೋದಯ ತತ್ವ, ನವ್ಯತತ್ವ, ಪ್ರಗತಿಶೀಲತತ್ವ, ದಲಿತ-ಬಂಡಾಯತತ್ವ, ದಲಿತತ್ವ, ಸ್ತ್ರೀತತ್ವ ಹೀಗೆ ಇದರ ಸಾಲು ಸಹ ಬೆಳೆಯುತ್ತದೆ.

ಇಂತಹ ಕಾವ್ಯಮೀಮಾಂಸೆ ಸ್ಥಾವರವಲ್ಲ; ಎಲ್ಲ ಜ್ಞಾನಶಾಖೆಗಳಂತೆ ಸೃಜನಶೀಲತೆಯ ನಿರಂತರತೆ ಇದಕ್ಕೆ ಕಾರಣ.

ಇಂತಹ ಕಾವ್ಯಮೀಮಾಂಸೆಯನ್ನು ಎರಡು ನೆಲೆಗಳಲ್ಲಿ ಕಟ್ಟಲಾಗಿದ್ದರೂ ಮುಖ್ಯವಾಗಿ ಇದು ಕಾವ್ಯಾಂತರ್ಗತ ಕಾವ್ಯತತ್ವಗಳ ನೆಲೆಯಲ್ಲೇ ಆಗುವುದು ಸೂಕ್ತ. ಇದು ಕಾವ್ಯವನ್ನು ಲಕ್ಷ್ಯದ ನೆಲೆಯಲ್ಲಿ ಕಾವ್ಯಮೀಮಾಂಸೆಯ ಕೃತಿಯನ್ನಾಗಿ ಗ್ರಹಿಸುವ ಕ್ರಮ.

ಈ ನೆಲೆಯಲ್ಲಿ ಕಾಣುವ ಕನ್ನಡ ಕಾವ್ಯಮೀಮಾಂಸೆ, ಕನ್ನಡ ಕಾವ್ಯ ಮತ್ತು ಕನ್ನಡ ಸಂಸ್ಕೃತಿ ಆಳದಲ್ಲಿ ಪ್ರತ್ಯೇಕವಲ್ಲ.

ಸಂಸ್ಕೃತ ಕಾವ್ಯಕ್ಕೆ ಹೋಲಿಸಿದರೆ ಕನ್ನಡ ಕಾವ್ಯವು ಪ್ರಕಾರ, ಸಂವೇದನೆ, ಲಯ ಮುಂತಾದ ಅನೇಕ ನೆಲೆಗಳಲ್ಲಿ ಹೆಚ್ಚು ವೈವಿಧ್ಯಮಯವಾಗಿದೆ. ಇದಕ್ಕೆ ಕಾರಣ ಇದಕ್ಕೆ ಹಿನ್ನೆಲೆಯಾಗಿದ್ದ ಜನಸಂಸ್ಕೃತಿ. ಈ ಕೊರತೆ ಸಂಸ್ಕೃತ ಕಾವ್ಯಕ್ಕಿದೆ. ಹಾಗಾಗಿ ಬಹುಮುಖಿ ಕನ್ನಡ ಕಾವ್ಯದ ನಿರ್ವಚನ, ಮೀಮಾಂಸೆ ಸಂಸ್ಕೃತಿಯ

ಹಿನ್ನೆಲೆಯಲ್ಲಿಯೇ ಆಗಬೇಕು. ಅದರ ಪ್ರವೇಶ ಸಂಸ್ಕೃತದ ಮೂಲಕವೇ ಆಗಬೇಕು ಎಂಬ ಧೋರಣೆ ತಪ್ಪಬೇಕಾದುದು ಉಚಿತ.

ಹೀಗೆ ಕನ್ನಡ ಕಾವ್ಯಪರಂಪರೆ ಮತ್ತು ಸಂಸ್ಕೃತ ಕಾವ್ಯಮೀಮಾಂಸೆಯ ನಡುವೆ ಇರುವ ಅಂತರವನ್ನು ಮುಖ್ಯವಾಗಿ ಇಲ್ಲಿ ತೋರುವ ಮೂಲಕ ಕನ್ನಡ ಕಾವ್ಯಮೀಮಾಂಸೆಯ ಸಾಧ್ಯತೆಗಳನ್ನು, ಅದನ್ನು ರೂಪಿಸಿಕೊಳ್ಳಬೇಕಾದ ಕ್ರಮ ಮತ್ತು ಜರೂರನ್ನು ಕಿ.ರಂ. ಇಲ್ಲಿ ಮಂಡಿಸಿದ್ದಾರೆ.

ಈ ನಿಟ್ಟಿನಲಿ ಮತ್ತೊಂದು ಮುಖ್ಯ ಬರಹ 'ಕನ್ನಡ ಕಾವ್ಯ ರಚನಾ ಪರಂಪರೆಯ ವಿಶಿಷ್ಟತೆ'. ಇಲ್ಲಿ ಇವರು ಕನ್ನಡ ಕಾವ್ಯ ಮತ್ತು ಅದರ ಮೀಮಾಂಸೆ ಸಂಸ್ಕೃತಕ್ಕಿಂತ ಹೇಗೆ ಭಿನ್ನ ಎಂಬ ನೆಲೆಗಳನ್ನು ಪರಾಮರ್ಶಿಸಿದ್ದಾರೆ.

ಮೊದಲಿಗೆ ಸೃಜನಶೀಲತೆಯ ನೆಲೆಯಲ್ಲಿ ಪೂರ್ವಪುರಾಣದ ಕರ್ತೃ ಜಿನಸೇನಚಾರ್ಯರಿಗಿಂತ ಪಂಪ ಹೇಗೆ ಮಿಗಿಲು ಎಂಬುದನ್ನು ಸೋದಾಹರಣವಾಗಿ ವಿವರಿಸುತ್ತಾರೆ. ಹೀಗಾಗಿ ಸಂಸ್ಕೃತದ ನೆರಳಾಗಿ ಕನ್ನಡವನ್ನು ನೋಡುವ ಪ್ರಮೇಯವಿಲ್ಲ ಎಂಬುದನ್ನು ಪ್ರತಿಪಾದಿಸಿದ್ದಾರೆ. ಮುಂದುವರೆದ ಹಂತದಲ್ಲಿ ಸಂಸ್ಕೃತ ಸಾಹಿತ್ಯಕ್ಕೆ ಜನಸಂಸ್ಕೃತಿಯ ಹಿನ್ನೆಲೆ ಇಲ್ಲದ್ದರಿಂದ ಇಲ್ಲಿಯ ರಚನೆಗಳು ಕನ್ನಡದ ಸಂದರ್ಭದಲ್ಲಿ ಕೇವಲ ವಿದ್ವತ್ತಿನ ರಚನೆಗಳಷ್ಟೇ. ಇವುಗಳ ವರ್ಣನೆ– ನಿರೂಪಗಳಲ್ಲಿ ಏರಿಳಿತಗಳಾಗಲೀ, ಮಾತಿನ ಧ್ವನಿಸೂಕ್ಷ್ಮಗಳಾಗಲೀ ಕಾಣುವುದು ಸಾಧ್ಯವಿಲ್ಲ. ಈ ನೆಲೆಯಲ್ಲಿ ಮೂಡಿದ ಅನೇಕ ಸಂಸ್ಕೃತದ ರಚನೆಗಳು ಪೆಡಸುತನದಿಂದ ಕೂಡಿವೆ. ಇದಕ್ಕೆ ವಿರುದ್ಧ ಗತಿಯ ಕ್ರಿಯಾಶೀಲತೆ ಪಂಪ, ಹರಿಹರ, ಕುಮಾರವ್ಯಾಸ, ಲಕ್ಷ್ಮೀಶ, ಚಾಮರಸ, ಜನಪದ ಸಾಹಿತ್ಯ, ವಚನ, ಕೀರ್ತನೆ ಮುಂತಾದ ರಚನೆಗಳಲ್ಲಿದೆ ಎಂಬುದನ್ನು ಪ್ರಸ್ತಾಪಿಸಿದ್ದಾರೆ. ಅಲ್ಲದೆ ಈ ರಚನೆಗಳ ಒಳಗೆ "ಹಠಾತ್ ಮುನ್ನಡೆ, ಹಿಂಜರಿತ, ಮೇಲಿಂದ ಮೇಲೆ ಕಾಣಿಸಿಕೊಳ್ಳುವ ಉತ್ಸಾಹಮಯ ಆರಂಭ"ವನ್ನು ಗುರುತಿಸಿ ಕೊನೆಯ ಹಂತದಲ್ಲಿ "ಪ್ರಾದೇಶಿಕ ಸಂಸ್ಕೃತಿಯನ್ನು ವಿನಾಶಗೊಳಿಸುತ್ತಿರುವ ಪ್ರಭಾವಗಳನ್ನು ವಿರೋಧಿಸುವುದು ಕನ್ನಡ ಕವಿತೆಯ ಮುಖ್ಯ ಆಶಯವಾಗಿದೆ' ಎಂದಿದ್ದಾರೆ.

ಹೀಗೆ ಕನ್ನಡ ಕಾವ್ಯದ ಸ್ವಂತಿಕೆಯ ನೆಲೆಗಳನ್ನು ಕಿ.ರಂ. ಅವರು ಮಂಡಿಸಿ ಕನ್ನಡ ಕಾವ್ಯಮೀಮಾಂಸೆಯನ್ನು ಕಟ್ಟುವ ಮೂರ್ತ ನೆಲೆಗಳನ್ನು ತೋರಿದ್ದಾರೆ. ಇಲ್ಲಿಯ ಬರಹಕ್ಕೆ ಒಟ್ಟು ಕನ್ನಡ ಕಾವ್ಯವನ್ನು ತಾತ್ವಿಕವಾಗಿ ವಿಮರ್ಶಿಸುವ ಆಯಾಮವು ಪ್ರಾಪ್ತವಾಗಿದೆ. ಇದನ್ನು ಇನ್ನಷ್ಟು ಪರಿಕಲ್ಪನಾತ್ಮಕವಾಗಿ ಹೀಗೆ ನೋಡಬಹುದು:

ಕನ್ನಡ ಕಾವ್ಯ ಮತ್ತು ಸಂಸ್ಕೃತಿಗಳ ನಿಯತ ಸಂಬಂಧದಲ್ಲಿ ಕನ್ನಡ ಚಿಂತನೆ ವಿಕಾಸಗೊಂಡಿದೆ. ಇದು ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಕನ್ನಡ ಕಾವ್ಯ ಮತ್ತು ಸಂಸ್ಕೃತಿ ಆಳದಲ್ಲಿ ಪ್ರತ್ಯೇಕವಲ್ಲ. ಇವೆರಡೂ ಪರಸ್ಪರ ಪೂರಕ ಮತ್ತು ನಿಯತ ಸಂಬಂಧವನ್ನು ಸ್ಥಾಪಿಸಿಕೊಂಡು ಬಂದಿರುವುದು

ವಾಸ್ತವವಾಗಿದೆ. ಇಂತಹ ಸಂಸ್ಕೃತಿ, ಕಾವ್ಯಗಳು ಕಾಲದಿಂದ ಕಾಲಕ್ಕೆ ಸಂಕೀರ್ಣವೋ, ಸರಳವೋ ಹಿನ್ನಡೆಯೋ, ಮುನ್ನಡೆಯೋ ಆಗಿ ವೈವಿಧ್ಯವನ್ನು ಸಾಧಿಸಿವೆ. ಆದ್ದರಿಂದಲೇ ಕನ್ನಡ ಸಂಸ್ಕೃತಿಗೆ ಆಳ ಮತ್ತು ಅಗಲ, ಬಣ್ಣ ಮತ್ತು ಮುಖಗಳು ಅಸಂಖ್ಯ. ಅಂಥವುಗಳ ಒಡಲಲ್ಲಿ ಹುಟ್ಟುವ ಕಾವ್ಯಕ್ಕೂ ಅದೇ ಗತಿ; ಅದೇ ಸ್ಥಿತಿ. ಇದು ಕನ್ನಡ ಸಂಸ್ಕೃತಿ, ಕಾವ್ಯ ಮತ್ತು ಇವುಗಳ ಮೀಮಾಂಸೆಯ ಅನನ್ಯತೆಯಾಗಿದೆ.

ಇಂತಹ ಅನನ್ಯತೆ ಜನಮೂಲದಲ್ಲಿ ಸಾಧ್ಯವಾಗಿದೆ. ಇದು ಸಂಸ್ಕೃತಕ್ಕೆ ಸಾಧ್ಯವಾಗಿಲ್ಲ. ಕಾರಣ, ಸಂಸ್ಕೃತಕ್ಕೆ ಈ ಬಗೆಯ ಜನತೆಯ, ನೆಲದ ಸೊಗಡಿನ ಹಾಗೂ ಅದರ ಗತಿಶೀಲತೆಯ ಹಿನ್ನೆಲೆಯಿಲ್ಲ. ಆದ್ದರಿಂದ ಕನ್ನಡ ಕಾವ್ಯದ ಬಣ್ಣ, ವಯ್ಯಾರಗಳೇ ಬೇರೆ, ಸಂಸ್ಕೃತದ ಬಣ್ಣ, ವಯ್ಯಾರಗಳೇ ಬೇರೆ.

ಆದರೂ ಸಂಸ್ಕೃತವು ಸಾಂಸ್ಥಿಕ ಧರ್ಮಕ್ಕೆ, ಪ್ರಭುತ್ವದ ಅಧಿಕಾರ ಶಕ್ತಿಗೆ ಹತ್ತಿರ. ಕನ್ನಡವು ಇದರ ಸೆಳೆತದಲ್ಲಿದ್ದರೂ ಇದು ವಿಶೇಷವಾಗಿ ಜನತೆಯ ಸೂಜಿಗಲ್ಲಿಗೆ ಆಕರ್ಷಿತವಾಗಿತ್ತು.

ಹೀಗೆ ಬಹುಮುಖಿ ನೆಲೆಯಲ್ಲಿ ಪ್ರೊ. ಕಿ.ರಂ. ಅವರು ಕನ್ನಡ ಕಾವ್ಯಮೀಮಾಂಸೆಯನ್ನು ಮಂಡಿಸುವ ಪ್ರಯತ್ನವನ್ನು ಮಾಡಿದ್ದಾರೆ. ಇದಕ್ಕೆ ಪೂರಕವಾಗಿ ವಿಭಿನ್ನ ನೆಲೆಗಳಲ್ಲಿ ಈಗಾಗಲೇ ಪ್ರಸ್ತಾಪಿಸಿರುವಂತೆ ಅನೇಕ ವಿದ್ವಾಂಸರು ವಿಶೇಷವಾಗಿ ವಿಶ್ವವಿದ್ಯಾನಿಲಯಗಳಲ್ಲಿ ಈ ಸಂಬಂಧದ ಪಾಠ ಹೇಳುತ್ತ ಬಂದಿರುವ ಪ್ರಾಧ್ಯಾಪಕರು–ಕೃತಿಗಳನ್ನು ಬರೆದಿದ್ದಾರೆ. ಆದರೂ ನನ್ನ ತಿಳಿವಳಿಕೆಯ ಮಿತಿಯಲ್ಲಿ ಇದನ್ನು ಈಗಾಗಲೇ ಪ್ರಸ್ತಾಪಿಸಿರುವಂತೆ ಕನ್ನಡ ಛಂದಸ್ಸಿನಂತೆ ಕನ್ನಡ ಭಾಷಾ ವಿಜ್ಞಾನದಂತೆ 'ಕನ್ನಡ ಕಾವ್ಯಮೀಮಾಂಸೆ' ಎಂದು ಕಾವ್ಯಮೀಮಾಂಸೆಯ ಅಥವಾ ತೌಲನಿಕ ಕಾವ್ಯಮೀಮಾಂಸೆಯ ಅಥವಾ ಭಾರತೀಯ ಕಾವ್ಯಮೀಮಾಂಸೆಯ ಅವಿಭಾಜ್ಯ ಅಂಗವೆಂಬಂತೆ ಏಕೆ ಪ್ರತಿಷ್ಠಾಪಿಸಲಿಲ್ಲ ಎಂಬ ಪ್ರಶ್ನೆಯನ್ನು ಮತ್ತೊಮ್ಮೆ ಮುಂದು ಮಾಡುತ್ತಿದ್ದೇನೆ. ಇಂತಹ ಪ್ರಯತ್ನವನ್ನು ಅಂದರೆ 'ಕನ್ನಡ ಕಾವ್ಯಮೀಮಾಂಸೆ'ಯನ್ನು ಹೀಗೆ ಕಾವ್ಯಮೀಮಾಂಸೆಯ ಪ್ರತ್ಯೇಕ ಜ್ಞಾನಶಾಖೆಯನ್ನಾಗಿ ಬೆಂಗಳೂರು ವಿಶ್ವವಿದ್ಯಾನಿಲಯ ಕನ್ನಡ ಅಧ್ಯಯನ ಕೇಂದ್ರವು ತನ್ನ ಎಂ.ಎ. ಕನ್ನಡದ ಪಠ್ಯಕ್ರಮವನ್ನಾಗಿ ಮಾಡಿತು. ಇದು ಆದದ್ದು ೧೯೯೮ರಲ್ಲಿ. ಇದರ ಒತ್ತಾಸೆಯಾಗಿ ಕಿ.ರಂ. ಅವರಿದ್ದರು. ಈ ಪಠ್ಯಕ್ರಮದಲ್ಲಿ ಸುಮಾರು ಏಳು ಅಧ್ಯಾಯಗಳಿದ್ದವು. ಇದನ್ನು ಹೀಗೆ ಗುರುತಿಸುವುದು ಚಾರಿತ್ರಿಕವಾಗಿ ಮುಖ್ಯವೆಂದು ನನಗೆ ಅನ್ನಿಸುತ್ತದೆ. ಕಾರಣ, ಈ ಜ್ಞಾನಶಾಖೆ ಅನೇಕರಿಂದ ಅನೇಕ ಕಾಲಗಳಲ್ಲಿ ಕಿ.ರಂ. ಅವರನ್ನು ಸಹ ಮುಖ್ಯವಾಗಿ ಒಳಗೊಂಡು ಬೆಳೆದು ಬಂದಿದ್ದರೂ ಅದನ್ನು ಅಧಿಕೃತವಾಗಿ ಮತ್ತು ವಿಸ್ತಾರವಾದ ನೆಲೆಯಲ್ಲಿ ಮೊದಲಿಗೆ ಶೈಕ್ಷಣಿಕ ಪರಿಧಿಯಲ್ಲಿ ಪಠ್ಯಕ್ರಮವನ್ನಾಗಿ ಮಾಡಿದ ಶ್ರೇಯಸ್ಸು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರ ಮತ್ತು ಅದರ ಭಾಗವಾದ ಪ್ರೊ. ಕಿ.ರಂ. ಅವರಿಗೆ ಚಾರಿತ್ರಿಕವಾಗಿ

ಸಲ್ಲಬೇಕು ಎನಿಸುತ್ತದೆ. ಆ ಸಂದರ್ಭದಲ್ಲಿ ಇಲ್ಲಿಯ ನಾಲ್ಕು ಹೆಜ್ಜೆಗಳು ಮುಂದೆ ಅನೇಕ ಹೆಜ್ಜೆಗಳಾಗುತ್ತವೆ ಎಂದು ಭಾವಿಸಿದ್ದೇನೆ. ಆದರೆ ದುರದೃಷ್ಟವಶಾತ್ ಮುಂದಿನ ಆರೇಳು ವರ್ಷಗಳಲ್ಲಿ ಈ ನಾಲ್ಕು ಹೆಜ್ಜೆಗಳ ದಾರಿ ಮೊದಲನೆ ಹೆಜ್ಜೆಗೆ ಹಿನ್ನಡೆಯನ್ನು ತೋರಿ ನಿಂತಿತು.

ಇಂದು ಕನ್ನಡ ಕಾವ್ಯಮೀಮಾಂಸೆ ಕನ್ನಡ ಸಾಹಿತ್ಯದ ಇತರೆ ಜ್ಞಾನಶಾಖೆಗಳಂತೆ ಸ್ವತಂತ್ರವಾಗಿ ಬೆಳೆದು ನಿಲ್ಲುವುದಕ್ಕೆ ಅಗತ್ಯವಾದ ದ್ರವ್ಯ ಅನೇಕ ವಿದ್ವಾಂಸರಿಂದ ಸಿದ್ಧಗೊಂಡಿದೆ. ಈ ನಿಟ್ಟಿನಲ್ಲಿ ಕ್ರಿಯಾಶೀಲ ಹೆಜ್ಜೆಗಳು ಇಲ್ಲಿಯ ಪೂರ್ವಸೂರಿಗಳಿಗೆ ಅರ್ಥಪೂರ್ಣ ಗೌರವ ತರುವುದು ಮಾತ್ರವಲ್ಲದೆ, ಭಾರತದ ಪ್ರಜಾಸತ್ತಾತ್ಮಕ ಒಕ್ಕೂಟ ವ್ಯವಸ್ಥೆಯಲ್ಲಿ ಕನ್ನಡವೆಂಬ ಸ್ವೋಪಜ್ಞತೆಯನ್ನು ಇಟ್ಟುಕೊಂಡು ಬದುಕುತ್ತಿರುವ ನಮ್ಮ ನೆಲೆಗೂ ಬೌದ್ಧಿಕ ಘನತೆಯನ್ನು ತರುತ್ತವೆ.

❒

ಟಿ.ಈ. ಹ್ಯೂಮ್
ರಮ್ಯವಾದ ಮತ್ತು ಅಭಿಜಾತವಾದ

ಅನುವಾದ ***ಮಧುವನ ಶಂಕರ***

ರಮ್ಯವಾದದ(Romanticism) ಒಂದು ಶತಮಾನದ ಅನಂತರ ಅಭಿಜಾತವಾದದ(Classicism) ಪುನರುಜ್ಜೀವನದ ಹೊಸ್ತಿಲಿನಲ್ಲಿದ್ದೇವೆ; ಈ ಹೊಸ ಅಭಿಜಾತವಾದದ ಸತ್ತ್ವವು ಕಾವ್ಯದಲ್ಲಿ ಕ್ರಿಯಾಶೀಲವಾಗಿರುವಾಗ ಕಲ್ಪನೆ(ಈಚಿಟಿಛಿಥಿ) ಅದರ ವಿಶಿಷ್ಟ ಅಸ್ತ್ರವಾಗಲಿದೆ ಎಂದು ಪ್ರತಿಪಾದಿಸಬಯಸುತ್ತೇನೆ. ಈ ಕಾರ್ಯದಲ್ಲಿ ಕಲ್ಪನೆಯ ಶ್ರೇಷ್ಠತೆಯು ಸಾರ್ವತ್ರಿಕವಾಗಿ ಅಥವಾ ಶುದ್ಧಾಂಗವಾಗಿ ಶ್ರೇಷ್ಠ ಎಂದಲ್ಲ; ಏಕೆಂದರೆ ಅಂಥದು ಸ್ಪಷ್ಟವಾಗಿ ಅರ್ಥಹೀನ. ಆದರೆ ಅದು ಅನುಭವಸಿದ್ಧ ನೀತಿಶಾಸ್ತ್ರದಲ್ಲಿ (empirical ethics) ಕೆಲವು ವಿಷಯಗಳಿಗೆ ಒಳ್ಳೆಯದು, ಶ್ರೇಷ್ಠ ಎಂದು ಹೇಳುವ ಅರ್ಥದಂತೆ ಎಂದು ಸೂಚಿಸುವೆ. ಹಾಗಾಗಿ, ಅಭಿಜಾತದ ಪುನರುಜ್ಜೀವನವಾಗುತ್ತಿದೆ ಮತ್ತು ಅದರ ವಿಶೇಷ ಉದ್ದೇಶಗಳಿಗೆ ಪ್ರತಿಭೆಗಿಂತ(Imagination) ಕಲ್ಪನೆ ಶ್ರೇಷ್ಠ ಎಂಬ ಎರಡು ಅಂಶಗಳನ್ನು ನಾನೀಗ ಸ್ಪಷ್ಟಪಡಿಸಬೇಕಿದೆ.

ಪ್ರತಿಭೆ ಮತ್ತು ಕಲ್ಪನೆ – ಈ ಪದಗಳು ಭಾಷೆಯಲ್ಲಿ ಯಾವಾಗಲೂ ಇರುವವು ಎಂದು ಭಾವಿಸುವಷ್ಟು ತೀರ ಸಾಮಾನ್ಯ ಎನಿಸಿವೆ. ವಿಮರ್ಶೆಯ ಪದಕೋಶದಲ್ಲಿ ವಿಭಿನ್ನ ಪಾರಿಭಾಷಿಕ ಪದಗಳಾಗಿ ಇವುಗಳ ಚರಿತ್ರೆ ತುಲನಾತ್ಮಕವಾಗಿ ಚಿಕ್ಕದು. ಮೂಲದಲ್ಲಿ ಬಹುಶಃ ಇವುಗಳ ಅರ್ಥ ಒಂದೆ. ಹದಿನೆಂಟನೆಯ ಶತಮಾನದಲ್ಲಿ ಅವು ಜರ್ಮನ್ ಸೌಂದರ್ಯಮೀಮಾಂಸಕರಿಂದ ವ್ಯತ್ಯಾಸಗೊಳ್ಳಲಾರಂಭಿಸಿದವು.

'ರಮ್ಯ' ಮತ್ತು 'ಅಭಿಜಾತ' ಎಂದು ಪದಗಳನ್ನು ಬಳಸುವಾಗ ಅಪಾಯಕಾರಿ ಕೆಲಸವನ್ನು ಮಾಡುತ್ತಿದ್ದೇನೆ ಎಂದು ನನಗೆ ಗೊತ್ತಿದೆ. ಅವು ಐದು ಅಥವಾ ಆರು ಬಗೆಯ ಪ್ರತಿಸಿದ್ಧಾಂತಗಳನ್ನು ಪ್ರತಿನಿಧಿಸುತ್ತವೆ. ನಾನು ಅವನ್ನು ಒಂದು ಅರ್ಥದಲ್ಲಿ ಬಳಸುತ್ತಿರುವಾಗಲೇ ನೀವು ಇನ್ನೊಂದು ಅರ್ಥದಲ್ಲಿ ವ್ಯಾಖ್ಯಾನಿಸುತ್ತಿರಬಹುದು.

ಸದ್ಯ ಅವನ್ನು ಸ್ಪಷ್ಟವಾದ ನಿಶ್ಚಿತ ಮತ್ತು ಪರಿಮಿತ ಅರ್ಥದಲ್ಲಿ ಬಳಸುತ್ತಿದ್ದೇನೆ. ನಿಜವಾಗಿ ಇವುಗಳ ಬದಲು ನಾನು ಹೊಸ ಪದಗಳನ್ನು ಸೃಷ್ಟಿಸಿ ಬಳಸಬೇಕಿತ್ತು. ಆದರೆ ಧ್ರುವಾತ್ಮಕ ಬರಹಗಾರರು ಅವನ್ನು ರಾಜಕೀಯ ಘೋಷಣೆಯ ಪದಗಳಾಗಿ ಮಾರ್ಪಡಿಸುವಲ್ಲಿ ಹೆಚ್ಚು ಸಫಲರಾಗಿದ್ದಾರೆ. ಆ ಅಭ್ಯಾಸವನ್ನು ಸ್ಥಿರಪಡಿಸಿದಂತೆ ಆಗುವುದರಿಂದ ಈಗಿರುವಂತೆಯೇ ಬಳಸುತ್ತೇನೆ. ಧ್ರುವಾತ್ಮಕ ಬರಹಗಾರರ ಗುಂಪು ಅಂದರೆ ಮೌರಾಸ್[(೨೦ ಏಪ್ರಿಲ್ ೧೮೬೮ – ೧೬ ನವೆಂಬರ್ ೧೯೫೨) ಫ್ರೆಂಚ್ ಲೇಖಕ, ಕವಿ ಮತ್ತು ವಿಮರ್ಶಕ. ೧೮೬೮ರಲ್ಲಿ ಸ್ಥಾಪಿತವಾದ ಕ್ರಾಂತಿ ವಿರೋಧಿ ಚಳವಳಿಯ ಕ್ರಿಯಾಸಮಿತಿ ಮತ್ತು ಅದೇ ಹೆಸರಿನ ನಿಯತಾಲಿಕೆಯಾದ 'ಆಕ್ಷನ್ ಫ್ರಾನ್ಸೈಸ್'ನ ನಾಯಕ, ಪ್ರಧಾನ ಚಿಂತಕ; ಲಾಸೆರೆ [ಪಿಯರೆ ಲಾಸೆರೆ (೧೮೬೭–೧೯೩೦) ಫ್ರೆಂಚ್ ಸಾಹಿತ್ಯ ವಿಮರ್ಶಕ, ಪತ್ರಕರ್ತ, ಪ್ರಬಂಧಕಾರ]; ಮತ್ತು 'ಲಾ ಅಕ್ಷನ್ ಫ್ರಾನ್ಸೈಸ್'ನ ಒಡನೆ ಸಂಬಂಧ ಹೊಂದಿದ ಎಲ್ಲಾ ಗುಂಪುಗಳು ಎಂದರ್ಥ.

ಈಗ ನಿರ್ದಿಷ್ಟ ಗುಂಪಿನಲ್ಲಿ ಅತ್ಯಂತ ಶಕ್ತಿಶಾಲಿಯಾದ ವ್ಯತ್ಯಾಸವಿದೆ. ಏಕೆಂದರೆ ಇದು ಒಂದು ಪಕ್ಷದ ಸಂಕೇತವಾಗಿದೆ. ನಿಮ್ಮ ಆದ್ಯತೆ ರಮ್ಯವಾದಿಗಳಿಗೊ, ಅಭಿಜಾತವಾದಿಗಳಿಗೊ ಎಂದು ಒಬ್ಬರನ್ನು ಕೇಳಿ ಅದರಿಂದ ಅವರ ನಿರ್ದಿಷ್ಟ ಗುಂಪಿನ ರಾಜಕೀಯ ಒಲವನ್ನು ಗೊತ್ತುಮಾಡಬಹುದಿತ್ತು.

ಈ ಪರಿಭಾಷೆಗಳ ಸೂಕ್ತ ನಿರ್ವಚನದೆಡೆಗೆ ಹೋಗಲು ಇರುವ ಉತ್ತಮ ದಾರಿ– ಈ ಶಬ್ದಗಳಿಗಾಗಿ ಜಗಳವಾಡಲು ತಯಾರಾಗಿರುವ ಗುಂಪಿನ ಜನರಿಂದ ಪ್ರಾರಂಭಿಸುವುದು. ಏಕೆಂದರೆ ಅವರಲ್ಲಿ ಅಸ್ಪಷ್ಟತೆ ಇರುವುದಿಲ್ಲ (ಇತರರು ಎರಡನ್ನೂ ಇಷ್ಟಪಡುವ ಉದಾರ(ಕ್ಯಾಥೊಲಿಕ್) ಅಭಿರುಚಿಯುಳ್ಳವರ ಕುಖ್ಯಾತ ಮನೋಭಾವವನ್ನು ತೋರುತ್ತಾರೆ).

ಒಂದು ವರ್ಷದ ಹಿಂದೆ, ಬಹುಶಃ ಫಾಕ್ವಾ (Fauchois) ಎಂಬ ಹೆಸರಿನ ಒಬ್ಬ ಓಡೇನ್[ಸಭಾಂಗಣ]ದಲ್ಲಿ ರೇಸಿನ್ [ಜೇನ್ ರೇಸಿನ್ ೧೭ನೇಶತಮಾನದ ಫ್ರೆಂಚ್ ನಾಟಕಕಾರ] ಮೇಲೆ ಒಂದು ಉಪನ್ಯಾಸ ನೀಡಿದ. ರೇಸಿನನ ಸಪ್ಪೆತನ, ಕೌಶಲ್ಯದ ಕೊರತೆ ಮತ್ತು ಇತರ ದೋಷಗಳ ಬಗ್ಗೆ ಅವಹೇಳನಕರ ಟೀಕೆಗಳನ್ನು ಮಾಡಿದ. ಇದು ಕ್ಷಿಪ್ರ ಗಲಭೆಗೆ ಕಾರಣವಾಯಿತು. ಸಭಾಂಗಣದ ತುಂಬ ಜಗಳ ಹರಡಿತು; ಅನೇಕರು ಸೆರೆಯಾಗಿ ಜೈಲಿಗೂ ಹೋದರು. ಉಳಿದ ಉಪನ್ಯಾಸಗಳ ಸರಣಿ ನೂರಾರು ಫ್ರೆಂಚ್ ಪೋಲೀಸರು ಮತ್ತು ಪತ್ತೇದಾರರೆ ತುಂಬಿದ್ದ ಸ್ಥಳದಲ್ಲಿ ನಡೆಯಿತು. ಗಲಾಟೆ ಮಾಡಿದವರಿಗೆ ಅಭಿಜಾತ ವಿಚಾರ ಜೀವಂತ ಸಂಗತಿ; ರೇಸಿನ್ ಮಹಾನ್ ಅಭಿಜಾತವಾದಿ. ಇದು ಸಾಹಿತ್ಯದ ಬಗೆಗಿನ ನಿಜವಾದ ಚೈತನ್ಯದಾಯಕ ಆಸಕ್ತಿ! ಅವರು ರಮ್ಯವಾದವನ್ನು, ಫ್ರಾನ್ಸ್ ಸ್ವಲ್ಪದರಲ್ಲೇ ಗುಣಪಡಿಸಿಕೊಂಡ ಭಯಂಕರ ವ್ಯಾಧಿ ಎನ್ನುವ ರೀತಿಯಲ್ಲಿ ಪರಿಗಣಿಸಿದ್ದರು.

ಕ್ರಾಂತಿಗೆ ರಮ್ಯವಾದ ಕಾರಣ ಎಂಬುದು ಅವರ ಮಟ್ಟಿಗೆ ಜಟಿಲ ವಿಚಾರವಾಗಿತ್ತು. ಅವರು ಕ್ರಾಂತಿಯನ್ನು ದ್ವೇಷಿಸಿದರು; ಅದ್ದರಿಂದ ರಮ್ಯವಾದವನ್ನೂ ದ್ವೇಷಿಸಿದರು.

ಇಲ್ಲಿ ರಾಜಕೀಯವನ್ನು ತಂದುದಕ್ಕೆ ನಾನು ಕ್ಷಮೆ ಯಾಚಿಸಬೇಕಾಗಿಲ್ಲ; ಇಂಗ್ಲೆಂಡ್ ಮತ್ತು ಫ್ರಾನ್ಸ್ ಗಳೆರಡರಲ್ಲಿಯೂ ರಮ್ಯವಾದವು ನಿರ್ದಿಷ್ಟ ರಾಜಕೀಯ ದೃಷ್ಟಿಕೋನದೊಡನೆ ಬೆರೆತುಕೊಂಡಿತ್ತು. ಕ್ರಿಯಾಶೀಲ ತತ್ವವೊಂದನ್ನು ಕಾರ್ಯಗತಗೊಳಿಸುವ ಮೂರ್ತ ದೃಷ್ಟಾಂತದ ಮೂಲಕ ಇದರ ಉತ್ತಮ ನಿರ್ವಚನವನ್ನು ಪಡೆಯಬಹುದು.

೧೭೮೯ರ ಇತರ ಎಲ್ಲ ತತ್ವಗಳ ಹಿಂದಿದ್ದ ಗುಣಾತ್ಮಕ ತತ್ವ ಯಾವುದು? ಶಕ್ತಿಯನ್ನು ಮಾತ್ರ ಉತ್ಪಾದಿಸುವ ಭೌತಿಕ ಕಾರಣಗಳನ್ನು ಬಿಟ್ಟು, ಕ್ರಾಂತಿ ಒಂದು ವಿಚಾರವಾಗಿತ್ತು ಎಂಬ ರೀತಿಯಲ್ಲಿ ಮಾತನಾಡುತ್ತಿದ್ದೇನೆ. ಈ ಶಕ್ತಿಗಳನ್ನು ಸುಲಭವಾಗಿ ವಿರೋಧಿಸಬಹುದಾಗಿದ್ದ ಅಥವಾ ನಿರ್ದೇಶಿಸಬಹುದಾಗಿದ್ದ ತಡೆಗಳು ವಿಚಾರಗಳಿಂದ ಕೊಳೆತು ಹೋಗಿದ್ದವು. ಯಶಸ್ವಿ ಬದಲಾವಣೆಗಳಾಗುವುದು ಯಾವಾಗಲೂ ಹೀಗೆಯೇ. ಪುರಸ್ಕೃತ ವರ್ಗವು ತಾನು ಆತ್ಮವಿಶ್ವಾಸವನ್ನು ಕಳೆದುಕೊಂಡಾಗ ಹಾಗೂ ಅದರ ವಿರುದ್ಧ ಕೆಲಸ ಮಾಡುವ ವಿಚಾರಗಳು ಅದನ್ನು ಭೇದಿಸಿದಾಗ ಸೋಲುತ್ತದೆ.

ಮಾನವ ಹಕ್ಕು ಗಟ್ಟಿಯಾದ ವ್ಯಾವಹಾರಿಕ ಯುದ್ಧ-ಆಕ್ರಂದನವಾಗಿರಲಿಲ್ಲ. ಹುಮ್ಮಸ್ಸನ್ನು ಹುಟ್ಟಿಸಿದ, ಕ್ರಾಂತಿಯನ್ನು ಪ್ರಾಯೋಗಿಕವಾಗಿ ಹೊಸ ಧರ್ಮವಾಗಿ ಮಾಡಿದ ಮತ್ತಾವುದೊ ಅದಕ್ಕಿಂತ ಹೆಚ್ಚು ಗುಣಾತ್ಮಕವಾಗಿತ್ತು. ಸ್ವಾತಂತ್ರ್ಯದ ಗುಣಾತ್ಮಕ ಕಲ್ಪನೆಯನ್ನು ಕುರಿತು ಎಲ್ಲ ವರ್ಗದ ಜನರು, ಅದರಿಂದ ಕಳೆದುಕೊಳ್ಳಲು ಸಿದ್ಧವಾಗಿರುವವರೂ, ಸಾಪೇಕ್ಷವಾಗಿ ಉದ್ರಿಕ್ತ ಸ್ಥಿತಿಯಲ್ಲಿರುತ್ತಾರೆ. ಅಷ್ಟೊಂದು ನೇತ್ಯಾತ್ಮಕವಾದ ವಿಚಾರದಿಂದ ಕೆಲವು ಗುಣಾತ್ಮಕವಾದುವೂ ಬರುವುದು ಸಾಧ್ಯ ಎಂದು ಯೋಚಿಸುವಂತೆ ಮಾಡಿದ ಕೆಲವು ವಿಚಾರಗಳು ಅಲ್ಲಿರಲೇಬೇಕು; ಇದ್ದವು. ರಮ್ಯವಾದದ ನನ್ನ ನಿರ್ವಚನವನ್ನು ಇಲ್ಲಿ ಪಡೆದುಕೊಳ್ಳುತ್ತೇನೆ. ಮನುಷ್ಯ ಸ್ವಭಾವತಃ ಒಳ್ಳೆಯವ; ಕೆಟ್ಟ ಕಾನೂನು ಮತ್ತು ಸಂಪ್ರದಾಯಗಳು ಅವನನ್ನು ಹತ್ತಿಕ್ಕಿವೆ; ಇವೆಲ್ಲವನ್ನು ಕಿತ್ತೆಸೆದಾಗ ಮನುಷ್ಯನ ಅಪರಿಮಿತ ಸಾಧ್ಯತೆಗಳಿಗೆ ಅವಕಾಶ ದೊರೆಯುತ್ತದೆ ಎಂದು ರೂಸೋ[ಜಾನ್ ಜಾಕ್ವಿಸ್ ರೂಸೊ ೨೮ ಜೂನ್ ೧೭೧೨- ೨ ಜುಲೈ ೧೭೭೮ ಜಿನೀವಾದ ಪ್ರಮುಖ ತತ್ತ್ವಜ್ಞಾನಿ, ಲೇಖಕ, ರಮ್ಯವಾದದ ಸಂಯೋಜಕ] ಅವರಿಗೆ ಬೋಧಿಸಿದ್ದಾನೆ. ಇದೇ, ಅವ್ಯವಸ್ಥೆಯಿಂದ ಸಾಪೇಕ್ಷವಾದ ಏನೋ ಕೆಲವು ಹೊರಬರುತ್ತವೆ ಎಂದು ಅವರು ಆಲೋಚಿಸುವಂತೆ ಮಾಡಿತು; ಧಾರ್ಮಿಕ ಹುಮ್ಮಸ್ಸನ್ನು ಹುಟ್ಟುಹಾಕಿತು. ಎಲ್ಲ ರಮ್ಯವಾದಗಳ ಮೂಲ ಇಲ್ಲಿದೆ: ಅದೆಂದರೆ ವ್ಯಕ್ತಿಯಾಗಿ, ಮನುಷ್ಯ ಸಾಧ್ಯತೆಗಳ ಅಪರಿಮಿತ ಆಗರ; ದಮನಮಾಡುವ ವ್ಯವಸ್ಥೆಯನ್ನು ಧ್ವಂಸಗೊಳಿಸುವ ಮೂಲಕ ಸಮಾಜವನ್ನು ಪುನಾರಚಿಸಿದರೆ ಆ ಎಲ್ಲ ಸಾಧ್ಯತೆಗಳಿಗೆ ಅವಕಾಶ ದೊರೆಯುತ್ತದೆ. ಹಾಗೂ ಪ್ರಗತಿ ಸಾಧ್ಯವಾಗುತ್ತದೆ.

ಅಭಿಜಾತವಾದವನ್ನು ಇದಕ್ಕೆ ಪೂರ್ಣ ವಿರುದ್ಧವಾಗಿ ಯಾರಾದರೂ ನಿರ್ವಚಿಸಬಹುದು: ಮನುಷ್ಯ ಅಸಾಧಾರಣ ರೀತಿಯಲ್ಲಿ ಬಂಧಿತನಾದ ಮತ್ತು ಮಿತಿಗೊಳಪಟ್ಟ ಪ್ರಾಣಿ; ಅವನ ಸ್ವಭಾವ ಸಂಪೂರ್ಣ ನಿಶ್ಚಲ. ಸಂಪ್ರದಾಯ ಮತ್ತು ವ್ಯವಸ್ಥೆಗಳ ಮೂಲಕ ಮಾತ್ರ ಅವನಿಂದ ಯೋಗ್ಯವಾದ ಏನನ್ನಾದರೂ ಪಡೆಯಲು ಸಾಧ್ಯ.

ಡಾರ್ವಿನ್ನನ ಕಾಲದಲ್ಲಿ ಈ ದೃಷ್ಟಿ ಸ್ವಲ್ಪ ಅದುರಿತ್ತು. ವಿಶಿಷ್ಟವಾದ ಸಣ್ಣಸಣ್ಣ ವ್ಯತ್ಯಯಗಳ ಸಂಚಿತ ಪರಿಣಾಮದ ಮೂಲಕ ಹೊಸ ಜೀವಪ್ರಭೇದವು ಅಸ್ತಿತ್ವಕ್ಕೆ ಬಂದಿದೆ ಎಂಬ ಭವಿಷ್ಯದ ಪ್ರಗತಿಯ ಸಾಧ್ಯತೆಯನ್ನು ಒಪ್ಪಿಕೊಳ್ಳುವಂತೆ ತೋರುವ ಅವನ ನಿರ್ದಿಷ್ಟ ಪ್ರಮೇಯವನ್ನು ನೀವು ಜ್ಞಾಪಿಸಿಕೊಳ್ಳಬಹುದು. ಆದರೆ ಈಗ ತದ್ವಿರುದ್ಧವಾದ ಪ್ರಮೇಯವು ಪ್ರತಿಯೊಂದು ಹೊಸ ಜೀವಪ್ರಭೇದವೂ ಸಣ್ಣಸಣ್ಣ ಹೆಜ್ಜೆಗಳ ಸಂಚಯದ ಮೂಲಕ ಕ್ರಮೇಣ ಅಸ್ತಿತ್ವಕ್ಕೆ ಬರದೆ, ಇದ್ದಕ್ಕಿದ್ದಂತೆ, ಒಂದೆ ಜಿಗಿತದಲ್ಲಿ ಅಸ್ತಿತ್ವಕ್ಕೆ ಬಂದಿದೆ; ಹಾಗೆ ಒಮ್ಮೆ ಅಸ್ತಿತ್ವಕ್ಕೆ ಬಂದುದು ಸಂಪೂರ್ಣ ಸ್ಥಿರವಾಗಿಯೇ ಉಳಿದುಬಿಡುತ್ತದೆ ಎಂಬ ಡಿ ವ್ರೀಸ್‌ನ ಪರಿವರ್ತನ ತತ್ವ ರೂಪದ ಮುಖ್ಯ ದಾರಿಯೊಂದನ್ನು ನಿರ್ಮಿಸುತ್ತಿದೆ. ಇದು ಅಭಿಜಾತವಾದಿ ದೃಷ್ಟಿಯನ್ನು ವೈಜ್ಞಾನಿಕ ಬೆಂಬಲದ ತೋರಿಕೆಯಲ್ಲಿ ಉಳಿಸಿಕೊಳ್ಳಲು ನನಗೆ ಅವಕಾಶ ಕಲ್ಪಿಸುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ, ಇವು ಎರಡು ದೃಷ್ಟಿಕೋನಗಳು. ಒಂದು, ಮನುಷ್ಯ ಸ್ವಭಾವತಃ ಒಳ್ಳೆಯವನು; ಸಂದರ್ಭದಿಂದಾಗಿ ಕೆಟ್ಟುಹೋಗಿದ್ದಾನೆ; ಇನ್ನೊಂದು, ಆತ ಸ್ವಭಾವತಃ ಪರಿಮಿತಿ ಇರುವವನು, ಆದರೆ ವ್ಯವಸ್ಥೆ ಮತ್ತು ಸಂಪ್ರದಾಯಗಳಿಂದ ಶಿಸ್ತಿಗೆ ಒಳಪಟ್ಟು ಒಂದು ರೀತಿಯಲ್ಲಿ ಸಭ್ಯನಾಗಿದ್ದಾನೆ. ಒಂದು ಪಕ್ಷದವರಿಗೆ ಮನುಷ್ಯನ ಸ್ವಭಾವ ಬಾವಿಯಂತೆ. ಇನ್ನೊಬ್ಬರಿಗೆ ಬಕೆಟ್ಟಿನಂತೆ. ಮನುಷ್ಯನನ್ನು ಬಾವಿ, ಸಾಧ್ಯತೆಗಳಿಂದ ತುಂಬಿದ ಜಲಾಶಯ ಎಂದು ಪರಿಗಣಿಸುವ ದೃಷ್ಟಿಕೋನವನ್ನು ರಮ್ಯ ಎಂದು ಕರೆಯುತ್ತೇನೆ. ಮನುಷ್ಯನನ್ನು ತುಂಬ ಸೀಮಿತ ಮತ್ತು ಬದ್ಧ ಜಂತು ಎಂದು ಪರಿಗಣಿಸುವ ದೃಷ್ಟಿಕೋನವನ್ನು ಅಭಿಜಾತ ಎಂದು ಕರೆಯುತ್ತೇನೆ.

ಪೆಲಜಿಯಸ್ ವಾದದ [ಪೆಲಜಿಯಸ್ (ಸಾ.ಪೂ. ೩೫೫–೪೨೨). ಈತ 'ಆಡಮನ ಮೂಲ ಪಾಪ' ವಾದವನ್ನು ನಿರಾಕರಿಸಿ, ಮನುಷ್ಯ ಸಹಜವಾಗಿಯೇ ಕೆಡುಕನ್ನು ತಿರಸ್ಕರಿಸಿ ದೇವರೆಡೆಗೆ ಸಾಗಬಲ್ಲ; ಮಕ್ಕಳು ಹುಟ್ಟಿನಿಂದ ನಿಷ್ಪಾಪಿಗಳು ಎಂದು ಸಾರಿದವನು.] ಸೋಲು ಮತ್ತು ಮೂಲಪಾಪದ ವಿವೇಕಯುತ ಅಭಿಜಾತ ದೃಷ್ಟಿಯನ್ನು ಯಾವಾಗಲೂ ಚರ್ಚು ಸ್ವೀಕರಿಸಿ ಒಪ್ಪಿಕೊಂಡಿರುವುದನ್ನು ಗಮನಿಸಬಹುದು.

ಅಭಿಜಾತ ದೃಷ್ಟಿಯನ್ನು ಭೌತವಾದದೊಡನೆ ಗುರುತಿಸುವುದು ತಪ್ಪಾಗುತ್ತದೆ. ಇದಕ್ಕೆ ವಿರುದ್ಧವಾಗಿ, ಅದು ಸಾಮಾನ್ಯ ಧಾರ್ಮಿಕ ಮನೋಭಾವದೊಡನೆ ಸಂಪೂರ್ಣವಾಗಿ ಹೋಲುತ್ತದೆ. ಅದನ್ನು ಹೀಗೆ ಹೇಳಬಹುದು: ದೈವದ ಮೇಲಿನ

ನಂಬಿಕೆಯು ಮನುಷ್ಯನ ನಿಶ್ಚಿತ ಸ್ವಭಾವದ ಭಾಗ. ಇದು ಕೂಡ ಪ್ರತಿಯೊಬ್ಬನಿಗೂ ಭೌತವಸ್ತುವಿನ ಅಸ್ತಿತ್ವ ಮತ್ತು ಬಾಹ್ಯಪ್ರಪಂಚದ ಮೇಲಿರುವ ನಂಬಿಕೆಯಷ್ಟೇ ಸ್ಥಿರ ಮತ್ತು ಸತ್ಯ. ಇದು ಹಸಿವು, ಲೈಂಗಿಕ ಪ್ರವೃತ್ತಿ ಮತ್ತಿತರ ಎಲ್ಲ ಮೂಲಭೂತ ಗುಣಗಳಿಗೆ ಸಮಾನಾಂತರವಾಗಿದೆ. ಫ್ಲಾರೆನ್ಸ್‌ನಲ್ಲಿ ಸ್ಯಾವೊನರೋಲನ (೨೧ ಸೆಪ್ಟೆಂಬರ್ ೧೪೫೨ – ೨೩ ಮೇ ೧೪೯೮) ಅಧೀನದಲ್ಲಿ, ಜಿನೇವಾದಲ್ಲಿ ಕ್ಯಾಲ್ವಿನ್‌ನ (ಜೇನ್ ಕಾಲ್‌ವಿನ್ ೧೦ ಮೇ ೧೫೦೯ – ೨೭ ಮೇ ೧೫೬೪) ಅಧೀನದಲ್ಲಿ ಮತ್ತು ಇಲ್ಲಿ ರೌಂಡ್‌ಹೆಡ್‌ಗಳ [ಇಂಗ್ಲೆಂಡಿನಲ್ಲಿ ರಾಜ ಮತ್ತು ಪಾರ್ಲಿಮೆಂಟಿನ ಸಾರ್ವಭೌಮತ್ವದ ಬಗ್ಗೆ ನಡೆದ ಅಂತರ್ಯುದ್ಧದಲ್ಲಿ ಪಾರ್ಲಿಮೆಂಟರಿ ಪಕ್ಷದ ಹೋರಾಟಗಾರರಿಗೆ ಕೊಟ್ಟ ಹೆಸರು. ಅವರು ತಮ್ಮ ತಲೆಗೂದಲನ್ನು ತುಂಬ ತುಂಡಾಗಿ ಕತ್ತರಿಸಿಕೊಂಡಿದ್ದರಿಂದ ಆ ಹೆಸರು (೧೬೪೨-೧೬೫೧)] ಅಧೀನದಲ್ಲಿ, ನಿರ್ದಿಷ್ಟ ಕಾಲಗಳಲ್ಲಿ ಬಲ ಅಥವಾ ವಾಗಾಡಂಬರಗಳಲ್ಲಿ ಒಂದನ್ನು ಬಳಸುವುದರ ಮೂಲಕ ಈ ಪ್ರವೃತ್ತಿಗಳನ್ನು ಹತ್ತಿಕ್ಕಿದಂತೆ ಈಗ ಹತ್ತಿಕ್ಕಲಾಗಿದೆ. ಅಂಥ ಪ್ರಕ್ರಿಯೆಯ ಅನಿವಾರ್ಯ ಫಲಿತಾಂಶವಾಗಿ ಹತ್ತಿಕ್ಕಲ್ಪಟ್ಟ ಪ್ರವೃತ್ತಿಗಳು ಸ್ಫೋಟಿಸಿ ಕೆಲವು ಅಸಹಜ ದಿಕ್ಕುಗಳಲ್ಲಿ ಹೊರಬರುತ್ತವೆ. ಧರ್ಮದಲ್ಲಿಯೂ ಹಾಗೆಯೇ ಆಗುತ್ತದೆ. ವಿಚಾರವಾದದ ವಿತಂಡ ವಾಗ್ವೈಖರಿಯ ಮೂಲಕ ನಿಮ್ಮ ಸ್ವಾಭಾವಿಕ ಪ್ರವೃತ್ತಿಗಳು ಹತ್ತಿಕ್ಕಲ್ಪಟ್ಟಿವೆ. ಹಾಗೂ ನೀವು ಅಜ್ಞೇಯತಾವಾದಿಯಾಗಿ ಬದಲಾಗುತ್ತೀರಿ. ಇತರೆ ಪ್ರವೃತ್ತಿಗಳ ವಿಚಾರದಲ್ಲಿ ಆಗುವಂತೆ ಇಲ್ಲಿಯೂ ಪ್ರಕೃತಿಯ ಸೇಡು ಇದೆ. ಮತಧರ್ಮದಲ್ಲಿ ತಮ್ಮ ಸರಿಯಾದ ಮತ್ತು ತಕ್ಕ ಹೊರಮಾರ್ಗ ಕಂಡುಕೊಂಡ ಪ್ರವೃತ್ತಿಗಳು ಬೇರೆ ಕೆಲವು ದಾರಿಯಲ್ಲಿ ಹೊರಬರಲೇಬೇಕು. ನೀವು ದೇವರನ್ನು ನಂಬುವುದಿಲ್ಲ, ಹಾಗಾಗಿ ಮನುಷ್ಯನೇ ದೇವರು ಎಂದು ನಂಬಲು ಪ್ರಾರಂಭಿಸುತ್ತೀರಿ. ನೀವು ಸ್ವರ್ಗ ನಂಬುವುದಿಲ್ಲ, ಹಾಗಾಗಿ ಭೂಮಿಯ ಮೇಲಿನ ಸ್ವರ್ಗವನ್ನು ನಂಬಲು ಪ್ರಾರಂಭಿಸುತ್ತೀರಿ. ಬೇರೆ ಮಾತಿನಲ್ಲಿ ಹೇಳುವುದಾದರೆ, ನೀವು ರಮ್ಯವಾದವನ್ನು ಪಡೆಯುತ್ತೀರಿ. ತಮ್ಮ ಸ್ವಂತ ವಲಯಯಲ್ಲಿ ಸರಿಯಾಗಿ, ಯೋಗ್ಯವಾಗಿರುವ ಪರಿಕಲ್ಪನೆಗಳು ಹರಡಿ, ಅಸ್ತವ್ಯಸ್ಥಗೊಂಡು ಹುಸಿಗೊಳ್ಳುತ್ತವೆ; ಮಾನವಾನುಭವಗಳ ಸ್ಪಷ್ಟ ರೂಪರೇಖೆಗಳನ್ನು ಮಸುಕುಗೊಳಿಸುತ್ತವೆ. ಇದು ಊಟದ ಮೇಜಿನ ಮೇಲೆ ಕಾಕಂಬಿಯನ್ನು ಚೆಲ್ಲಿದಂತೆ. ಹಾಗಾಗಿ ರಮ್ಯವಾದಕ್ಕೆ ನಾನು ಕೊಡಲು ಸಾಧ್ಯವಿರುವ ನಿರ್ವಚನ: ಅದು ಚೆಲ್ಲಿದ ಮತಧರ್ಮ.

ಈಗ ನಾನು ಕಾವ್ಯದಲ್ಲಿ ರಮ್ಯ ಮತ್ತು ಅಭಿಜಾತ ಎಂದರೆ ನಿಖರವಾಗಿ ಏನು ಅರ್ಥ ಎಂದು ಹೇಳುವ ಕಷ್ಟವನ್ನು ಕೊಡವಿಕೊಳ್ಳಬೇಕಿದೆ. ವಿಶ್ವವನ್ನು ಕುರಿತಂತೆ, ಮನುಷ್ಯನನ್ನು ಕುರಿತಂತೆ ಪದ್ಯದಲ್ಲಿ ಪ್ರತಿಫಲಿತವಾಗಿರುವ ಈ ಎರಡು ಮನೋಧರ್ಮಗಳ ಪ್ರತಿಫಲ ಇದರ ಅರ್ಥ ಎಂದು ಮಾತ್ರ ಹೇಳಬಲ್ಲೆ. ರಮ್ಯವಾದಿಯು ಮನುಷ್ಯನನ್ನು ಅನಂತ ಎಂದು ಭಾವಿಸುವುದರಿಂದ ಯಾವಾಗಲೂ ಅನಂತದ ಬಗೆಗೇ ಮಾತನಾಡುತ್ತಿರಬೇಕು; ಹಾಗೂ ಮನುಷ್ಯ ತಾನು ಏನನ್ನು ಮಾಡಲು ಸಮರ್ಥನಾಗಿರಬೇಕು ಎಂದು ಬಯಸುವುದು ಮತ್ತು ವಾಸ್ತವವಾಗಿ ಏನನ್ನು ಮಾಡಲು

ಸಮರ್ಥನಾಗಿರುವುದು ಅವುಗಳ ನಡುವೆ ಯಾವಾಗಲೂ ಕಹಿ ವೈರುಧ್ಯ ಇರುವುದು. ಅದರಿಂದ ಅವನು ಕೊನೆಯ ಹಂತದಲ್ಲಿ ಯಾವಾಗಲೂ ಮಂಕಾಗಿರುತ್ತಾನೆ. ಇದು ಈ ಎರಡು ಸ್ವಭಾವ ವೈಚಿತ್ರಗಳ ಪ್ರತಿಫಲನ, ಮತ್ತು ವಿರುದ್ಧ ಶಕ್ತಿಗಳನ್ನು ಎತ್ತಿ ತೋರಿಸುವ ನಿದರ್ಶನ ಎಂದು ಹೇಳುವುದನ್ನು ಬಿಟ್ಟು ನಿಜವಾಗಿಯೂ ಮತ್ತೇನೂ ಮುಂದುವರಿಸುವುದಿಲ್ಲ. ಒಂದು ಕಡೆ ಹೊರೇಸ್, ಎಲಿಜಬತ್ ಕಾಲದ ಬಹುಜನ ಮತ್ತು ಆಗಸ್ಟನ್ ಯುಗದ ಬರಹಗಾರರು ಇದ್ದರೆ ಇನ್ನೊಂದು ಕಡೆ ಲ್ಯಾಮರ್ಟೈನ್, ಹ್ಯೂಗೋ, ಭಾಗಶಃ ಕೀಟ್ಸ್, ಕೋಲ್ರಿಜ್, ಬೈರನ್, ಶೆಲಿ ಮತ್ತು ಸ್ವಿನ್‌ಬರ್ನ್‌ರಂಥ ವೈವಿಧ್ಯಮಯ ಜನರು ಇದ್ದಾರೆ.

ಜನರು ಕಾವ್ಯದಲ್ಲಿ ರಮ್ಯ ಮತ್ತು ಅಭಿಜಾತಗಳ ಬಗ್ಗೆ ಆಲೋಚಿಸುವಾಗ ರೇಸಿನ್ ಮತ್ತು ಶೇಕ್ಸ್‌ಪಿಯರ್‌ರ ನಡುವಿನ ವೈಷಮ್ಯ ಒಮ್ಮೆಲೆ ಅವರ ಮನಸ್ಸಿಗೆ ಬರುತ್ತದೆ ಎಂಬುದನ್ನು ನಾನು ಚನ್ನಾಗಿ ಬಲ್ಲೆ. ನನ್ನ ಮಾತಿನ ಅರ್ಥ ಅದಲ್ಲ; ನಾನು ಸಂಕಲ್ಪಿಸಿದ ವಿಭಾಜಕಗೆರೆಯನ್ನು ಇಲ್ಲಿ ನಿಜವಾದ ಮಧ್ಯದಿಂದ ಸ್ವಲ್ಪ ಕದಲಿಸಲಾಗಿದೆ. ರೇಸಿನ್ ಸಂಪೂರ್ಣ ಅಭಿಜಾತದ ಕಡೆ ಇದ್ದಾನೆ ಎಂಬುದನ್ನು ಒಪ್ಪುತ್ತೇನೆ, ಆದರೆ ನೀವು ಶೇಕ್ಸ್‌ಪಿಯರ್‌ನನ್ನು ರಮ್ಯವಾದಿ ಎಂದು ಕರೆದರೆ, ಆಗ ಅದಕ್ಕೆ ನಾನು ಕೊಟ್ಟ ನಿರ್ವಚನದ ಬದಲು ಬೇರೊಂದನ್ನು ಬಳಸುತ್ತಿರುತ್ತೀರಿ. ಅಭಿಜಾತವಾದ ಮತ್ತು ರಮ್ಯವಾದಗಳ ನಡುವಿನ ಭೇದವು ಕೇವಲ ಆತ್ಮಸಂಯಮ ಮತ್ತು ಸಮೃದ್ಧಿಗಳ ನಡುವೆ ಇರುವ ಒಂದು ಭೇದ ಎಂಬಂತೆ ನೀವು ಆಲೋಚಿಸುತ್ತಿರುತ್ತೀರಿ. ಅಭಿಜಾತವಾದದಲ್ಲಿ ಸ್ಥಿರ ಮತ್ತು ಚರ ಎಂಬ ಎರಡು ವಿಧಗಳಿವೆ ಎಂದು ಹೇಳುವ ನೀಷೆಯ ಜೊತೆಗೂಡುತ್ತೇನೆ. ಇವುಗಳಲ್ಲಿ ಶೇಕ್ಸ್‌ಪಿಯರ್ ಚರ–ಅಭಿಜಾತವಾದಿ.

ಹಾಗಾದರೆ ಕಾವ್ಯದಲ್ಲಿ ಅಭಿಜಾತವನ್ನು ಕುರಿತ ನನ್ನ ಅರ್ಥ ಹೀಗೆ: ಅತ್ಯಂತ ಕಲ್ಪನಾತ್ಮಕ ಹಾರಾಟದಲ್ಲಿ ಕೂಡ ಯಾವಾಗಲೂ ಹಿಂಸೆಳೆತ ಇರುತ್ತದೆ. ಅಭಿಜಾತ ಕವಿ ಈ ಸಾಂತತೆಯನ್ನೂ ಮನುಷ್ಯನ ಈ ಪರಿಮಿತಿಯನ್ನೂ ಮರೆಯುವುದಿಲ್ಲ. ತಾನು ಮಣ್ಣಿನೊಡನೆ ಬೆರೆತು ಹೋಗಿರುವವನು ಎಂಬುದನ್ನು ಆತ ಯಾವಾಗಲೂ ಜ್ಞಾಪಿಸಿಕೊಳ್ಳುತ್ತಾನೆ. ಆತ ಜಿಗಿಯಬಹುದು, ಆದರೆ ಯಾವಾಗಲೂ ಹಿಂದಕ್ಕೆ ಬರುತ್ತಾನೆ; ಆತ ಸುಳಿಗಾಳಿಯೊಳಗೆ ಹಾರಿ ಹೋಗಿಬಿಡುವುದಿಲ್ಲ.

ಒಟ್ಟು ರಮ್ಯ ಮನೋಭಾವ ಕಾವ್ಯದಲ್ಲಿ ಹಾರಾಟದ ರೂಪಕಗಳ ಸುತ್ತ ಹರಳುಗಟ್ಟುವಂತೆ ತೋರುತ್ತದೆ ಎಂದು ನೀವು ಹೇಳಬಹುದು. ಹ್ಯೂಗೋ ಯಾವಾಗಲೂ ಪಾತಾಳಗಳ ಆಳಕ್ಕೆ, ಅನಂತ ಗಾಳಿಯೊಂದಿಗೆ ಮೇಲಕ್ಕೆ ಹಾರುತ್ತಿರುತ್ತಾನೆ. ಅವನ ಪ್ರತಿಯೊಂದು ಸಾಲಿನಲ್ಲಿಯೂ ಅನಂತ ಎಂಬ ಪದ ಇರುತ್ತದೆ.

ಅಭಿಜಾತ ಮನೋಭಾವದಲ್ಲಿ ನೀವು ಯಾವುದೇ ಅನಂತ ಶೂನ್ಯದ ಜೊತೆ ಚಿಮ್ಮುವುದಿಲ್ಲ. ಬಂಧನದ ಮಿತಿಯ ಒಳಗಡೆ ಇರುವ ಮನುಷ್ಯನಿಗೆ ಮತ್ತಷ್ಟು

ಪರಿಮಿತಿಗಳನ್ನು ಹೇರುವ ಅತಿರೇಕವಾದುದನ್ನು ಹೇಳಿದರೆ, ಕೊನೆಗೆ ನೀವೇ ಅದನ್ನು ಪೂರ್ತಿ ನಂಬಿರದ, ಆ ಹೇಳಿಕೆಯ ಹೊರಗೆ ನಿಂತಿರುವ ಅಥವಾ ಅದನ್ನು ಪ್ರಜ್ಞಾಪೂರ್ವಕವಾಗಿ ಆಡಂಬರದಿಂದ ಮುಂದಿಡುವ ಭಾವನೆ ಓದುಗರಿಗೆ ಹೇಗಾದರೂ ರವಾನೆಯಾಗುತ್ತದೆ. ಸತ್ಯಕ್ಕಿಂತ ಹೆಚ್ಚಿನದಾದ, ಮನುಷ್ಯ ಬಹುಕಾಲ ಉಸಿರಾಡಲು ವಿರಳವಾದ ವಾತಾವರಣದೊಳಗಡೆಗೆ ನೀವು ಕುರುಡಾಗಿ ಪ್ರವೇಶಿಸುವುದಿಲ್ಲ. ಯಾವಾಗಲೂ ಪರಿಮಿತಿಯ ಪರಿಕಲ್ಪನೆಗೆ ನಿಷ್ಠರಾಗಿರುತ್ತೀರಿ. ಇದು ಶ್ರುತಿಯ ಪ್ರಶ್ನೆ; ರಮ್ಯ ಕಾವ್ಯದಲ್ಲಿ ಮನುಷ್ಯ ಇರುವುದಕ್ಕಿಂತ ಹೆಚ್ಚು ಶಬ್ದಾಡಂಬರದ ಶ್ರುತಿಗೆ ಚಲಿಸುವುದನ್ನು ನೀವು ಬಲ್ಲಿರಿ. ಹ್ಯೂಗೋ ಹಾಗೂ ಸ್ವಿನ್‌ಬರ್ನ್‌ರಲ್ಲಿ ನೀವು ಪಡೆಯುವ ರೀತಿಯ ಸಂಗತಿಗಳು ಬರಲಿರುವ ಅಭಿಜಾತದ ಪ್ರತಿಕ್ರಿಯೆಯಲ್ಲಿ ಕೇವಲ ದೋಷವಾಗಿ ಭಾಸವಾಗುತ್ತವೆ. ಇದಕ್ಕೆ ವಿರುದ್ಧವಾದ ವಿಷಯದ ಉದಾಹರಣೆಗಾಗಿ, ಅಭಿಜಾತವಾದದ ಹುಮ್ಮಸ್ಸಿನಿಂದ ಬರೆಯಲಾದ 'ಸೂರ್ಯನ ಶಾಖಕ್ಕೆ ಇನ್ನು ಹೆದರಬೇಡ' ಎಂದು ಆರಂಭವಾಗುವ *ಸಿಂಬಲೈನ್* [ಬ್ರಿಟನ್ ದೊರೆ ಸಿಂಬಲೈನ್ ಕುರಿತ ಷೇಕ್ಸ್‌ಪಿಯರನ ನಾಟಕ]ದ ಹಾಡೊಂದನ್ನು ತೆಗೆದುಕೊಳ್ಳುತ್ತೇನೆ. ಇದನ್ನು ನಾನು ಕೇವಲ ದೃಷ್ಟಾಂತವಾಗಿ ಬಳಸುತ್ತಿದ್ದೇನೆ. ಇಲ್ಲಿ ಹೇಳುತ್ತಿರುವುದು ನಾನು ಉದ್ದೇಶಿಸಿದ ಸಂಪೂರ್ಣ ಅರ್ಥವಲ್ಲ. ಕೊನೆಯ ಎರಡು ಸಾಲುಗಳನ್ನು ತೆಗೆದುಕೊಳ್ಳಿ,

> ಬಂಗಾರದ ಪೋರ ಪೋರಿಯರೆಲ್ಲರೂ
> ಚಿಮಣಿ ಗುಡಿಸುವವರಾಗಿ ದೂಳಿಗೆ ಬೀಳಲೇಬೇಕು
>
> (ಸಿಂಬಲೈನ್ ಅಂಕ ೪ ದೃಶ್ಯ ೨)

ಇದನ್ನು ಯಾವ ರಮ್ಯವಾದಿಯೂ ಎಂದೂ ಬರೆದಿರಲಾರ. ಈಗ ಆಳವಾಗಿ ಬೇರುಬಿಟ್ಟಿರುವ ರಮ್ಯವಾದಕ್ಕೆ ಇದು ತುಂಬ ಆಕ್ಷೇಪಾರ್ಹ. ಇವು ಮೂಲ ಹಾಡಿನ ಭಾಗವಲ್ಲ ಎಂದು ಆ ಜನ ವಾದಿಸಿಯಾರು.

ಪೋರ(Lad) ಎಂಬ ಪದ ಶ್ಲೇಷೆಯಲ್ಲದೆ, ಸಂಪೂರ್ಣ ಅಭಿಜಾತ ಎಂದು ನಾನು ಭಾವಿಸುತ್ತೇನೆ. ನಿಮ್ಮ ಆಧುನಿಕ ರಮ್ಯವಾದಿ ಅದನ್ನು ಎಂದೂ ಬರೆಯಲಾರ. ಆತ ಹೊನ್ನ ಯುವಕ(Golden Youth) ಎಂದೇ ಬರೆದಾನು. ಕೊನೆಯ ಪಕ್ಷ ತಾರ ಸ್ಥಾಯಿಯ ಕೆಲವು ಸ್ವರಗಳನ್ನಾದರೂ ತೆಗೆದುಕೊಳ್ಳುತ್ತಿದ್ದ.

ರಮ್ಯ ಚಳವಳಿಯ ಅಂತ್ಯಕ್ಕೆ ಸಮೀಪಿಸುತ್ತಿದ್ದೇವೆ ಎಂದು ನಾನು ಆಲೋಚಿಸುವಂತೆ ಮಾಡಿದ ಕಾರಣಗಳನ್ನು ಈಗ ನಾನು ನೀಡಬಯಸುತ್ತೇನೆ.

ಮೊದಲನೆಯದು ಕಲೆಯ ಯಾವುದೇ ರೂಢಿ ಅಥವಾ ಸಂಪ್ರದಾಯದ ಸ್ವರೂಪದಲ್ಲಿದೆ. ಕಲೆಯ ಒಂದು ನಿರ್ದಿಷ್ಟ ರೂಢಿ ಅಥವಾ ಮನೋಧರ್ಮ ಸಾವಯವ ಜೀವಿಯ ಸಂಗತಿಗಳಿಗೆ ಖಚಿತ ಸಾಮ್ಯವಿದೆ. ಅದು ಬೆಳೆದು ಮುದಿಯಾಗಿ, ನಾಶವಾಗುತ್ತದೆ. ಅದಕ್ಕೆ ನಿಶ್ಚಿತ ಜೀವಿತಾವಧಿ ಇದ್ದು ಅದು ಸಾಯಲೇಬೇಕಾಗುತ್ತದೆ. ಅದರಲ್ಲಿ ಸಾಧ್ಯವಿರುವ ಎಲ್ಲಾ ರಾಗಗಳನ್ನೂ ಹಾಡಲಾಗಿರುತ್ತದೆ. ಅನಂತರ ಅದು

ಬರಿದಾಗಿರುತ್ತದೆ; ಮೇಲಾಗಿ ಯೌವನ ಅದರ ಅತ್ಯುತ್ತಮ ಕಾಲ. ಎಲಿಜಿಬತ್ ಯುಗದಲ್ಲಿ(೧೫೫೮-೧೬೦೩) ಕಾವ್ಯಗಳು ಸಮೃದ್ಧವಾಗಿ ಹೂಬಿಟ್ಟ ಕಾಲವನ್ನು ನೋಡಬಹುದು. ಇದಕ್ಕೆ ಹೊಸ ಪ್ರಪಂಚದ ಶೋಧ ಮತ್ತು ಉಳಿದ ಎಲ್ಲ ಬಗೆಯ ಕಾರಣಗಳನ್ನು ಕೊಡಲಾಗಿದೆ. ತುಂಬ ಸರಳವಾದ ಕಾರಣ ಒಂದಿದೆ. ಅವರಿಗೆ ಹಾಡಲು ಸರಳ ರಗಳೆ ಎಂಬ ಹೆಸರಿನ ಹೊಸ ಮಾಧ್ಯಮವನ್ನು ನೀಡಲಾಯಿತು. ಅದು ಹೊಸದಾಗಿದ್ದರಿಂದ ಅದರಲ್ಲಿ ಹೊಸ ರಾಗಗಳನ್ನು ನುಡಿಸಲು ಸುಲಭವಾಗಿತ್ತು.

ಇತರ ಕಲೆಗಳಿಗೂ ಇದೇ ತತ್ತ್ವ ಅನ್ವಯಿಸುತ್ತದೆ. ಎಲ್ಲ ಮಹಾನ್ ಚಿತ್ರ ಕಲಾವಿದರೂ ತಾವು ಪ್ರಾರಂಭಿಸಿದ ನಿರ್ದಿಷ್ಟ ಪರಂಪರೆ ಅಪೂರ್ಣವಾಗಿದ್ದಾಗ ಹುಟ್ಟಿದವರು. ರಾಫೀಲ್(ಇಟಲಿಯ ಚಿತ್ರಕಾರ. ೧೪೮೩-೧೫೨೦) ಫ್ಲಾರೆನ್ಸ್‌ಗೆ ಬಂದಾಗ ಫ್ಲೋರೆಂಟೈನ್ ಸಂಪ್ರದಾಯದ ಪಕ್ವತೆಗೆ ಸ್ವಲ್ಪ ಕೊರತೆ ಉಳಿದಿತ್ತು. ವೆನಿಸ್‌ನಲ್ಲಿ ತೀಶನ್(Titilan) ಹುಟ್ಟಿದಾಗ ಬೆಲಿನೆಸ್ಕ್‌ಗೆ ಇನ್ನೂ ಚಿಕ್ಕ ಪ್ರಾಯ. ಟರ್ನರ್ ಮತ್ತು ಕಾನ್ಸ್ಟೇಬಲ್(ಬ್ರಿಟಿಷ್ ಚಿತ್ರಕಾರರು) ಭೂದೃಶ್ಯ ರಮ್ಯ ನೋಟದ ಸ್ವತಂತ್ರ ಶಕ್ತಿಯನ್ನು ತೆರೆದು ತೋರಿಸಲು ಉದಯಿಸಿದಾಗ ಅದಿನ್ನೂ ವರ್ಣಚಿತ್ರದ ಆಟಿಕೆ ಅಥವಾ ಹೊರರೂಪ ಚಿತ್ರಕಲೆಯ ಉಂಬಳಿಯಂತಿತ್ತು. ಭೂದೃಶ್ಯ ರಮ್ಯನೋಟದಲ್ಲಿ ಕೆಲಸ ಮಾಡಿದ ಟರ್ನರ್ ಮತ್ತು ಕಾನ್ಸ್ಟೇಬಲ್ ಅದೇ ದಾರಿಯಲ್ಲಿ ಕೆಲಸ ಮಾಡಲು ತಮ್ಮ ಉತ್ತರಾಧಿಕಾರಿಗಳಿಗಾಗಿ ಬಿಟ್ಟಿದ್ದು ಏನೂ ಇಲ್ಲ ಅಥವಾ ಸ್ವಲ್ಪ. ಪ್ರತಿಯೊಂದು ಕಲಾತ್ಮಕ ಚಟುವಟಿಕೆಯ ಕ್ಷೇತ್ರವೂ ಅವುಗಳಿಂದ ಪೂರ್ಣ ಫಸಲನ್ನು ಪಡೆದುಕೊಂಡ ಮೊದಲ ಮಹಾಕಲಾವಿದರಿಂದ ಬರಿದಾಗಿದೆ.

ರಮ್ಯವಾದ ಈ ಬರಿದಾದ ಕಾಲವನ್ನು ತಲುಪಿದೆ ಎಂದು ನನಗನಿಸುತ್ತದೆ. ಹೊಸದೊಂದು ತಂತ್ರವನ್ನು ಅನ್ವೇಷಿಸಿ ಪಡೆಯುವತನಕ, ನಾವು ಕಾವ್ಯದ ಯಾವುದೇ ಹೊಸ ಹೂಗಳ ಕಾಲವನ್ನು ಪಡೆಯಲಾಗುವುದಿಲ್ಲ.

ಇದಕ್ಕೆ ಆಕ್ಷೇಪಣೆಗಳು ಇರಲು ಸಾಧ್ಯ: ಒಂದು ಶತಮಾನವು ಸಾವಯವ ಘಟಕವಾಗಿ ಇರಲಾರದು, ನಾನು ತಪ್ಪು ರೂಪಕದಿಂದ ಮೋಸ ಹೋಗಿದ್ದೇನೆ, ಸಾಹಿತ್ಯಿಕ ಜನಸಮೂಹವನ್ನು ಒಂದು ಸಾವಯವ ಗುಂಪು ಅಥವಾ ಸರಕಾರದ ಇಲಾಖೆಯಂತೆ ಪರಿಗಣಿಸಿದ್ದೇನೆ –ಎಂದು ಹೇಳಬಹುದು. ಇತರ ವಿಷಯಗಳಲ್ಲಿ ನಾವು ಏನೇ ಆಗಿದ್ದರೂ ಸಾಹಿತ್ಯದಲ್ಲಿ ನಾವು ಏನಾದರೂ ಆಗಿರುವವರೆಗೆ, ಪರಿಗಣಿಸಬಹುದಾದ ಯೋಗ್ಯತೆಯವರಾಗಿರುವವರೆಗೆ, ನಾವು ಬಿಡಿ ಹಾಗೂ ವಿಭಿನ್ನ ವ್ಯಕ್ತಿಗಳಾಗಿರುತ್ತೇವೆ ಹೊರತು ಯಾವುದೇ ಸಾರ್ವತ್ರಿಕ ಪರಿಗಣನೆಯ ಅಧೀನಕ್ಕೆ ಒಳಗಾಗಿರಲಾರೆವು ಎಂದು ಯಾರಾದರೂ ಆಗ್ರಹಿಸಬಹುದು. ಯಾವುದೇ ಅವಧಿಯಲ್ಲಿ, ಯಾವುದೇ ಕಾಲದಲ್ಲಿ, ಒಬ್ಬ ಕವಿ ತಾನು ಭಾವಿಸುವ ರೀತಿಯ ಅಭಿಜಾತವಾದಿ ಅಥವಾ ರಮ್ಯವಾದಿಯಾಗಿರಬಹುದು. ಯಾವುದೇ ನಿರ್ದಿಷ್ಟ ಕ್ಷಣದಲ್ಲಿ ಚಳವಳಿಯ ಹೊರಗೆ ನಿಲ್ಲಬಲ್ಲೆ ಎಂದು ನೀವು ಯೋಚಿಸಬಹುದು. ವ್ಯಕ್ತಿಯಾಗಿ ಅಭಿಜಾತ

ಮತ್ತು ರಮ್ಯ ಸತ್ವಗಳೆರಡನ್ನೂ ಬಳಸುತ್ತೇನೆ ಹಾಗೂ ಒಂದು ಇನ್ನೊಂದಕ್ಕಿಂತ ಶ್ರೇಷ್ಠ ಎಂದು ಶುದ್ಧ ನಿರ್ಲಿಪ್ತ ದೃಷ್ಟಿಕೋನದಿಂದ ನಿರ್ಧರಿಸಬಹುದು.

ಸೌಂದರ್ಯ ತೀರ್ಮಾನದ ವಿಚಾರದಲ್ಲಿ ಯಾರೂ ಈ ರೀತಿಯ ಅಲಿಪ್ತ ನಿಲುವನ್ನು ತಾಳಲು ಸಾಧ್ಯವಿಲ್ಲ ಎನ್ನುವುದು ಇದಕ್ಕೆ ಉತ್ತರ. ನೀವು 'ಮಾನವ'ನೆಂಬ ಅಮೂರ್ತ ಶಾರೀರಿಕ ಕಲ್ಪನೆಯಾಗದೆ, ನಿರ್ದಿಷ್ಟ ತಂದೆ-ತಾಯಿಗಳ ಮಗುವಾಗಿರುವಂತೆ, ಸಾಹಿತ್ಯಿಕ ತೀರ್ಮಾನದ ವಿಚಾರದಲ್ಲಿಯೂ ನಿರ್ದಿಷ್ಟರಾಗಿಯೇ ಇರುತ್ತೀರಿ. ಬಹುತೇಕವಾಗಿ, ನಿಮ್ಮ ಅಭಿಪ್ರಾಯವು ನಿಮಗಿಂತ ತುಸು ಮೊದಲು ಬಂದಿರುವ ಸಾಹಿತ್ಯಿಕ ಚರಿತ್ರೆಯದಾಗಿರುತ್ತದೆ; ನಿಮ್ಮ ಆಲೋಚನೆ ಯಾವುದೇ ಆಗಿದ್ದರೂ ಇದು ನಿಮ್ಮನ್ನು ಆಳುತ್ತದೆ. ಮೇಲಕ್ಕೆ ಎಸೆದ ಕಲ್ಲು ಭೂಮಿಗೆ ಬೀಳುವ ಬಗೆಗಿನ ಸ್ಪಿನೋಜನ ಉದಾಹರಣೆಯನ್ನು ತೆಗೆದುಕೊಳ್ಳಿ, ಪ್ರಜ್ಞಾವಂತ ಮನಸ್ಸನ್ನು ಇದ್ದಿದ್ದರೆ ಅದು ತಾನಾಗಿ ನೆಲದೆಡೆಗೆ ಹೋಗುತ್ತಿರುವುದಾಗಿ ಯೋಚಿಸುತ್ತಿತ್ತು. ಯಾವುದು ಸುಂದರ, ಯಾವುದು ಅಲ್ಲ ಎಂಬುದನ್ನು ಕುರಿತ ನಿಮ್ಮ ಸೋಗಿನ ಸ್ವಾತಂತ್ರ್ಯದ ತೀರ್ಮಾನದ ಬಗೆಗೆ ಹೀಗೆಯೇ ಭಾವಿಸುತ್ತೀರಿ. ಮನುಷ್ಯನ ಸ್ವಾತಂತ್ರ್ಯದ ಪ್ರಮಾಣವನ್ನು ತುಂಬ ಉತ್ಪ್ರೇಕ್ಷಿಸಲಾಗಿದೆ. ನನಗೆ ಒಪ್ಪಿಗೆಯಾಗುವ ಆಧ್ಯಾತ್ಮಿಕ ಸಿದ್ಧಾಂತ ಮತ್ತು ಮತಧರ್ಮ ಇವೆರಡು ಅಪರೂಪದ ಸಂದರ್ಭಗಳಲ್ಲಿ ನಾವು ಸ್ವತಂತ್ರರು. ಆದರೆ ನಾವು ರೂಢಿಗತವಾಗಿ ಸ್ವತಂತ್ರ ಎಂದು ಹಣೆಪಟ್ಟಿ ಅಂಟಿಸಿದ ಹಲವು ಕ್ರಿಯೆಗಳು ವಾಸ್ತವದಲ್ಲಿ ಸ್ವಯಂಚಾಲಿತವಾದವು. ಯಾರಿಗಾದರೂ ಪುಸ್ತಕವನ್ನು ಬಹುಪಾಲು ಸ್ವಯಂಚಾಲನೆಯಿಂದ ಬರೆಯಲು ಸಾಧ್ಯ. ಅಂತಹ ಹಲವು ಉತ್ಪನ್ನಗಳನ್ನು ನಾನು ಓದಿದ್ದೇನೆ. ಇಪ್ಪತ್ತಕ್ಕೂ ಹೆಚ್ಚು ವರ್ಷಗಳ ಹಿಂದೆ ರಾಬರ್ಟ್‌ಸನ್ ಪರಾವರ್ತಿತ ಮಾತನ್ನು ಕುರಿತ ಕೆಲವು ಗ್ರಹಿಕೆಗಳನ್ನು ದಾಖಲಿಸಿದ್ದಾನೆ. ಕೆಲವು ಬುದ್ಧಿಮಾಂದ್ಯ ರೋಗಿಗಳು, ವೈಚಾರಿಕತೆಯನ್ನು ಬಳಸುವ ಮಟ್ಟಿಗೆ ಸಂಪೂರ್ಣ ಬೌದ್ಧಿಕ ಪ್ರಜ್ಞಾಹೀನತೆ ಇರುವವರು ರಾಜಕೀಯದಂಥ ವಿಷಯಗಳ ಮೇಲಿನ ಪ್ರಶ್ನೆಗಳ ಸರಣಿಗೆ ಬುದ್ಧಿವಂತ ಉತ್ತರಗಳನ್ನು ನೀಡಿರುವುದನ್ನು ಆತ ಗುರುತಿಸಿದ್ದಾನೆ. ಈ ಪ್ರಶ್ನೆಗಳ ಅರ್ಥ ತಿಳಿಯಲು ಸಾಧ್ಯವಾಗುತ್ತಿರಲಿಲ್ಲ. ಇಲ್ಲಿ ಭಾಷೆ ಪರಾವರ್ತನೆಯ ರೀತಿಯಲ್ಲಿ ಕೆಲಸ ಮಾಡಿದೆ. ಕೆಲವು ಅತ್ಯಂತ ಸಂಕೀರ್ಣ ವಿದ್ಯಮಾನಗಳು, ಸೌಂದರ್ಯವನ್ನು ಅನುಕರಿಸಬಲ್ಲಷ್ಟು ಸೂಕ್ಷ್ಮವಾಗಿದ್ದು, ತಾವೇ ಕೆಲಸ ಮಾಡಬಲ್ಲವು. ಸೌಂದರ್ಯವನ್ನು ಕುರಿತ ತೀರ್ಮಾನ ಈ ಬಗೆಯದು ಎಂದು ನಾನು ಖಚಿತವಾಗಿ ಭಾವಿಸಿದ್ದೇನೆ.

ಇದನ್ನು ತುಸು ಭಿನ್ನವಾದ ರೂಪದಲ್ಲಿ ಹೇಳಬಲ್ಲೆ. ಇಲ್ಲಿ ಎರಡು ಮನೋಭಾವಗಳ ಘರ್ಷಣೆಯಿದೆ, ಅದು ಎರಡು ತಂತ್ರಗಳನ್ನು ಕುರಿತದ್ದೂ ಆಗಿರಬಹುದು. ಒಂದರಿಂದ ಇನ್ನೊಂದಕ್ಕೆ ಆಗುವ ಬದಲಾವಣೆಗಳನ್ನು ಒಪ್ಪಿದರೂ, ಅದು ಲೋಲಕದ ಓಲಾಟದಂತೆ ಸಾಮಾನ್ಯದ ಬದಲಾವಣೆ ಮಾತ್ರ ಎಂಬಂತೆ ವಿಮರ್ಶಕ ಪರಿಗಣಿಸುತ್ತಾನೆ. ಲೋಲಕದ ಹೋಲಿಕೆಯನ್ನು ಚಲನೆಯ ಮಟ್ಟಿಗೆ

ಮಾತ್ರ ಒಪ್ಪುತ್ತೇನೆ. ಆದರೆ ಅನಂತರದ ಪರಿಣಾಮವಾದ ವಿರಾಮದ ಸಾಮಾನ್ಯ ಬಿಂದುವಿಗೆ ಹೋಲಿಸುವುದನ್ನು ನಿರಾಕರಿಸುತ್ತೇನೆ.

ರಮ್ಯವಾದಿಗಳನ್ನು ನಾನು ಇಷ್ಟಪಡುವುದಿಲ್ಲ ಎಂದು ಹೇಳುವಾಗ ಎರಡು ಸಂಗತಿಗಳನ್ನು ಹೊರತು ಪಡಿಸುತ್ತೇನೆ: ಅವರಲ್ಲಿರುವ ಎಲ್ಲಾ ಮಹಾಕವಿಗಳನ್ನು ಹೋಲುವ ಭಾಗ, ಹಾಗೂ ಅವರು ಭಿನ್ನರಾಗುವ ಮತ್ತು ಅವರಿಗೆ ರಮ್ಯವಾದಿ ಗುಣಗಳನ್ನು ದೊರಕಿಸುವ ಭಾಗ. ಈ ಸಣ್ಣ ಅಂಶವೆ ಶತಮಾನದ ವಿಶಿಷ್ಟ ಲಕ್ಷಣವನ್ನು ಸ್ಥಾಪಿಸುವಂಥದು. ಇದು ಸಮಕಾಲೀನರನ್ನು ಉತ್ತೇಜಿಸಿದರೆ ಮುಂದಿನ ತಲೆಮಾರಿನವರನ್ನು ರೇಗಿಸುತ್ತದೆ. ಪೋಪನ ಈ ನಿಖರ ಗುಣ ಅವನ ಗೆಳೆಯರನ್ನು ಮೆಚ್ಚಿಸಿತು, ನಮಗೆ ಮೆಚ್ಚುಗೆಯಾಗಲಿಲ್ಲ. ಬದಲಾವಣೆ ಬರುತ್ತಿದೆ ಎಂದು ರಮ್ಯವಾದಿಗಳಂತೆ ಭಾವಿಸಿದ ಯಾರಾದರೂ ಅವರಿಗಿಂತ ಸ್ವಲ್ಪ ಮೊದಲು ಭವಿಷ್ಯ ಹೇಳಬಲ್ಲವರಾಗಿದ್ದರು. ಈಗ ಅಂಥದೇ ಸ್ಥಿತಿಯಲ್ಲಿದ್ದೇವೆ ಎಂದು ನನಗೆ ತೋರುತ್ತದೆ. ಸ್ವಿನ್‌ಬರ್ನ್‌ನನ್ನು ಸುಲಭವಾಗಿ ಸಹಿಸಿಕೊಳ್ಳದ ಗುಂಪು ಬೆಳೆಯುತ್ತಿದೆ ಎಂದು ಭಾವಿಸುತ್ತೇನೆ.

ಅಭಿಜಾತದ ಮತ್ತೊಂದು ಪುನರುಜ್ಜೀವನವಾಗುತ್ತದೆ ಎಂದಾಗ ಪೋಪ್‌ನಿಗೆ ಮರಳುವುದು ಎಂದು ನಾನು ಅಗತ್ಯವಾಗಿ ನಿರೀಕ್ಷಿಸುವುದಿಲ್ಲ. ಅಂಥ ಪುನರುಜ್ಜೀವನಕ್ಕೆ ಇದು ಸೂಕ್ತ ಕಾಲ ಎಂದು ಮಾತ್ರ ಹೇಳುತ್ತಿದ್ದೇನೆ. ಅಗತ್ಯ ಸಾಮರ್ಥ್ಯವಿರುವವರಿಗೆ ಅದು ಜೀವಂತವಾಗಿರಬಹುದು. ಅಂಥವರಿಲ್ಲದಿದ್ದರೆ ಪೋಪನ ರೀತಿಯ ರೂಪನಿಷ್ಠವಾದ ರೀತಿಯದನ್ನು ಪಡೆಯಬಹುದು. ಅದು ಬಂದಾಗ ಅದನ್ನು ನಾವು ಅಭಿಜಾತ ಎಂದು ಗುರುತಿಸದಿರಲೂಬಹುದು. ಅಭಿಜಾತವೇ ಆಗಿದ್ದರೂ ರಮ್ಯ ಕಾಲಮಾನವನ್ನು ದಾಟಿ ಬಂದಿರುವುದರಿಂದ ಅದು ಭಿನ್ನವಾಗಿರುತ್ತದೆ. ಸಮಾನಾಂತರ ಉದಾಹರಣೆ ಎಂದರೆ, ಮೌರಿಸ್ ಡೆನಿಸ್ [೧೮೭೦-೧೯೪೩, ಫ್ರೆಂಚ್ ಸಂಕೇತವಾದಿ ಚಿತ್ರ ಕಲಾವಿದ ಮತ್ತು ಲೇಖಕ] ಹೇಳುವಂತೆ, ಚಿತ್ರಕಲೆಯಲ್ಲಿ ಹಿಂದೆ ಅತ್ಯಂತ ಪರಿಮಿತವಾಗಿದ್ದ ಸಾಮಗ್ರಿಯನ್ನು ಪರಿಣಾಮವಾದಿ ಚಳವಳಿ ಮತ್ತೆ ಹೊಸದಾಗಿ ಬಳಕೆಗೆ ತಂದಿತು. ಆ ಸಾಮಗ್ರಿಯ ಪ್ರಸರಣದ ಮೇಲೆ ಪರಿಣಾಮವಾದಿಗಳು ಹೇರಿದ್ದ ಕಟ್ಟಳೆಯನ್ನೇ ಪರಿಣಾಮೋತ್ತರವಾದಿಗಳು ಹೇರಲು ಪ್ರಯತ್ನಿಸಿದರು. ಆ ಅರ್ಥದಲ್ಲಿ ಅವರು ತಮ್ಮನ್ನು ಅಭಿಜಾತವಾದಿಗಳು ಎಂದು ಪರಿಗಣಿಸುವುದನ್ನು ನೋಡಿ ನಾನು ಅತ್ಯಂತ ಚಕಿತನಾಗಿದ್ದುದನ್ನು ನೆನಪಿಸಿಕೊಳ್ಳುತ್ತೇನೆ.

ನನ್ನ ವಾದವನ್ನು ಮುಂದುವರೆಸುವ ಮೊದಲೇ ಸ್ಪಷ್ಟಪಡಿಸಬೇಕಾದ ಸಂಗತಿಯೆಂದರೆ, ರಮ್ಯವಾದ ನಿಜವಾಗಿ ಸತ್ತಿರುವಾಗಲೂ ಅದಕ್ಕೆ ಅನುಗುಣವಾದ ವಿಮರ್ಶೆಯ ಮನೋಧರ್ಮವೇ ಇನ್ನೂ ಮುಂದುವರಿಯುತ್ತಿರುವುದು. ಇದನ್ನು ಸ್ವಲ್ಪ ಸ್ಪಷ್ಟಪಡಿಸುವುದಾದರೆ, ಪ್ರತಿಯೊಂದು ಬಗೆಯ ಕಾವ್ಯಕ್ಕೂ ಅದಕ್ಕೆ ಅನುರೂಪವಾದ ಗ್ರಾಹಕ ಮನೋಧರ್ಮ ಇರುತ್ತದೆ. ರಮ್ಯಯುಗದಲ್ಲಿ ಕಾವ್ಯದ ಕೆಲವು ನಿರ್ದಿಷ್ಟ

ಗುಣಗಳನ್ನು ಅಪೇಕ್ಷಿಸಿದೆವು. ಅಭಿಜಾತ ಯುಗದಲ್ಲಿ ಬೇರೆ ಕೆಲವನ್ನು ಅಪೇಕ್ಷಿಸುತ್ತೇವೆ. ಈ ಗ್ರಾಹಕ ಮನೋಧರ್ಮವು ತಾನು ರೂಪುಗೊಳ್ಳಲು ಕಾರಣವಾದ ವಸ್ತು-ಸಂಗತಿಗಳಿಗಿಂತ ಹೆಚ್ಚು ಕಾಲ ಬದುಕಿದೆ ಎಂದು ಹೇಳಬೇಕು. ಆದರೆ ರಮ್ಯ ಸಂಪ್ರದಾಯ ಒಣಗಿರುವಾಗಲೂ, ಕೃತಿಗಳಲ್ಲಿ ರಮ್ಯ ಗುಣಗಳನ್ನು ನಿರೀಕ್ಷಿಸುವ ವಿಮರ್ಶಾತ್ಮಕ ಮನೋಧರ್ಮ ಇನ್ನೂ ಉಳಿದಿದೆ. ಆದ್ದರಿಂದ ನಾಳೆ ಉತ್ತಮ ಅಭಿಜಾತ ಕೃತಿಯನ್ನು ಬರೆದಾಗ ಅದನ್ನು ಕೆಲವೇ ಜನ ಅರ್ಥಮಾಡಿಕೊಳ್ಳಲು ಸಮರ್ಥರಾಗಿರುತ್ತಾರೆ.

ನಾನು ರಮ್ಯವಾದಿಗಳಲ್ಲಿ ಶ್ರೇಷ್ಠರಾದವರನ್ನೂ ಆಕ್ಷೇಪಿಸುತ್ತೇನೆ. ಗ್ರಾಹಕ ಮನೋಧರ್ಮವನ್ನು ಮತ್ತಷ್ಟು ಆಕ್ಷೇಪಿಸುತ್ತೇನೆ. ಒಂದಲ್ಲ ಒಂದು ನರಳಾಟ, ಗೋಳಾಟ ಇಲ್ಲದ ಕಾವ್ಯವನ್ನು ಕಾವ್ಯ ಎಂದು ಪರಿಗಣಿಸದ ಅತಿಭಾವುಕತೆಯನ್ನು ಆಕ್ಷೇಪಿಸುತ್ತೇನೆ. ಈ ಸಂಬಂಧವಾಗಿ, ಜಾನ್ ವೆಬ್ಸ್ಟರ್‌ನ ಒಂದು ಕವಿತೆಯ[*ದಿ ಶ್ರೌಡಿಂಗ್ ಆಫ್. ದಿ ಡಚಸ್ ಆಫ್ ದಿ ಮಲ್ಫಿ* ೧೬೩೦?] ಕೊನೆಯ ಸಾಲನ್ನು ಕುರಿತು ಯೋಚಿಸುತ್ತೇನೆ, ಅದರ ಕೋರಿಕೆಯನ್ನು ಹೃತ್ಪೂರ್ವಕವಾಗಿ ಅನುಮೋದಿಸುತ್ತೇನೆ:

ನಿನ್ನ ನರಳಿಕೆಯನ್ನು ನಿಲ್ಲಿಸು, ಬಿಟ್ಟು ಬಾ

ಈಗ ಸ್ಥಿತಿ ಎಷ್ಟು ಕೆಟ್ಟುಹೋಗಿದೆ ಎಂದರೆ, ಪೂರ್ಣ ಒಣಗಿ ಬಿರುಸಾದರೂ, ಯುಕ್ತವಾದ ಅಭಿಜಾತವಾದಿ ಪದ್ಯ, ಕಾವ್ಯವೆಂದು ಪರಿಗಣಿತವಾಗುವುದೇ ಇಲ್ಲ. ಹೊರೇಸ್‌ನನ್ನೂ ಪೋಪ್‌ನನ್ನೂ ಇಷ್ಟಪಡುತ್ತೇವೆ ಎಂದು ಈಗ ಎಷ್ಟು ಜನ ಎದೆ ಮುಟ್ಟಿ ಹೇಳಬಲ್ಲರು? ಅವರನ್ನು ಓದುವಾಗ ಇವರು ಒಂದು ಬಗೆಯ ನಡುಕವನ್ನು ಅನುಭವಿಸುತ್ತಾರೆ.

ಅಭಿಜಾತವಾದಿಗಳ ಒಣ ಬಿರುಸುತನ ಅವರಿಗೆ ತೀರ ಅಸಹ್ಯವಾಗಿದೆ. ಅವರಿಗೆ ಆರ್ದ್ರವಾಗಿರದ ಕಾವ್ಯ ಕಾವ್ಯವೇ ಅಲ್ಲ. ಅವರು ಕಾವ್ಯದ ನಿಖರವಾದ ವರ್ಣನೆಯನ್ನು ನ್ಯಾಯಸಮ್ಮತ ವಸ್ತು ಎಂದು ಕಾಣಲಾರರು. ಅವರಿಗೆ ಕಾವ್ಯವೆಂದರೆ ಅನಂತ ಎಂಬ ಪದದ ಸುತ್ತ ಒಟ್ಟುಗೂಡಿದ ಕೆಲವು ಭಾವನೆಗಳನ್ನು ಬಳಸುವುದು ಎಂದರ್ಥ.

ಬಹಳ ಜನರಿಗೆ ಯಾವುದೋ ಬಗೆಯ ಅತೀತವೊಂದಕ್ಕೆ ತಮ್ಮನ್ನು ಕರೆದುಕೊಂಡು ಹೋಗುವುದೇ ಕಾವ್ಯದ ಮೂಲಗುಣ. ಅವರಿಗೆ ನೆಲ ಮತ್ತು ಸಾಂತತೆಗಳಿಗೆ ಕಟ್ಟುನಿಟ್ಟಾಗಿ ಬದ್ಧವಾದ ಕವಿತೆ(ಕೀಟ್ಸ್‌ನಲ್ಲಿ ಇವು ಹೇರಳವಾಗಿವೆ) ಉತ್ಕೃಷ್ಟ ಬರೆವಣಿಗೆ, ಉತ್ಕೃಷ್ಟ ಕಾವ್ಯಕೌಶಲ; ಆದರೆ ಅದು ಕವಿತೆಯಲ್ಲ ಎನಿಸುತ್ತದೆ. ಯಾವುದೇ ರೂಪದ ಅಸ್ಪಷ್ಟತೆ ಇಲ್ಲದಿದ್ದರೆ ಉನ್ನತವಾದುದನ್ನು ತಿರಸ್ಕರಿಸುವಷ್ಟು ಮಟ್ಟಿಗೆ ರಮ್ಯವಾದ ನಮ್ಮನ್ನು ಹಾಳುಮಾಡಿದೆ.

ಅಭಿಜಾತದಲ್ಲಿ ಯಾವಾಗಲೂ ಇರುವುದು ಸಾಧಾರಣ ದಿನದ ಬೆಳಕು, ಭೂಮಿಯ ಮೇಲಾಗಲಿ ಸಮುದ್ರದ ಮೇಲಾಗಲಿ ಎಂದೂ ಇಲ್ಲದಿದ್ದ ಪ್ರಭೆಯಲ್ಲ.

ಇದು ಯಾವಾಗಲೂ ಪರಿಪೂರ್ಣವಾಗಿ ಮಾನವೀಯವಾದುದು, ಉತ್ಪ್ರೇಕ್ಷಿತವಾದುದಾಗಿರುವುದಿಲ್ಲ; ಯಾವಾಗಲೂ ಮನುಷ್ಯ ಮನುಷ್ಯನೆ, ದೇವರಲ್ಲ.

ಆದರೆ ರಮ್ಯವಾದದ ಘೋರ ಪರಿಣಾಮವೆಂದರೆ ಆ ವಿಲಕ್ಷಣ ಪ್ರಭೆಗೆ ಒಗ್ಗಿಹೋದ ನೀವು ಅದಿಲ್ಲದೆ ಜೀವಿಸಲಾರಿರಿ. ಅದರ ಪರಿಣಾಮ ಮಾದಕ ವಸ್ತುವಿನ ರೀತಿಯದು.

ಕಾವ್ಯ ಎಂದರೆ ಅತೃಪ್ತಭಾವನೆಗಳ ಅಭಿವ್ಯಕ್ತಿಯಾಗಿರುವುದಕ್ಕಿಂತ ಬೇರೆ ಏನೋ ಎನ್ನುವಂತೆ ಚಿಂತಿಸುವ ಒಂದು ಸಾಮಾನ್ಯ ಪ್ರವೃತ್ತಿ ಇದೆ. 'ಆದರೆ ಭಾವುಕತೆಯಿಲ್ಲದೆ ಪದ್ಯ ಹೇಗಾಗುತ್ತದೆ?' ಎಂದು ಜನರು ಕೇಳುತ್ತಾರೆ. ಇದು ಏನು ಎಂದು ನಿಮಗೆ ಗೊತ್ತು. ಭವಿಷ್ಯ ಅವರನ್ನು ಎಚ್ಚರಿಸುತ್ತದೆ. ಅವರಿಗೆ ಅಭಿಜಾತದ ಪುನರುಜ್ಜೀವನ ಎಂದರೆ ಒಣ ಮರುಭೂಮಿಯ ಭವಿಷ್ಯ, ಅವರು ಗ್ರಹಿಸಿದ ರೀತಿಯಲ್ಲಿ ಕಾವ್ಯದ ಸಾವು, ಅದು ಆ ಸಾವಿನಿಂದಾದ ತೆರಪನ್ನು ತುಂಬಲು ಬಂದಿರುವಂಥದು. ಈ ಶುಷ್ಕ ಅಭಿಜಾತ ಸತ್ವವು ತನ್ನನ್ನು ಕಾವ್ಯದಲ್ಲಿ ಅಭಿವ್ಯಕ್ತಿಸಿಕೊಳ್ಳುವ ಇತ್ಯಾತ್ಮಕ ಮತ್ತು ಹಕ್ಕಿನ ಅವಶ್ಯಕತೆಯನ್ನು ಏಕೆ ಪಡೆಯಿತು ಎಂಬುದನ್ನು ಅವರು ಸಂಪೂರ್ಣವಾಗಿ ಗ್ರಹಿಸಲಾರರು. ಈ ಇತ್ಯಾತ್ಮಕ ಅಗತ್ಯ ಯಾವುದು ಎನ್ನುವುದನ್ನು ಆಮೇಲೆ ತೋರಿಸುತ್ತೇನೆ. ಕಾವ್ಯದ ಶ್ರೇಷ್ಠತೆಯ ಮೂಲದಲ್ಲಿರುವುದು ಕಾವ್ಯದಿಂದ ಉತ್ಪನ್ನವಾದ ಭಾವನೆಯಲ್ಲ, ಬೇರೊಂದು ಗುಣ ಎಂಬುದನ್ನು ಇದು ಹಿಂಬಾಲಿಸಿ ಬರುತ್ತದೆ. ಇದಕ್ಕೆ ಮುನ್ನ, ಅಭಿಜಾತ ಕಾವ್ಯವನ್ನು ಅರ್ಥ ಮಾಡಿಕೊಳ್ಳುವ ಹಾದಿಯಲ್ಲಿ ಅಡ್ಡಿಯಾಗಿರುವ ಪೂರ್ವಾಗ್ರಹ ಮತ್ತು ಹಿಂಜರಿಕೆಗಳ ಆಳದಲ್ಲಿ ನಿಜವಾಗಿಯೂ ಇರುವ ನೇತ್ಯಾತ್ಮಕ ತಾತ್ವಿಕ ಅಂಶದ ಬಗ್ಗೆ, ಕಳಕಳಿಯುಳ್ಳವನಾಗಿದ್ದೇನೆ.

ಇದು ಕಲೆಯನ್ನು ಕುರಿತ ಕೆಟ್ಟ ಸಿದ್ಧಾಂತದಿಂದ ಬಂದ ಆಕ್ಷೇಪ ಎಂದು ಅಂತಿಮವಾಗಿ ನಾನು ನಂಬುತ್ತೇನೆ. ಅನಂತತೆಯನ್ನು ಒಂದಲ್ಲ ಒಂದು ರೀತಿ ಎಳೆದು ತರದೆ ಸೌಂದರ್ಯದ ಅಸ್ತಿತ್ವವನ್ನು ನೀವು ಒಪ್ಪುವುದಿಲ್ಲ.

ವಾದಕ್ಕಾಗಿ, ಈ ಬಗೆಯ ಮನೋಭಾವಕ್ಕೆ ಧ್ವನಿನೀಡುವ ವಿಶಿಷ್ಟ ಉದಾಹರಣೆಯಾಗಿ ಪ್ರತಿಭೆಯನ್ನು ಕುರಿತ ರಸ್ಕಿನ್‌ನ ಅಭಿಪ್ರಾಯಗಳನ್ನು ಅವನ *ಮಾಡರ್ನ್ ಪೆಯಿಂಟರ್ಸ್*(ಸಂ.೨)ನಿಂದ ಉದ್ಧರಿಸಬಹುದು. ಈ ಲೇಖನವನ್ನು ಕೊನೆಗೊಳಿಸುವ ಬೇರೆ ಚರ್ಚೆಗೆ ಪೂರ್ವಾಗ್ರಹವಿಲ್ಲದಂತೆ ಈ ಮಾತನ್ನು ಉಪಯೋಗಿಸುತ್ತೇನೆ ಎಂಬುದನ್ನು ನಾನು ಇಲ್ಲಿ ಕಂಸಗಳ ನಡುವೆ ಹೇಳಲೇ ಬೇಕು. ಇದು ರಸ್ಕಿನ್‌ನ ಮಾತಾಗಿರುವುದರಿಂದ ಮಾತ್ರ ಬಳಸುತ್ತಿದ್ದೇನೆ. ಅದರ ಹಿಂದಿರುವ ಮನೋಧರ್ಮದ ಬಗೆಗೆ ನನ್ನ ಸದ್ಯದ ಕಳಕಳಿ. ನನ್ನ ಪ್ರಕಾರ ಅದು ರಮ್ಯವಾದಿ.

"ಪ್ರತಿಭೆ ಗಂಭೀರವಾಗಲ್ಲದೆ ಬೇರಾಗಿರಲು ಸಾಧ್ಯವಿಲ್ಲ. ಅದು ತುಂಬ ದೂರದವರೆಗೆ, ದಟ್ಟವಾಗಿ, ಗಹನವಾಗಿ, ಆಸಕ್ತಿಪೂರ್ವಕವಾಗಿ ಸದಾ ಸ್ಮಿತವಾಗಿರಲು

ನೋಡುತ್ತದೆ. ಪ್ರತಿಯೊಂದರ ಹೃದಯದಲ್ಲಿಯೂ ಏನಾದರೊಂದು ಇರುತ್ತದೆ, ನಾವು ಅದರ ಹತ್ತಿರ ಹೋಗಲು ಸಾಧ್ಯವಾದರೆ, ಆ ಬಗ್ಗೆ ನಗಲು ಸಾಧ್ಯವಾಗುವುದಿಲ್ಲ... ಆಳವಾಗಿ ಚುಚ್ಚಿಸಿಕೊಂಡವರು ಮತ್ತು ವಿಷಯದ ಖಿನ್ನತೆಯ ಆಳಗಳನ್ನು ಕಂಡವರು ಉತ್ಕಟ ರಾಗ–ಭಾವ ಮತ್ತು ಸಹಾನುಭೂತಿ, ಸಭ್ಯತೆಗಳಿಂದ ತುಂಬಿದ್ದಾರೆ" (ಭಾಗ ೩, ಅಧ್ಯಾಯ ೩ ಪು.೯).

"ಪ್ರತಿಭಾಪೂರ್ಣ ಮನಸ್ಸು ಬರೆದ ಪ್ರತಿ ಮಾತಿನಲ್ಲಿ ಆ ಮಾತಿನ ಅರ್ಥದ ವಿಲಕ್ಷಣ ಒಳಪ್ರವಾಹವೂ ಅದು ಬಂದಿರುವ ಆಳನೆಲೆಯ ಸಾಕ್ಷ್ಯ ಮತ್ತು ನೆರಳುಗಳು ಇರುತ್ತವೆ. ಅವು ಸಾಮಾನ್ಯವಾಗಿ ನಿಗೂಢವೂ ಅರ್ಧ ಹೇಳಿದ್ದೂ ಆಗಿವೆ. ಏಕೆಂದರೆ ಅವನ್ನು ಬರೆದವನಿಗೆ ತಾನು ಸ್ಪಷ್ಟವಾಗಿ ನೋಡಿದ ವಸ್ತುಗಳ ವಿವರವಾದ ವ್ಯಾಖ್ಯಾನ ನೀಡುವ ತಾಳ್ಮೆ ಇಲ್ಲದಿರಬಹುದು. ಅವನ್ನು ಆಶ್ರಯಿಸಿ ಹುಡುಕಿದರೆ ನಾವು ಯಾವಾಗಲೂ ಹಿಂಬಾಲಿಸುವ ಅವುಗಳ ದೂರ ತೀರಗಳ ದಾರಿಗಳು ಮತ್ತು ಜಾಡುಗಳಿಂದ ಆತ್ಮದ ಆಳ್ವಿಕೆಯ ಮಹಾನಗರಕ್ಕೆ ಸುರಕ್ಷಿತವಾಗಿ ನಮ್ಮನ್ನು ಹಿಂದಕ್ಕೆ ಕರೆತರುತ್ತವೆ." (ಭಾಗ ೩, ಅಧ್ಯಾಯ ೩ ಪು.೫).

ಈ ಎಲ್ಲ ವಿಷಯಗಳಲ್ಲಿ ತೀರ್ಮಾನದ ಕ್ರಿಯೆ ನಿಜವಾಗಿ ಒಂದು ಪ್ರವೃತ್ತಿ, ಇದು ಸಂಪೂರ್ಣವಾಗಿ ಅನಿರ್ವಚನೀಯ ಸಂಗತಿ, ಚಹಾ ರುಚಿ ನೋಡುವವನ ಕಲೆಗೆ ಸಮಾನವಾಗಿದೆ. ಆದರೆ ನೀವು ಮಾತನಾಡಲೇ ಬೇಕು, ಹಾಗೂ ಈ ವಿಷಯದಲ್ಲಿ ನೀವು ಬಳಸಲು ಸಾಧ್ಯವಿರುವ ಒಂದೇ ಭಾಷೆ– ಸಾದೃಶ್ಯ. ಗೊತ್ತಾದ ಆಕಾರಕ್ಕೆ ಎರಕ ಹುಯ್ಯಲು ನನ್ನಲ್ಲಿ ಯಾವುದೇ ಮಣ್ಣು ಇಲ್ಲ; ಈ ಉದ್ದೇಶಕ್ಕೆ ಇರುವ ಒಂದೇ ವಸ್ತು, ಹಾಗೂ ಇದಕ್ಕೆ ಬದಲು ಇರುವುದು, ಒಂದು ಬಗೆಯ ಮಾನಸಿಕ ದ್ರವ್ಯ ಎಂದರೆ, ಸೌಂದರ್ಯ ಮೀಮಾಂಸೆ ಮತ್ತು ಭಾಷಣಶಾಸ್ತ್ರಗಳ ಸಿದ್ಧಾಂತಗಳಾಗಿ ಪರಿವರ್ತಿತವಾದ ನಿರ್ದಿಷ್ಟ ರೂಪಕಗಳು. ಈ ರೂಪಕಗಳ ಸಂಯೋಜನೆಯು ಅವಶ್ಯವಾಗಿ ಅವರ್ಣನೀಯವಾದ ಅಂತರ್ದೃಷ್ಟಿಯನ್ನು ವರ್ಣಿಸಲಾಗದಿದ್ದರೂ ಅದು ಏನು ಎಂದು ತಿಳಿಯಲು ಮತ್ತು ನೀವೇ ಅಂಥ ಸ್ಥಿತಿಯಲ್ಲಿದ್ದು ಅದನ್ನು ಗುರುತಿಸಲು ಸಮರ್ಥವಾಗುವ ಹೋಲಿಕೆಯನ್ನು ಕೊಡುತ್ತದೆ. ರಸ್ಕಿನ್‌ನ ಈ ಪದಪುಂಜಗಳು ಪ್ರಸುತ ವಿಷಯದಲ್ಲಿನ ಅವನ ಅಭಿರುಚಿಯನ್ನು ಸ್ಪಷ್ಟವಾಗಿ ತಿಳಿಸುತ್ತವೆ.

ಉತ್ತಮ ಕಾವ್ಯ ಗಂಭೀರವಾಗಿರಲೇಬೇಕು ಎಂದು ರಸ್ಕಿನ್ ಭಾವಿಸುತ್ತಾನೆ ಎಂಬುದನ್ನು ನಾನು ಸ್ಪಷ್ಟವಾಗಿ ಬಲ್ಲೆ. ರಮ್ಯಯುಗದ ಮನುಷ್ಯನಿಗೆ ಅದು ಸಹಜವಾದ ಮನೋಧರ್ಮ. ಆದರೆ ಅವನು ತನಗೆ ಈ ಬಗೆಯ ಕಾವ್ಯ ಇಷ್ಟ ಎಂದು ಹೇಳುವುದರಲ್ಲಿ ತೃಪ್ತನಾಗಿಲ್ಲ. ಅವನು ತನ್ನ ಗುರು ಕೋಲ್‌ರಿಜ್‌ನಂತೆ ಅಧ್ಯಾತ್ಮದ ಕೆಲವು ಸ್ಥಿರ ತತ್ವಗಳಿಂದ ತನ್ನ ಅಭಿಪ್ರಾಯಗಳನ್ನು ನಿರೂಪಿಲು ಬಯಸಿದ.

ರಮ್ಯವಾದಿ ಮನೋಭಾವದ ಕೊನೆಯ ಆಸರೆ ಇಲ್ಲಿದೆ. ಇದು ಒಂದು ಮನೋಭಾವವಾಗಿರದೆ, ಬ್ರಹ್ಮಾಂಡದ ಸ್ಥಿರ ತತ್ವಗಳಿಂದ ಪಡೆದದ್ದು ಎಂಬುದನ್ನು ತಾನೇ ಸಾಬೀತುಪಡಿಸುತ್ತದೆ.

ತತ್ತ್ವಶಾಸ್ತ್ರದ ಅಸ್ತಿತ್ವದ ಒಂದು ಪ್ರಮುಖ ಕಾರಣ ಅದು ಸತ್ಯವನ್ನು ಶೋಧಿಸಲು ನಿಮ್ಮನ್ನು ಶಕ್ತರಾಗಿಸುತ್ತದೆ ಎಂಬುದಲ್ಲ(ಅದು ಹಾಗೆ ಮಾಡಲು ಸಾಧ್ಯವಿಲ್ಲ), ಆದರೆ ಅದು ನಿಮಗೆ ಖಂಡಿತ ಆಸರೆಯೊಂದನ್ನು ದೊರಕಿಸಿಕೊಡುತ್ತದೆ. ಸೌಂದರ್ಯ ಮೀಮಾಂಸೆಯಲ್ಲಿ ನಿಮಗೆ ಬೇಕಿರುವ ವಿಷಯಗಳನ್ನು ತರ್ಕಿಸಲು ಸಾಧ್ಯವಿರುವ ಸ್ಥಿರ ತತ್ವಗಳನ್ನು ಅದು ದೊರಕಿಸುತ್ತದೆ ಎನ್ನುವುದು ಆ ವಿಷಯದ ಸಾಮಾನ್ಯ ಕಲ್ಪನೆ. ಈ ಪ್ರಕ್ರಿಯೆ ಸಂಪೂರ್ಣ ವಿರುದ್ಧವಾದುದು. ನೀವು ಸಂಘರ್ಷಗೆರೆಯ ಗೊಂದಲದಲ್ಲಿ ಆರಂಭಿಸುತ್ತೀರಿ. ನೀವು ಚೇತರಿಸುವ ಮೊದಲೇ, ನಿಮ್ಮ ಆಯುಧಗಳನ್ನು ಸರಿಯಾಗಿ ಪಡೆಯುವುದಕ್ಕೆ ಸ್ವಲ್ಪದರಲ್ಲಿಯೇ, ಹೋರಾಟದಿಂದ ಹಿಂದೆ ಸರಿಯುತ್ತೀರಿ. ಸರಳವಾಗಿ, ರೂಪಕರಹಿತವಾಗಿ ಹೇಳುವುದಾದರೆ– ನೀವು ನಿಮ್ಮ ಆಶಯ ಏನು ಎಂಬುದನ್ನು ನಿಖರವಾಗಿ ವಿವರಿಸಬಹುದಾದ ವಿಸ್ತಾರವಾದ ಮತ್ತು ಯಥಾವತ್ತಾದ ಭಾಷೆಯನ್ನು ಅದು ನಿಮಗೆ ಒದಗಿಸುತ್ತದೆ, ಆದರೆ ನೀವು ಹೇಳಬೇಕಾಗಿರುವುದನ್ನು ನಿರ್ಧರಿಸುವ ವಿಷಯುಗಳೇ ಬೇರೆ. ಅಂತಿಮ ವಾಸ್ತವವು ಗೊಂದಲ, ಹೋರಾಟಮಯವಾಗಿದ್ದು ತಾತ್ವಿಕತೆಯು ಸ್ಪಷ್ಟ ಚಿಂತನೆಗೆ ಅಧೀನವಾಗಿದೆ.

ರಸ್ಕಿನ್‌ನಿಗೆ ಮತ್ತು ಗಂಭೀರವಾಗಿಲ್ಲದ ಎಲ್ಲವುಗಳ ಬಗೆಗಿನ ಆತನ ಆಕ್ಷೇಪಕ್ಕೆ ಮರಳೋಣ. ಇಲ್ಲಿ ಕೆಟ್ಟ ಆಧ್ಯಾತ್ಮಿಕ ಸೌಂದರ್ಯಮೀಮಾಂಸೆ ಇದೆ; ಸೌಂದರ್ಯ ಮತ್ತು ಕಲೆಯ ಸ್ವಭಾವಗಳ ನಿರ್ವಚನದಲ್ಲಿ ಅನಂತವನ್ನು ಯಾವಾಗಲೂ ಒಳಗೆ ಎಳೆದು ತರುವ ಆಧ್ಯಾತ್ಮಿಕ ಸಿದ್ಧಾಂತವಿದೆ ಎಂದು ನನಗನ್ನಿಸುತ್ತದೆ. ವಿಶೇಷವಾಗಿ, ಸೌಂದರ್ಯಮೀಮಾಂಸೆಯ ಸಿದ್ಧಾಂತಗಳು ಮೊದಲು ರಚನೆಯಾದ ಜರ್ಮನಿಯಲ್ಲಿ ರಮ್ಯ ಸೌಂದರ್ಯಮೀಮಾಂಸಕರು ಪರಮ ಚೈತನ್ಯದಲ್ಲಿ ನಮ್ಮ ಅಸ್ತಿತ್ವವನ್ನು ಗುರುತಿಸುವುದರಲ್ಲಿ ಸಹಭಾಗಿಯಾದ ಅನಂತತೆಯ ಮುದ್ರೆಯೊಂದಿಗೆ ಎಲ್ಲಾ ಸೌಂದರ್ಯವನ್ನು ತಳಕು ಹಾಕಿದರು. ಸೌಂದರ್ಯದ ಕನಿಷ್ಠ ಮೂಲವಸ್ತುವಿನಲ್ಲಿ ಇಡೀ ವಿಶ್ವದ ಪೂರ್ಣ ಅಂತರ್ದೃಷ್ಟಿ ಇದೆ. ಪ್ರತಿಯೊಬ್ಬ ಕಲಾವಿದನೂ ಒಂದು ಬಗೆಯ ಸರ್ವದೇವಾತ್ಮವಾದಿ.

ತನ್ನನ್ನು ಸಾಂತತೆಗೆ ಬಂಧಿಸಿಕೊಳ್ಳುವ ಯಾವುದೇ ಕಾವ್ಯ ಉನ್ನತ ಬಗೆಯದಾಗಿರುವುದಿಲ್ಲ ಎಂಬುದು ಈ ಬಗೆಯ ತತ್ವವನ್ನು ನಂಬಿದವರಿಗೆ ಈಗ ಸಂಪೂರ್ಣ ಸ್ಪಷ್ಟವಾಗಿದೆ.

ಇದು ಅವರಿಗೆ ಪಾರಿಭಾಷಿಕಗಳ ವೈರುಧ್ಯವೆಂಬಂತೆ ಕಾಣುತ್ತದೆ. ಆಧ್ಯಾತ್ಮಿಕತೆಯಲ್ಲಿರುವಂತೆ ಇದು ಪೂರ್ವಾಗ್ರಹದ ಅಂತಿಮ ಆಸರೆ. ಆದ್ದರಿಂದ ಇದನ್ನು ಖಂಡಿಸುವುದು ನನಗೀಗ ಅಗತ್ಯವಾಗಿದೆ.

ದಣಿಸುವ ಸಂವಾದದ ಒಂದು ತುಣುಕು ಇಲ್ಲಿದೆ. ಆದರೆ ಅದು ನನ್ನ ಉದ್ದೇಶಕ್ಕೆ ಅಗತ್ಯ. ಸೌಂದರ್ಯ ಕಲ್ಪನೆಯನ್ನು ಚರ್ಚಿಸುವಲ್ಲಿ ನಾನು ಎರಡು ಗುಂಡಿಗಳನ್ನು ತಪ್ಪಿಸಲೇಬೇಕು. ಒಂದು ಕಡೆ ನಿರ್ದಿಷ್ಟ ಅಂಗೀಕೃತ ರೂಪಗಳ ಅನುಸರಣೆಯಲ್ಲಿರುವಂತೆ ಅದನ್ನು ನಿರ್ವಚಿಸಲು ಎಣಿಸಿದ ಹಳೆಯ ಅಭಿಜಾತ ದೃಷ್ಟಿಯಿದೆ, ಹಾಗೂ ಇನ್ನೊಂದು ಕಡೆ ಅನಂತದಲ್ಲಿ ಜಗ್ಗುವ ರಮ್ಯ ದೃಷ್ಟಿಯಿದೆ. ಈ ಎರಡರ ನಡುವೆ ಪಾರಿಭಾಷಿಕವಾಗಿ ವೈರುದ್ಧ್ಯ ಒಳಗೊಂಡಿರುವುದಿಲ್ಲ ಎಂದು ನಾನು ಸೂಚಿಸಿದ ಮಾದರಿಯ ನವ-ಅಭಿಜಾತ ಕಾವ್ಯವನ್ನು ದೃಢವಾಗಿ ಹಿಡಿದುಕೊಳ್ಳಲು ಸಮರ್ಥನನ್ನಾಗಿಸುವ ಸಿದ್ಧಾಂತವನ್ನು ನಾನು ಕಂಡುಕೊಳ್ಳಬೇಕು. ಸಣ್ಣ, ಒಣ ವಸ್ತುಗಳಲ್ಲಿಯೂ ಸೌಂದರ್ಯ ಇರಲು ಸಾಧ್ಯ ಎಂಬುದನ್ನು ಸಾಬೀತುಪಡಿಸುವುದಕ್ಕೆ ಇದು ಅವಶ್ಯ.

ಕಾವ್ಯದ ಮುಖ್ಯ ಗುರಿ ನಿಖರವಾದ, ನಿಶ್ಚಿತವಾದ ಮತ್ತು ನಿರ್ದಿಷ್ಟವಾದ ವರ್ಣನೆ. ಇದು ಎಷ್ಟು ಕಷ್ಟ ಎಂಬುದನ್ನು ಗುರುತಿಸುವುದು ಮೊದಲಿನದು. ಇದು ಕೇವಲ ಎಚ್ಚರವಹಿಸುವ ವಿಷಯವಲ್ಲ; ನೀವು ಭಾಷೆಯನ್ನು ಬಳಸಬೇಕು; ಭಾಷೆ ಸ್ವಭಾವತಃ ಸಾಮುದಾಯಿಕವಾದುದು. ಅಂದರೆ ಅದು ನಿರ್ದಿಷ್ಟವಾದುದನ್ನು ಅಭಿವ್ಯಕ್ತಿಸುವುದೇ ಇಲ್ಲ. ಆದರೆ ಅದು ನನಗೆ, ನಿಮಗೆ, ಪ್ರತಿಯೊಬ್ಬರಿಗೂ ಸಾಮಾನ್ಯವಾದುದರ ಜೊತೆ ರಾಜಿಯಾದುದಾಗಿರುತ್ತದೆ. ಆದರೆ ಪ್ರತಿಯೊಬ್ಬರೂ ಸ್ವಲ್ಪ ಭಿನ್ನವಾಗಿ ನೋಡುತ್ತಾರೆ. ಹಾಗೆ ತಾವು ನೋಡುವುದನ್ನು ಸ್ಪಷ್ಟವಾಗಿ, ನಿಖರವಾಗಿ ಪಡೆದುಕೊಳ್ಳುವುದಕ್ಕಾಗಿ ಭಾಷಿಕ ಪದಗಳು ಅಥವಾ ಇತರ ಕಲೆಗಳ ತಂತ್ರಗಳ ಜೊತೆ ಭಯಂಕರ ಹೋರಾಟ ಮಾಡಲೇಬೇಕು. ಭಾಷೆಗೆ ತನ್ನದೇ ಆದ ವಿಶೇಷ ಗುಣ, ರೂಢಿ ಮತ್ತು ಸಾಮುದಾಯಿಕ ವಿಚಾರಗಳಿವೆ. ಅದನ್ನು ಏಕಾಗ್ರತೆಯಿಂದ ಮಾತ್ರ ನಿಮ್ಮ ಉದ್ದೇಶಕ್ಕೆ ಹೊಂದಿಸಿ ಹಿಡಿದಿಡಬಹುದು. ಎಲ್ಲ ಕಲೆಗಳ ಹಿಂದೆ ಇರುವ ಮೂಲಭೂತ ಪ್ರಕ್ರಿಯೆಯನ್ನು ಈ ರೂಪಕ ಪ್ರತಿನಿಧಿಸುತ್ತದೆ ಎಂದು ನಾನು ಯಾವಾಗಲೂ ಯೋಚಿಸುತ್ತೇನೆ. ವಾಸ್ತುಶಿಲ್ಪಿಯ ವಕ್ರಾಕೃತಿಯ[ಮರದ] ಸಾಧನಗಳನ್ನು ನೀವು ಬಲ್ಲಿರಿ. ಅವುಗಳ ಮೂಲಕ ಸರಿಸುಮಾರಾಗಿ ನಿಮಗೆ ಬೇಕಾದ ಬಗೆಯ ವಕ್ರತೆಯನ್ನು ರೇಖಿಸಬಹುದು. ಅಂಥ 'ಸರಿಸುಮಾರಾದ' ಎಂಬ ಕಲ್ಪನೆಯನ್ನು ಸರಳವಾಗಿ ಸಹಿಸದ ಮನುಷ್ಯ ಕಲಾವಿದ ಎಂದು ನನ್ನ ಭಾವನೆ. ಒಂದು ವಸ್ತುವಿರಲಿ, ಮನಸ್ಸಿನಲ್ಲಿರುವ ವಿಚಾರವಿರಲಿ ಆತ ತಾನು ಕಾಣುವ ಅದರ ನಿಖರ ವಕ್ರತೆಯನ್ನು ಪಡೆದುಕೊಳ್ಳುತ್ತಾನೆ. ಆತನ ಮನಸ್ಸಿನ ಪ್ರಕ್ರಿಯೆಯನ್ನು ತಿಳಿಯಲು ನನ್ನ ರೂಪಕವನ್ನು ಇಲ್ಲಿ ಸ್ವಲ್ಪ ಬದಲಿಸಬೇಕಾಗುತ್ತದೆ. ವಕ್ರವಾದ ಮರದ ತುಂಡುಗಳ ಬದಲು ಅದೇ ಮಾದರಿಯ ಉಕ್ಕಿನ ಸ್ಥಿತಿಸ್ಥಾಪಕ ವಕ್ರವಾದ ತುಂಡುಗಳು ಇವೆ ಎಂದುಕೊಳ್ಳೋಣ. ಆತ ಏನಾದರೂ ಒಳ್ಳೆಯದನ್ನು ಮಾಡಬೇಕಾದರೆ ತಂತ್ರದ ಬೇರೂರಿದ ರೂಢಿಯ ವಿರುದ್ಧ ಹೋರಾಡಬೇಕಾಗುತ್ತದೆ. ಈ ಕರ್ಷಣ ಸ್ಥಿತಿ ಅಥವಾ ಮನಸ್ಸಿನ ಏಕಾಗ್ರತೆಯನ್ನು, ಉಕ್ಕನ್ನು ಅದರ ವಕ್ರತೆಯಿಂದ ತನಗೆ ಬೇಕಾದ ನಿಖರ ವಕ್ರತೆಗೆ ಬಾಗಿಸಲು ತನ್ನ ಎಲ್ಲ

ಬೆರಳುಗಳನ್ನು ಬಳಸುವ ಮನುಷ್ಯನ ಮೂಲಕ ವರ್ಣಿಸಬಹುದು. ಅದು ಸ್ವಾಭಾವಿಕವಾಗಿ ಭಾವಿಸುವುದಕ್ಕಿಂತ ಭಿನ್ನವಾದುದು.

ಹಾಗಾದರೆ ಈಗ ಮನಸ್ಸಿನ ಎರಡು ವಿಭಾಗಗಳನ್ನು ಗುರುತಿಸಬೇಕು. ಮೊದಲನೆಯದು, ವಸ್ತುಗಳನ್ನು ನೋಡಲು ತರಬೇತಾದ ರೂಢಿಗಳನ್ನು ಬಿಟ್ಟು ಅವು ಇರುವ ಹಾಗೆಯೇ ನೋಡುವ ಮನಸ್ಸಿನ ನಿರ್ದಿಷ್ಟ ವಿಭಾಗ. ಇದು ಎಲ್ಲವುಗಳಿಗಿಂತ ತುಂಬ ಅಪರೂಪವಾದ ಪ್ರಜ್ಞೆ. ಎರಡನೆಯದು, ಮನಸ್ಸಿನ ಏಕಾಗ್ರ ಸ್ಥಿತಿ. ತಾನು ನೋಡುವುದನ್ನು ಯಥಾರ್ಥವಾಗಿ ಅಭಿವ್ಯಕ್ತಿಸಲು ಅಗತ್ಯವಾದ ತನ್ನ ಮೇಲಿನ ಹಿಡಿತ. ಅಂತರ್ಗತವಾದ ಸಾಂಪ್ರದಾಯಿಕ ತಾಂತ್ರಿಕ ವಕ್ರತೆಗಳಿಗೆ ಕಟ್ಟುಬೀಳುವುದನ್ನು ತಪ್ಪಿಸಲು, ತಾನು ನೋಡುವುದನ್ನು ಅನಂತ ವಿವರದ ಮೂಲಕ ಹಿಡಿದಿಡುವುದಕ್ಕೆ ಬದ್ಧವಾಗಿರುವುದಕ್ಕೆ ಮತ್ತು ನಿಖರವಾದ ವಕ್ರತೆ ಪಡೆಯಲು ಇರುವ ತೊಂದರೆಗಳನ್ನು ತಡೆಯಲು ಇದು ಅಗತ್ಯ. ಈ ಪ್ರಾಮಾಣಿಕತೆ ಇರುವ ಕಡೆ ಉತ್ತಮ ಕಲೆಯ ಮೂಲಭೂತ ಗುಣವಿರುತ್ತದೆ; ಅದಕ್ಕಾಗಿ ಅನಂತ ಅಥವಾ ಗಂಭೀರವನ್ನು ಎಳೆದು ತರುವ ಅಗತ್ಯವಿಲ್ಲ.

ಈಗ ನಾನು ಶ್ರೇಷ್ಠತೆಗೆ ಕಾರಣವಾಗುವ ಕಾವ್ಯದ ಇತ್ಯಾತ್ಮಕ ಮೂಲಭೂತ ಗುಣವನ್ನು ಅನಂತತೆ, ನಿಗೂಢತೆ ಅಥವಾ ಭಾವನೆಗಳ ಹಂಗಿಲ್ಲದೆ ಪಡೆಯಬಲ್ಲೆ.

ನನ್ನ ವಾದದ ಗುರಿ ಇದು: ಒಣ, ಒರಟು, ಅಭಿಜಾತ ಕಾವ್ಯದ ಕಾಲ ಬರುತ್ತಿದೆ ಎಂಬುದು ನನ್ನ ಭವಿಷ್ಯವಾಣಿ. ಅನಂತವನ್ನು ತೆಗೆದುಬಿಟ್ಟ ಕಾವ್ಯದಲ್ಲಿ ಕವಿತೆಯ ತಿರುಳನ್ನೇ ಕಾಣಲು ಸಾಧ್ಯವಿಲ್ಲ ಎಂಬ ಕೆಟ್ಟ ರಮ್ಯ ಸೌಂದರ್ಯ ಮೀಮಾಂಸೆಯ ಪ್ರಾಥಮಿಕ ಆಕ್ಷೇಪಣೆಗೆ ಉತ್ತರಿಸಿದ್ದೇನೆ.

ಈ ಇತ್ಯಾತ್ಮಕ ಗುಣವನ್ನು ರೇಖಿಸಿದ ಮೇಲೆ ನನ್ನ ಪ್ರಬಂಧವನ್ನು ಹೀಗೆ ಕೊನೆಗೊಳಿಸುತ್ತೇನೆ: ಭಾವನೆಗಳ ನೆಲೆಯಲ್ಲಿ ಈ ಗುಣ ಪ್ರದರ್ಶಿತವಾಗಿರುವೆಡೆ ಪ್ರತಿಭೆ ಇದ್ದರೆ, ಅನಂತತೆಯ ಚಿಂತನೆ ಇರುವೆಡೆ ಕಲ್ಪನೆ ಇರುತ್ತದೆ.

ಬೀಜಗಣಿತದಲ್ಲಿರುವಂತೆ, ಗದ್ಯದಲ್ಲಿಯೂ ಮೂರ್ತ ವಸ್ತುಗಳು ದೃಶ್ಯೀಕರಣಗೊಳ್ಳುವುದಿಲ್ಲ. ಅವು ಸಂಕೇತಗಳು ಅಥವಾ ನಿಯಮಾನುಸಾರ ಬದಲಾಗುವ ಪರ್ಯಾಯಗಳಲ್ಲಿ ಅಳವಟ್ಟಿರುತ್ತವೆ. ಗದ್ಯದಲ್ಲಿ ನಿರ್ದಿಷ್ಟ ಮಾದರಿಯ ಸನ್ನಿವೇಶಗಳು ಮತ್ತು ಪದಗಳ ಅನುಕ್ರಮಗಳು ಇವೆ. ಅವು ಬೀಜಗಣಿತದಲ್ಲಿ ನಿರ್ವಹಿಸುವಂತೆ ನಿರ್ದಿಷ್ಟವಾದ ಬೇರೆ ಸಂಯೋಜನೆಯೊಳಗೆ ಸ್ವಯಂಚಾಲಿತವಾಗಿ ಚಲಿಸುತ್ತವೆ. ಪ್ರಕ್ರಿಯೆಯ ಕೊನೆಯಲ್ಲಿ ಮಾತ್ರ ಎಕ್ಸ್ ಮತ್ತು ವೈಗಳು ಮೂಲ ವಸ್ತುಗಳಾಗಿ ಬದಲಾಗುತ್ತವೆ. ಕಾವ್ಯವು ಗದ್ಯದ ಈ ವಿಲಕ್ಷಣತೆಯಿಂದ ಹೇಗಾದರೂ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತದೆ. ಇದು ಪರ್ಯಾಯ ಭಾಷೆಯಲ್ಲ; ದೃಶ್ಯ ಮೂರ್ತತೆ. ಇದು ಸಂವೇದನೆಗಳನ್ನು ಮೂರ್ತವಾಗಿಸುವ ಅಂತರ್ದೃಷ್ಟಿಯ ಭಾಷೆಯ ಹೊಂದಾಣಿಕೆ. ಇದು ನಿಮ್ಮನ್ನು ಬಂಧಿಸಲು, ಭೌತಿಕ ವಸ್ತುವನ್ನು ನಿರಂತರವಾಗಿ ನೋಡುವಂತೆ ಮಾಡಲು, ಅಮೂರ್ತ ಪ್ರಕ್ರಿಯೆಯ ಮೂಲಕ ಸರಿದುಹೋಗುವುದನ್ನು ತಡೆಯಲು ಸದಾ ಹೆಣಗುತ್ತದೆ. ಅದು ಹೊಚ್ಚ ಹೊಸ ವಿಶೇಷಣ, ರೂಪಕಗಳನ್ನು ಆಯ್ದುಕೊಳ್ಳುತ್ತದೆ. ಹಾಗೆ ಮಾಡುವುವದಕ್ಕೆ

ಕಾರಣ ಅವು ಹೊಸದಾಗಿವೆ, ನಾವು ಹಳೆಯದರಿಂದ ದಣಿದಿದ್ದೇವೆ ಎಂಬುದಲ್ಲ; ಹಳೆಯವು ಭೌತಿಕ ವಸ್ತುವನ್ನು ಸಂವಹನಗೊಳಿಸಲು ವಿಫಲವಾಗಿ, ಅಮೂರ್ತ ಪರ್ಯಾಯವಾಗಿ ಬದಲಾಗಿವೆ ಎಂಬುದು. ಒಬ್ಬ ಕವಿ, ಹಡಗು 'ಸಮುದ್ರಯಾನ ಮಾಡಿತು' ಎಂಬ ಭೌತಿಕ ಚಿತ್ರವನ್ನು ಪಡೆಯಲು 'ಸಮುದ್ರಗಳನ್ನು ಬೇಟೆಯಾಡಿತು' ಎಂದು ಹೇಳುತ್ತಾನೆ. ದೃಶ್ಯಾತ್ಮಕ ಅರ್ಥಗಳನ್ನು ರೂಪಕದ ಹೊಸ ಬೋಗುಣಿಯಿಂದ ಮಾತ್ರ ವರ್ಗಾಯಿಸಲು ಸಾಧ್ಯ; ಗದ್ಯ ಹಳೆಯ ಮಡಕೆಯ ಹಾಗೆ ಅವು ಸೋರಿಹೋಗಲು ಬಿಡುತ್ತದೆ. ಪದ್ಯದಲ್ಲಿರುವ ಪ್ರತಿಮೆಗಳು ಕೇವಲ ಅಲಂಕರಣಗಳಲ್ಲ, ಅಂತರ್ದೃಷ್ಟಿಯ ಭಾಷೆಯ ಸಾರಸರ್ವಸ್ವ. ಪದ್ಯ ನಿಮ್ಮನ್ನು ನೆಲದ ಮೇಲೆ ಕರೆದೊಯ್ಯುವ ಪಾದಚಾರಿ, ಗದ್ಯ ನಿರ್ದಿಷ್ಟ ಸ್ಥಳಕ್ಕೆ ಮಾತ್ರ ತಲುಪಿಸುವ ರೈಲು.

ಈ ಸಂಬಂಧ ಮತ್ತೆ ಮತ್ತೆ ಬಳಸುವ 'ತಾಜಾ' ಮತ್ತು 'ಅನಿರೀಕ್ಷಿತ' ಎಂಬ ಎರಡು ಪದಗಳ ಬಗ್ಗೆ ಈಗ ಚರ್ಚಿಸುತ್ತೇನೆ. ವಸ್ತು ಹೊಚ್ಚ ಹೊಸದಾಗಿರುವುದನ್ನು ಪ್ರಶಂಸಿಸುತ್ತೀರಿ. ನಿಮ್ಮ ಆಶಯವೇನು ಎಂಬುದನ್ನು ಬಲ್ಲೆ. ಆದರೆ ಆ ಪದ ಸತ್ಯವನ್ನು ತಿಳಿಸುವುದಲ್ಲದೆ ಖಂಡಿತವಾಗಿ ಸುಳ್ಳಾಗಿರುವ ಗೌಣವಾದ ಮತ್ತೊಂದನ್ನು ತಿಳಿಸುತ್ತದೆ. ಒಂದು ಕವಿತೆ ಅಥವಾ ಚಿತ್ರ ಹೊಚ್ಚ ಹೊಸದಾಗಿದೆ, ಎಷ್ಟೊಂದು ಚೆನ್ನಾಗಿದೆ ಎಂದು ಹೇಳುವಾಗ ಚೆನ್ನಾಗಿರುವುದಕ್ಕೆ ಹೊಚ್ಚ ಹೊಸದಾಗಿರುವುದು ಅತ್ಯಗತ್ಯ; ಅದು ಹೊಚ್ಚ ಹೊಸದಾಗಿರುವುದರಿಂದಲೇ ಚೆನ್ನಾಗಿದೆ ಎಂಬ ಅನಿಸಿಕೆ ಹೇಗೋ ರವಾನೆಯಾಗಿರುತ್ತದೆ. ಇದು ಖಂಡಿತ ತಪ್ಪು. ತನ್ನಷ್ಟಕ್ಕೆ ತಾಜಾ ಆಗಿರುವುದು ನಿರ್ದಿಷ್ಟವಾಗಿ ಅಪೇಕ್ಷಣೀಯವೇನಲ್ಲ. ಕಲಾಕೃತಿಗಳು ಮೊಟ್ಟೆಗಳಲ್ಲ. ವಾಸ್ತವವಾಗಿ ಅದಕ್ಕೆ ವಿರುದ್ಧವಾದುವು. ಭಾಷೆಯ ಸ್ವಭಾವ ಮತ್ತು ತಂತ್ರಗಳು ಉತ್ತಮಿಕೆ ರೂಪಿಸುವ ಅಂಶದ ಒಂದೇ ದಾರಿಯಾಗಿರುವುದು ದುರದೃಷ್ಟಕರ ಅಗತ್ಯ. ಹೊಚ್ಚ ಹೊಸತನವೇ ಅದರ ಇರುವಿಕೆಯನ್ನು ಹೊರಗಿನಿಂದ ಪತ್ತೆಹಚ್ಚಬಹುದಾದ ಒಂದೇ ದಾರಿ. ಹೊಚ್ಚ ಹೊಸತನ ನಿಮ್ಮನ್ನು ಒಪ್ಪಿಸುತ್ತದೆ, ವಾಸ್ತವವಾಗಿ ಕಲಾವಿದ ಭೌತಿಕ ಸ್ಥಿತಿಯಲ್ಲಿರುವುದನ್ನು ಅನುಭವಿಸುತ್ತೀರಿ. ಅದನ್ನು ಒಂದು ನಿಮಿಷ ಅನುಭವಿಸುತ್ತೀರಿ. ಸರಳವಾದ ಮಾತು ಒಪ್ಪಿಗೆಯಾಗದಿರುವುದರಿಂದ ನಿಜವಾದ ಸಂವಹನ ತುಂಬ ವಿರಳ. ಸಂವಹನದ ಈ ವಿರಳ ಸಂಗತಿಯಲ್ಲಿ ಸೌಂದರ್ಯಾನಂದದ ಮೂಲವನ್ನು ಪಡೆಯುತ್ತೀರಿ.

ಒಂದು ವಸ್ತುವಿನಲ್ಲಿ ಅಸಾಧಾರಣ ಆಸಕ್ತಿ ತಾಳಿದಾಗೆಲ್ಲ ಚಿಂತನೆಯ ಮಹೋತ್ಸಾಹ ಕಂಡುಬರುತ್ತಿದೆ. ಅದು ಚಿಂತಕನನ್ನು ನಾನು ಈಗಷ್ಟೇ ವಿಶ್ಲೇಷಿಸಿದ ನಿಖರ ಎಂಬ ಪದದ ಅರ್ಥಕ್ಕೆ ಕೊಂಡೊಯ್ಯುತ್ತದೆ. ಅಲ್ಲಿ ಕಾವ್ಯದ ಅಸ್ತಿತ್ವಕ್ಕೆ ತಕ್ಕಷ್ಟು ಸಮರ್ಥನೆಯನ್ನು ಪಡೆಯುತ್ತೀರಿ. ಒಂದು ವಿಷಯವನ್ನು ಗದ್ಯದ ಮಟ್ಟದಿಂದ ಮೇಲಕ್ಕೆ ಎತ್ತರಿಸುವ ಆ ಮಹೋತ್ಸಾಹವು ತೀವ್ರ ಕುತೂಹಲಕರವಾದುದೇ ಇರಬೇಕು. ಇಲ್ಲಿ ಚಿಂತನೆ ಎನ್ನುವುದನ್ನು ಪ್ಲೇಟೋ ಬಳಸಿದ ರೀತಿಯಲ್ಲಿಯೇ ಬಳಸುತ್ತಿದ್ದೇನೆ; ಅದು ಅಲಿಪ್ತ ಆಸಕ್ತಿ. 'ಸೌಂದರ್ಯಾತ್ಮಕ ಚಿಂತನೆಯ ಉದ್ದೇಶ ನೆನಪು ಅಥವಾ ನಿರೀಕ್ಷೆಯಲ್ಲದೆ ಸರಳವಾಗಿ ತನ್ನಷ್ಟಕ್ಕೇ ಇರುವಂತೆ ರೂಪಿಸಿದ್ದು; ಮಾರ್ಗವಲ್ಲದೆ ಗುರಿಯಾಗಿ, ಸಾರ್ವತ್ರಿಕವಲ್ಲದೆ ವೈಯಕ್ತಿಕವಾಗಿ ಇರುವಂಥದು.

ಒಂದು ಮೂರ್ತ ಉದಾಹರಣೆ ತೆಗೆದುಕೊಳ್ಳೋಣ; ಅತಿರೇಕದ ಉದಾಹರಣೆಯನ್ನೇ ತೆಗೆದುಕೊಳ್ಳುತ್ತೇನೆ. ನೀವು ದಾರಿಯಲ್ಲಿ ಒಬ್ಬ ಹೆಂಗಸಿನ ಹಿಂದೆ ನಡೆಯುತ್ತಿರುವಾಗ ಅವಳ ಹಿಮ್ಮಡಿಗಳಿಂದ ಪುಟಿಯುವ ಲಂಗವನ್ನು ಕುತೂಹಲ ರೀತಿಯಲ್ಲಿ ಗಮನಿಸುತ್ತೀರಿ. ಆ ವಿಚಿತ್ರ ಬಗೆಯ ಚಲನೆ ನಿಮಗೆ ಅಷ್ಟು ಕುತೂಹಲಕರವಾಗಿ ಬದಲಾದರೆ ಅದಕ್ಕೆ ನಿಖರವಾದ ವಿಶೇಷಣ ಸಿಗುವವವರೆಗೆ ಹುಡುಕುತ್ತೀರಿ. ಅಲ್ಲಿ ತಕ್ಕ ಸೌಂದರ್ಯ ಭಾವವನ್ನು ಪಡೆಯುತ್ತೀರಿ. ಆದರೆ ವಸ್ತುವನ್ನು ನೋಡುವ ನಿಮ್ಮ ಮಹೋತ್ಸಾಹವು ನಿಮ್ಮ ಪ್ರಯತ್ನವನ್ನು ನಿರ್ಧರಿಸುತ್ತದೆ. ಹೆರಿಕ್[ರಾಬರ್ಟ್ ಹೆರಿಕ್(೧೫೯೧-೧೬೭೪) ಲಘು ಮನೋಭಾವದ ಪ್ರೇಮಕವಿತೆಗಳನ್ನು ಬರೆದ ಪಾದ್ರಿಕವಿ] 'ಬಿರುಗಾಳಿಯಂಥ ಒಳಲಂಗ' ('ಡಿಲೈಟ್ ಇನ್ ಡಿಸ್‌ಆರ್ಡರ್' ಪದ್ಯದ ಸಾಲು) ಎಂದು ಬರೆದಾಗ ಅದರಲ್ಲಿದ್ದ ಭಾವನೆಯು ನಿಶ್ಚಿತವಾಗಿ ಉತ್ತಮ ರಮ್ಯ ಪದ್ಯಕ್ಕೆ ಕಾರಣವಾಗುವ ದೊಡ್ಡ, ಅಸ್ಪಷ್ಟ ವಿಷಯಗಳಂಥದೇ ಆಗಿತ್ತು. ಉತ್ಪನ್ನವಾದ ಭಾವನೆ ಘನವಾದ ಅಸ್ಪಷ್ಟತೆಯಲ್ಲ ಎಂಬುದು ಒಂದು ಅಣುವಿನಷ್ಟೂ ಮುಖ್ಯವಾಗಿಲ್ಲ, ಬದಲಾಗಿ ತಮಾಷೆಯದಾಗಿದೆ. ಉತ್ತಮ ಕಾವ್ಯದಲ್ಲಿರುವಂಥ ಚಟುವಟಿಕೆಯೇ ಇಲ್ಲಿಯೂ ಖಚಿತವಾಗಿ ಕೆಲಸ ಮಾಡುತ್ತಿದೆ ಎಂಬುದು ಮುಖ್ಯವಾದ ವಿಷಯ. ಅದು ವಸ್ತುವಿನ ನಿಖರ ವಕ್ರತೆಯನ್ನು ಪಡೆಯುವ ಉದ್ದೇಶದಿಂದ ರೂಢಿಗತ ಭಾಷೆಯನ್ನು ತಪ್ಪಿಸುವಿಕೆ.

ಬರಲಿರುವ ಕಾವ್ಯದಲ್ಲಿ, ಕಲ್ಪನೆಯು ಅಭಿಜಾತ ಪಂಥದ ಅಗತ್ಯ ಆಯುಧವಾಗಿರುತ್ತದೆ ಎಂಬುದನ್ನು ನಾನು ಇನ್ನೂ ತೋರಿಸಬೇಕಿದೆ. ನಾನು ಹೇಳಿದ ಇತ್ಯಾತ್ಮಕ ಗುಣವನ್ನು 'ಆನ್ ಫೇರ್ ಕಿರ್ಕ್‌ಕಾನೆಲ್ ಲೀ' [ಸ್ಕಾಟ್‌ಲೆಂಡಿನ ಜನಪದ] ಕಥನ ಕವನದಲ್ಲಿರುವಂತೆ ಅತಿ ನೇರ, ಸರಳತನಗಳ ಮೂಲಕ ಪ್ರಕಟಿಸಬಹುದು. ಆದರೆ ನಾವು ಪಡೆಯಲಿರುವ ನಿರ್ದಿಷ್ಟವಾದ ಕಾವ್ಯ ಉತ್ಸಾಹಪೂರ್ಣವೂ ಶುಷ್ಕವೂ ಸದಭಿರುಚಿಯದೂ ಆಗಿರುತ್ತದೆ. ಹಾಗೂ ಇಲ್ಲಿ ಅಗತ್ಯ ಆಯುಧ ಅಥವಾ ಇತ್ಯಾತ್ಮಕ ಗುಣ ಕಲ್ಪನೆಯೇ ಆಗಿರಬೇಕು.

ಇಲ್ಲಿ ವಿಷಯವು ಮುಖ್ಯವಲ್ಲ; ಅದರಲ್ಲಿರುವ ಗುಣ ಹೆಚ್ಚಿನ ರಮ್ಯವಾದಿಗಳಲ್ಲಿರುವಂಥದೆ.

ಉತ್ಪಾದನೆಯಾದ ಭಾವನೆಯ ಪ್ರಮಾಣ ಅಥವಾ ಪ್ರಭೇದ ನಿರ್ಧಾರಕವಲ್ಲ, ಆದರೆ, ಅದರಲ್ಲಿ ಯಾವುದೇ ನಿಜವಾದ ಮಹೋತ್ಸಾಹವಿದೆಯೇ? ತಾನು ಆನಂದಿಸಿದ, ನಿಜವಾಗಿ ಸಾಕ್ಷಾತ್ಕರಿಸಿದ, ದೃಶ್ಯೀಕರಿಸಿದ ವಸ್ತುವನ್ನು ಕವಿ ತನ್ನ ಮುಂದೆ ಪಡೆದಿದ್ದನೆ? ಎಂಬ ಅಂಶವೊಂದೆ ನಿರ್ಧಾರಕ. ಅದು ಹೆಂಗಸಿನ ಪಾದರಕ್ಷೆಯಾಗಿರಬಹುದು ಅಥವಾ ನಕ್ಷತ್ರಮಯ ಆಕಾಶವಾಗಿರಬಹುದು, ಅದು ಮುಖ್ಯವಲ್ಲ.

ಕಲ್ಪನೆಯು ಸರಳ ನುಡಿಗೆ ಸೇರಿಸಿದ ಕೇವಲ ಅಲಂಕರಣವಲ್ಲ. ಸರಳ ನುಡಿ ಸತ್ವತಃ ನಿಖರವಾದುದಲ್ಲ. ಹೊಸ ರೂಪಕಗಳ ಮೂಲಕ ಮಾತ್ರ, ಅಂದರೆ ಕಲ್ಪನೆಯಿಂದ, ಅದನ್ನು ನಿಖರಗೊಳಿಸಬಹುದು.

ವರ್ಣಿಸಿದ ವಸ್ತುವಿನ ಜೊತೆ, ಅದಕ್ಕೆ ಸಮಾನಾಂತರವಾಗಿ, ಹೋಲಿಕೆಗೆ ಸಾಕಷ್ಟು ಸಂಬಂಧವಿಲ್ಲದಿದ್ದರೆ, ಅದು ವರ್ಣಿಸುವ ವಸ್ತುವನ್ನು ಆಕ್ರಮಿಸುತ್ತದೆ. ಅಲ್ಲಿ ಒಂದಷ್ಟು ಆಧಿಕ್ಯ ಇರುತ್ತದೆ. ಅಲ್ಲಿ ಕಲ್ಪನೆಯ ವಿಲಾಸವನ್ನು ಕಾಣಬಹುದು. ಅದು ಪ್ರತಿಭೆಗಿಂತ ಕೆಳಮಟ್ಟದ್ದಾಗಿರುತ್ತದೆ ಎಂದು ಹೇಳುತ್ತೇನೆ.

ಆದರೆ ಹೋಲಿಕೆಯು ಅದರ ಪ್ರತೀ ಚೂರೂ, ನಾನು ಹಿಂದೆ ವರ್ಣಿಸಿದ ನಿಖರ ಪದದ ಅರ್ಥದ ನಿಖರ ವರ್ಣನೆಗೆ ಅಗತ್ಯವಾಗಿರುವಲ್ಲಿ, ಅದು ಉಂಟುಮಾಡುವ ಪರಿಣಾಮ ಗಂಭೀರವಾಗಿಲ್ಲ ಎಂಬುದು ಒಂದೇ ಆಕ್ಷೇಪಣೆ, ಆಗ ಈ ಆಕ್ಷೇಪಣೆ ಸಂಪೂರ್ಣವಾಗಿ ಅಮಾನ್ಯವಾಗಿರುತ್ತದೆ ಎಂದು ಭಾವಿಸುತ್ತೇನೆ. ಅದು ನಿಖರವಾದ ಅರ್ಥದಲ್ಲಿ ಪ್ರಾಮಾಣಿಕವಾಗಿದ್ದರೆ, ನೀವು ಅಭಿವ್ಯಕ್ತಿಸಬೇಕಿರುವ ಭಾವನೆ ಅಥವಾ ವಸ್ತುವಿನ ನಿಖರ ವಕ್ರತೆಯನ್ನು ಪಡೆಯಲು ಸಂಪೂರ್ಣ ಹೋಲಿಕೆಯು ಅಗತ್ಯವಾಗಿರುವಾಗ ವಿಷಯ ಲಘುವಾಗಿದ್ದರೂ ಮತ್ತು ಭಾವನೆಗಳು ಅನಂತದಿಂದ ತುಂಬಾ ದೂರವಿದ್ದರೂ ಉತ್ತಮ ಕಾವ್ಯ ಪಡೆಯುತ್ತೀರಿ ಎಂದು ನನಗೆ ತೋರುತ್ತದೆ.

ಈ ವಿಧದ ವಸ್ತುವಿಗೆ ಯಾವುದೇ ಪಾರಿಭಾಷಿಕ ಪದ ಬಳಸುವುದು ತುಂಬ ಕಷ್ಟ. ಕಾರಣ ನೀವು ಯಾವುದೇ ಪದ ಬಳಸಿದರೂ ಅದು ಒಮ್ಮೆ ಭಾವಾತಿರೇಕಗೊಳಿಸಿದುದಾಗಿರುತ್ತದೆ. ಕೋಲ್‌ರಿಜ್‌ನ 'ಸಜೀವ' ಪದವನ್ನೇ ತೆಗೆದುಕೊಳ್ಳಿ. ಕಲೆಯ ಬಗೆಗೆ ಮಾತನಾಡುವ ಎಲ್ಲ ಬಗೆಯ ಜನರಿಂದ ಅಸ್ಪಷ್ಟವಾಗಿ ಮತ್ತು ರಹಸ್ಯಾತ್ಮಕವಾಗಿ ಮಹತ್ವದ್ದಾದ ಏನೋ ಒಂದರ ಅರ್ಥಕ್ಕೆ ಇದು ಸಡಿಲವಾಗಿ ಬಳಕೆಯಾಗಿದೆ. ವಾಸ್ತವಾಗಿ ಅವರಿಗೆ ಸಜೀವ ಮತ್ತು ಯಾಂತ್ರಿಕ ಪದಗಳು ಖಚಿತವಾಗಿ ಒಳ್ಳೆಯದು ಮತ್ತು ಕೆಟ್ಟದುಗಳ ರೀತಿಯವೇ ಆದ ಪ್ರತಿಸಿದ್ಧಾಂತಗಳು.

ಅಂಥದ್ದು ಯಾವುದೂ ಅಲ್ಲ. ಕೋಲ್ರಿಜ್ ಅದನ್ನು ಪರಿಪೂರ್ಣವಾಗಿ ನಿಶ್ಚಿತ ಮತ್ತು ನಾನು ಹೇಳುವ ಶುಷ್ಕ ಅರ್ಥದಲ್ಲಿ ಬಳಸುತ್ತಾನೆ. ಅದು ಇಷ್ಟೆ: ಯಾಂತ್ರಿಕ ಸಂಕೀರ್ಣತೆಯು ಅದರ ಭಾಗಗಳ ಮೊತ್ತ. ಆ ಭಾಗಗಳನ್ನು ಒಂದರ ಪಕ್ಕದಲ್ಲಿ ಒಂದರಂತೆ ಇಟ್ಟಾಗ ಇಡಿಯಾದುದನ್ನು ಪಡೆಯುತ್ತೀರಿ. ಈಗ ಜೀವಂತ ಅಥವಾ ಸಾವಯವ ಎಂಬುದು ಬಿಡಿಗಳು ಒಂದರಿಂದ ಇನ್ನೊಂದು ಮಾರ್ಪಾಡಾದ ಅಂಶಗಳಾಗಿರದ, ಹಾಗೂ ಒಂದು ಹಂತಕ್ಕೆ ಪ್ರತಿಯೊಂದೂ ಪೂರ್ಣವಾಗಿರುವ ಬೇರೆಬೇರೆ ಬಗೆಯ ಸಂಕೀರ್ಣತೆಗೆ ಕೇವಲ ಅನುಕೂಲಕರ ರೂಪಕ. ಒಂದು ಕುರ್ಚಿಯ ಕಾಲು ಅದರಷ್ಟಕ್ಕೆ ಒಂದು ಕಾಲಾಗಿ ಮಾತ್ರ ಇರುತ್ತದೆ. ನನ್ನ ಕಾಲು ಅದರಷ್ಟಕ್ಕೆ ಒಂದು ಕಾಲಾಗಿ ಮಾತ್ರ ಇರುವುದಿಲ್ಲ.

ಯಾಂತ್ರಿಕ ರೀತಿಯ ಸಂಕೀರ್ಣತೆಗಳನ್ನು ಮಾತ್ರ ಪ್ರತಿನಿಧಿಸಲು ಶಕ್ತವಾಗಿರುವುದು ಬುದ್ಧಿಶಕ್ತಿಯ ಲಕ್ಷಣ. ಅದು ಕೇವಲ ರೇಖಾಚಿತ್ರಗಳನ್ನು ರಚಿಸಬಲ್ಲುದು, ಹಾಗೂ ಆ ರೇಖಾಚಿತ್ರಗಳು ಅವಶ್ಯವಾಗಿ ಒಂದರಿಂದ ಇನ್ನೊಂದು ಬೇರೆಯಾಗಿರುವ ಭಾಗಗಳಿಂದಾದವು. ಬುದ್ಧಿಶಕ್ತಿ ಯಾವಾಗಲೂ ವಿಶ್ಲೇಷಿಸುತ್ತದೆ– ಸಂಶ್ಲೇಷಣೆ ಇದ್ದಾಗ ಅದು ಕಕ್ಕಾಬಿಕ್ಕಿಯಾಗುತ್ತದೆ. ಆದ್ದರಿಂದಲೇ ಕಲಾವಿದನ ಕಾರ್ಯ ನಿಗೂಢವಾಗಿ ಕಾಣುತ್ತದೆ. ಬುದ್ಧಿಶಕ್ತಿ ಇದನ್ನು

ಪ್ರತಿನಿಧಿಸಲಾರದು. ಇದು ಬುದ್ಧಿಶಕ್ತಿಯ ವಿಶಿಷ್ಟ ಸ್ವಭಾವ ಮತ್ತು ಅದು ರೂಪುಗೊಂಡ ಉದ್ದೇಶಗಳ ಅವಶ್ಯ ಪರಿಣಾಮ. ಇದರರ್ಥ ಸಂಶ್ಲೇಷಣೆ ಮಾತಿಗೆ ಸಿಗದುದು ಎಂದೇನಲ್ಲ, ಇದು ಖಚಿತವಾಗಿ ತಿಳಿಸಲಾಗದ್ದು, ಅಷ್ಟೆ

ಬರ್ಗ್ಸನ್(೧೮೫೯–೧೯೪೧ ಫ್ರೆಂಚ್ ತತ್ತ್ವಶಾಸ್ತ್ರಜ್ಞ) ಇವೆಲ್ಲದರ ಬಗ್ಗೆ ತನ್ನ ತತ್ತ್ವಶಾಸ್ತ್ರದ ಕೇಂದ್ರ ಲಕ್ಷಣವಾಗಿ ವಿಚಾರ ಮಾಡಿದ್ದಾನೆ. ಇವು ಆತ 'ಅಂತರ್ನೆಲೆ' ಎಂದು ಕರೆಯುವ ಇನ್ನೊಂದು ಬಗೆಗೆ ವಿರುದ್ಧವಾಗಿ 'ಬಹಿರ್ನೆಲೆ' ಎಂದು ಕರೆಯುವ ಜೀವಂತ ಸಂಕೀರ್ಣತೆಗಳ ಸ್ಪಷ್ಟ ಗ್ರಹಿಕೆ ಮತ್ತು ಬುದ್ಧಿಶಕ್ತಿ ಕೇವಲ ಬಹಿರ್ನೆಲೆಯ ಅನೇಕದ ಜೊತೆ ವ್ಯವಹರಿಸಬಲ್ಲುದು ಎಂಬ ವಾಸ್ತವವನ್ನು ಗುರುತಿಸುವುದರ ಮೇಲೆ ನಿಂತಿವೆ. ಅಂತರ್ನೆಲೆಯ ಜೊತೆ ವ್ಯವಹರಿಸಬೇಕಾದರೆ ನೀವು ಅಂತಃಪ್ರಜ್ಞೆಯನ್ನೇ ಬಳಸಬೇಕು.

ಇನ್ನು ನಾನು ಮೊದಲೇ ಹೇಳಿದಂತೆ ರಸ್ಕಿನ್ ಇವೆಲ್ಲವನ್ನು ಸಂಪೂರ್ಣವಾಗಿ ಬಲ್ಲವನಾಗಿದ್ದ, ಆದರೆ ಆತ ತನ್ನ ಇಂಗಿತ ಏನು ಎಂಬುದನ್ನು ಖಚಿತವಾಗಿ ಹೇಳಲು ಸಮರ್ಥನಾಗುವಂತೆ ಮಾಡಬಲ್ಲಂಥ ತಾತ್ತ್ವಿಕ ಹಿನ್ನೆಲೆ ಅವನಿಗೆ ಇರಲಿಲ್ಲ. ಇದರ ಪರಿಣಾಮವಾಗಿ ಆತ ರೂಪಕಗಳ ಸರಣಿಯಲ್ಲಿ ಒದ್ದಾಡಬೇಕಾಯಿತು. ಒಂದು ಶಕ್ತಿಶಾಲಿ ಪ್ರತಿಭಾವಂತ ಮನಸ್ಸು ತನ್ನ ಕವಿತೆ ಅಥವಾ ಚಿತ್ರದ ಎಲ್ಲಾ ಪ್ರಮುಖ ವಿಚಾರಗಳನ್ನು ಅದೇ ಕ್ಷಣದಲ್ಲಿ ಗ್ರಹಿಸುತ್ತದೆ ಮತ್ತು ಸಂಯೋಜಿಸುತ್ತದೆ, ಹಾಗೂ ಇದು ಇವುಗಳಲ್ಲೊಂದರಲ್ಲಿ ಕಾರ್ಯಪ್ರವೃತ್ತವಾಗಿರುವ ಕ್ಷಣದಲ್ಲಿಯೇ ಅದಕ್ಕೆ ಸಂಬಂಧಿಸಿದಂತೆ ಉಳಿದ ಎಲ್ಲವುಗಳ ಜೊತೆ ಕೆಲಸ ಮಾಡುತ್ತಿರುತ್ತದೆ ಮತ್ತು ಉಳಿದ ಎಲ್ಲವನ್ನೂ ಮಾರ್ಪಡಿಸುತ್ತಿರುತ್ತದೆ ಮತ್ತು ಹಾವಿನ ಶರೀರದ ಚಲನೆ ಒಮ್ಮೆಲೆ ಎಲ್ಲಾ ಭಾಗದಲ್ಲಿಯೂ ಸಾಗುವ ಮತ್ತು ಅದೇ ಕ್ಷಣದಲ್ಲಿ ವಿರುದ್ಧ ದಿಕ್ಕಿನಲ್ಲಿ ಚಲಿಸುವ ಸುರಳಿಗಳಲ್ಲಿ ಅದರ ಸಂಕಲ್ಪಶಕ್ತಿ ಪ್ರವೃತ್ತವಾಗಿರುವಂತೆ ಒಂದು ಇನ್ನೊಂದರ ವರ್ತನೆಗಳ ಮೇಲಿನ ನೋಟವನ್ನು ತಪ್ಪಿಸುವುದಿಲ್ಲ.

ಯಾವುದೇ ವಸ್ತುವಿನ ಸಹಜ ಸ್ವಭಾವದಂತೆ ರಮ್ಯಚಳವಳಿಯೂ ಅಂತ್ಯವಾಗಲೇಬೇಕು. ಇದು ದುಃಖಕರವಾಗಿರಬಹುದು. ಆದರೆ ಅದಕ್ಕೇನೂ ಮಾಡಲಾಗದು– ವಿಸ್ಮಯವು ವಿಸ್ಮಯವಾಗಿರುವುದು ಕೊನೆಗೊಳ್ಳಲೇಬೇಕು. ಅಪರಿಚಿತ ನಾಡು ಒಬ್ಬ ನೆಲೆಸಿದಾಗ ಅನಿವಾರ್ಯವಾಗಿ ಅಪರಿಚಿತತೆಯನ್ನು ಕಳೆದುಕೊಳ್ಳುವಂತೆ ವಿಸ್ಮಯದ ಸಾಹಿತ್ಯಕ್ಕೆ ಕೊನೆ ಇರಲೇಬೇಕು. ಎಲಿಝಬೆತನ್ನರ ಕಳೆದುಹೋದ ಉತ್ಸಾಹವನ್ನು ಯೋಚಿಸಿ. 'ಓ ನನ್ನ ಅಮೆರಿಕಾ, ನನ್ನ ಹೊಸ ಶೋಧನೆ ನಾಡೆ' ಇದು ಅವರಿಗೆ ಏನು ಅರ್ಥಕೊಟ್ಟಿತು, ಈಗ ನಮಗೆ ಏನು ಅರ್ಥಕೊಡುತ್ತದೆ ಎಂದು ಯೋಚಿಸಿ. ವಿಸ್ಮಯ ಕೇವಲ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಸಾಗುವ ಮನುಷ್ಯನ ಮನೋಧರ್ಮವಾಗಿರಬಹುದು. ಅದು ಶಾಶ್ವತವಾಗಿ ಸ್ಥಾಪಿಸಿದ ವಸ್ತುವಾಗಿರಲು ಸಾಧ್ಯವೇ ಇಲ್ಲ.

❑

ಭಾಷೆ ಮತ್ತು ಮೆದುಳು: ಚಾಮ್ಸ್‌ಕಿಯ ಸಿದ್ಧಾಂತಗಳು

ಎನ್ ಎಸ್ ರಘುನಾಥ್

Language Learning: Proliferation of Very Simple Elements
Or Deeper Principles of Mental Organization?

(Noam Chomsky, 1972 : 70)

And it seems to me that today there is no better or more promising way to explore the essential and distinctive properties of human intelligence than through the detailed investigation of the structure of this unique possession.

(ibid: 70-71)

ಭಾಷೆಯ ಕಲಿಕೆ ಎಂದರೆ ವಾಕ್ಯದ ಬಹಳ ಸರಳವಾದ ಬಿಡಿ ಭಾಗಗಳನ್ನು ಪಸರಿಸುವಂತೆ ಮಾಡುವುದೆ? ಅಥವಾ ಮೆದುಳಿನ ರಚನಾ ವ್ಯವಸ್ಥೆಯ ಆಳವಾದ ತತ್ವಗಳನ್ನು ಅನುಸರಿಸುವುದೆ?

ಮನುಷ್ಯನ ಬೌದ್ಧಿಕತೆಯ ಅತ್ಯವಶ್ಯವಾದ ಮತ್ತು ವಿಶಿಷ್ಟವಾದ ಗುಣಗಳನ್ನು ಶೋಧಿಸಲು ಸರಳವಾದ ಮತ್ತು ಹೆಚ್ಚು ಭರವಸೆ ಇಡಬಹುದಾದ ಮಾರ್ಗವೆಂದರೆ ತನ್ನ ಹತೋಟಿಯಲ್ಲಿರುವ ಈ ರಚನೆಯ ಅನನ್ಯವಾದ ಗುಣಗಳನ್ನು ಪರೀಕ್ಷೆಗೊಳಪಡಿಸುವುದು ಎಂದು ನನಗನ್ನಿಸುತ್ತದೆ,

ಮೇಲಿನ ಉಲ್ಲೇಖಗಳು ಮನುಷ್ಯನ ಭಾಷೆಗೂ ಮತ್ತು ಮೆದುಳಿಗೂ(Mind) ಇರಬಹುದಾದ ಸಂಬಂಧದ ಬಗ್ಗೆ ನೋಮ್ ಚಾಮ್ಸ್‌ಕಿ ಅವರ ನಿಲುವನ್ನು ಸೂಚಿಸುತ್ತವೆ. ಗಣಿತಶಾಸ್ತ್ರ ಮತ್ತು ತತ್ವಶಾಸ್ತ್ರಗಳಲ್ಲಿ ಪರಿಣತನಾಗಿದ್ದ ಜರ್ಮನಿಯ ಗಾಟ್‌ಫ್ರೀಡ್ ವಿಲ್‌ಹ್ಯಾಮ್ ಫಾನ್ ಲೇಬ್ನೀಸ್(೧೬೪೬-೧೭೧೬) ಅವರ 'ಭಾಷೆಗಳು ಮಾನವನ ಮೆದುಳಿನ ಅತ್ಯುತ್ತಮ ಕನ್ನಡಿ'(ಅನು: ಜಿ.ಅರ್. ಮಾಂಟ್‌ಗೊಮೆರಿ,೧೯೦೨) ಎಂಬ ತತ್ವವನ್ನು ಆಧರಿಸಿ ಅವುಗಳ ಸಂಬಂಧವನ್ನು ಗಾಢವಾಗಿ ಪರಿಶೀಲಿಸುವುದು ಅವರ ಸಂಶೋಧನೆಯ ಮುಖ್ಯೋದ್ದೇಶಗಳಲ್ಲಿ ಪ್ರಮುಖವಾದುದು. ಈ ಸಿದ್ಧಾಂತ

ಚಾಮ್ಸ್ಕಿಯವರಿಗೆ ಮನುಷ್ಯನ ಮೆದುಳಿನಲ್ಲಿ ಏನಾಗುತ್ತಿದೆ ಎನ್ನುವುದನ್ನು ಅರಿಯಲು ಒಂದು ವಿಧಾನವಾಯಿತು. ಭಾಷೆಗಾಗಿ ಮೆದುಳಿನಲ್ಲಿ ಒಂದು ವಿಶೇಷ ಸಾಮರ್ಥ್ಯವಿದೆ ಎಂದು ನಂಬುವ ಅವರು ೧೯೭೫ರಲ್ಲಿ ಮೆಕ್ಮಾಸ್ಟರ್ ವಿಶ್ವವಿದ್ಯಾಲಯದಲ್ಲಿ ಕೊಟ್ಟ ವಿಡ್ಸನ್ ಉಪನ್ಯಾಸದ ಮಾಲೆಯಲ್ಲಿ ಭಾಷೆಯ ರಚನೆ ಮತ್ತು ಅದು ಕಾರ್ಯನಿರ್ವಹಿಸುವ ರೀತಿಯನ್ನು ಗಂಭೀರವಾಗಿ ವಿವರಿಸಿದ್ದಾರೆ. ಅದನ್ನು ಅಧ್ಯಯನ ಮಾಡುವ ಮೂಲಕ ಏನನ್ನು ಕಂಡುಹಿಡಿಯಲು ಸಾಧ್ಯ ಎನ್ನುವುದನ್ನು ವಿವರಿದ್ದಾರೆ:

> One reason for studying language – and for me personally most compelling reason – is that it is tempting to regard language, in the traditional phrase, as 'a mirror of mind'.
>
> (Noam Chomsky, 2003: 4)

> ಭಾಷೆಯನ್ನು ಅಧ್ಯಯನ ಮಾಡಲು ಅದನ್ನು ಪಾರಂಪರಿಕ ಪರಿಭಾಷೆಯಲ್ಲಿ 'ಮೆದುಳಿನ ಕನ್ನಡಿ' ಎಂದು ಪರಿಗಣಿಸುವಂತೆ ಪ್ರಚೋದಿಸಿವುದು ಒಂದು ಕಾರಣ. ನನಗೆ ಇದು ವೈಯಕ್ತಿಕವಾಗಿ ಅತ್ಯಂತ ಒತ್ತಾಯಪೂರ್ವಕ ಕಾರಣ.

ಚಾಮ್ಸ್ಕಿ ಅವರ ಈ ಸಿದ್ಧಾಂತ ಭಾಷಾವಿಜ್ಞಾನದಲ್ಲಿ ಹೊಸ ಹಾದಿ ತೋರಿಸುವ ದೃಢವಾದ ತಾತ್ವಿಕ ಪ್ರತಿಪಾದನೆಗೆ ನಾಂದಿಯಾಯಿತು. ಪ್ಲೇಟೋ ಮತ್ತು ಫ್ರಾಯ್ಡ್‌ರನ್ನು ಬಿಟ್ಟರೆ ವಿಶ್ವದಲ್ಲೆ ಅತಿ 'ಹೆಚ್ಚು ಉಲ್ಲೇಖವಾಗುತ್ತಿರುವ ಜೀವಂತ ಲೇಖಕ' ಎನಿಸಿರುವ ನೋಮ್ ಚಾಮ್ಸ್ಕಿಯವರ ಪಾತ್ರವನ್ನು ಆಧುನಿಕ ಭಾಷಾವಿಜ್ಞಾನದಲ್ಲಿ ಉತ್ಪ್ರೇಕ್ಷೆ ಮಾಡಲು ಸಾಧ್ಯವಿಲ್ಲ. ಇವರು ಭಾಷಾವಿಜ್ಞಾನದಲ್ಲಿ ಕಾಲಿಡುವುದಕ್ಕೆ ಮುಂಚೆ ಈ ಕ್ಷೇತ್ರದಲ್ಲಿ ಕೇಂದ್ರ ಬಿಂದುವಾಗಿದ್ದ ವಿಶ್ವದಲ್ಲಿ ಅತ್ಯಂತ ಪ್ರಖ್ಯಾತರೆನಿಸಿದ್ದ ಎಷ್ಟೋ ಭಾಷಾವಿಜ್ಞಾನಿಗಳು ಚಾಮ್ಸ್ಕಿ ಅವರ ಸಿದ್ಧಾಂತಗಳ ಪರಿಣಾಮದಿಂದಾಗಿ ನಿವೃತ್ತರಾಗಿದ್ದಾರೆ, ಅಥವಾ ಉಪೇಕ್ಷೆಗೊಳಪಟ್ಟು ಚರಿತ್ರೆಯಲ್ಲಿ ಕಣ್ಮರೆಯಾಗಿದ್ದಾರೆ. ಚಾಮ್ಸ್ಕಿಯವರ 'ಮೆದುಳಿನ ವ್ಯವಸ್ಥೆಯ ಮೂಲತತ್ತ್ವಗಳು' (Principles of Mental Organization) (ಅಲ್ಲೆ:) ಸಿದ್ಧಾಂತ ಸ್ಥಾಪಿತವಾದ ಮೇಲೆ 'ಪ್ರಚೋದನೆ–ಪ್ರತಿಕ್ರಿಯೆ ಮನಃಶಾಸ್ತ್ರ' (The Stimulus-Response Psychology) ದಲ್ಲಿದ್ದ ನ್ಯೂನತೆಗಳು ತಾವೆ ಬಹಿರಂಗವಾಗಿ, ಬಳಕೆಯಿಂದ ಅಳಿಸಿಹೋಗಿವೆ (Noam Chomsky, 1972:2).

> There was now little reason to question the conviction of Leonard Bloomfield, Bertrand Russell, and positivistic linguists, psychologists, and philosophers in general that the framework that the stimulus-response psychology would soon be extended to the point where it would provide a satisfying explanation for the most mysterious of human abilities *(ibid: 6)*

> ಅತ್ಯಂತ ನಿಗೂಢ ಮಾನವನ ಸಾಮರ್ಥ್ಯವನ್ನು ಕುರಿತು ತೃಪ್ತಿಕರ ವಿವರಣೆ ನೀಡುವಷ್ಟು ಪ್ರಚೋದನೆ-ಪ್ರತಿಕ್ರಿಯೆ ಮನಃಶಾಸ್ತ್ರದ ಚೌಕಟನ್ನು ವಿಸ್ತರಿಸಲು ಸಾಧ್ಯವಾಗುತ್ತದೆ ಎನ್ನುವ ಲೆನಾರ್ಡ್ ಬ್ಲೂಮ್‌ಫೀಲ್ಡ್, ಬರ್ಟ್ರೆಂಡ್ ರಸ್ಸೆಲ್ ಮತ್ತು ಇತ್ಯಾತ್ಮಕ ಭಾಷಾವಿಜ್ಞಾನಿಗಳು ಹಾಗೂ ಸಾಮಾನ್ಯವಾಗಿ ಮನಃಶಾಸ್ತ್ರಜ್ಞರು ಮತ್ತು ತತ್ತ್ವಶಾಸ್ತ್ರಜ್ಞರ ನಂಬಿಕೆಯನ್ನು ಈಗ ಪ್ರಶ್ನೆಮಾಡಲು ಕಾರಣವಿಲ್ಲ.

ಚಾಮ್ಸ್‌ಕಿಯವರು ತರ್ಕ ಮತ್ತು ಗಣಿತಶಾಸ್ತ್ರಗಳ ಅಧ್ಯಯನಮಾಡಿ ಕೊನೆಗೆ ಭಾಷಾವಿಜ್ಞಾನದ ಕ್ಷೇತ್ರವನ್ನು ತಲುಪಿ, ಭಾಷಾವಿಜ್ಞಾನವನ್ನು ಅಭ್ಯಾಸಮಾಡುವ ರೀತಿಯನ್ನು ಯಾರೂ ಕಲ್ಪಿಸಿಕೊಳ್ಳಲಾಗದ ರೀತಿಯಲ್ಲಿ ಬದಲಾಯಿಸಿಬಿಟ್ಟರು. ೧೯೫೭ರಲ್ಲಿ ಇವರು ಬರೆದ Syntactic Structures ('ವಾಕ್ಯಾತ್ಮಕ ರಚನೆಗಳು') ವರ್ತನಾ ಮನಃಶಾಸ್ತ್ರದ ಅಧ್ವರ್ಯು ಎನಿಸಿದ ಎಫ್.ಎಮ್. ಸ್ಕಿನರ್ ಅವರನ್ನು ಅನುಸರಿಸಿ ಬರೆಯುತ್ತಿದ್ದ ರಾಚನಿಕ(structural) ಭಾಷಾವಿಜ್ಞಾನಿಗಳಾದ ಲೆನಾರ್ಡ್ ಬ್ಲೂಮ್‌ಫೀಲ್ಡ್ ಮತ್ತು ಎಡ್ವರ್ಡ್ ಸ್ಯಾಫೀರ್ ಅವರ ಭವಿಷ್ಯವನ್ನೇ ಮೊಟಕು ಮಾಡಿದರೆ, ೧೯೬೫ರಲ್ಲಿ ಪ್ರಕಟವಾದ Aspects Of The Theory Of Syntax('ವಾಕ್ಯವಿಜ್ಞಾನ ಸಿದ್ಧಾಂತದ ಅಂಶಗಳು') ರೆನ್ ಅಂಡ್ ಮಾರ್ಟಿನ್, ನೆಶ್‌ಫೀಲ್ಡ್ ಅಥವಾ ಟರ್ನರ್ ಅಂಥ ನಿಯಮಗಳನ್ನು ವಿಧಿಸುವ ಪಾರಂಪರಿಕ ವ್ಯಾಕರಣಕಾರ(prescriptive grammarians)ರನ್ನು, ಸಂಪೂರ್ಣವಾಗಿ ನಿವೃತ್ತಿಗೊಳಿಸಿ Transformative Generative Grammar ('ರೂಪಾಂತರಾತ್ಮಕ ಉತ್ಪಾದಕ ವ್ಯಾಕರಣ')ವನ್ನು ಸ್ಥಾಪಿಸಿತು. ಶಾಲೆ ಮತ್ತು ಕಾಲೇಜುಗಳಲ್ಲಿ ಈಗ ನಾವು ಅನುಸರಿಸುತ್ತಿರುವುದು ಈ ಸಿದ್ಧಾಂತಗಳನ್ನು ಆಧರಿಸಿ ಫ್ರ್ಯಾಂಕ್ ಪಾಮರ್, ರಾಂಡಾಲ್ಫ್ ಕ್ವರ್ಕ್ ಮತ್ತು ಸಿಡ್ನಿ ಗ್ರೀನ್ಬಾಮ್ ಅವರುಗಳು ರಚಿಸಿರುವ ವಿವರಣಾತ್ಮಕ ವ್ಯಾಕರಣವನ್ನೇ ಹೊರತು ರೆನ್ ಅಂಡ್ ಮಾರ್ಟಿನ್ ಮೊದಲಾದವರದನ್ನಲ್ಲ. ಚಾಮ್ಸ್‌ಕಿಯವರು ಸೂಚಿಸುವ ಮತ್ತೊಂದು ಪ್ರತಿಪಾದನೆ ಎಂದರೆ:

> The explanation of why sentences occur in discourse is the task of stylistics and sociolinguistics, not of grammar."
>
> (Roger Fowler, 1971: 6)

> ಚರ್ಚೆ ಅಥವಾ ವಾದವಿವಾದಗಳಲ್ಲಿ ವಾಕ್ಯಗಳು ಏಕೆ ಬಳಕೆಯಾಗುತ್ತವೆ ಎನ್ನುವುದನ್ನು ವಿವರಿಸುವುದು ಶೈಲಿವಿಜ್ಞಾನ ಮತ್ತು ಸಾಮಾಜಿಕ ಭಾಷಾವಿಜ್ಞಾನಿಗಳ ಕೆಲಸವೇ ಹೊರತು ವ್ಯಾಕರಣಕ್ಕಲ್ಲ.

ಚರ್ಚೆಯಲ್ಲಿ ಅಥವಾ ಮಾತನಾಡುವಾಗ ಯಾವುದೇ ಒಂದು ವಾಕ್ಯ ಬಳಕೆಯಾದರೆ ಅದರ ರಚನೆಯನ್ನು ವ್ಯಾಕರಣ ವಿವರಿಸ ಬಲ್ಲುದು. ಆದರೆ ಆ ವಾಕ್ಯವೇ ಏಕೆ ಬಳಕೆಯಾಯಿತು, ಬೇರೊಂದು ಏಕೆ ಅಲ್ಲ ಎನ್ನುವುದನ್ನು ಅದು ವಿವರಿಸಲಾರದು. ಅಂದರೆ ಈ ಸಾಧ್ಯತೆಗಳನ್ನು ವ್ಯಾಕರಣ ವಿವರಿಸಲಾರದು; ಆದರೆ ಈ ಸಾಧ್ಯತೆಗಳನ್ನು ನಿರೀಕ್ಷಿಸುವ ಶಕ್ತಿ ವ್ಯಾಕರಣಕ್ಕೆ ಇರಬೇಕು ಎಂದು ಚಾಮ್ಸ್‌ಕಿ

ಸ್ಥಾಪಿಸಿದರು. ಈ ಹಿನ್ನೆಲೆಯಲ್ಲಿ ಚರ್ಚಿಸಲು ನಾನು ಎತ್ತಿಕೊಂಡಿರುವ ಕೃತಿ Language And Mind(1972). ಅಲ್ಲಲ್ಲಿ Language And Problems of Knowledge (1988) ಪುಸ್ತಕದಿಂದಲೂ ಉಲ್ಲೇಖಿಸಿದ್ದೇನೆ.

'ಭಾಷೆ ಮನುಷ್ಯರಿಗೆ 'ಜನ್ಮಸಿದ್ಧವಾದುದು'(inherent), 'ಮಕ್ಕಳಲ್ಲಿ ಹುಟ್ಟುವಾಗಲೆ ವ್ಯಾಕರಣ ಅಂತರ್ಗತ(innate) ವಾಗಿರುತ್ತದೆ' ಎನ್ನುವ ಚಾಮ್ಸ್ಕಿ ತಮ್ಮ ಸಿದ್ಧಾಂತಗಳ ನಿಲುವಿಗೆ ತಕ್ಕಂತೆ ವಾಕ್ಯದ ರಚನೆ ಮತ್ತು ಮೆದುಳಿನ ಸಂಬಂಧವನ್ನು ಸ್ಥಾಪಿಸುತ್ತಾರೆ. ಅಂತರ್ಗತವಾಗಿರುವ ವ್ಯಾಕರಣಕ್ಕೆ ಅವರು ಕೊಟ್ಟ ಹೆಸರು 'ವಿಶ್ವಾತ್ಮಕ ವ್ಯಾಕರಣ'

ಚಾಮ್ಸ್ಕಿಯವರು ಮೆದುಳು ಮತ್ತು ಭಾಷೆಗಿರುವ ಸಂಬಂಧವನ್ನು ಅಧ್ಯಯನಮಾಡಲು ೧೭ನೇ ಮತ್ತು ೧೮ನೇ ಶತಮಾನದ ಕಾರಣವಾದಿ ಮನಃಶಾಸ್ತ್ರಜ್ಞರ ಕಡೆ ತಿರುಗಿದರು.

> According to traditional concept, (rational psychologists of seventeenth and eighteenth century) a system of propositions expressing the meaning of a sentence is produced in the mind as the sentence is realized as a physical signal, the two being related by certain formal operations that, in current terminology, we may call *grammatical transformations*. Continuing with current terminology, we can thus distinguish the *surface structure* of the sentence, the organization into categories and phrases that is directly associated with the physical signal, from the underlying *deep structure,* also a system of categories and phrases, but with a more abstract character...

> ೧೭-೧೮ನೇ ಶತಮಾನಗಳ ಕಾರಣವಾದಿ ಮನಃಶಾಸ್ತ್ರಜ್ಞರ ಪಾರಂಪರಿಕ ಸಿದ್ಧಾಂತದ ಪ್ರಕಾರ, ವಾಕ್ಯದ ಅರ್ಥವನ್ನು ವ್ಯಕ್ತಪಡಿಸುವ ಸೂಚಕಗಳ ವ್ಯವಸ್ಥೆಯು ಪ್ರತಿಪಾದನೆ ಮಾಡುವ ವ್ಯವಸ್ಥೆಯು ಉತ್ಪತ್ತಿಯಾಗುತ್ತದೆ. ವಾಕ್ಯವನ್ನು ಭೌತಿಕ ವಸ್ತುವಾಗಿ ಗ್ರಹಿಸಿ, ಅರ್ಥದ ಜೊತೆ ಅದರ ಸಂಬಂಧವು ಔಪಚಾರಿಕ ಕ್ರಿಯೆಯಿಂದ ಏರ್ಪಡುತ್ತದೆ. ಅದನ್ನು ಈಗಿನ ಪರಿಭಾಷೆಯಲ್ಲಿ ವ್ಯಾಕರಣಾತ್ಮ ರೂಪಾಂತರಗಳು ಎಂದು ಕರೆಯಬಹುದು. ಈ ಪರಿಭಾಷೆಯ ಜೊತೆ ಮುಂದುವರೆದು ಭೌತಿಕ ಸಂಕೇತಗಳಿಗೆ ನೇರವಾಗಿ ಸಂಬಂಧಿಸಿದ ವರ್ಗಗಳು ಮತ್ತು ಪದಪುಂಜಗಳ ವ್ಯವಸ್ಥೆಯಾದ ವಾಕ್ಯದ *ಮೇಲುಸ್ತರದ ರಚನೆಯನ್ನೂ* (surface structure) ವರ್ಗಗಳು ಮತ್ತು ಪದಪುಂಜಗಳ ವ್ಯವಸ್ಥೆಯೇ ಆದರೂ ಹೆಚ್ಚು ಅಮೂರ್ತ ಸ್ವರೂಪದ ವಾಕ್ಯದ ಒಳ ಹಂತದಲ್ಲಿರುವ *ಆಳ ರಚನೆಯನ್ನೂ*(deep structure) ಗುರುತಿಸಬಹುದು.

ರೆನೆ ಡೆಕಾರ್ಟಿಸ್ ಹೇಳುವಂತೆ ಕಾರ್ಟೀಸ್ಸಿಯನ್ ತತ್ವಶಾಸ್ತ್ರದ ಪ್ರಕಾರ 'ನಾನು ಯೋಚಿಸುವುದರಿಂದ ನಾನು ಇದ್ದೇನೆ' (cogito ergo sum) ವಿಚಾರಗಳು ಆತ್ಮದಿಂದಲೇ ಹೊರಹೊಮ್ಮುತ್ತವೆ. ಆದುದರಿಂದ ಮನುಷ್ಯ ಸಂಪೂರ್ಣ ಭೌತಿಕ ವಸ್ತುವಲ್ಲ.

> ...in Cartesian terms, to postulate a second substance whose essence is thought, along side of body, with its essential properties of extension and motion. This new principle has a 'creative aspect', which evidenced most clearly in what we may refer to as 'the creative aspect of language use,' the distinctively human ability to express thought and understand entirely new expressions of thought, within the framework of an 'instituted language', a language that is a cultural product subject to laws and principles partially unique to it and partially reflections on general properties of mind.

> ..ಡೆಕಾರ್ಟಿಸ್‌ನ(ಕಾರ್ಟೀಸ್ಸಿಯನ್) ಪರಿಭಾಷೆಯಲ್ಲಿ, ದೇಹದ ಜೊತೆಯಲ್ಲಿ, ವಿಸ್ತರಣೆ ಮತ್ತು ಚಲನೆಗಳನ್ನು ಒಳಗೊಳ್ಳುವಂತೆ ವಿವೇಚನೆ ಎನ್ನುವ ಎರಡನೇ ಸ್ತರದ ಸತ್ವವನ್ನು ಪ್ರತಿಪಾದಿಸುತ್ತದೆ. ಈ ಹೊಸ ತತ್ವವು ಭಾಷೆಯ 'ಸೃಜನಶೀಲ_ಅಂಶ'ವನ್ನು ಒಳಗೊಳ್ಳುತ್ತದೆ. ನಮ್ಮ ವಿವೇಚನೆಗಳನ್ನು ಅಭಿವ್ಯಕ್ತಗೊಳಿಸುವ ಮತ್ತು ಹೊಸ ಅಭಿವ್ಯಕ್ತಿಗಳನ್ನು ಅರ್ಥಮಾಡಿಕೊಳ್ಳುವ ಕ್ರಿಯೆ ಈ 'ಸಂಘಟಿತ ಭಾಷೆ'ಯ ಚೌಕಟ್ಟಿನಲ್ಲೆ ನಡೆಯುತ್ತದೆ. ಇದು 'ಭಾಷಾ ಬಳಕೆಯ ಸೃಜನಶೀಲತೆ'ಯಂಥ ವಿಶಿಷ್ಟವಾದ ಮಾನವ ಸಾಮರ್ಥ್ಯ ಎನ್ನುವುದನ್ನು ಸ್ಪಷ್ಟವಾಗಿ ಗೋಚರವಾಗುವಂತೆ ತೋರಿಸಿತು. ಸಾಂಸ್ಕೃತಿಕ ಭಾಗವಾಗಿ ಬರುವ ಈ 'ಸಂಘಟಿತ ಭಾಷೆ' ಕೆಲವು ರೀತಿ ನೀತಿಗಳಿಗೆ ಬದ್ಧವಾಗಿರುವ ಭಾಗಶಃ ಅನನ್ಯವಾದ ಮತ್ತು ಭಾಗಶಃ ಮೆದುಳಿನ ಸಾಮಾನ್ಯ ಗುಣಗಳನ್ನು ಪ್ರತಿಬಿಂಬಿಸುವುದಾಗಿರುತ್ತದೆ.

ಫಾನ್ ಲೇಬ್ನೀಸ್ ಪ್ರತಿಪಾದಿಸಿದ 'ಭಾಷೆಗಳು ಮನುಷ್ಯನ ಮೆದುಳಿನ ಅತ್ಯುತ್ತಮ ಕನ್ನಡಿ' ಎನ್ನುವ ತತ್ವ ಮತ್ತು ಚಾಮ್ಸ್ಕಿ ಅವರ ಗುರು ಜೆಲಿಗ್ ಹೆರಿಸ್ ಅವರು ವೈಜ್ಞಾನಿಕ ಅಧ್ಯಯನದ ಮೂಲಕ 'ರೂಪಂತರಗಳು'(transformations) ಎಂದು ಹೆಸರಿಸಿದ ವ್ಯವಸ್ಥಿತವಾದ ಭಾಷೆಗೂ ಅದರ ಅರ್ಥಕ್ಕೂ ಇರುವ ಸಂಬಂಧ ಹಾಗೂ ಅದರಿಂದ ಸಾಧ್ಯವಾಗುವ ವಿವಿಧ ವಾಕ್ಯ ರಚನೆಗಳಿಗಿರುವ ಸಂಬಂಧಗಳು ಚಾಮ್ಸ್ಕಿ ಅವರ ಇಡೀ ಭಾಷಾವಿಜ್ಞಾನದ ಅಧ್ಯಯನಕ್ಕೇ ಬುನಾದಿಯಾದವು. ಇದರ ಜೊತೆಗೆ ಸಾ.ಪೂ, ನಾಲ್ಕನೇ ಶತಮಾನದ ಭಾರತದ ಸಂಸ್ಕೃತ ವೈಯಾಕರಣಿ ಪಾಣಿನಿ ಭಾಷೆಯ ಮುಖ ಮತ್ತು ಅದನ್ನು ಅಧ್ಯಯನ ಮಾಡುವ ಹೊಸ ಮಾರ್ಗವನ್ನು ತೋರಿಸಿದ ಎಂದು ಅವರೆ ಹೇಳಿಕೊಂಡಿದ್ದಾರೆ.

ಸುಮಾರು ೧೯೫೦ರ ದಶಕದ ಮಧ್ಯಭಾಗದವರೆಗೂ ಎಫ್.ಎಮ್. ಸ್ಕಿನರ್ ಅವರ Verbal Behaviour (೧೯೫೭) ('ಶಾಬ್ದಿಕ ವರ್ತನೆ') ಅನ್ನು ಆಧರಿಸಿ ಬೆಳೆಸಿದ್ದ ಬ್ಲೂಮ್‌ಫೀಲ್ಡ್‌ನ ರಾಚನಿಕ ಭಾಷಾವಿಜ್ಞಾನವು ಭಾಷೆಯನ್ನು ಅಭ್ಯಾಸ ಮಾಡಲು ಮಾದರಿಯಾಗಿತ್ತು. ೧೯೫೭ರಲ್ಲಿ ಪ್ರಕಟವಾದ ನೋಮ್ ಚಾಮ್ಸ್ಕಿಯವರ

Syntactic Structures ಗ್ರಂಥ ಭಾಷಾವಿಜ್ಞಾನದ ಅಧ್ಯಯನದಲ್ಲಿ ಹಿಂದೆಂದೂ ಕಾಣದಂಥ ಮೂಲಭೂತ ಬದಲಾವಣೆಗಳಿಗೆ ಕಾರಣವಾಯಿತು.

ಚಾಮ್ಸ್ಕಿ ಅವರಿಗಿಂತ ಮೊದಲಿನಿಂದಲೂ ಬರೆಯುತ್ತಿದ್ದ ವರ್ತನಾ ಮನಃಶಾಸ್ತ್ರಜ್ಞ ಸ್ಕಿನ್ನರನ ತತ್ವದ ಪ್ರಕಾರ ಕಲಿಯುವ ಎಲ್ಲ ಪ್ರಮುಖ ಹಂತಗಳಲ್ಲಿಯೂ ಭಾಷೆ ಮಗುವಿಗೆ ಬಾಹ್ಯ ಪ್ರಪಂಚದಿಂದಲೇ ಬರುತ್ತದೆ. ತಾಯಿ ಮತ್ತು ಇತರರು ಮಾಡುವುದೇ ಮಗುವಿಗೆ ಭಾಷೆ ಕಲಿಯಲು ಸಹಾಯ ಮಾಡುತ್ತದೆ. ಆಂತರಿಕವಾಗಿ ಮಗುವಿನಿಂದ ಯಾವುದೆ ಕೊಡುಗೆ ಇರುವುದಿಲ್ಲ. ಮಗುವಿನ ತಲೆಯಲ್ಲಿ ಏನಾದರೂ ನಡೆಯುತ್ತಿದೆ ಎಂದು ಭಾವಿಸಿಕೊಳ್ಳಲು ಸಾಧ್ಯವಿಲ್ಲ. ವೈಜ್ಞಾನಿಕವಾಗಿ ವಿವರಿಸಬಲ್ಲಂಥ ಯಾವುದೂ ನಡೆಯುವುದಿಲ್ಲ. ಇದಕ್ಕೆ ವಿರುದ್ಧವಾಗಿ, ಭಾಷೆ ಪಡೆದುಕೊಳ್ಳುವ ಬಹು ಮುಖ್ಯವಾದ ಅಂಶಗಳೆಲ್ಲವೂ ಮೆದುಳಿನ ಒಳಗೇ ನಡೆಯುವ ಕ್ರಿಯೆ. ಅದು ಏನು ಎನ್ನುವುದನ್ನು ನಿಷ್ಪತ್ತಿಸುವುದಕ್ಕೆ(deduce) ನಾನು ಬದ್ಧ ಎನ್ನುವುದು ಚಾಮ್ಸ್ಕಿಯವರ ನಿಲುವು.

ಚಾಮ್ಸ್ಕಿಯವರ ಪ್ರಕಾರ, ಮಗು ಭಾಷೆಯನ್ನು ಹೆಚ್ಚು ಹೆಚ್ಚು ಕಲಿಯುತ್ತಿರುವಂತೆ ಅದರ ತಲೆಯಲ್ಲಿ (ಮೆದುಳಿನಲ್ಲಿ) ಹಲವಾರು ಸ್ಥಿತ್ಯಂತರ, ಬದಲಾವಣೆಗಳು ಆಗುತ್ತವೆ. ಮಗು ಕೆಲವು ವರ್ಷಗಳ ಅನಂತರ ಪ್ರಬುದ್ಧರಂತೆ ಸಾಮರ್ಥ್ಯಗಳಿಸಿದ ಮೇಲೆ ಒಂದು ಸ್ಥಿರ ಸ್ಥಿತಿಗೆ ಬರುತ್ತದೆ. ಅನಂತರ ಮಗುವಿನಲ್ಲಿ ಯಾವುದೇ ಮಹತ್ತರ ಬದಲಾವಣೆ ಆಗುವುದಿಲ್ಲ. ಮುಂದಿನ ವರ್ಷಗಳಲ್ಲಿ ಮಕ್ಕಳು ಪದಸಂಪತ್ತನ್ನು ಹೆಚ್ಚು ಮಾಡಿಕೊಳ್ಳುತ್ತ ಇರುತ್ತಾರೆ. ಬದುಕಿನುದ್ದಕ್ಕೂ ಆಗೊಮ್ಮೆ ಈಗೊಮ್ಮೆ ಒಂದೊಂದು ಹೊಸ ವಾಕ್ಯ ರಚನೆಯನ್ನು ಕಲಿಯುತ್ತಿರುತ್ತಾರೆ.

ವರ್ತನಾವಾದಿಗಳ ಪ್ರಕಾರ ಭಾಷಾ ಅಧ್ಯಯನವು ಭೌತಿಕವಾಗಿ ಅಳೆಯಬಹುದಾದ ಅಸಾಧಾರಣ ಸಂಗತಿ (physically measurable phenomena). ಅಂದರೆ ಆಲೋಚನೆ ಅಥವಾ ಪ್ರತಿಭೆಗಳಿಗೆ ಬದಲಾಗಿ ಇಂದ್ರಿಯಗಳ ಮೂಲಕ ಮಾತ್ರ ತಿಳಿಯಬರುವಂತಹದ್ದು ಎಂದು ಅವರ ತಿಳಿವಳಿಕೆ. ಭಾಷೆಯನ್ನು ಕಲಿಸುವುದೆಂದರೆ ವಾಕ್ಯದ ಬಹಳ ಸರಳವಾದ ವಿವಿಧ ಭಾಗಗಳನ್ನು ಕೂಡಿಸುವುದನ್ನು ಹೇಳಿಕೊಡುವುದು ಎಂದೇ ಆಗಿತ್ತು. ಭಾಷೆಯನ್ನು ಗ್ರಹಿಸುವಲ್ಲಿ ಅರ್ಥವನ್ನು ಯಾವ ರೀತಿಯಲ್ಲಿಯೂ ಮುಖ್ಯ ಎಂದು ಪರಿಗಣಿಸುತ್ತಿರಲಿಲ್ಲ. ಚಾಮ್ಸ್ಕಿ ಮೊಟ್ಟಮೊದಲ ಬಾರಿಗೆ, ವಾಕ್ಯದ ಮೇಲು ನೋಟಕ್ಕೆ ಸಿಗುವ ರಚನೆ ಮತ್ತು ಅವುಗಳ ಒಳಗೇ ಹುದುಗಿರುವ ಬೇರೆ ಬೇರೆ ಅರ್ಥಗಳಿಂದ ಉದ್ಭವವಾಗುವ ವಿವಿಧ ರಚನೆಗಳಲ್ಲಿರುವ ವಾಕ್ಯಗಳಿಗೂ ಅವುಗಳ ಅರ್ಥಗಳಿಗೂ ಸಂಬಂಧವನ್ನು ಸ್ಥಾಪಿಸಿದರು. ಅವನ್ನೆ 'ಮೇಲುಸ್ತರ ರಚನೆ' (Surface Structure) ಮತ್ತು 'ಆಳಸ್ತರ ರಚನೆ' (Deep Structure) ಎನ್ನುವುದು. ಅವರೆ ಕೊಟ್ಟಿರುವ ಒಂದು ಉದಾಹರಣೆಯನ್ನು ನೋಡಬಹುದು.

೧. John is easy To please

೨. John is eager To please

N + VP + adj IP

ಈ ಎರಡು ವಾಕ್ಯಗಳ ಭೌತಿಕ ರಚನೆ ಒಂದೆ. ಆದರೆ ಅರ್ಥ ಮಾತ್ರ ಸಂಪೂರ್ಣ ವಿರುದ್ಧವಾಗಿದೆ. ಈ ವಿರುದ್ಧ ಅರ್ಥಗಳಿಂದ ಹುಟ್ಟಬಹುದಾದ ವಾಕ್ಯರಚನೆಗಳ ಸಂಬಂಧವೆ 'ರೂಪಾಂತರಾತ್ಮಕ ಉತ್ಪಾದಕ ವ್ಯಾಕರಣ'ದ (Transformative Generative Grammar, TG) ಬೆಳವಣಿಗೆಗೆ ಕಾರಣವಾಯಿತು. ಮೊದಲನೇ ವಾಕ್ಯದಲ್ಲಿ John ವಾಕ್ಯದ ಕರ್ಮಪದ. ಆದರೆ ಎರಡನೇ ವಾಕ್ಯದಲ್ಲಿ ಎಙಟಿ ವಾಕ್ಯದ ವಿಷಯ ಆಗುತ್ತಾನೆ. ಇಂತಹ ಹಲವಾರು ಉದಾಹರಣೆಗಳನ್ನು ಕೊಡಬಹುದು.

The Police is asked to stop drinking after twelve in the night.

Np + Vp + Ip + Adv

ಈ ವಾಕ್ಯಕ್ಕೆ ಇರಬಹುದಾದ ಎಲ್ಲ ಅರ್ಥಗಳನ್ನೂ ಈ ಕೆಳಗಿನ ವಾಕ್ಯಗಳ ರೂಪದಲ್ಲಿ ಕೊಡಲಾಗಿದೆ. ಅವುಗಳ ರಚನೆಯ ವಿವಿರಗಳನ್ನೂ ಕೊಡಲಾಗಿದೆ:

The police can drink before twelve in the night

Np + Vp + Adv

The police has the permission to drink before twelve in the night.

NP +Vp + Np + Ip + Adv

The police is asked to stop the public from drinking after twelve in the night.

NP + Vp + Ip + Np + NP + Adv

The public can drink before twelve in the night.

Np + Vp + Np + Adv

It is possible for the public to drink before midnight.

Np + Vp + Adj + Np + Ip + Adv

ಚಾಮ್ಸ್‌ಕಿಯವರಿಗೆ ರೂಪಾಂತರ ಉತ್ಪಾದಕ ಭಾಷಾವಿಜ್ಞಾನವು (Transformative Generative Linguistics) ಸಿದ್ಧಾಂತವನ್ನು ಬೆಳೆಸಲು ಅವರ ಗುರುಗಳಾಗಿದ್ದ ಜೆಲಿಗ್ ಅವರ ಅಧ್ಯಯನ ಬುನಾದಿಯಾಯಿತು ಎಂದು ಆಗಲೆ ಹೇಳಿದ್ದೇನೆ. 'ಇದೇ ಭಾಷೆಯನ್ನು ಅಧ್ಯಯನ ಮಾಡುವ ವಿಧಾನ' ಎಂದು ಖಡಾಖಂಡಿತವಾಗಿ ಹೇಳುವ ರಾಚನಿಕರನ್ನು ಚಾಮ್ಸ್‌ಕಿಯವರು ೧೯೬೦–೮೦ರ ನಡುವೆ ಬೆಳೆಸಿದ ರೂಪಾಂತರ ಉತ್ಪಾದಕ ಭಾಷಾವಿಜ್ಞಾನವು ಸಂಪೂರ್ಣವಾಗಿ ಬದಿಗೊತ್ತಿಬಿಟ್ಟಿತು. ಇಲ್ಲಿ ಮತ್ತೊಂದು

ಅಂಶವನ್ನು ಗಮನಿಸಬೇಕು: ಸ್ಕಿನರ್ ಅವರು ಸಮಾಜವಿಜ್ಞಾನ ಮನುಷ್ಯನನ್ನು ಅಭ್ಯಾಸ ಮಾಡುವ ಕ್ರಮವನ್ನು ವೈಜ್ಞಾನಿಕ ಎಂದು ಕರೆಯಬಹುದೆ ಎನ್ನುವ ಅನುಮಾನವನ್ನು ವ್ಯಕ್ತಪಡಿಸಿದರು. ಚಾಮ್ಸ್ಕಿಯವರು ಮನುಷ್ಯನನ್ನು ಜೀವವಿಲ್ಲದ ವಸ್ತುವಿನಂತೆ ನೋಡುವುದನ್ನು ಖಡಾಖಂಡಿತವಾಗಿ ತಿರಸ್ಕರಿಸಿದರು. ಕ್ರಿಯೆ ಏಕೆ ನಡೆಯುತ್ತದೆ ಎನ್ನುವುದನ್ನು ವಿವರಿಸಲು ಪ್ರಯತ್ನ ಪಟ್ಟರು. 'ಕಾರ್ಟೀಸಿಯನ್ ಸಾಮಾನ್ಯ ಜ್ಞಾನ' (ಕಾಮನ್ ಸೆನ್ಸ್) ಮತ್ತು 'ವೈಜ್ಞಾನಿಕ ಮಾರ್ಗ'ಗಳ ಆಧಾರದ ಮೇಲೆ ಇದನ್ನು ಬದಲಾಯಿಸಿದರು.

ಈ ವಿಷಯಗಳನ್ನು ಅಧ್ಯಯನ ಮಾಡಲು ರಾಚನಿಕರು ಮತ್ತು ವರ್ತನಾ ಮನಃಶಾಸ್ತ್ರಜ್ಞರು ಅನುಸರಿಸಿದ ಮಾರ್ಗ ಗಮನಿಸಲು ಅರ್ಹವಲ್ಲದ ವಿವರಣೆಯಿಂದ ಕೂಡಿತ್ತು. ಮೆದುಳಿನ ರಚನೆ ದೇಹದ ಯಾವುದೇ ಅಂಗಾಂಗಗಳಿಗಿಂತ ಸರಳವಾದುದು ಎನ್ನುವ ನಂಬಿಕೆ ಮತ್ತು ಯಾವುದೇ ವಿದ್ಯಮಾನವನ್ನು(ಫೆನಾಮೆನ) ವಿವರಿಸಲು ಅತಿ ಸೂಕ್ಷ್ಮ ಬುದ್ಧಿವಂತಿಕೆಯ ಅವಶ್ಯಕತೆ ಇರುವುದಿಲ್ಲ. ಚರಿತ್ರೆಪೂರ್ವ ಮಾನವನ ವೈಚಾರಿಕತೆಯ ಆದಿಕಲ್ಪನೆಯೆ ಸಾಕು ಎಂದು ಚಾಮ್ಸ್ಕಿ ತಿರಸ್ಕಾರದಿಂದ ತಳ್ಳಿಹಾಕುತ್ತಾರೆ. ಹೀಗೆ, ಭಾಷೆಯು ಒಂದು ರೂಢಿಯಲ್ಲಿರುವ ರಾಚನಿಕ ವ್ಯವಸ್ಥೆ ಅಥವಾ ಸಂಬಂಧಪಟ್ಟ ಸಂಪರ್ಕಗಳ ಜಾಲ ಅಥವಾ ಭಾಷೆಯ ಜ್ಞಾನ ಎಂದರೆ 'ಹೇಗೆ ಎನ್ನುವ ತಿಳಿವಳಿಕೆ' ಅಥವಾ 'ಏನ್ನಾದರೂ ಪ್ರತಿಕ್ರಿಯಿಸುವ ಕೌಶಲಗಳ ವ್ಯವಸ್ಥೆ ಎಂದು ಯಾವುದೆ ವಾದ ಅಥವಾ ಪುರಾವೆಗಳಿಲ್ಲದೆ (ಅಥವಾ ನಿರ್ವಚನೆಯ ಪ್ರಕಾರ ಸತ್ಯ) ಎಂದು ಸ್ವೀಕರಿಸಲಾಗಿತ್ತು.

ಈ ಕಾರಣದಿಂದ ಭಾಷೆಯ ಜ್ಞಾನವನ್ನು ನಿಧಾನವಾಗಿ ತರಬೇತಿ ಮತ್ತು ಪುನರಾವರ್ತನೆಗಳ ಮೂಲಕ ಕಲಿತುಕೊಳ್ಳಬೇಕಿದೆ. ರಾಚನಿಕ ಭಾಷಾವಿಜ್ಞಾನಿಗಳ ಪ್ರಕಾರ ಪ್ರಚೋದನೆಗೆ ಮನುಷ್ಯ ತೋರುವ ಪ್ರತಿಕ್ರಿಯೆ ಮಾತ್ರ (merely a response to a stimulus) ಎನ್ನುವ ನಿಲುವನ್ನು ಚಾಮ್ಸ್ಕಿಯವರು ವಿರೋಧಿಸುತ್ತಾರೆ. ವರ್ತನಾವಾದಿಗಳ ಪ್ರಕಾರ ಮಕ್ಕಳು ಒಂದು ಖಾಲಿ ಹಾಳೆ ಇದ್ದಂತೆ. ಅವರನ್ನು ಜಾಣ್ಮೆಯಿಂದ ಗೊತ್ತಾದ ವರ್ತನೆಗೆ ಅನುಗುಣವಾಗಿ ರೂಪಿಸಿ ಬೆಳೆಸಬಹುದು. ಇದು ಚಾಮ್ಸ್ಕಿಯವರಿಗೆ ಸರಳೀಕರಣ ಎನಿಸುತ್ತದೆ. ಅವರ ಪ್ರಕಾರ 'ಭಾಷೆಯ ಅಪಾರವಾದ ಸೃಜನಶೀಲ ಸಾಧ್ಯತೆಗಳಿಗೆ ಪ್ರತಿ ಮನುಷ್ಯನ ಸಾಧಾರಣ ಭಾಷೆಯೆ ಸಾಕ್ಷಿ.' 'ನಾವು ಜಗತ್ತಿನಲ್ಲಿ ಮನುಷ್ಯ ಬಳಸುವ ಯಾವುದೇ ಭಾಷೆಯನ್ನು ಕಲಿಯುವ ಪೂರ್ವಸಿದ್ಧ ವ್ಯವಸ್ಥೆಯನ್ನು(ಟೆಂಪ್ಲೇಟ್) ನಮ್ಮ ಮೆದುಳಿನಲ್ಲಿ ಪಡೆದುಕೊಂಡೇ ಹುಟ್ಟಿರುತ್ತೇವೆ'. ಮಕ್ಕಳು ಭಾಷೆ ಕಲಿಯುವ ಸಂಕೀರ್ಣ ಪ್ರಕ್ರಿಯೆಯನ್ನು ವಿವರಿಸುತ್ತ ಚಾಮ್ಸ್ಕಿ, 'ಎಲ್ಲ ಭಾಷೆಗಳ ರಚನೆಗೂ ಆಧಾರವಾಗಬಹುದಾದ ಒಂದು ವ್ಯಾಕರಣವನ್ನು ಮಕ್ಕಳು ತಲೆಯಲ್ಲಿಟ್ಟುಕೊಂಡೆ ಹುಟ್ಟಿರುತ್ತಾರೆ. ಅದೇ ವಿಶ್ವಾತ್ಮಕ ವ್ಯಾಕರಣ(ಯುಜಿ)' ಎನ್ನುತ್ತಾರೆ. ಅದು 'ಅಂತರ್ಗತವಾಗಿರುವಂಥದ್ದು'. ಉದಾಹರಣೆಗೆ, ವ್ಯಾಕರಣದ

ಗುಪ್ತವಾಗಿರುವ ಕೆಲವು ನಿಯಮಗಳು ಮಕ್ಕಳಿಗೆ ತಿಳಿದುಕೊಳ್ಳಲು ಬಹಳ ಸಂಕೀರ್ಣವಾಗಿರುತ್ತವೆ. ಅಲ್ಲದೆ ಅವರಿಗೆ ಅವನ್ನು ತಿಳಿದುಕೊಂಡು ವ್ಯವಹರಿಸುವಷ್ಟು ಪ್ರಬುದ್ಧತೆ ಇರುವುದಿಲ್ಲ. ಅದು ಜನ್ಮಸಿದ್ಧವಲ್ಲದಿದ್ದರೆ ಅವರಿಗೆ ಭಾಷೆಯನ್ನು ಕಲಿಯಲು ಸಾಧ್ಯವಿರಲಿಲ್ಲ. ಇದು ಪ್ರಕೃತಿ ಮತ್ತು ಪೋಷಣೆ (nature vs nurture) ವಿವಾದದ ಸಾರಾಂಶವನ್ನು ಸಂಕ್ಷಿಪ್ತವಾಗಿ ಹೇಳುತ್ತದೆ. ಅಂದರೆ ಅದು ಆನುವಾಂಶಿಕವಾಗಿ ಪಡೆದವು (inherited genetically) ಮತ್ತು ಪರಿಸರದಲ್ಲಿ ಪಡೆದವುಗಳ ಸಾರಾಂಶ ಎನ್ನುತ್ತಾರೆ ಚಾಮ್ಸ್‌ಕಿ. ರಾಚನಿಕ ಭಾಷಾವಿಜ್ಞಾನಿಗಳ ಪ್ರಕಾರ ಮಕ್ಕಳಿಗೆ ಭಾಷೆಯನ್ನು ತರಬೇತಿ ಮತ್ತು ಪುನರಾವರ್ತನೆಗಳ (repetition and training) ಮೂಲಕ ಕಲಿಸಬೇಕು. ಭಾಷೆ ಆತ್ಮಾವಲೋಕನ ಮಾಡಿಕೊಳ್ಳಲು ಸಿಗದ, ಮೆದುಳಿನ ಗಾಢವಾದ ತತ್ವಗಳ ರಚನೆ ಎನ್ನುವುದಕ್ಕಿಂತ ಬಹಳ ಸರಳವಾದ ಅಂಶಗಳನ್ನೊಳಗೊಂಡು ಹುಟ್ಟಿಕೊಳ್ಳುವ, ಗೋಚರಿಸುವಂಥ ಸಂಕೀರ್ಣತೆ' ಎನ್ನಬಹುದು. ಇಲ್ಲಿ ಚಾಮ್ಸ್‌ಕಿ ರಾಚನಿಕರ ಸಿದ್ಧಾಂತದ ಮತ್ತೊಂದು ಟೊಳ್ಳುತನವನ್ನು ತೋರಿಸಿದ್ದಾರೆ. ಮನುಷ್ಯನ ಮೆದುಳಿನ ರಚನೆಯನ್ನು ಅರ್ಥಮಾಡಿಕೊಳ್ಳುವುದರಲ್ಲೂ ರಾಚನಿಕರು ಎಡವಿದರು ಎನ್ನುವುದನ್ನು ಅವರ ವಾದ.

'ಭಾಷೆಯನ್ನು ಅಭ್ಯಾಸ ಮಾಡುವ ರಾಚನಿಕರ ಮತ್ತು ವರ್ತನವಾದಿಗಳ ಮತ್ತೊಂದು ಕೊರತೆ ಎಂದರೆ, ಮಾನವ ಅಂಗಾಂಗಗಳಿಗಿಂತ ಮೆದುಳಿನ ರಚನೆ ಸರಳ ಎನ್ನುವ ಆದಿಮ ಕಲ್ಪನೆ, ಯಾವುದೇ ವಿದ್ಯಮಾನವನ್ನು(ಫೆನಾಮೆನನ್) ಸಮರ್ಪಕವಾಗಿ ಗಮನಿಸಲು ಸಾಧ್ಯ' ಎನ್ನುವ ನಿಲುವು. 'ನಮಗೆ ತಿಳಿದಿರುವಂತೆ ಮಾನವ ಭಾಷೆಗಿರುವುದು ನಿರ್ದಿಷ್ಟ ಬಗೆಯ ಮೆದುಳಿನ ರಾಚನಿಕ ವ್ಯವಸ್ಥೆಯೆ ಹೊರತು ಕೇವಲ ಉನ್ನತಮಟ್ಟದ ಬುದ್ಧಿವಂತಿಕೆಯಲ್ಲ. ೨೦ ವರ್ಷಗಳ ನಂತರ ತಮ್ಮ ಮುನಾಗ್ವ ಉಪನ್ಯಾಸದಲ್ಲಿ ಚಾಮ್ಸ್‌ಕಿಯವರು ಪುರುಚ್ಚರಿಸಿರುವಂತೆ

> In the study of language we proceed abstractly, at the level of mind, and we hope to be able to gain understanding of how the entities constructed at the abstract level and their properties and principles that govern them can be accounted for in terms of properties of the brain.
>
> ಮಿದುಳಿನ ಹಂತದಲ್ಲಿ, ಅಮೂರ್ತ ಹಂತದಲ್ಲಿ ರಚಿತವಾದ ಅಂಶಗಳು ಮತ್ತು ಅವುಗಳನ್ನು ನಿಯಂತ್ರಿಸುವ ತತ್ವಗಳನ್ನು ಮಿದುಳಿನ ಲಕ್ಷಣಗಳಾಗಿ ಪರಿಗಣಿಸಬಹುದು ಎಂಬ ಬಗ್ಗೆ ಭಾಷೆಯ ಅಧ್ಯಯನದಲ್ಲಿ ಅಮೂರ್ತವಾಗಿ ಮುಂದುವರೆಯಲು ನಮಗೆ ಅರಿವು ದೊರೆಯಬಹುದು ಎಂದು ಆಶಿಸಬಹುದು.

ಮುಂದುವರೆದು, ಮಾನವಪ್ರಕೃತಿಯನ್ನು ಅರಿಯಲು ಭಾಷೆಯ ಮೇಲಿನ ಆಸಕ್ತಿ ಕೇಂದ್ರವಸ್ತುವಾಗಿ ಉಳಿಯುವುದು ಸಹಜ ಎಂದು ಹೇಳುತ್ತಾರೆ. ಮನುಷ್ಯನ

ಸ್ವಭಾವವನ್ನು ಅರಿಯಲು ಭಾಷೆ ಏಕೆ ವಿಶೇಷವಾಗಿ ಅರ್ಥಪೂರ್ಣವಾಗಿದೆ ಮತ್ತು ಅರ್ಥಪೂರ್ಣವಾಗಿಯೇ ಉಳಿಯುತ್ತದೆ ಎಂಬುದನ್ನು ಚಾಮ್ಸ್ಕಿ ವಿವರಿಸುತ್ತಾರೆ.

> one is that language appears to be a true species property, unique to the human species in its essentials and a common part of our shared biological endowment, with little apart from rather serious pathology. Furthermore, language enters in a crucial way into thought, action and social relations. Finally, language is relatively accessible to study.

> ಭಾಷೆ ಮನುಷ್ಯ ಕುಲದ ನಿಜವಾದ ಲಕ್ಷಣವಾಗಿ ಗೋಚರಿಸುವಂತಿದೆ. ಮಾನವ ಕುಲಕ್ಕೆ ವಿಶಿಷ್ಟವಾದ ಅಗತ್ಯಾಂಶಗಳಿಂದ ಕೂಡಿದೆ. ನಮ್ಮ ಹಂಚಿಕೆಯಾಗಿರುವ ಜೀವಶಾಸ್ತ್ರೀಯ ಪರಿಸರದ ಸಾಮಾನ್ಯ ಭಾಗವಾಗಿದೆ. ಗಂಭೀರವಾದ ನೈದಾನಿಕ ಭಿನ್ನತೆ ಇಲ್ಲ. ಅಲ್ಲದೆ, ಚಿಂತನೆ, ಕ್ರಿಯೆ ಮತ್ತು ಸಾಮಾಜಿಕ ಸಂಬಂಧಗಳನ್ನು ಭಾಷೆ ವಿಶಿಷ್ಟವಾದ ರೀತಿಯಲ್ಲಿ ಪ್ರವೇಶಿಸುತ್ತದೆ. ಅಂತಿಮವಾಗಿ, ಭಾಷೆ ಅಧ್ಯಯನಕ್ಕೆ ಸಿಗುತ್ತದೆ.

ಚಾಮ್ಸ್ಕಿ ಅವರ ಬಹು ಮುಖ್ಯ ಸಿದ್ಧಾಂತಗಳಾದ ವಿಶ್ವಾತ್ಮಕ ವ್ಯಾಕರಣ, ಆಳ ಮತ್ತು ಮೇಲುಸ್ತರ ರಚನೆಗಳು, ರೂಪಾಂತರಾತ್ಮಕ ಉತ್ಪಾದಕ ವ್ಯಾಕರಣ, (ಭಾಷಿಕ) ಸಾಮರ್ಥ್ಯ (competence) ಮತ್ತು (ನಿರ್ದಿಷ್ಟ ಭಾಷೆಯನ್ನು ಬಳಸುವ) ಸಾಧನೆ (performance) – ಈ ಎಲ್ಲವೂ ವಿಶ್ವದಾದ್ಯಂತ ಭಾಷೆಯನ್ನು ಅಧ್ಯಯನ ಮಾಡಲು ಮತ್ತು ಉನ್ನತ ಸಂಶೋಧನೆ ಮಾಡಲು ಬಳಕೆಯಾಗುತ್ತಿವೆ. ಮಾನವರು ಯಾವುದೇ ಒಂದು ನಿರ್ದಿಷ್ಟ ಭಾಷೆಗೆ ಆನುವಂಶಿಕವಾಗಿ ಸಿದ್ಧರಾಗಿ ಬಂದಿರುವುದಿಲ್ಲ. ಆದರೆ ಭಾಷೆ ನಮ್ಮ 'ಜನ್ಮಸಿದ್ಧ ಅನುವಂಶೀಯ ಹಕ್ಕು'. 'ಭಾಷೆಯಷ್ಟೇ ಅಲ್ಲ ವ್ಯಾಕರಣವೂ ಹುಟ್ಟಿನಿಂದ ಅಂತರ್ಗತವಾದುದು' ಎನ್ನುತ್ತಾರೆ ಚಾಮ್ಸ್ಕಿ:

> ವಿಶ್ವಾತ್ಮಕ ವ್ಯಾಕರಣವನ್ನು ಅಧ್ಯಯನಮಾಡುವುದೆಂದರೆ ಮನುಷ್ಯನ ಬೌದ್ಧಿಕ ಸಾಮರ್ಥ್ಯದ ಸ್ವರೂಪವನ್ನು ಅಧ್ಯಯನ ಮಾಡಿದಂತೆ. ಅದು ಯಾವುದೇ ನಿರ್ದಿಷ್ಟ ವ್ಯಾಕರಣಕ್ಕಿಂತ ಗಂಭೀರವಾದ ಸ್ವರೂಪದ್ದಾಗಿದ್ದು ಒಂದು ವಿವರಣಾತ್ಮಕ ಸಿದ್ಧಾಂತವನ್ನು ನಿಯೋಜಿಸುತ್ತದೆ. ಆದರೂ ಯಾವುದೇ ನಿರ್ದಿಷ್ಟ ವ್ಯಾಕರಣವನ್ನು ವಿವರಣಾತ್ಮಕ ಸಿದ್ಧಾಂತ ಎಂದು ಪರಿಗಣಿಸಬಹುದು. ಇಂಥ ವಿಶ್ವಾತ್ಮಕ ವ್ಯಾಕರಣದ ಅಧ್ಯಯನ ಎಂದರೆ ಮನುಷ್ಯನ ಬೌದ್ಧಿಕ ಶಕ್ತಿಯ ಅಧ್ಯಯನ ಎಂದೇ ಅರ್ಥೈಸಿಕೊಳ್ಳಬೇಕು. ಇದು ಮಾನವನ ಭಾಷೆ ಎಂದು ಅರ್ಹತೆ ಪಡೆಯುವಷ್ಟು ಅವಶ್ಯ ಮತ್ತು ಅಗತ್ಯವೆನಿಸುವ ಪರಿಸ್ಥಿತಿ ರೂಪಿತವಾಗಬೇಕು. ಈ ಸ್ಥಿತಿ ಆಕಸ್ಮಿಕವಾಗಿ ಉದ್ಭವವಾಗಿರುವುದಲ್ಲ, ಅದು ಮಾನವನ ಭಾಷಾ ಸಾಮರ್ಥ್ಯದಲ್ಲಿ ಆಳವಾಗಿ ಬೇರೂರಿಬೇಕು. ಹಾಗಾದಾಗಲೆ ಹುಟ್ಟು ಸಾಮರ್ಥ್ಯದ ಸಂಯೋಜನೆ ಭಾಷಾ ಅನುಭವವಾಗಿ ಭಾಷಾಜ್ಞಾನವಾಗಿ ಉದ್ಭವವಾಗುತ್ತದೆ. 'ಆ ಪರಿಸ್ಥಿತಿಯಲ್ಲಿ ಒಂದು ಭಾಷೆಯ ನಿರ್ದಿಷ್ಟ ವ್ಯಾಕರಣ ಎನ್ನುವುದಕ್ಕಿಂತ ಗಾಢವಾದ ವಿಶ್ವಾತ್ಮಕ ವ್ಯಾಕರಣ ಎನ್ನುವ ವಿವರಣಾತ್ಮಕ ಸಿದ್ಧಾಂತ ರಚನೆಯಾಗುತ್ತದೆ. ಆದರೂ ಒಂದು ಭಾಷೆಯ ನಿರ್ದಿಷ್ಟ ವ್ಯಾಕರಣವನ್ನೂ ವಿವರಣಾತ್ಮಕ ಸಿದ್ಧಾಂತ ಎಂದು ಪರಿಗಣಿಸಬಹುದು'.

'ಭಾಷೆಯನ್ನು ಮಗು ಕಲಿಯುವುದಿಲ್ಲ. ಸೂಕ್ತವಾದ ಮತ್ತು ಪುಷ್ಟಿಕರವಾದ ಆಹಾರ ಕೊಟ್ಟು ಉತ್ತೇಜಕ ಪರಿಸರದಲ್ಲಿ ಬೆಳೆಸಿದರೆ ಮೊದಲೆ ಗೊತ್ತಾಗಿರುವ ರೀತಿಯಲ್ಲಿ ಮಗುವಿನ ದೇಹದ ಅಂಗಾಂಗಗಳು ಬೆಳೆದು ಪರಿಪಕ್ವವಾಗುವಂತೆ ಭಾಷೆ ಮಗುವಿನಲ್ಲಿ ಸಂಭವಿಸುತ್ತದೆ'

ಪರಾಮರ್ಶನ ಗ್ರಂಥಗಳು

1	Chomsky Noam	1968	**Language and Mind** The MIT Press
2		1972	**Language and Mind,** San Diago Harcourt Brace, Jovanovich Inc, Enlarged Edition,
3		1988	**Language And Problem of Knowledge,** Cambridge Managua Lectures, The MIT Press
4		2003	**On Language,** Reflections on Language, Part I, Penguin Books
5	Fowler Roger	1971	**An Introduction To Transfor mational Syntax** London Routledge & Kegan Paul
6	Leibniz Gottfried Wilhelm von Tras: G R Montgomery,	1902	**Discourse on Metaphysics** New Delhi Open house Publishing House, India

❐

ಪಠ್ಯ ರಚನಾ ಸ್ವಾತಂತ್ರ್ಯ – ಒಂದು ವಿಶ್ಲೇಷಣೆ

ನಗರಗೆರೆ ರಮೇಶ್

ಸಮಾಜವು ನಾಗರಿಕಗೊಳ್ಳುವಲ್ಲಿ ಶಿಕ್ಷಣದ ಪ್ರಮುಖ ಪಾತ್ರದ ಬಗ್ಗೆ ಪ್ರತ್ಯೇಕವಾಗಿ ಹೇಳಬೇಕಾದ ಅಗತ್ಯವಿಲ್ಲ. ಒಂದು ಶಿಕ್ಷಣ ವ್ಯವಸ್ಥೆಯ ಭಾಗವಾಗಿ ಜ್ಞಾನ ಅಥವಾ ಮಾಹಿತಿ ಪಡೆಯುವವರಿಗಾಗಿ ತುಂಬ ಜಾಗರೂಕತೆಯಿಂದ ಪಠ್ಯಕ್ರಮವನ್ನು ರೂಪಿಸಬೇಕಾಗುತ್ತದೆ. ಈ ಪಠ್ಯಕ್ರಮದ ತಯಾರಿಕೆಯಲ್ಲಿ ಹಲವು ಚಿಂತನೆಗಳು, ವಿಷಯ ಜ್ಞಾನ, ಬೋಧನಾ ವಿಧಾನದ ಅರಿವು ಮುಂತಾದ ಅಂಶಗಳು ಆದ್ಯತೆಯನ್ನು ಪಡೆದುಕೊಳ್ಳುತ್ತವೆ. ಒಂದು ವಿಷಯದಲ್ಲಿ ಪಠ್ಯಕ್ರಮವನ್ನು ಸಿದ್ಧಪಡಿಸುವ ತಜ್ಞರು ತಮ್ಮ ಜ್ಞಾನಭಂಡಾರದಲ್ಲಿರುವ ಸಂಪತ್ತಿನಿಂದ ಸೂಕ್ತಭಾಗಗಳನ್ನು ತೆಗೆದು ವಿದ್ಯಾರ್ಥಿಗಳ ಬೌದ್ಧಿಕ ಮಟ್ಟಕ್ಕೆ ತಕ್ಕಂತೆ ಪಠ್ಯವನ್ನು ರೂಪಿಸಬೇಕಾಗುತ್ತದೆ. ಅಂದರೆ, ತಮಗೆ ತಿಳಿದಿರುವುದೆಲ್ಲವನ್ನೂ ಕಲಿಯುವವರಿಗೆ ವರ್ಗಾಯಿಸುವ ಭರದಲ್ಲಿ, ಉತ್ಸಾಹದಲ್ಲಿ ಆ ವಿದ್ಯಾರ್ಥಿಗಳ ಮಟ್ಟ, ಗ್ರಹಣ ಶಕ್ತಿಗಳನ್ನು ಮೀರಿದ ಪಠ್ಯವನ್ನು ತಯಾರಿಸುವ ಹಾಗಿಲ್ಲ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳಬೇಕಾದರೆ, ಪಠ್ಯಕ್ರಮದ ತಯಾರಿಕೆಯು ಪ್ರಾರಂಭದಿಂದ ಎಲ್ಲ ಹಂತಗಳಲ್ಲಿಯೂ ಒಂದು ಮಿತಿಗೆ ಒಳಪಟ್ಟಿರುತ್ತದೆ.

ಯಾವುದೇ ವಿಷಯವಾಗಲಿ ಅದಕ್ಕೆ ಸಂಬಂಧಪಟ್ಟ ಪಠ್ಯಪುಸ್ತಕವನ್ನು ಸಿದ್ಧಪಡಿಸುವವರು ಸಾಮಾನ್ಯವಾಗಿ ಸಂಬಂಧಪಟ್ಟ ಹಂತದಲ್ಲಿ ಬೋಧನೆ ಮಾಡುವವರು ಮತ್ತು ಕೆಲವರು ತಜ್ಞರು. ಅವರು ಈ ಉದ್ದೇಶಕ್ಕಾಗಿ ರಚಿಸುವ ಸಮಿತಿಗಳ ಸದಸ್ಯರಾಗಿರುತ್ತಾರೆ. ತಜ್ಞರ ವಿಷಯಜ್ಞಾನ ಮತ್ತು ಅಧ್ಯಾಪಕರ ಬೋಧನಾನುಭವ ಎರಡನ್ನೂ ಮೇಳವಿಸಿ ವಿದ್ಯಾರ್ಥಿಗಳಿಗೆ ಸೂಕ್ತವಾದ ಪಠ್ಯವನ್ನು ಸಿದ್ಧಪಡಿಸುವುದು ಸಾಧ್ಯವಾಗುತ್ತದೆಂಬ ನಂಬಿಕೆಯಿಂದ ಇಂಥ ಸಮಿತಿಗಳನ್ನು ರಚಿಸಲಾಗುತ್ತದೆ.

ಈ ಸಮಿತಿಗಳನ್ನು ಕೆಳ ಹಂತಗಳಲ್ಲಿ, ಅಂದರೆ, ಪದವಿ ಪೂರ್ವ ಶಿಕ್ಷಣದ ಹಂತದವರೆಗೂ ಸರ್ಕಾರಗಳ ಶಿಕ್ಷಣ ಇಲಾಖೆಗಳು ಮತ್ತು ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಸಂಬಂಧಪಟ್ಟ ವಿಭಾಗಗಳು ರಚಿಸುತ್ತವೆ. ಖಾಸಗೀಕರಣದ ಒಲವು

ಹೆಚ್ಚುತ್ತಿರುವ ಈ ದಿನಗಳಲ್ಲಿ, ಸರ್ಕಾರ ನಡೆಸುವ ಪರೀಕ್ಷೆಗಳನ್ನು ಎದುರಿಸುವ ಹಂತದಲ್ಲಿರದ ವಿದ್ಯಾರ್ಥಿಗಳಿಗಾಗಿ ಖಾಸಗಿ ಸಂಸ್ಥೆಗಳು ತಮ್ಮದೇ ಆದ ಪಠ್ಯಗಳನ್ನು ಹೊಂದಿರುವುದನ್ನೂ ಕಾಣಬಹುದು. ಬೋಧನಾನುಭವವುಳ್ಳ ಅಧ್ಯಾಪಕರೇ ಅವನ್ನು ಸಿದ್ಧಪಡಿಸುತ್ತಾರೆ. ಆದರೆ, ಇಂಥ ಸಂಸ್ಥೆಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆ ಸದ್ಯಕ್ಕಂತೂ, ಒಟ್ಟು ವಿದ್ಯಾರ್ಥಿಗಳ ಸಂಖ್ಯೆಗೆ ಹೋಲಿಸಿದರೆ ನಗಣ್ಯವೆನ್ನಬಹುದಾದಷ್ಟು ಕಡಿಮೆ.

ಇದುವರೆಗೂ ಪ್ರಸ್ತಾಪಿಸಿದ ಅಂಶಗಳಿಂದ ಸ್ಪಷ್ಟವಾಗುವ ಒಂದು ವಿಷಯವೆಂದರೆ, ಪಠ್ಯರಚನೆಯ ವಿಷಯದಲ್ಲಿ ಸಂಪೂರ್ಣ ಸ್ವಾತಂತ್ರ್ಯವೆಂಬುದು ಹೊಂದಿಕೆಯಾಗದ ಮಾತು. ಒಂದು ವ್ಯವಸ್ಥೆಯ ಭಾಗವಾಗಿ ನಡೆಯುವ ಬೋಧನಾ ಪ್ರಕ್ರಿಯೆಯಲ್ಲಿ ಪಠ್ಯರಚನೆಯಲ್ಲಿ ತೊಡಗಿರುವವರಿಗೆ ಸಂಪೂರ್ಣ ಸ್ವಾತಂತ್ರ್ಯವೆನ್ನುವುದು ವಾಸ್ತವಕ್ಕೆ ದೂರವಾದ ಸಂಗತಿ. ಅನೌಪಚಾರಿಕ ಶಿಕ್ಷಣವನ್ನು ನೀಡುವ ಸಂದರ್ಭದಲ್ಲಿ, ಅಂದರೆ ಉದಾಹರಣೆಗೆ ಮನೆಯಲ್ಲಿಯೇ ಪಾಠ ಹೇಳುವ ಏರ್ಪಾಟಿದ್ದಾಗ, ಅದು ಸಾಧ್ಯವಾದೀತೇನೋ! ಆದರೆ ಈಗ ಚರ್ಚೆಯಾಗುತ್ತಿರುವ ವಿಷಯ ಅದಲ್ಲ.

ಒಂದು ಪಠ್ಯದ ತಯಾರಿಕೆಯಲ್ಲಿ ಮೊದಲನೆಯದಾಗಿ ಗಣನೆಗೆ ತೆಗೆದುಕೊಳ್ಳಬೇಕಾದ ಅಂಶವೆಂದರೆ ಆ ಪಠ್ಯಕ್ರಮ ಯಾರಿಗಾಗಿ ಎಂಬುದು. ಅನಂತರ ಅವರಿಗೆ ಏನನ್ನು ಹೇಳಬೇಕು ಎಂಬುದು. ಏನನ್ನೇ ಆಗಲಿ ಕೆಲವು ಸ್ಪಷ್ಟ ಉದ್ದೇಶಗಳನ್ನು ಹೊಂದಿಯೇ ಬೋಧಿಸಬೇಕಾಗುತ್ತದೆ. ನಮ್ಮ ದೇಶದಲ್ಲಿ ಇದುವರೆಗೂ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ಹಲವು ಆಯೋಗಗಳು ರಚನೆಯಾಗಿವೆ. ಅವು ತಮ್ಮ ಸಲಹೆ ಸೂಚನೆಗಳನ್ನು ನೀಡಿವೆ. ಆ ಶಿಫಾರಸ್ಸುಗಳೆಲ್ಲವೂ ಕಾರ್ಯಗತವಾಗಿವೆಯೇ ಎಂದರೆ ಬರುವ ಉತ್ತರ ಇಲ್ಲ ಎನ್ನುವುದೇ ಆಗಿದೆ. ಆ ವಿಷಯ ಒತ್ತಟ್ಟಿಗಿರಲಿ. ಅಂಥ ಆಯೋಗಗಳು ಪ್ರಮುಖವಾಗಿ ಇಂದಿಗೂ ಹಲವಾರು ಬಾರಿ ಉಲ್ಲೇಖಿಸುವ ಒಂದು ಆಯೋಗವೆಂದರೆ ಕೊಠಾರಿ ಆಯೋಗ. ಈ ಆಯೋಗ ಹೇಳಿರುವ ಒಂದು ಮಾತು ಸಾಮಾನ್ಯವಾಗಿ ಎಲ್ಲರಿಗೂ ಬಾಯಿ ಪಾಠವಾಗಿದೆ. 'ಈ ದೇಶದ ಭವಿಷ್ಯತ್ತು ರೂಪಿತವಾಗುವುದು ಇಲ್ಲಿನ ಶಾಲೆಗಳ ತರಗತಿಗಳ ಕೋಣೆಗಳಲ್ಲಿ' ಎನ್ನುವ ಮಾತು ಕ್ಲೀಷೆಯಾಗುವ ಮಟ್ಟಿಗೆ ಮತ್ತೆ ಮತ್ತೆ ಜನರ ನಾಲಿಗೆಗಳ ಮೇಲೆ ಆಡುತ್ತಿರುತ್ತದೆ. ಆದರೂ ಇಂದಿಗೂ ಈ ಮಾತು ವಾಸ್ತವವಂತೂ ಹೌದು.

ದೇಶದ ಭವಿಷ್ಯ ರೂಪಿತವಾಗುವುದೆಂದರೆ ಅದಕ್ಕೆ ತಕ್ಕ ನಾಗರಿಕರು ರೂಪುಗೊಳ್ಳುವುದು ಎಂದು ಅರ್ಥ. ಅಂಥ ನಾಗರಿಕರನ್ನು ತಯಾರು ಮಾಡುವ ಒಂದು ಸಾಧನವೆಂದರೆ ಶಿಕ್ಷಣ. ೧೯೪೭ರಲ್ಲಿ ಭಾರತವು ತನ್ನ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಿತು. ಅನಂತರ ಬಹು ಬೇಗನೆ ಸಮಾಜದಲ್ಲಿನ ಅಸಮಾನತೆಗಳು, ಅನಿಷ್ಟಗಳು, ಅಪ್ರಜಾತಾಂತ್ರಿಕ ಧೋರಣೆಗಳನ್ನು ಮಟ್ಟ ಹಾಕಿ ಹೊಸ ಸಮಾಜವನ್ನು ಕಟ್ಟುವ ಕನಸನ್ನು ಹೊತ್ತ ಜನ ಈ ದೇಶವನ್ನು ಹೊಸ ದಾರಿಯಲ್ಲಿನಡೆಸಲು ಮಾರ್ಗಸೂಚಿಯಾದ ಸಂವಿಧಾನವನ್ನು ಸಿದ್ಧಪಡಿಸಿದರು. ಇಲ್ಲಿನ

ಅಸಮಾನತೆ, ಅನ್ಯಾಯಗಳ ಪರಿಣಾಮಗಳನ್ನು ಸ್ವತಃ ಅನುಭವಿಸಿದ, ಅದೇ ಸಮಯದಲ್ಲಿ ತಮ್ಮ ಪಾಂಡಿತ್ಯದ ಮೂಲಕ ಭಾರತೀಯ ಸಮಾಜವನ್ನು ಎಲ್ಲ ದೃಷ್ಟಿಗಳಿಂದಲೂ ಸ್ಪಷ್ಟವಾಗಿ ಅರ್ಥಮಾಡಿಕೊಂಡಿದ್ದ ಡಾ.ಬಿ.ಆರ್. ಅಂಬೇಡ್ಕರ್ ಅವರ ನೇತೃತ್ವದಲ್ಲಿ ಈ ಹೊಸ ಮಾರ್ಗಸೂಚಿ ಸಿದ್ಧವಾಯಿತು. ಸಂವಿಧಾನದಲ್ಲಿ ಉಲ್ಲೇಖಿತವಾದ ಮೌಲ್ಯಗಳೇ ಮುಂದೆ ಸಾಕಾರವಾಗುವ ನಿಟ್ಟಿನಲ್ಲಿ ಹೊಸ ಸಮಾಜ ರೂಪು ತಳೆಯಬೇಕಾಗಿತ್ತೆಂಬುದು ನಿರ್ವಿವಾದಾಂಶ.

ಆ ಹೊಸ ಸಮಾಜ ಹುಟ್ಟಿ ಬೆಳೆಯಬೇಕಾದರೆ ಉತ್ತಮ ಶಿಕ್ಷಣವೆಂಬ ಸ್ವಸ್ಥ ಬೀಜದ ಬಿತ್ತನೆಯಾಗಬೇಕಿತ್ತು. ಅದೇ ಉದ್ದೇಶದಿಂದಲೇ ಮುಂದೆ ಎನ್.ಸಿ.ಇ.ಆರ್.ಟಿ. ಎಂಬ ಸಂಸ್ಥೆಯು ಶಿಕ್ಷಣದ ಮೂಲಕ ಭಾರತದ ಯುವಜನರಲ್ಲಿ ಮೂಡಿಸಬೇಕಾದ ಮೌಲ್ಯಗಳನ್ನ ಸ್ಪಷ್ಟವಾಗಿ ಗುರುತಿಸಿದೆ. ಎನ್.ಸಿ.ಎಫ್.(ನ್ಯಾಷನಲ್ ಕರಿಕುಲಂ ಫ್ರೇಂ ವರ್ಕ್) ಎನ್ನುವ ಹೆಸರಿನಲ್ಲಿರುವ ಸೂಚನೆಗಳನ್ನು ಅನುಸರಿಸಿಯೇ ದೇಶದ ಯಾವುದೇ ಭಾಗದ ಪಠ್ಯವನ್ನು ಸಿದ್ಧಪಡಿಸಬೇಕೆಂಬುದು ಆಶಯ. ಮುಂಬರುವ ದಿನಗಳಲ್ಲಿ ಯಾವ ರೀತಿಯ ಸಮಾಜವಿರಬೇಕೆಂದು ನೀತಿನಿರೂಪಕರ ಇಚ್ಛೆಯಾಗಿರುತ್ತದೆಯೋ ಅಂಥ ಸಮಾಜದ ನಿರ್ಮಾಣಕ್ಕೆ ತಕ್ಕಂತೆ ಪಠ್ಯಕ್ರಮವನ್ನು ಸಿದ್ಧಪಡಿಸಬೇಕೆಂಬ ಸ್ಪಷ್ಟ ಗುರಿ ಈ ಪಠ್ಯಕ್ರಮವನ್ನು ಸಿದ್ಧಪಡಿಸುವವರದೆಂಬುದು ಸಾಮಾನ್ಯ ಗ್ರಹಿಕೆ. ಯಾವುದೇ ದೇಶವಾಗಲಿ ಅಲ್ಲಿನ ಆಳುವ ವರ್ಗಗಳು ಯುವಜನರಲ್ಲಿ ಮೂಡಿಸಬೇಕೆಂದು ಬಯಸುವ ಮೌಲ್ಯಗಳಿಗೆ ಅನುಗುಣವಾದ ಅಂಶಗಳನ್ನು ಪಠ್ಯದಲ್ಲಿಸೇರಿಸುವ ಯತ್ನ ನಡೆಯುತ್ತದೆ. ಆಧುನಿಕ ಭಾರತದ ಸಂವಿಧಾನದಲ್ಲಿ ನಿಗದಿಯಾಗಿರುವ ಮೌಲ್ಯಗಳ ವಿರುದ್ಧವಿರುವ ಅಂಶಗಳನ್ನು ಹರಡಲು ತಾಂತ್ರಿಕವಾಗಿ ಸಾಧ್ಯವಿಲ್ಲವೆಂಬುದು ಸಮಾಧಾನದ ಸಂಗತಿ. ಏಕೆಂದರೆ, ಇಲ್ಲಿನ ಆಳುವವರೆಲ್ಲರಿಗೂ ಒಂದು ಸ್ವಸ್ಥ ಸಮಾಜ ಇಲ್ಲಿ ನಿರ್ಮಾಣವಾಗಬೇಕೆಂಬ ಆಸ್ಥೆಯೇನೂ ಇಲ್ಲ. ಕಾರಣ, ಅವರಲ್ಲಿ ಬಹುಪಾಲು ಜನ ಯಥಾಸ್ಥಿತಿವಾದಿಗಳು. ಹಳೆಯ ರೀತಿಯ ಸಾಮಾಜಿಕ ಸಂರಚನೆಯೇ ಮುಂದುವರೆದರೆ ಅವರ ಅಧಿಕಾರ ಮತ್ತು ಪ್ರಾಬಲ್ಯ ಹಾಗೆಯೇ ಉಳಿಯುತ್ತವೆ. ಆದರೆ ಈ ಮಾತನ್ನು ಅವರು ಬಹಿರಂಗವಾಗಿ ಹೇಳುವ ಹಾಗಿಲ್ಲ ಮತ್ತು ಅವರು ಪ್ರಗತಿಪರತೆಯ ಮುಖವಾಡವನ್ನು ಧರಿಸುವುದು ರಾಜಕೀಯ ಅನಿವಾರ್ಯತೆ. ಹಾಗಾಗಿ ಸಂವಿಧಾನದ ಮೌಲ್ಯಗಳನ್ನು ಪ್ರತಿಫಲಿಸುವ ಎನ್.ಸಿ.ಎಫ್.ನ ಸೂಚನೆಗಳನ್ನು ವಿರೋಧಿಸಿ ಅವರು ಯಾವ ನಿಲುವನ್ನೂ ತೆಗೆದುಕೊಳ್ಳಲು ಬರುವುದಿಲ್ಲ. ಆದರೂ, ಆಗಾಗ ತಮಗೆ ಸಾಧ್ಯವಾದ ಮಟ್ಟಿಗೆ ಈ ವಿಷಯದಲ್ಲಿ ತಲೆ ಹಾಕುತ್ತಲೇ ಇರುತ್ತಾರೆ. ಕೇಂದ್ರ ಮತ್ತು ಕರ್ನಾಟಕವೂ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ವಿವಿಧ ಸಂದರ್ಭಗಳಲ್ಲಿ ಅಧಿಕಾರವನ್ನು ಹಿಡಿದ ಬಲಪಂಥೀಯ ಶಕ್ತಿಗಳು ಇಂಥ ಪ್ರಯತ್ನಗಳನ್ನು ನಡೆಸಿರುವ ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ. ಇಂಥ ಯತ್ನಗಳಿಗೆ ಸಾಕಷ್ಟು ಪ್ರತಿರೋಧ ವ್ಯಕ್ತವಾಗಿದ್ದನ್ನೂ ಕಂಡಿದ್ದೇವೆ. ಈ

ಹಿನ್ನಲೆಯಲ್ಲಿಯೇ ಪಠ್ಯರಚನಾ ಸ್ವಾತಂತ್ರ್ಯದಂಥ ವಿಷಯಗಳು ಚರ್ಚೆಗೆ ಬರುವುದನ್ನು ನೋಡಬಹುದು.

ಬ್ರಿಟಿಷರು ಈ ದೇಶವನ್ನು ಆಕ್ರಮಿಸಿಕೊಳ್ಳುವ ಮುನ್ನ ಇಲ್ಲಿಯದೇ ಆದ ಬೋಧನಾ ವ್ಯವಸ್ಥೆ ಇತ್ತು. ಆದರೆ ಆ ವ್ಯವಸ್ಥೆಯ ಪಾಲುದಾರರು ಮಾತ್ರ ಇಲ್ಲಿನ ಮೇಲು ಜಾತಿ, ಮೇಲು ವರ್ಗದವರು ಮಾತ್ರವಾಗಿದ್ದರು. ಇತರರಿಗೆ ಅದರಲ್ಲಿ ಪ್ರವೇಶವೇ ಇರಲಿಲ್ಲ. ಗುರುಕುಲಗಳೆಂದು ಕರೆಯಲಾಗುತ್ತಿದ್ದ ಈ ಬೋಧನಾ ಕೇಂದ್ರಗಳಲ್ಲಿನ ಬೋಧಕರು ಹಾಗೂ ಬೋಧನೆಯನ್ನು ಪಡೆಯುವವರು ಎಲ್ಲರೂ ಕೇವಲ ಇಲ್ಲಿನ ಮೇಲ್ಸ್ತರದ ಜನರೇ ಆಗಿದ್ದರು. ಈ ವ್ಯವಸ್ಥೆಯು ಒಂದು ರೀತಿಯಲ್ಲಿ ಸಂಪೂರ್ಣವಾಗಿ ಖಾಸಗಿ ವ್ಯಕ್ತಿಗಳ ಕೈಯಲ್ಲಿಯೇ ಇತ್ತು. ಪ್ರಾಚೀನ ಭಾರತದ ನಳಂದಾ, ತಕ್ಷಶಿಲಾಗಳಂಥ ವಿದ್ಯಾ ಕೇಂದ್ರಗಳನ್ನು ಹೊರತು ಪಡಿಸಿದರೆ ಹೆಚ್ಚಾಗಿ ಅಧ್ಯಯನ ಮತ್ತು ಅಧ್ಯಾಪನ ನಡೆಯುತ್ತಿದ್ದದ್ದು ಈ ಗುರುಕುಲಗಳಲ್ಲಿಯೇ. ಬ್ರಾಹ್ಮಣ, ಕ್ಷತ್ರಿಯೇತರರು ಈ ದೇಶದ 'ಧರ್ಮಗ್ರಂಥಗಳ' ಆಣತಿಯಂತೆ ಈ ಗುರುಕುಲಗಳಿಂದ ದೂರವಿರಬೇಕಾಗಿತ್ತು. ಇಲ್ಲಿ ನೀಡಲಾಗುತ್ತಿದ್ದ ಶಿಕ್ಷಣವೂ ವೇದ, ಉಪನಿಷತ್ತುಗಳು, ಜ್ಯೋತಿಷ ಮುಂತಾದ ವಿಷಯಗಳಿಂದಲೇ ತುಂಬಿದ್ದವು. ಅವು ಮಾತ್ರ ವಿದ್ಯೆ ಅನ್ನಿಸಿಕೊಂಡಿದ್ದು, ಶಾಸ್ತ್ರಗಳ ಮಾನ್ಯತೆಯನ್ನು ಪಡೆಯದ ಇತರ ವಿಷಯಗಳು 'ಅವಿದ್ಯೆ' ಆಗಿದ್ದವು. ಸಮಾಜದ ಸೀಮಿತ ವರ್ಗಗಳಿಗೆ ನೀಡಲಾಗುತ್ತಿದ್ದ ವಿದ್ಯೆಯೂ ಹೀಗೆ ಸೀಮಿತವಾದಂಥದೇ ಆಗಿತ್ತು. ಇದಕ್ಕೆ ಕಾರಣ, ಸನಾತನವೆಂದು ಕರಯಿಸಿಕೊಳ್ಳುತ್ತಿದ್ದ ಧರ್ಮದ ಆಧಾರದ ಮೇಲೆ ಕಟ್ಟಲಾಗಿದ್ದ ಭಾರತೀಯ ಸಮಾಜವು ಅದೇ ರೀತಿಯಲ್ಲಿಯೇ ಮುಂದುವರೆಯುವುದೇ ಆಗಿನ ಅರಸೊತ್ತಿಗೆ ಮತ್ತು ಪುರೋಹಿತಶಾಹಿಗಳಿಗೆ ಬೇಕಾಗಿತ್ತು. ಅಂಥ ಶ್ರೇಣಿಕೃತ ವ್ಯವಸ್ಥೆಯನ್ನು ಉಳಿಸುವ, ಬೆಳೆಸುವ ಶಿಕ್ಷಣವನ್ನೇ ಅವರು ಯುವಜನರಿಗೆ ನೀಡುತ್ತಿದ್ದುದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಹೀಗೆ ಶಿಕ್ಷಣವು ಮೇಲು ಜಾತಿ, ಮೇಲು ವರ್ಗಗಳ ಸ್ವತ್ತು ಎಂದಾದ ಮೇಲೆ ಇನ್ನು ಪಠ್ಯರಚನಾ ಸ್ವಾತಂತ್ರ್ಯವೆಲ್ಲಿ ಬರಬೇಕು?

ಈ ಪರಿಸ್ಥಿತಿಯಲ್ಲಿ ಸ್ವಲ್ಪ ಬದಲಾವಣೆ ಬಂದದ್ದು ಬ್ರಿಟಿಷರು ವ್ಯಾಪಾರದ ನೆಪದಲ್ಲಿ ಈ ದೇಶದೊಳಗೆ ಪ್ರವೇಶಿಸಿದನಂತರ. ಶಿಕ್ಷಣವೆಂಬ ಪ್ರಕ್ರಿಯೆ ಕೆಲವೇ ವ್ಯಕ್ತಿಗಳ ಕೈಗಳಿಂದ ಬಿಡುಗಡೆಗೊಂಡು ಶಾಲೆಗಳು, ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳಂಥ ಸಂಸ್ಥೆಗಳ ಮೂಲಕ ನಡೆಯುವಂತಾಯಿತು. ಇದರ ಅತಿ ಮುಖ್ಯ ಪರಿಣಾಮವೆಂದರೆ ಶಿಕ್ಷಣವು ಸಮಾಜದ ಎಲ್ಲ ವರ್ಗಗಳ, ಜಾತಿಗಳ ಜನಗಳಿಗೂ ಸಿಗುವಂತಾಯಿತು. ಪ್ರಾರಂಭದಲ್ಲಿ ಇದು ತಾಂತ್ರಿಕವಾದ ಮಾತು ಮಾತ್ರವಾಗಿದ್ದರೂ ಕಾಲಕ್ರಮೇಣ ನಿಜವೂ ಆಯಿತು. ಭಾರತದಲ್ಲಿ ಈ ವ್ಯವಸ್ಥೆಯ ಮೂಲಪುರುಷನಾಗಿ ಸರ್ ಥಾಮಸ್ ಮೆಕಾಲೆಯನ್ನು ಹೆಸರಿಸುವುದಿದೆ. ೧೮೩೫ರ ಮೆಕಾಲೇಸ್ ಮಿನಿಟ್('ಮೆಕಾಲೆಯ ಟಿಪ್ಪಣಿ') ತನ್ನ ಸಾಮ್ರಾಜ್ಯಶಾಹಿ ಆಶಯಗಳನ್ನು

ಮುಚ್ಚು ಮರೆಯಿಲ್ಲದೆ ಪ್ರಕಟಿಸಿದೆ. ರೂಪ ಹಾಗೂ ಬಣ್ಣದಲ್ಲಿ ಭಾರತೀಯರಾಗಿಯೇ ಉಳಿಯುವ ಆದರೆ ಚಿಂತನೆಯಲ್ಲಿ ಮಾತ್ರ ಬ್ರಿಟಿಷರಂತಾಗುವ, ಅಂದರೆ ಅವರ ಚಿಂತನೆಗಳನ್ನು ಒಪ್ಪುವ ಮನಃಸ್ಥಿತಿಯ ವ್ಯಕ್ತಿಗಳನ್ನು ರೂಪಿಸುವ ಉದ್ದೇಶವನ್ನು ಸ್ಪಷ್ಟವಾಗಿ ಆ ಟಿಪ್ಪಣಿ ಹೊರಗೆಡಹಿದೆ. ಅಂದಿನ ಆಳುವವರಿಗೆ ಬೇಕಾಗಿದ್ದು ತಮ್ಮ ಮಾತುಗಳನ್ನು ಎದುರಾಡದೆ ಒಪ್ಪಿಕೊಳ್ಳುವ, ಸರ್ಕಾರಿ ಕಛೇರಿಗಳಲ್ಲಿ ಕಾರಕೂನರಾಗಲು ತಯಾರಾಗಿರುವ ಜನ. ಅದೇ ರೀತಿ ಹಲವರು ತಯಾರಾದರು ಕೂಡ. ಈ ಹೊಸ ಸನ್ನಿವೇಶದ ಭಾಗವಾಗಬೇಕೆಂದು, ಅದರ ಲಾಭ ಪಡೆಯಬೇಕೆಂದು ಚಡಪಡಿಸುವ ಜನ ಇದ್ದರು. ಅವರು ಹೆಚ್ಚಾಗಿ ಹಿಂದಿನ ವ್ಯವಸ್ಥೆಯ ಲಾಭ ಪಡದುಕೊಂಡವರೇ ಆಗಿದ್ದರು. ಇಂಥ ಪರಿಸ್ಥಿಯಲ್ಲಿಯೂ ಪಾಶ್ಚಾತ್ಯ ಶಿಕ್ಷಣ ಪದ್ಧತಿಯ ಒಂದು ಪರಿಣಾಮವಾದ ಉದಾರವಾದಿ ಮನೋಧರ್ಮವನ್ನು ಬೆಳೆಸಿಕೊಂಡವರ ಮತ್ತು ಸಮಾಜ ಪರಿವರ್ತನೆಯ ಆಶಯವನ್ನು ಹೊತ್ತಿದ್ದ ಕೆಲವರ ಪ್ರಯತ್ನಗಳಿಂದಾಗಿ(ಉದಾ: ಜ್ಯೋತಿಬಾ ಫುಲೆ) ವಿದ್ಯೆಯಿಂದ ವಂಚಿತರಾಗಿದ್ದವರಿಗೂ ವಿದ್ಯೆ ಸಿಗುವಂತಾಯಿತು. ಆದರೆ ಅಂದು ಸಿದ್ಧವಾಗುತ್ತಿದ್ದ ಪಠ್ಯಗಳಲ್ಲಿ ಸಾಮ್ರಾಜ್ಯಶಾಹಿಗಳಿಗೆ ಅನುಕೂಲವಾಗುವ ಅಂಶಗಳಿರುತ್ತಿದ್ದವು ಎಂದು ಬೇರೆ ಹೇಳ ಬೇಕಾಗಿಲ್ಲ. ವಿಪರ್ಯಾಸವೆಂದರೆ ಈ ಶಿಕ್ಷಣವನ್ನು ಪಡೆದ ಕೆಲವರು ತಾವು ಸಂಪಾಸಿದಿಸಿದ ಜ್ಞಾನ, ಇಂಗ್ಲಿಷ್ ಭಾಷೆಯ ಮೇಲಿನ ಪ್ರಭುತ್ವವನ್ನು ಬಳಸಿ ಅದೇ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಡಿದರು.

ಪಾಶ್ಚಾತ್ಯ ದೇಶಗಳಲ್ಲಿನ ಪರಿಸ್ಥಿತಿ ಇದಕ್ಕಿಂತಲೂ ಹೆಚ್ಚೇನೂ ಭಿನ್ನವಾಗಿರಲಿಲ್ಲ. ಅಲ್ಲಿಯೂ ಚರ್ಚಿನ ಪ್ರಾಬಲ್ಯವೇ ಮೆರೆದಷ್ಟು ದಿನ ಪುರೋಹಿತಶಾಹಿಯ ಒಪ್ಪಿಗೆ ಪಡೆದ ವಿಷಯಗಳೇ ಜ್ಞಾನವೆನಿಸಿಕೊಳ್ಳುತ್ತಿದ್ದವು. ಉದಾಹರಣೆಗೆ, ಹಿಂದಿನಿಂದಲೂ ಅಲ್ಲಿಯ ಜನರು ಭೂಮಿಯೇ ವಿಶ್ವದ ಕೇಂದ್ರವೆಂದೂ ಸೂರ್ಯನನ್ನೂ ಒಳಗೊಂಡಂತೆ ಎಲ್ಲ ಆಕಾಶಕಾಯಗಳೂ ಭೂಮಿಯ ಸುತ್ತಲೂ ಸುತ್ತುತ್ತಿರುತ್ತವೆಂದು ನಂಬಿದ್ದರು. ಈ ನಂಬಿಕೆ ಚರ್ಚಿಗೂ ಅನುಕೂಲಕರವಾಗಿತ್ತು. ವಿಶ್ವದ ಕೇಂದ್ರವಾದ ಭೂಮಿಯ ಅಧಿಕಾರ ಕೇಂದ್ರದಲ್ಲಿದ್ದ ಚರ್ಚಿನ ಯಜಮಾನಿಕೆಯನ್ನು ಪ್ರಶ್ನಿಸುವ ಹಾಗಿರಲಿಲ್ಲ. ಆದರೆ, ವಿಶ್ವದ ಕೇಂದ್ರ ಭೂಮಿ ಅಲ್ಲ, ಸೂರ್ಯ ಎನ್ನುವ ಹೊಸ ವಿಷಯ ಜನರ ನಡುವೆ ಹರಡಿದಾಗ ಆ ಮಾತನ್ನು ಒಪ್ಪಲು ಚರ್ಚ್ ಸಿದ್ಧವಿರಲಿಲ್ಲ. ಕೊಪರ್ನಿಕಸ್‌ನ ಅನಂತರ ಈ ವಿಷಯವನ್ನು ಬಲವಾಗಿ ಪ್ರತಿಪಾದಿಸುತ್ತಿದ್ದ ಗಿಯೊರ್ಡಾನೊ ಬ್ರೂನೊನನ್ನು ಜೀವಂತ ಸುಟ್ಟಿತು. ತನ್ನ ದೂರದರ್ಶಕ ಯಂತ್ರದ ನೆರವಿನೊಂದಿಗೆ ಈ ಹೊಸ ಸಿದ್ಧಾಂತವನ್ನು ಸಾಬೀತು ಮಾಡಲು ಹೊರಟ ಗೆಲಿಲಿಯೋನನ್ನು ಬಂಧನದಲ್ಲಿಟ್ಟಿತು. ಆದರೆ, ಹೊಸ ಆವಿಷ್ಕಾರಗಳಿಗೆ ಅಡ್ಡಿಪಡಿಸಲು ಈ ಸ್ಥಾಪಿತ ಹಿತಾಸಕ್ತಿಗಳಿಗೆ ಬಹು ಕಾಲ ಸಾಧ್ಯವಾಗಲಿಲ್ಲವೆನ್ನುವುದು ಈಗ ಇತಿಹಾಸ.

೧೯೪೭ರ ಅನಂತರದ ಬೆಳವಣಿಗೆಗಳ ಕಡೆಗೆ ಮತ್ತೆ ಗಮನ ಹರಿಸೋಣ. ಆ ಸಮಯದ ಅತಿ ಪ್ರಮುಖ ಸಂಗತಿ ಎಂದರೆ ಹಿಂದಿನದಕ್ಕಿಂತಲೂ ತೀರ ಭಿನ್ನವಾದ ಸಮಾಜದ ರಚನೆಯ ಗುರಿಯುಳ್ಳ ಸಂವಿಧಾನ ಸಿದ್ಧವಾಗಿದ್ದು, ಈ

ದೇಶದಲ್ಲಿ ರಾಜಕೀಯವಾಗಿ, ಸರ್ಕಾರದ ಮಟ್ಟದಲ್ಲಿ, ತೆಗೆದುಕೊಳ್ಳುವ ಯಾವುದೇ ಕ್ರಮವಾಗಲಿ ಸಾಂವಿಧಾನಿಕ ಮೌಲ್ಯಗಳನ್ನೇ ಎತ್ತಿ ಹಿಡಿಯಬೇಕು. ಆಳುವ ವರ್ಗಗಳಿಗೆ, ಇಷ್ಟವಿರಲಿ ಇಲ್ಲದಿರಲಿ ಸಂವಿಧಾನದ ದಾರಿಯಲ್ಲಿಯೇ ನಡೆಯಬೇಕು. ಈ ಸೂಚನೆಗಳ ಬೆಳಕಿನಲ್ಲಿಯೇ ಎನ್.ಸಿ.ಎಫ್.ನ ಮಾರ್ಗಸೂಚಿಯು ಸಿದ್ಧವಾಗಿದ್ದು ಅದನ್ನು ಪರಿಶೀಲಿಸಿದರೆ ಆ ನೀತಿ ನಿರೂಪಕರ ಗುರಿ ಏನು ಎಂಬುದು ಸ್ಪಷ್ಟವಾಗುತ್ತದೆ.

ಎನ್.ಸಿ.ಎಫ್.ನ ಪ್ರಮುಖ ಗುರಿ, ಸಂವಿಧಾನದ ಆಶಯಗಳ ಮೇರೆಗೆ ರಾಷ್ಟ್ರದ ಅಭಿವೃದ್ಧಿಗೆ ಪೂರಕವಾದ ಶಿಕ್ಷಣ ವ್ಯವಸ್ಥೆ ಮತ್ತು ಅಂಥ ವ್ಯವಸ್ಥೆಯ ಸೃಷ್ಟಿಗೆ ಅಗತ್ಯವಾದ ಪಠ್ಯಕ್ರಮವನ್ನು ರೂಪಿಸುವುದು. ಸಂವಿಧಾನದ ಆಶಯಗಳಲ್ಲಿ ಅತ್ಯಂತ ಪ್ರಮುಖವಾದದ್ದು ದೇಶದ ವಿಭಿನ್ನ ಸಂಸ್ಕೃತಿಗಳನ್ನು ಗೌರವಿಸುತ್ತ ಸಮಾನತೆಯ ಆಧಾರದ ಮೇಲೆ ಮತಧರ್ಮ ನಿರಪೇಕ್ಷ, ಜನತಾಂತ್ರಿಕ ಸಮಾಜದ ನಿರ್ಮಾಣ. ಈ ಗುರಿಯನ್ನು ಮುಟ್ಟಬೇಕಾದರೆ ಮುಖ್ಯವಾಗಿ ಸಾಧಿಸಬೇಕಾಗಿರುವುದು ಸಾಮಾಜಿಕ ನ್ಯಾಯ. ಶತಮಾನಗಳ ಕಾಲದಿಂದಲೂ ಇಲ್ಲಿ ಅದಕ್ಕೇ ಕೊರತೆ.

ಇಂಥ ಸಮಾಜದಲ್ಲಿ ಪರಂಪರೆಯೆಂಬ ಹೆಸರಿನಲ್ಲಿ ಚಾಲ್ತಿಯಲ್ಲಿರುವ ಸಂಕೋಲೆಗಳಿಂದ ಬಿಡಿಸಿಕೊಳ್ಳಬಲ್ಲ, ಇತರರ ಚಿಂತನಗಳಿಗೆ ಸ್ಪಂದಿಸುವ ಶಕ್ತಿಯುಳ್ಳ, ಇತರರ ಅಭಿವೃದ್ಧಿಯನ್ನು ಸ್ವಾಗತಿಸುವ ಮನಸ್ಸುಗಳ ಅವಶ್ಯಕತೆ ಇದೆ. ಈ ರೀತಿಯ ಮನೋಭಾವದವರೇ ಹೊಸ ಸನ್ನಿವೇಶಗಳಿಗೆ ಸೂಕ್ತವಾಗಿ, ಕ್ರಿಯಾಶೀಲವಾಗಿ ಪ್ರತಿಕ್ರಿಯಿಸಬಲ್ಲರು; ಪ್ರಜಾತಾಂತ್ರಿಕತೆಯನ್ನು ಜೀವನದ ಅತ್ಯಂತ ಪ್ರಮುಖ ಮೌಲ್ಯವೆಂದು ಒಪ್ಪಿಕೊಂಡು ವ್ಯಕ್ತಿಗಳ ನಡುವೆ ಪ್ರಜಾತಾಂತ್ರಿಕ ಸಂಬಂಧಗಳನ್ನು ಸೃಷ್ಟಿಸಬಲ್ಲರು. ಆರ್ಥಿಕ ಪ್ರಗತಿಯೂ ಸೇರಿದಂತೆ ಎಲ್ಲ ರೀತಿಯ ಸಾಮಾಜಿಕ ಬದಲಾವಣೆಗಳನ್ನು ಸ್ವಾಗತಿಸುವ, ಸಮಾನತೆಯ ಬಗ್ಗೆ ಒಲವುಳ್ಳವರು ಮಾತ್ರ ಇದನ್ನು ಸಾಧಿಸಬಲ್ಲರು.

ಎನ್.ಸಿ.ಎಫ್. ಪ್ರಕಟಿಸಿದ ಆಶಯಗಳು ನಮ್ಮ ಸಂವಿಧಾನ ನಿಗದಿಗೊಳಿಸಿರುವ ಚೌಕಟ್ಟಿನೊಳಗೇ ಇರುವುದರಿಂದ ಯಾವುದೇ ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿನ ಪಠ್ಯಕ್ರಮವೇ ಆಗಲಿ ಈ ಚೌಕಟ್ಟನ್ನು ಮೀರಿ ಈ ಆಶಯಗಳಿಗೆ ವಿರುದ್ಧ ದಿಕ್ಕಿನಲ್ಲಿ ನಡೆಯುವುದು ಅಸಾಂವಿಧಾನಿಕ ಹೆಜ್ಜೆ ಎನಿಸುತ್ತದೆ. ಅಂಥ ಪ್ರಯತ್ನಗಳು ಎಲ್ಲಿಯಾದರೂ ನಡೆದರೆ ಅವು ನಾಗರಿಕ ಸಮಾಜದ ತೀವ್ರ ಪ್ರತಿರೋಧವನ್ನು ಎದುರಿಸಬೇಕಾಗುತ್ತದೆ. ಹೀಗಾಗಿ, ಪಠ್ಯಕ್ರಮವನ್ನು ರೂಪಿಸುವ ಜವಾಬ್ದಾರಿ ಇರುವ ಯಾರೇ ಆಗಲಿ ಈ ಚೌಕಟ್ಟಿನಲ್ಲಿಯೇ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಅವರಿಗೆ ಈ ಸಾಂವಿಧಾನಿಕ ಆಶಯಗಳ ಬಗ್ಗೆ ಯಾವುದೇ ವಿರೋಧವಿಲ್ಲದಿದ್ದರೆ ಯಾವುದೇ ಸಮಸ್ಯೆ ಇಲ್ಲ. ಒಂದು ವೇಳೆ ಅವುಗಳ ವಿರುದ್ಧ ದಿಕ್ಕಿನಲ್ಲಿ ಚಿಂತಿಸುವವರು ತಮಗೆ ಇಷ್ಟಬಂದಂತೆ ವಿಷಯಗಳನ್ನು ಸೇರ್ಪಡಿಸುವ ಹಾಗಿಲ್ಲ.

ಸ್ವಾತಂತ್ರ್ಯವಿಲ್ಲ, ಒಂದು ಚೌಕಟ್ಟಿನ ಒಳಗೇ ಕೆಲಸ ಮಾಡಬೇಕು ಎಂದಾಕ್ಷಣ ಗಾಬರಿಯಾಗಬೆಕಿಲ್ಲ. ಈ ಮಿತಿಗಳನ್ನು ಹಾಕಿಕೊಂಡೇ ಪ್ರಗತಿಪರವಾದ ತಿಳಿವಳಿಕೆಯನ್ನು

ವಿದ್ಯಾರ್ಥಿಗಳಲ್ಲಿ ಉಂಟುಮಾಡಬಹುದು. ಹಾಗೆ ಮಾಡುವುದು ಈಗಿನ ಸನ್ನಿವೇಶದಲ್ಲಿಯಂತೂ ಇನ್ನೂ ಮುಖ್ಯ. ಏಕೆಂದರೆ, ಮೇಲ್ನೋಟಕ್ಕೆ ಜನಮುಖಿ, ಪ್ರಗತಿಪರ ಎಂದು ಕಾಣುವ ಇಂಥ ನೀತಿಗಳ ನೆರಳಿನಲ್ಲಿಯೇ ಸರ್ವಾಧಿಕಾರಿ ಶಕ್ತಿಗಳು ಮೆರೆಯಬಹುದು. ಉದಾಹರಣೆಗೆ, ಜಾಗತೀಕರಣದ ಒಪ್ಪಿತ ಮೌಲ್ಯವಾಗಿರುವ ಈ ದಿನಗಳಲ್ಲಿ ಪ್ರಜಾತಂತ್ರ, ಮುಕ್ತತೆ, ಸ್ವಾತಂತ್ರ್ಯಗಳ ಹೆಸರಿನಲ್ಲಿ ಮುಕ್ತ ವ್ಯವಹಾರ(ಫ್ರೀ ಎಂಟರ್‌ಪ್ರೈಸ್) ಎನ್ನುವ ಪರಿಕಲ್ಪನೆಗೆ ಹೆಚ್ಚಿನ ಮಾನ್ಯತೆ ದೊರಕುತ್ತಿದೆ. ಈ ಪರಿಕಲ್ಪನೆಯನ್ನು ಬೆಂಬಲಿಸುವವರು ಇದರಿಂದ ಲಾಭ ಪಡೆಯುವವರು ಮಾತ್ರ. ಈ ಮುಕ್ತ ವ್ಯವಹಾರಕ್ಕೆ ಮತ್ತೊಂದು ಹೆಸರು ಮುಕ್ತ ಮಾರುಕಟ್ಟೆ. ಅಂದರೆ ಮಾರುಕಟ್ಟೆ ಶಕ್ತಿಗಳು ವ್ಯಾಪಾರ, ವಹಿವಾಟಿನ ದಿಕ್ಕನ್ನು ನಿರ್ಣಯಿಸುತ್ತವೆ. ಆದರೆ ಮುಕ್ತ ಎಂದು ಕರೆಯಿಸಿಕೊಳ್ಳುವ ಈ ಮಾರುಕಟ್ಟೆ ಎಷ್ಟರಮಟ್ಟಿಗೆ ಮುಕ್ತ ಎಂಬುದು ಪ್ರಶ್ನೆ. ಬಂಡವಾಳಶಾಹಿಗಳು ದೇಶದ ಆರ್ಥಿಕ ಆಗುಹೋಗುಗಳಲ್ಲಿ ತಮಗೆ ಪೂರ್ಣ ಸ್ವಾತಂತ್ರ್ಯವಿರಬೇಕೆಂದು ಬಯಸುತ್ತಾರೆ. ಜನಪ್ರತಿನಿಧಿಗಳು ಎಂದು ತಮ್ಮನ್ನು ತಾವು ಕರೆದುಕೊಳ್ಳುವವರಿಂದ ತುಂಬಿದ ಸರ್ಕಾರ ಈ ಮಾತಿಗೆ ತಲೆಬಾಗುತ್ತದೆ. ಆದರೆ ಇದೇ ಬಂಡವಾಳಶಾಹಿಗಳಿಗೆ ತಮ್ಮ ವ್ಯವಹಾರದಲ್ಲಿ ನಷ್ಟ ಉಂಟಾದಾಗ ಅಥವಾ ಸಮಸ್ಯೆಗಳು ತಲೆದೂರಿದಾಗ ಸರ್ಕಾರದ ನೆರವು ಬೇಕು. ಆದರೆ ಜನಸಾಮಾನ್ಯರ ಬದುಕನ್ನು ತಟ್ಟುವ ವಿಷಯಗಳಲ್ಲಿ ಮಾತ್ರ ಈ ಮುಕ್ತ ವ್ಯವಹಾರವಾದಿಗಳು ಸರ್ಕಾರ ಎಲ್ಲ ಕ್ಷೇತ್ರಗಳಿಂದ ಹೊರನಡೆದು ಅಲ್ಲಿ ಬಂಡವಾಳಶಾಹಿಗಳಿಗೆ ದಾರಿ ಮಾಡಿಕೊಡಬೇಕೆಂದು ಬಯಸುತ್ತಾರೆ. ಆದರೆ ಮಾರುಕಟ್ಟೆ ಎಂಬ ಅಮೂರ್ತ ಶಕ್ತಿಯೇ ಎಲ್ಲವನ್ನು ನಡೆಯಿಸುತ್ತದೆ ಎನ್ನುವುದು ಸುಳ್ಳು ಮಾತು; ಅಲ್ಲಿ ಕೆಲಸ ಮಾಡುವುದು ಲಾಭದ ಕಡೆಯೇ ದೃಷ್ಟಿನೆಟ್ಟಿರುವ ದೊಡ್ಡ ವ್ಯಾಪಾರಸ್ಥರು. ಎನ್.ಸಿ.ಎಫ್.ನಲ್ಲಿ ಹೇಳಿರುವ ಸ್ವತಂತ್ರವಾಗಿ ಯೋಚಿಸುವ ಶಕ್ತಿಯ ಪಾತ್ರ ಇಲ್ಲಿ ಪ್ರಸ್ತುತವಾಗುತ್ತದೆ. ನಮ್ಮ ಸುತ್ತಲೂ ಕೆಲವು ಗ್ರಹೀತ ಪರಿಕಲ್ಪನೆಗಳು ಹಾರಾಡುತ್ತಿರುತ್ತವೆ. ಅವುಗಳ ಸತ್ಯಾಸತ್ಯತೆಯ ಬಗ್ಗೆ, ಸಾಧ್ಯತೆಗಳ ಬಗ್ಗೆ ಹೇಳುತ್ತಾ, ಅಧಿಕಾರಸ್ಥರು (ಸರ್ಕಾರ ಮಾತ್ರವಲ್ಲ) ನಮ್ಮ ಬುದ್ಧಿಯ ಮೇಲೆ ಸವಾರಿಮಾಡುತ್ತಲೇ ಇರುತ್ತಾರೆ. ಇಂಥ ಸಂದರ್ಭಗಳಲ್ಲಿಯೇ ಮುಕ್ತ ಚಿಂತನೆಯ, ವೈಚಾರಿಕ ಪ್ರಜ್ಞೆಯ ಲಾಭಗಳನ್ನು ಶೈಕ್ಷಣಿಕ ವಲಯ ಪಡೆದುಕೊಳ್ಳಬೇಕಾಗಿದೆ. ಈ ಗ್ರಹೀತಗಳನ್ನು ಪ್ರಶ್ನಿಸಿ, ಅವುಗಳ ಪೊಳ್ಳುತನವನ್ನು ಬಯಲಿಗೆಳೆಯಬೇಕಾಗಿದೆ. ಹಾಗೆ ಮಾಡಿದಾಗ ಮಾತ್ರ ನಿಜವಾದ ಅರ್ಥದಲ್ಲಿ ಪಠ್ಯಗಳು ಪ್ರಗತಿಪರವೂ, 'ಸ್ವತಂತ್ರವೂ' ಆಗಿರಲು ಸಾಧ್ಯ.

ಈ ಸಂದರ್ಭದಲ್ಲಿ ಬ್ರೆಜಿಲ್‌ನ ಪ್ರಖ್ಯಾತ ಶಿಕ್ಷಣತಜ್ಞ ಪಾಲೋ ಫ್ರೇಯರಿ ಶಿಕ್ಷಣದ ಬಗ್ಗೆ ಹೇಳಿದ ಮಾತು ಪ್ರಸ್ತುತವಾಗುತ್ತದೆ. ಅವರ ಪ್ರಕಾರ ಎರಡು ರೀತಿಯ ಶಿಕ್ಷಣ ಸಾಧ್ಯವಿದೆ. ಒಂದು, 'ಬ್ಯಾಂಕಿಂಗ್ ಎಜುಕೇಷನ್'. ಅಂದರೆ ವಿದ್ಯಾರ್ಥಿಗಳ ಮೆದುಳಿನಲ್ಲಿ ಕೇವಲ 'ಮಾಹಿತಿಯನ್ನು ತುಂಬುವುದು'. ಇಲ್ಲಿ ನಡೆಯುವುದು ಮಾಹಿತಿಯ ವರ್ಗಾವಣೆ ಮಾತ್ರ. ಇನ್ನೊಂದು, 'ಪ್ರಾಬ್ಲಂ ಪೋಸಿಂಗ್ ಎಜುಕೇಷನ್'–

'ಸಮಸ್ಯೆಗಳನ್ನು ನಮ್ಮ ಮುಂದಿಡುವ' ಶಿಕ್ಷಣ. ಈ ಪ್ರಕ್ರಿಯೆ ವಿದ್ಯಾರ್ಥಿಗಳನ್ನು ಯೋಚಿಸುವಂತೆ ಮಾಡಿ ಪ್ರಶ್ನೆಗಳನ್ನು ಕೇಳಲು ಪ್ರೇರಣೆ ನೀಡುತ್ತದೆ; ಯುವ ಮನಸ್ಸುಗಳ ಮುಂದೆ ಕೆಲವು ಸವಾಲುಗಳನ್ನು ಎಸೆದು ಆ ಮೂಲಕ ಅವುಗಳನ್ನು ಯಶಸ್ವಿಯಾಗಿ ನಿಭಾಯಿಸುವ ಶಕ್ತಿಯನ್ನು ತುಂಬುತ್ತದೆ.

ಇಂಥ ಹಲವು ನಿದರ್ಶನಗಳಿಂದ ಸ್ಪಷ್ಟವಾಗುವ ಒಂದು ವಿಷಯವೆಂದರೆ ಪಠ್ಯರಚನೆಯ ಸ್ವಾತಂತ್ರ್ಯವೆಂಬುದು ಅವಾಸ್ತವ ಸಂಗತಿ. ಅಂಥ ಸ್ವಾತಂತ್ರ್ಯವಿದ್ದದ್ದೇ ಆದರೆ, ಅದು ಕೆಲವರ ಕೈಗಳಿಗೆ ಸಿಕ್ಕಿ ದುರುಪಯೋಗಗೊಳ್ಳುವ ಸಾಧ್ಯತೆಯೇ ಹೆಚ್ಚು. ಪ್ರತಿಷ್ಠಿತ ವರ್ಗಗಳ ಹಿತಾಸಕ್ತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ರೂಪಿಸಲಾದ ಶಿಕ್ಷಣ ವ್ಯವಸ್ಥೆಯ ಫಲವನ್ನು ಈ ದೇಶ ಸಾಕಷ್ಟು ಉಂಡಿದೆ. ಸ್ವಾತಂತ್ರ್ಯದ ಹೆಸರಿನಲ್ಲಿ, ಅದೇ ಪದ್ಧತಿ ಮುಂದುವರೆದರೆ ಭಾರತೀಯ ಸಮಾಜ ಮತ್ತೆ ಹಿಂದಿನ ದಿನಗಳ ಸ್ಥಿತಿಗೇ ಹಿಂದಿರುಗಿ, ಇದುವರೆಗೂ ಸಾಧಿಸಲಾಗಿರುವ ಅಲ್ಪಸ್ವಲ್ಪ ಸಾಮಾಜಿಕ ಪ್ರಗತಿಯೂ ದೂರವಾಗುವುದು ಖಚಿತ. ಪಠ್ಯಕ್ರಮವನ್ನು ರೂಪಿಸುವಲ್ಲಿ ಹೆಚ್ಚೆಂದರೆ, ಕೆಲವು ನಿಯಮಗಳಿಗೊಳಪಟ್ಟು ಸ್ವಾಯತ್ತತೆಯನ್ನು ಪಡೆಯಬಹುದೇ ಹೊರತು ಸಂಪೂರ್ಣ ಸ್ವಾತಂತ್ರ್ಯವೆಂಬುದು ಕನಸಿನ ಮಾತು; ಕೆಲವು ಸಂದರ್ಭಗಳಲ್ಲಿ ಅನಪೇಕ್ಷಣೀಯವೂ ಹೌದು. ಹಾಗಾಗಿ ನಮ್ಮ ಸಮಾಜ ನಿಜವಾದ ಅರ್ಥದಲ್ಲಿ ಸ್ವತಂತ್ರವಾಗಿ ಯೋಚಿಸಬಲ್ಲ ಯುವ ಮನಸ್ಸುಗಳನ್ನು ಸೃಷ್ಟಿಸಬೇಕಾದರೆ, ಆ ಸ್ಪಷ್ಟಗುರಿಯನ್ನು ಹೊಂದಿರುವಂಥ ಶಿಕ್ಷಣ ವ್ಯವಸ್ಥೆ ಮತ್ತು ಪಠ್ಯಕ್ರಮಗಳ ಅಗತ್ಯವಿದೆ.

ಕೊನೆಯದಾಗಿ, ಮತ್ತೆ ಪಾಲೋ ಫ್ರೆಯರಿಯವರ ಮಾತೊಂದನ್ನು ನೆನಪಿಸಿಕೊಳ್ಳಬಹುದು: 'ಶಿಕ್ಷಣವನ್ನು ಯುವಪೀಳಿಗೆಯು ಪ್ರಸ್ತುತ ವ್ಯವಸ್ಥೆಯ ಭಾಗವಾಗುವಂತೆ ಮಾಡಲು ಬಳಸಬಹುದು ಅಥವಾ ಸ್ವಾತಂತ್ರ್ಯದ ಪರಿಕಲ್ಪನೆಯ ಇನ್ನೊಂದು ಹೆಸರೇ ಶಿಕ್ಷಣವಾಗಿ ಆ ಮೂಲಕ ಯುವಜನರು ವಾಸ್ತವದ ಜತೆ ವಿಮರ್ಶಾತ್ಮಕವಾಗಿ ಹಾಗೂ ಸೃಜನಶೀಲವಾಗಿ ತೊಡಗಿ ಹೊಸ ಬದುಕಿನ ಅನ್ವೇಷಣೆಯಲ್ಲಿ ತಮ್ಮ ಪಾತ್ರವನ್ನು ಕಂಡುಕೊಳ್ಳಲು ಅವರನ್ನು ಸಶಕ್ತಗೊಳಿಸಬಹುದು'.

೨೬–೩–೨೦೧೨ ರಂದ ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರದಲ್ಲಿ ನಡೆದ 'ಶೈಕ್ಷಣಿಕ ಪಠ್ಯಕ್ರಮ: ಸ್ವಾತಂತ್ರ್ಯ ಹಾಗೂ ತಿರುಚುವಿಕೆ' ಕುರಿತ ವಿಚಾರ ಸಂಕಿರಣದಲ್ಲಿ ಮಾಡಿದ ಭಾಷಣದ ವಿಸ್ತೃತ ರೂಪ

□

ಪತ್ರಿಕೆ ಮತ್ತು ಜಾಹೀರಾತು

ರಾಜಮಣಿ ಎಂ.ಬಿ.

ಲೇಖನಿಯೇ ಶಕ್ತಿ ಎನ್ನುವ ಮೂಲಮಂತ್ರದ ಮೇಲೆ ನಿಂತಿರುವ ಮಾಧ್ಯಮ ಪತ್ರಿಕೆ. ಪತ್ರಿಕೆಗಳು ಸಮಾಜದ ಕಣ್ಣುಗಳಿದ್ದಂತೆ. ಆರೋಗ್ಯಯುತ ಸಮಾಜವನ್ನು ನಿರ್ಮಿಸುವ ಅಥವಾ ನಿರ್ನಾಮ ಮಾಡುವ ಶಕ್ತಿ ಪತ್ರಿಕೆಗಳಿಗಿದೆ. ಲೇಖನಿ ಖಡ್ಗಕ್ಕಿಂತ ಹರಿತ ಎಂಬುದು ಸತ್ಯಕ್ಕೆ ದೂರವಾದುದಲ್ಲ. ಅಂತಹ ಶಕ್ತಿ ಪತ್ರಿಕೆಗಳಿಗಿದೆ. ಪತ್ರಿಕೆ ಮೊಟ್ಟಮೊದಲ ಮುದ್ರಣ ಸಮೂಹ ಸಂವಹನ ಮಾಧ್ಯಮ.

ಕನ್ನಡ ಪತ್ರಿಕೋದ್ಯಮ ಸುಮಾರು ಒಂದೂವರೆ ಶತಮಾನದಷ್ಟು ಹಳೆಯದು. 'ಲೋಕವಾರ್ತೆಯನ್ನು ರಾಜನೂ, ರಾಜವಾರ್ತೆಯನ್ನು ಪ್ರಜೆಗಳೂ ತಿಳಿಯುವುದು ಅವಶ್ಯಕವೆಂದು ನಮ್ಮ ಪೂರ್ವಿಕರು ಕಂಡುಕೊಂಡಿದ್ದರು. ಅದಕ್ಕಾಗಿ ಪುರಾತನ ಹಿಂದೂ ರಾಜ್ಯಗಳಲ್ಲಿ ಬೇಹುಗಾರರು ರಾಜರಿಗೋಸ್ಕರವಾಗಿಯೂ, ಡಂಗೂರ ಹೊಡೆಯುವವರು ಪ್ರಜೆಗಳಿಗೋಸ್ಕರವಾಗಿಯೂ ನೇಮಕವಾಗಿದ್ದರು. ಪ್ರಾಚೀನ ರೋಮ್ ರಾಷ್ಟ್ರದಲ್ಲಿ ಆಯಾ ದಿವಸದ ವಿಶೇಷ ಸಂಗತಿಗಳನ್ನು ದಿನವಾರ್ತೆ ಎಂಬ ಒಂದು ದಫ್ತರದಲ್ಲಿ ಬರೆಯಿಸಿ ಆ ಊರಿನ ಚಾವಡಿಯಲ್ಲಿ ಇಡುವ ಪದ್ಧತಿ ಬಳಕೆಯಲ್ಲಿತ್ತು' ಎಂದು ಹಿರಿಯ ಪತ್ರಕರ್ತ ಡಿ.ವಿ. ಗುಂಡಪ್ಪನವರು ಹೇಳಿದ್ದಾರೆ.

ಹದಿನೆಂಟನೆಯ ಶತಮಾನದ ಕೊನೆಯ ಹೊತ್ತಿಗಾಗಲೇ ಧರ್ಮ(ಚರ್ಚ್), ಆಡಳಿತ, ನ್ಯಾಯ ವ್ಯವಸ್ಥೆಗಳ ಜೊತೆಗೆ ಪತ್ರಿಕೆ ರಾಷ್ಟ್ರದ ನಾಲ್ಕನೆಯ ಸ್ತಂಭ (ಈಠಣಡಿಣು ಇಣಚಿಣಜ) ಎನ್ನುವಷ್ಟರ ಮಟ್ಟಿಗೆ ಪ್ರಬಲವಾಯಿತು. ಪತ್ರಿಕೆ ಬಹಳ ವೇಗವಾಗಿ ಬೆಳೆದು ತನ್ನ ಕ್ಷೇತ್ರವನ್ನು ವಿಸ್ತರಿಸಿಕೊಂಡು ಸಮಾಜದ ಒಂದು ಪ್ರಮುಖ ಸಂಸ್ಥೆಯಾಯಿತು. ಹತ್ತೊಂಬತ್ತು ಮತ್ತು ಇಪ್ಪತ್ತನೆಯ ಶತಮಾನಗಳಲ್ಲಿ ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡಿರುವ ದೇಶಗಳಲ್ಲಿ ಪತ್ರಿಕೆಯ ಕ್ಷೇತ್ರಕಾರ್ಯ ಇನ್ನೂ ಹೆಚ್ಚು ಪ್ರಚಾರಗೊಂಡಿತು.

೧೫೬೬ರಲ್ಲಿ ಯೂರೋಪಿನಲ್ಲಿ ಅದರಲ್ಲೂ ವೆನಿಸ್ಸಿನಲ್ಲಿ ಮೊದಲು ವೃತ್ತಪತ್ರಿಕೆಗಳು ಭಿತ್ತಿಪತ್ರಗಳ ರೂಪದಲ್ಲಿ ಕಾಣಿಸಿಕೊಂಡಿದ್ದವು. ೧೬೦೫ರ ವೇಳೆಗೆ

ಪ್ರಪಂಚದಲ್ಲಿ ಅಲ್ಲೊಂದು ಇಲ್ಲೊಂದು ಪತ್ರಿಕೆಗಳು ಕಾಣತೊಡಗಿದವು. ಪ್ರಪಂಚದ ಮೊದಲ ಪತ್ರಿಕೆ *ರಿಲೇಷನ್ಸ್* (೧೬೦೫) ಜರ್ಮನ್ ಭಾಷೆಯಲ್ಲಿ ಪ್ರಕಟವಾದರೆ, ಇಂಗ್ಲೆಂಡಿನ ಮೊದಲ ಪತ್ರಿಕೆ ೧೬೨೦ರ ಸುಮಾರಿನಲ್ಲಿ ಹುಟ್ಟಿತು. ೧೬೬೫ರಲ್ಲಿ ಆರಂಭವಾದ *ಆಕ್ಸ್‌ಫರ್ಡ್ ಗೆಜೆಟ್* ಮುಂದಿನ ವರ್ಷದಿಂದ *ಲಂಡನ್ ಗೆಜೆಟ್* ಆಯಿತು.

'ಕತ್ತಿಗಿಂತ ಲೇಖನಿ ಹರಿತ' ಎನ್ನುವ ಧ್ಯೇಯವಾಕ್ಯ ಪತ್ರಿಕೋದ್ಯಮದ್ದು. ಅದು ಸರಿಯೆಂದು ಗೊತ್ತಾದದ್ದು ಫ್ರೆಂಚ್ ಕ್ರಾಂತಿಯ ಹೊತ್ತಿಗೆ. ೧೭೮೯ರಲ್ಲಿ ರಾಜರ ಆಡಳಿತದ ವಿರುದ್ಧ ಸಿಡಿದೆದ್ದ ರೂಸ್ಸೋ, ವಾಲ್ಟೈರ್, ಮಾಂಟೆಸ್ಕ್ಯೋ ಮುಂತಾದ ಬುದ್ಧಿಜೀವಿಗಳು ತಮ್ಮ ಲೇಖನಿಗಳ ಮೂಲಕ ಜನಜಾಗೃತಿ ಮೂಡಿಸಿ ಫ್ರೆಂಚ್ ಮಹಾಕ್ರಾಂತಿಗೆ ನಾಂದಿ ಹಾಡಿ ರಾಜನ ಖಡ್ಗಕ್ಕಿಂತ ಬುದ್ಧಿಜೀವಿಗಳ ಲೇಖನಿಯ ಹರಿತ ಹೆಚ್ಚಿನದು ಎಂದು ತೋರಿಸಿಕೊಟ್ಟರು. ಹೀಗೆ ಪತ್ರಿಕೆಗಳ ಹುಟ್ಟಿನಿಂದ ಕ್ರಾಂತಿಯಾಯಿತು.

ಜನವರಿ ೨೯, ೧೭೮೦ ಭಾರತೀಯ ಪತ್ರಿಕಾರಂಗದ ಮಹತ್ವದ ದಿನ. ಆ ದಿನ ಯೂರೋಪಿನ ಜೇಮ್ಸ್ ಆಗಸ್ಟಸ್ ಹಿಕ್ಕಿ *ಬೆಂಗಾಲ್ ಗೆಜೆಟ್* ಅಥವಾ *ಕಲ್ಕತಾ ಜನರಲ್ ಅಡ್ವರ್ಟೈಸರ್* ಎನ್ನುವ ಎರಡು ಪುಟಗಳ ಇಂಗ್ಲಿಷ್ ಸಾಪ್ತಾಹಿಕವನ್ನು ಭಾರತದ ನೆಲದಲ್ಲಿ ಪ್ರಾರಂಭಿಸಿದ. ಹಿಕ್ಕಿಯೇ ಪತ್ರಿಕೆಯ ಸಂಪಾದಕ, ಪ್ರಕಾಶಕ ಮತ್ತು ಮುದ್ರಕನೂ ಆಗಿದ್ದರಿಂದ ಅದನ್ನು *ಹಿಕ್ಕೀಸ್ ಗೆಜೆಟ್* ಎಂದೂ ಕರೆದರು. ಅದು ತನ್ನನ್ನು Weekly political and commercial paper open to all parties but influenced by none ಎಂದು ಘೋಷಿಸಿಕೊಂಡಿತು. ಅದರ ಮೊದಲ ಸಂಚಿಕೆಯಲ್ಲಿಯೇ ಸುದ್ದಿಯೂ ಪ್ರಕಟವಾಗಿದ್ದು ಉಲ್ಲೇಖಾರ್ಹ. ಭಾರತದಲ್ಲಿ ಪತ್ರಿಕೋದ್ಯಮದ ಬೆಳವಣಿಗೆಗೆ ಕಾರಣನಾದ ಹಿಕ್ಕಿಯನ್ನು ಭಾರತದ ಪತ್ರಿಕೋದ್ಯಮ ಪಿತಾಮಹ ಎಂದು ಕರೆಯುತ್ತಾರೆ.

ಭಾರತೀಯ ಧರ್ಮ, ತತ್ವ ಮತ್ತು ಸಂಸ್ಕೃತಿಗಳನ್ನು ವಿರೋಧಿಸಿ ಬ್ರಿಟಿಷ್ ಸಾಮ್ರಾಜ್ಯಶಾಹಿ ಸಂಸ್ಕೃತಿಯನ್ನು ಎತ್ತಿಹಿಡಿಯುವ ವರ್ಗದ ಪತ್ರಿಕೆಗಳು ಮತ್ತು ಭಾರತೀಯರೇ ಪ್ರಾರಂಭಿಸಿದ ಇನ್ನೊಂದು ವರ್ಗದ ಪತ್ರಿಕೆಗಳು ೧೯ನೇ ಶತಮಾನದಲ್ಲಿ ಹುಟ್ಟಿಬಂದವು. ೧೮೧೯ರಲ್ಲಿ ಭಾರತೀಯರಲ್ಲಿ ಮೊದಲಿಗರಾಗಿ ಗಂಗಾಧರ ಭಟ್ಟಾಚಾರ್ಯರ ನೇತೃತ್ವದಲ್ಲಿ *ಬೆಂಗಾಲ್ ಗೆಜೆಟ್* ಎಂಬ ಹೆಸರಿನ ಪತ್ರಿಕೆ ಪ್ರಾರಂಭವಾಯಿತು. ಆ ವೇಳೆಗಾಗಲೇ ಹಿಕ್ಕಿಯ *ಬೆಂಗಾಲ್ ಗೆಜೆಟ್* ಕಣ್ಮರೆಯಾಗಿತ್ತು. ಗಂಗಾಧರ ಭಟ್ಟಾಚಾರ್ಯರ ಪತ್ರಿಕೆ ಒಂದೇ ಒಂದು ವರ್ಷ ಇದ್ದಿತಾದರೂ ಭಾರತೀಯ ಒಡೆತನದ ಪ್ರಥಮ ಪತ್ರಿಕೆ ಎಂದು ಕರೆಸಿಕೊಂಡಿತು.

೧೮೧೮ರಲ್ಲಿ ಕಲ್ಕತ್ತಾದ ಸೇರಾಮ್‌ಪುರ ಬಡಾವಣೆಯಲ್ಲಿ ಮಿಷನರಿಗಳು ಆರಂಭಿಸಿದ ಬಂಗಾಳಿ ಮಾಸಿಕ *ದಿಗ್ದರ್ಶನ* ಭಾರತದ ಮೊಟ್ಟಮೊದಲ ಭಾಷಾ

ಪತ್ರಿಕೆ. ಇದಲ್ಲದೆ ೧೮೧೮ರಲ್ಲಿ ಅವರು *ಸಮಾಚಾರ ದರ್ಪಣ್* ಎನ್ನುವ ಇನ್ನೊಂದು ಬಂಗಾಳಿ ಪತ್ರಿಕೆಯನ್ನೂ ಹೊರಡಿಸಿದರು. ಭಾರತೀಯ ಜನತೆಗೆ ಬೇಕಾದ ರೀತಿ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮಗಳನ್ನು ಪೋಷಿಸಿದ ಕೀರ್ತಿ ಭಾರತೀಯ ಭಾಷಾ ಪತ್ರಿಕೋದ್ಯಮ ಪಿತಾಮಹ ರಾಜಾ ರಾಮಮೋಹನ ರಾಯ್ ಅವರಿಗೆ ಸಲ್ಲುತ್ತದೆ. ಭಾರತೀಯ ಸಂಸ್ಕೃತಿ, ತತ್ವಗಳ ಮೇಲೆ ಆಕ್ರಮಣ ನಡೆಸಿದ್ದ ವಿದೇಶಿ ಮಿಷನರಿಗಳ ಮೇಲೆ ಪ್ರತಿದಾಳಿ ಮಾಡುವ ಸಲುವಾಗಿ ಅವರು ಇಂಗ್ಲಿಷ್ ಮತ್ತು ಬಂಗಾಳಿ ಭಾಷೆಗಳಲ್ಲಿ *ಬ್ರಾಹ್ಮಿನಿಕಲ್ ಮ್ಯಾಗಜೈನ್* (ಭಾಗ ೧, ೨ ಮತ್ತು ೩), *ಸಂವಾದ ಕೌಮುದಿ* (೧೮೨೧) ಮತ್ತು ಪರ್ಷಿಯನ್ ಭಾಷೆಯಲ್ಲಿ *ಮೀರತ್-ಉಲ್-ಅಕ್ಬರ್* ('ವಾರ್ತಾ ದರ್ಪಣ' ೧೮೨೨) ಪತ್ರಿಕೆಗಳನ್ನು ಪ್ರಾರಂಭಿಸಿದರು. ೧೯ನೇ ಶತಮಾನದಲ್ಲಿ ರಾಜಾ ರಾಮಮೋಹನ ರಾಯ್ ಆರಂಭಿಸಿದ ಈ ಪತ್ರಿಕೆಗಳು ಸಮಾಜ ಸುಧಾರಣಾ ಆಂದೋಲನದ ಮುಖ್ಯ ವಾಹಕಗಳಾದವು.

ಭಾರತದಲ್ಲಿ ಪತ್ರಿಕೆಗಳ ಪಾತ್ರವನ್ನು ವಿವರಿಸಿದ ಮೊದಲಿಗರು ರಾಜಾ ರಾಮಮೋಹನ ರಾಯ್. ಪತ್ರಿಕೆಗಳು ಜನರಲ್ಲಿ ಅರಿವು ಮೂಡಿಸುವ ಒಂದು ಮಹತ್ವದ ಸಾಧನವೆಂದು ನಂಬಿದ್ದರು. ಈ ಪತ್ರಿಕೆಗಳು ಆಳುವವರು ಮತ್ತು ಆಳಿಸಿಕೊಳ್ಳುವವರ ನಡುವಿನ ಸಂಪರ್ಕ ಸೇತು ಎಂದು ಪ್ರತಿಪಾದಿಸುತ್ತಿದ್ದರು.

ಯೂರೋಪಿನ ತ್ರಿಮೂರ್ತಿಗಳಾದ ಹಿಕ್ಕಿ, ಡ್ಯೂಯೆನ್, ಬಕ್ಕಿಂಗ್‌ಹ್ಯಾಂರಂತೆ ರಾಜಾ ರಾಮಮೋಹನ ರಾಯ್ ಅವರ ಸಂಪಾದಕೀಯವೂ ಅಂದಿನ ಸರ್ಕಾರವನ್ನು ಸಾಕಷ್ಟು ಕೆರಳಿಸಿತು. ದೇಶದ ವಿವಿಧ ಭಾಷೆಗಳಲ್ಲಿ ಪತ್ರಿಕೆಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಚಾರಗೊಂಡವು.

ಕನ್ನಡದ ಮೊದಲ ಪತ್ರಿಕೆ *ಮಂಗಳೂರ ಸಮಾಚಾರ* ೧೮೪೩ರಲ್ಲಿ ಮಂಗಳೂರಿನಲ್ಲಿ ಪ್ರಕಟವಾಯಿತು. ಈ ಪತ್ರಿಕೆಯನ್ನು ಆರಂಭಿಸಿದವರು ಕ್ರಿಶ್ಚಿಯನ್ ಮಿಷನರಿಗಳು. ಅವರು ಪತ್ರಿಕೆಯನ್ನು ಪ್ರಾರಂಭಿಸಿದ ಮುಖ್ಯ ಉದ್ದೇಶ ಕ್ರಿಶ್ಚಿಯನ್ ಮತಪ್ರಚಾರ. ಈ ಪತ್ರಿಕೆಯ ಮೊದಲ ಸಂಪಾದಕ ಹರ್ಮನ್ ಮೊಗ್ಲಿಂಗ್. ಶ್ರೀನಿವಾಸ ಹಾವನೂರ ಅವರು 'ಈ ಪತ್ರಿಕೆಯ ಸುದ್ದಿಯ ಹರಹು ವ್ಯಾಪಕವಾಗಿತ್ತು. ಅದನ್ನು ಕೊಡುವಲ್ಲಿ ಇಂದಿನ ವೃತ್ತಪತ್ರಿಕೆಗಳ ಕ್ರಮವನ್ನು ಅನುಸರಿಸಲಾಗಿತ್ತು. ಕನ್ನಡ ಪತ್ರಿಕಾ ಪ್ರಪಂಚದ ಈ ಚೊಚ್ಚಲ ಕೃತಿಯು ಆಧುನಿಕ ಪತ್ರಿಕೋದ್ಯಮದ ಅನೇಕ ಲಕ್ಷಣಗಳನ್ನು ಒಳಗೊಂಡಿತ್ತು' ಎಂದಿದ್ದಾರೆ. ಮತಪ್ರಚಾರವೇ ಈ ಪತ್ರಿಕೆಯ ಮೂಲ ಉದ್ದೇಶವಾಗಿದ್ದರೂ ಇದರಲ್ಲಿ ಸ್ಥಳೀಯ ಆಸಕ್ತಿಯ ಸುದ್ದಿಗಳಿರುತ್ತಿದ್ದವು. ಜೊತೆಗೆ ಸರ್ಕಾರದ ಸುತ್ತೋಲೆ, ಅಧಿಸೂಚನೆಗಳೂ ಇರುತ್ತಿದ್ದವು. ಈ ಪತ್ರಿಕೆ ಮುಂದೆ ಕನ್ನಡ ಭಾಷೆಯನ್ನಾಡುವ ಅನೇಕ ಜನರಲ್ಲಿ ಪ್ರಸಿದ್ಧಿಯಾಗಬೇಕೆಂಬ ಹಂಬಲದಿಂದ ಮಂಗಳೂರಿನಿಂದ ಬಳ್ಳಾರಿಗೆ ಸ್ಥಳಾಂತರವಾಯಿತು *ಕಂನಡ ಸಮಾಚಾರ* ಎಂದು ಹೆಸರೂ ಬದಲಾಯಿತು.

೧೮೪೩ರಲ್ಲಿ ಕನ್ನಡದ ಮೊದಲ ವಾರಪತ್ರಿಕೆ *ಸುಬುದ್ಧಿ ಪ್ರಕಾಶ* ಬೆಳಗಾವಿಯಲ್ಲಿ ಪ್ರಕಟಗೊಂಡಿತು. ಮುಂದಿನ ಕೆಲವು ವರ್ಷಗಳಲ್ಲಿ ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ ನಗರಗಳಲ್ಲಿ ಹೊಸ ಪತ್ರಿಕೆಗಳು ಬೆಳಕಿಗೆ ಬಂದವು. ೧೮೫೬ರಲ್ಲಿ ಭಾಷ್ಯಂ ತಿರುಮಲಾಚಾರ್ಯರ ಸಂಪಾದಕತ್ವದಲ್ಲಿ ಹೊರಬಂದ ಮೈಸೂರು ಸಂಸ್ಥಾನದ ಮೊದಲ ವಾರಪತ್ರಿಕೆ *ಮೈಸೂರು ವೃತ್ತಾಂತ ಬೋಧಿನಿ.* ಈ ಪತ್ರಿಕೆಗೆ ಮೈಸೂರು ಮಹಾರಾಜರ ಆಶ್ರಯ ದೊರೆತಿದ್ದರಿಂದ ಪತ್ರಿಕೆಯಲ್ಲಿ ಸರ್ಕಾರದ ಹಲವಾರು ಚಟುವಟಿಕೆಗಳನ್ನು ವರದಿ ಮಾಡಲಾಗುತ್ತಿತ್ತು. ಇಲ್ಲಿ ಪ್ರಭಾವ ಬೀರಿದ ಇನ್ನೊಂದು ಪತ್ರಿಕೆ ೧೮೬೫ರಲ್ಲಿ ಆರಂಭವಾದ *ಕರ್ನಾಟಕ ಪ್ರಕಾಶಿಕಾ.* ಧಾರವಾಡದಿಂದ ಪ್ರಕಾಶಿತವಾಗುತ್ತಿದ್ದ *ಜ್ಞಾನಬೋಧಕ* ಮತ್ತು ಮಂಗಳೂರಿನ *ವಿಚಿತ್ರ ವರ್ತಮಾನ ಸಂಗ್ರಹ* ಪ್ರಮುಖ ಪತ್ರಿಕೆಗಳು. ೧೮೬೬ರಲ್ಲಿ ಮೈಸೂರು ಸರ್ಕಾರವೇ *ಮೈಸೂರು ಗೆಜೆಟ್* ಎನ್ನುವ ಆಂಗ್ಲ–ಕನ್ನಡ ದ್ವಿಭಾಷಾ ವಾರಪತ್ರಿಕೆಯನ್ನು ಹೊರತಂದಿತು.

ಮೈಸೂರು ಗೆಜೆಟ್ ಪತ್ರಿಕೆಯೇ ಕನ್ನಡದ ಮೊದಲ ಸರ್ಕಾರಿ ಸ್ವಾಮ್ಯದ ಪತ್ರಿಕೆ ಎನ್ನಲಾಗಿದೆ. ಕನ್ನಡದ ಮೊದಲ ದಿನಪತ್ರಿಕೆ *ಸರ್ವೋದಯ ಪ್ರಕಾಶಿಕಾ* ೧೮೮೮ರಲ್ಲಿ ಬೆಂಗಳೂರಿನಿಂದ ಪ್ರಕಟಗೊಳ್ಳುತ್ತಿತ್ತಾದರೂ ಹಣಕಾಸಿನ ಸಮಸ್ಯೆಯಿಂದ ವಾರಪತ್ರಿಕೆಯಾಗಿ ಬದಲಾಯಿತು. ಈ ಪತ್ರಿಕೆಯ ಸಂಪಾದಕ ಬಿ. ನರಸಿಂಗರಾವ್.

ಕನ್ನಡ ಪತ್ರಿಕೋದ್ಯಮದ ಆರಂಭಿಕ ದಿನಗಳಲ್ಲಿ ಅಸಾಧಾರಣ ಸೇವೆ ಸಲ್ಲಿಸಿದ ಕೀರ್ತಿ ಮೈಸೂರಿನ ಎಂ. ವೆಂಕಟಕೃಷ್ಣಯ್ಯ(ತಾತಯ್ಯ) ಅವರಿಗೆ ಸಲ್ಲುತ್ತದೆ. ಅವರನ್ನು ಆಧುನಿಕ ಕನ್ನಡ ಪತ್ರಿಕೋದ್ಯಮದ ಸಂಸ್ಥಾಪಕ ಎಂದೇ ಕರೆಯಲಾಗುತ್ತದೆ. ಅವರು ೧೮೮೫ರಲ್ಲಿ *ವೃತ್ತಾಂತ ಚಿಂತಾಮಣಿ* ಎನ್ನುವ ಸಾಪ್ತಾಹಿಕ ಪತ್ರಿಕೆಯನ್ನು ಮೈಸೂರಿನಿಂದ ಹೊರಡಿಸುವುದರ ಮೂಲಕ ಕನ್ನಡ ಪತ್ರಿಕೋದ್ಯಮದ ಬೆಳವಣಿಗೆಗೆ ಅವಿರತ ದುಡಿದರು. ವೆಂಕಟಕೃಷ್ಣಯ್ಯನವರು ಕನ್ನಡ ಮತ್ತು ಇಂಗ್ಲಿಷಿನಲ್ಲಿ ಸುಮಾರು ೧೦ಕ್ಕೂ ಹೆಚ್ಚು ವೃತ್ತಪತ್ರಿಕೆಗಳನ್ನು ನಡೆಸಿದರು. ಅವುಗಳಲ್ಲಿ *ಸಂಪದಭ್ಯುದಯ* ದಿನಪತ್ರಿಕೆ, *ಸಾಧ್ವಿ* ವಾರಪತ್ರಿಕೆ, *ವೃತ್ತಾಂತ ಚಿಂತಾಮಣಿ, ಮೈಸೂರ್ ಹೆರಾಲ್ಡ್* ಪ್ರಮುಖವಾದವು. ವೆಂಕಟಕೃಷ್ಣಯ್ಯನವರ ಸ್ಫೂರ್ತಿಯಿಂದ ಎಂ. ಗೋಪಾಲ ಐಯ್ಯಂಗಾರ್ ಮತ್ತು ಎಂ. ಶ್ರೀನಿವಾಸ ಐಯ್ಯಂಗಾರ್ ಸೋದರರು ೧೮೯೫ರಲ್ಲಿ ಬೆಂಗಳೂರಿನಿಂದ ಆರಂಭಿಸಿದ *ಕನ್ನಡ ನಡೆಗನ್ನಡಿ* ಎಂಬ ಪತ್ರಿಕೆ ಅತ್ಯಂತ ಪ್ರಭಾವಶಾಲಿ ಪತ್ರಿಕೆಯಾಗಿತ್ತು.

೧೯೦೮ರಲ್ಲಿ ಪತ್ರಿಕೆಗಳನ್ನು ಆರಂಭಿಸುವುದಕ್ಕೆ ಮುಂಚೆ ಸರ್ಕಾರದ ಅನುಮತಿ ಇರಬೇಕು ಎನ್ನುವ ಕಾಯಿದೆ ಹೊರಬಂತು. ಮೈಸೂರು ಸರ್ಕಾರ ಜಾರಿಗೆ ತಂದ ಮೈಸೂರು ವೃತ್ತಪತ್ರಿಕೆ ನಿಯಂತ್ರಣ ಕಾಯ್ದೆ ಅನ್ವಯ ನೀಡಿದ್ದ ಅನುಮತಿಯನ್ನು ರದ್ದುಗೊಳಿಸುವ ಸಂಪೂರ್ಣ ಅಧಿಕಾರ ಸರ್ಕಾರಕ್ಕಿತ್ತು. ಅನುಮತಿ ಇಲ್ಲದೆ ಪತ್ರಿಕೆ ನಡೆಸುವವರನ್ನೂ ಮುಂದುವರೆಸುವವರನ್ನೂ ಶಿಕ್ಷೆಗೆ ಗುರಿ ಮಾಡುವ ಹಕ್ಕು ಸರ್ಕಾರಕ್ಕೆ ಇತ್ತು. ಇದಕ್ಕೆ ಮೊದಲು ಗುರಿಯಾದವರು ಕನ್ನಡ ನಡೆಗನ್ನಡಿ ಸಂಪಾದಕರು.

ಅನಂತರದ ಸರದಿ ರಾಷ್ಟ್ರೀಯವಾದಿ ದಿನಪತ್ರಿಕೆ *ಭಾರತಿಯದು*. ವೆಂಕಟಕೃಷ್ಣಯ್ಯನವರು ಈ ಕಾಯ್ದೆಯ ವಿರುದ್ಧ ಪ್ರತಿಭಟಿಸಿದರು. ಅದರ ಪರಿಣಾಮ ಅವರ ಪತ್ರಿಕೆಗಳು ಕೊನೆಗೊಂಡವು. ಪತ್ರಿಕೆಗಳ ಬೆಳವಣಿಗೆಯನ್ನು ಪ್ರೋತ್ಸಾಹಿಸುತ್ತಿದ್ದ ಸರ್ ಎಂ. ವಿಶ್ವೇಶ್ವರಯ್ಯನವರು ಪತ್ರಿಕಾ ನಿರ್ಬಂಧವೆಂಬ ಕರಾಳ ಶಾಸನದ ಬಗ್ಗೆ ತೀವ್ರ ವಿರೋಧ ವ್ಯಕ್ತಪಡಿಸಿದರು.

ಹಿರಿಯ ಸಾಹಿತಿ ಡಿ.ವಿ. ಗುಂಡಪ್ಪನವರು ಪತ್ರಿಕಾಲೋಕಕ್ಕೆ ೧೯೦೭ರಲ್ಲಿ ಪದಾರ್ಪಣೆ ಮಾಡಿದರು. *ಸೂರ್ಯೋದಯ ಪ್ರಕಾಶಿಕಾ* ಎಂಬ ಪತ್ರಿಕೆಯ ಮೂಲಕ ಕೆಲಸ ಪ್ರಾರಂಭಿಸಿದ ಅವರು ಅನೇಕ ಪತ್ರಿಕೆಗಳನ್ನು ಹೊರತಂದರು. ಇವರು ಕವಿ, ಸಾಹಿತಿ ಎಂದು ಪ್ರಸಿದ್ಧಿಗಳಿಸಿದ್ದರೂ ಅವರಿಗೆ ಹೆಚ್ಚಿನ ಗೌರವ ದೊರೆತಿದ್ದು ಅವರ ವೈಚಾರಿಕ ಲೇಖನಗಳಿಂದ ಎಂಬುದು ಸತ್ಯ. ಉತ್ತಮ ಭಾಷೆ, ವ್ಯಾಪಕ ಜ್ಞಾನ, ದಿಟ್ಟತನ ಮುಂತಾದ ಮೌಲ್ಯಗಳಿಂದ ಕೂಡಿದ ಅವರ ಲೇಖನಗಳಿಗೆ ಜನರ ಮೇಲೆ ಪ್ರಭಾವ ಬೀರುವ ಅಪಾರ ಶಕ್ತಿಯಿತ್ತು. ಆದರೆ ಬಳಸುತ್ತಿದ್ದ ಭಾಷೆ ಸಾಮಾನ್ಯ ಓದುಗರನ್ನು ತಲುಪದೇ ಹೋಯಿತು. ಆದರೂ ಅದರಲ್ಲಿ ಮಿಗಿಲಾದ ಸಾಹಿತ್ಯಿಕ ಮೌಲ್ಯ ಮತ್ತು ಸಾಂಸ್ಕೃತಿಕ ಸೊಬಗು ಇತ್ತು.

೧೮೮೫ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಯಾದ ಸಂದರ್ಭದಲ್ಲಿ ದೇಶಾದ್ಯಂತ ರಾಜಕೀಯ ಅರಿವು ಅಲೆಯೆದ್ದಿತು. ಲೋಕಮಾನ್ಯ ಬಾಲಗಂಗಾಧರ ತಿಲಕ್ ಮತ್ತು ಗೋಪಾಲಕೃಷ್ಣ ಗೋಖಲೆಯವರು ಕನ್ನಡಿಗರ ಮೇಲೆ ಅಪಾರ ಪ್ರಭಾವ ಬೀರಿದರು. ಗಾಂಧೀಜಿಯವರ ಅನೇಕ ಚಳವಳಿಗಳು, ಉಪವಾಸಗಳು ಎಲ್ಲೆಡೆ ಜನರ ಕುತೂಹಲವನ್ನು ಮೂಡಿಸುತ್ತಿದ್ದವು. ಈ ವಿಚಾರಗಳು ಅನೇಕ ಕನ್ನಡ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು. ಅವುಗಳಲ್ಲಿ *ವೀರಕೇಸರಿ, ತಾಯಿನಾಡು, ವಿಶ್ವ ಕರ್ಣಾಟಕ, ಜನವಾಣಿ, ದೇಶಬಂಧು, ಪ್ರಜಾಮತ* ಮುಂತಾದವು ಪ್ರಮುಖವಾದವು. ಅವುಗಳಲ್ಲಿ ಮೊದಲ ಐದು ಪತ್ರಿಕೆಗಳು ವಾರಪತ್ರಿಕೆಗಳಾಗಿ ಆರಂಭವಾಗಿ ಅನಂತರ ದಿನಪತ್ರಿಕೆಗಳಾದವು. *ಸಂಯುಕ್ತ ಕರ್ನಾಟಕ* ಉತ್ತರ ಕರ್ನಾಟಕದ ಪ್ರಮುಖ ದಿನಪತ್ರಿಕೆಯಾಗಿ ಬೆಳೆಯಲಾರಂಭಿಸಿತು. ಇವು ಕನ್ನಡದ ಮೊದಲ ಸಮೂಹ ಪತ್ರಿಕೆಗಳೆಂದರೆ ತಪ್ಪಾಗಲಾರದು. ಈ ಪತ್ರಿಕೆಗಳು ಕನ್ನಡ ಜನರಲ್ಲಿ ತುಂಬಾ ಮಹತ್ವದ ಪಾತ್ರವಹಿಸಿವೆ.

ಈ ಮಧ್ಯೆ ಮಕ್ಕಳಿಗಾಗಿ ಅನೇಕ ಪತ್ರಿಕೆಗಳು ಪ್ರಕಟವಾಗುತ್ತಿದ್ದು ನಮ್ಮ *ಪುಸ್ತಕ, ಹಿತೋಪದೇಶ, ಸಚಿತ್ರ ಬಾಲಭಾರತ, ಮಕ್ಕಳ ಬಾವುಟ, ಪಾಪಚ್ಚಿ, ಚಂದಮಾಮ, ಬಾಲಮಿತ್ರ, ಬಾಲಮಂಗಳ, ಬೊಂಬೆಮನೆ* ಮುಂತಾದ ನಿಯಕಾಲಿಕೆಗಳು, ವಿಜ್ಞಾನಕ್ಕೆ ಸಂಬಂಧಪಟ್ಟಂತೆ *ವಿಜ್ಞಾನ ಕರ್ಣಾಟಕ, ಜನಪ್ರಿಯ ವಿಜ್ಞಾನ, ಮಕ್ಕಳ ವಿಜ್ಞಾನ* ಪತ್ರಿಕೆಗಳು, ಕ್ರೀಡೆಗೆ ಬೇಕಾದ *ಕ್ರೀಡಾಂಗಣ, ಕ್ರೀಡಾರತ್ನ*, ಚಲನಚಿತ್ರಕ್ಕೆ ಸಂಬಂಧಿಸಿದ *ಚಿತ್ರಲತಾ, ರೂಪತಾರಾ, ವಿಜಯ ಚಿತ್ರ, ಮೇನಕ, ಅರಗಿಣಿ* ಹೀಗೆ ಕನ್ನಡ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು ಪ್ರಚಾರದಲ್ಲಿದ್ದವು.

ಕರ್ನಾಟಕದಲ್ಲಿ ಪ್ರಕಟವಾಗುತ್ತಿದ್ದ ಹಲವಾರು ಪತ್ರಿಕೆಗಳಲ್ಲಿ ಹೆಚ್ಚು ಪ್ರಭಾವಯುತವಾದ ಕೆಲವು ಪತ್ರಿಕೆಗಳು ಮತ್ತು ಅವು ಸ್ಥಾಪನೆಯಾದ ವರ್ಷಗಳ ವಿವರವನ್ನು ನೀಡಲಾಗಿದೆ:

ದಿನಪತ್ರಿಕೆಗಳು: *ಸಂಯುಕ್ತ ಕರ್ನಾಟಕ* (೧೯೩೩), *ಪ್ರಜಾವಾಣಿ* (೧೯೪೮), *ಕನ್ನಡ ಪ್ರಭ* (೧೯೬೭), *ಉದಯವಾಣಿ* (೧೯೭೦), *ವಿಜಯ ಕರ್ನಾಟಕ* (೧೯೯೮), *ಜನವಾಹಿನಿ* (೧೯೯೮).

ವಾರಪತ್ರಿಕೆಗಳು: *ಕರ್ಮವೀರ* (೧೯೨೧), *ಪ್ರಜಾಮತ* (೧೯೩೧), *ಸುಧಾ* (೧೯೬೫), *ಲಂಕೇಶ್ ಪತ್ರಿಕೆ* (೧೯೮೦), *ತರಂಗ* (೧೯೮೩), *ಮಂಗಳ* (೧೯೮೩), *ಹಾಯ್ ಬೆಂಗಳೂರು* (೧೯೯೫).

ಮಾಸಪತ್ರಿಕೆಗಳು: *ಚಂದಮಾಮ* (೧೯೪೭), *ಕಸ್ತೂರಿ* (೧೯೫೬), *ಮಲ್ಲಿಗೆ* (೧೯೬೨), *ಮಯೂರ* (೧೯೬೮), *ರೂಪತಾರಾ* (೧೯೭೬), *ತುಷಾರ* (೧೯೮೩), *ಗೃಹಶೋಭ* (೧೯೯೨). ಹೀಗೆ ಹಲವಾರು ದೈನಿಕ, ಸಾಪ್ತಾಹಿಕ, ಪಾಕ್ಷಿಕ ಹಾಗೂ ಮಾಸಪತ್ರಿಕೆಗಳು ಪ್ರಕಟಗೊಂಡಿವೆ. ಅನೇಕ ವಿದ್ವಾಂಸರು, ಸಾಹಿತಿಗಳು, ಪತ್ರಕರ್ತರು, ಮುತ್ಸದ್ದಿಗಳು, ಸಮಾಜ ಸುಧಾರಕರು ಕನ್ನಡ ಪತ್ರಿಕೋದ್ಯಮದ ಬೆಳವಣಿಗೆಗೆ ದುಡಿದಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಮಾಧ್ಯಮವನ್ನು ಒಂದು ಉದ್ಯಮವಾಗಿ ಪರಿಗಣಿಸುತ್ತಿರುವುದು ಗಮನಾರ್ಹ ಸಂಗತಿ. ಅದರಲ್ಲಿ ಮುಖ್ಯವಾದುದು ಜಾಹೀರಾತು. ಜಾಹೀರಾತು ಮಾಧ್ಯಮಗಳ ಜೀವನಾಡಿ. ಜಾಹೀರಾತುಗಳನ್ನು ಹೊರತುಪಡಿಸಿ ನಡೆಯುವ ಯಾವುದೇ ಮಾಧ್ಯಮ ಹೆಚ್ಚು ಕಾಲ ಉಳಿಯಲಾರದು. ಜಾಹೀರಾತು ಎಂದರೆ ಪ್ರಚಾರ ಮಾಧ್ಯಮ. ಇದು ಮಾಧ್ಯಮಗಳ ಅವಿಭಾಜ್ಯ ಅಂಗ. ಮಾಧ್ಯಮಗಳಿಗಿರುವ ಇನ್ನೊಂದು ಮುಖ್ಯ ಅನಿವಾರ್ಯತೆ ಗ್ರಾಹಕ. ಗ್ರಾಹಕನೇ ಇಲ್ಲವಾದರೆ ಪ್ರಚಾರ ಮಾಧ್ಯಮ ಯಾರಿಗೋಸ್ಕರ? ಸಮಾಜಕ್ಕೆ ಮಾಧ್ಯಮಗಳು ಹೇಗೆ ಅವಶ್ಯಕವೋ ಹಾಗೇ ಮಾಧ್ಯಮಗಳಿಗೂ ಜಾಹೀರಾತುಗಳು ತುಂಬಾ ಅತ್ಯಾವಶ್ಯಕ.

ಜಾಹೀರಾತುಗಳನ್ನು ಎನ್ಸೈಕ್ಲೋಪೀಡಿಯಾ ಬ್ರಿಟಾನಿಕಾ, A form of paid announcement intended to promote the sale of commodity or service, to advance an idea or to bring about some other effect desired by the advertiser ಎಂದು ಕರೆದಿದೆ. ಇದಕ್ಕೆ ಅಮೆರಿಕನ್ ಮಾರ್ಕೆಟಿಂಗ್ ಅಸೋಸಿಯೇಷನ್ ಹೀಗೆ ವ್ಯಾಖ್ಯೆ ನೀಡಿದೆ: Any paid form non-personal presentation and promotion of ideas, goods or services by an identified sponsor, ಅಂದರೆ ಆಕಾಶವಾಣಿ, ದೂರದರ್ಶನ, ಚಲನಚಿತ್ರ, ಪತ್ರಿಕೆ ಮುಂತಾದ ಯಾವುದೇ ಸಂವಹನ ವ್ಯವಸ್ಥೆಗೆ ಹಣ ಕೊಟ್ಟು, ಜಾಹೀರಾತುದಾರರು ತಮ್ಮ ಉತ್ಪನ್ನ, ಸೇವೆ ಅಥವಾ ಆಲೋಚನೆಗಳನ್ನು ಬಳಸುವಂತೆ ಜನರಿಗೆ ಜಾಹೀರು ಗೊಳಿಸುವ ಒಂದು ಪ್ರಕ್ರಿಯೆ.

ಅಂದರೆ ಒಂದು ವಿಧದಲ್ಲಿ ತಮ್ಮ ಉತ್ಪನ್ನ ಸೇವೆ ಮತ್ತು ಆಲೋಚನೆಗಳಿಗೆ ಪ್ರಚಾರವನ್ನು ಖರೀದಿ ಮಾಡುವುದು.

ಸಮೂಹ ಸಂವಹನ ಮಾಧ್ಯಮ ರೂಪಗಳಲ್ಲಿ ಜಾಹೀರಾತು ಒಂದು. ಇದು ವಾಣಿಜ್ಯ ಮತ್ತು ಮಾರುಕಟ್ಟೆಯ ಜಗತ್ತಿನೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿದೆ. ಮಾರುವವರಿಂದ ಕೊಳ್ಳುವವರಿಗೆ ಮಾಹಿತಿಯನ್ನು ಒದಗಿಸುವ ಶಕ್ತಿಯುತವಾದ ಸಾಧನ. ಇದು ಜನರ ಮೇಲೆ ಪ್ರೇರಣೆ ಬೀರಿ ಅವರು ನಂಬುವಂತೆಯೂ ಕ್ರಿಯಾಶೀಲರಾಗುವಂತೆಯೂ ಮನವೊಲಿಸುತ್ತದೆ; ಬಹುಜನರ ಬಾಳಿನ ಹಲವು ಕ್ಷೇತ್ರಗಳನ್ನು ಬಾಧಿಸುತ್ತದೆ. ಇದು ಮಾನವ ಸಮಾಜದ ಮೇಲೆ ಪ್ರಭಾವ ಬೀರುವುದಲ್ಲದೆ ಸಮೂಹದ ಮೌಲ್ಯ ಮತ್ತು ರಚನೆಯ ಚೌಕಟ್ಟಿನ ಕೆಲವು ಅಂಶಗಳನ್ನು ಪ್ರತಿಫಲಿಸುತ್ತದೆ. ಜಾಹೀರಾತನ್ನು ಹಲವು ರೂಪಗಳಲ್ಲಿ ಬಳಸುವುದಕ್ಕೆ ವಿಶಿಷ್ಟವಾದ ಮತ್ತು ಸ್ಪಷ್ಟವಾದ ಅನೇಕ ಕಾರಣಗಳಿವೆ. ಹೊಸ ಉತ್ಪನ್ನವನ್ನು ಅಥವಾ ಉದ್ಯೋಗವನ್ನು ತಿಳಿಸುವುದು, ಹೊಸ ಗ್ರಾಹಕರಿಗೆ ಮಾರುಕಟ್ಟೆಯನ್ನು ವಿಸ್ತರಿಸುವುದು, ವಸ್ತುಗಳಲ್ಲಾಗುವ ಬದಲಾವಣೆ ಅಥವಾ ಬೆಲೆ ಬದಲಾವಣೆಗಳನ್ನು ತಿಳಿಸುವುದು. ಗ್ರಾಹಕರಿಗೆ ತಲುಪಿಸುವುದು, ಪೈಪೋಟಿಯನ್ನು ಎದುರಿಸುವುದು, ಉದ್ಯೋಗಿಗಳನ್ನು ನೇಮಿಸುವುದು, ಬಂಡವಾಳ ಹೂಡುವವರನ್ನು ಆಕರ್ಷಿಸುವುದು ಮುಂತಾದುವು ಆ ಕಾರಣಗಳಲ್ಲಿ ಕೆಲವು. ಈ ಎಲ್ಲಾ ಕಾರಣಗಳಿಗಾಗಿಯೂ ಜಾಹೀರಾತನ್ನು ಸಿದ್ಧಪಡಿಸುವ ಕ್ರಿಯೆಯಲ್ಲಿ ಅಭಿವ್ಯಕ್ತಿ ಆಯ್ಕೆ ಅತಿ ಮುಖ್ಯವಾಗಿರುತ್ತದೆ. ಎಲ್ಲ ಬಗೆಯ ವರ್ತಕರಿಗೂ ಜಾಹೀರಾತು ಒಂದು ಅವಿಭಾಜ್ಯ ಅಂಶವಾಗಿದೆ. ವ್ಯಾಪಾರ ಮತ್ತು ಬಳಕೆದಾರ ವರ್ತನೆಯ ಮನೋವೈಜ್ಞಾನಿಕ ತತ್ವಗಳ ಲೇಖಕ ಸ್ಟೀವರ್ಟ್ ಎಚ್. ಬ್ರಿತ್, ಜಾಹೀರಾತಿನ ಮಹತ್ವವನ್ನು ಕುರಿತು, 'ಜಾಹೀರಾತು ಇಲ್ಲದೆ ವ್ಯಾಪಾರಮಾಡುವುದು ಕತ್ತಲಿನಲ್ಲಿ ಕನ್ಯೆಗೆ ಕಣ್ಣು ಹೊಡೆದಂತೆ! ನೀವು ಮಾಡುವುದು ನಿಮ್ಮನ್ನು ಬಿಟ್ಟು ಬೇರೆ ಯಾರಿಗೂ ಗೊತ್ತಾಗುವುದೇ ಇಲ್ಲ!' ಎಂದಿದ್ದಾರೆ (Chunnawalla, ೧೯೮೫:೧). ಜಾಹೀರಾತಿನ ಪ್ರಯೋಜನದ ಬಗ್ಗೆ ಮಧು (೧೯೯೬) ಈ ರೀತಿ ಹೇಳುತ್ತಾರೆ; ಜಾಹೀರಾತುಗಳು ಅನೇಕ ಬೆಳವಣಿಗೆಗಳನ್ನು ಪ್ರೇರೇಪಿಸುತ್ತವೆ, ಮಾರಾಟವನ್ನು ನಿಯಂತ್ರಿಸುತ್ತವೆ. ಜನರೂ ಸಂಸ್ಥೆಗಳೂ ಒಬ್ಬರನ್ನೊಬ್ಬರು ಪರಿಚಯ ಮಾಡಿಕೊಳ್ಳುವುದಕ್ಕೆ ಸಹಾಯ ಮಾಡುತ್ತವೆ, ಜಾಹೀರಾತು ಕಛೇರಿಗಳು, ಮಾರಾಟಕ್ಕೆ ಮೆರಗು ನೀಡುವ ಸಂಸ್ಥೆಗಳು. ಪ್ರದರ್ಶನೋದ್ಯಮದಲ್ಲಿ ಸಾವಿರಾರು ಉದ್ಯೋಗಗಳನ್ನು ಸೃಷ್ಟಿಸುತ್ತವೆ ಮತ್ತು ಅವಕ್ಕೆ ಆಧಾರವಾಗಿರುತ್ತವೆ. ಎಲ್ಲ ಕಡೆಯೂ ಸರ್ಕಾರವೇ ಬಹುಪಾಲು ಜಾಹೀರಾತುದಾರನಾಗಿರುತ್ತದೆ. ಹಣ ಹೂಡುವ ಹೊರ ದೇಶದವರು ಮತ್ತು ಪ್ರವಾಸಿಗರನ್ನು ಆಕರ್ಷಿಸುವುದಕ್ಕೆ ಜಾಹೀರಾತನ್ನೇ ನಂಬಿರುತ್ತಾರೆ. ಸೈನ್ಯ, ನೌಕಾಪಡೆ, ವಾಯುಪಡೆ ಮುಂತಾದುವುಗಳಿಗೆ ಯುವಕರನ್ನು ಸೇರಿಸಿಕೊಳ್ಳುವುದಕ್ಕೂ ವಾಹನ ಸಂಚಾರ, ತೆರಿಗೆ, ಔಷಧ ಕಾಯಿದೆ ಮತ್ತು ಮತವನ್ನು ಚಲಾಯಿಸುವ ಹಕ್ಕು ಮುಂತಾದವುಗಳನ್ನು ಕುರಿತು ತಿಳಿವಳಿಕೆ ನೀಡುವುದಕ್ಕೂ ಸರ್ಕಾರ ದೇಶದ

ಒಳಗೇ ಜಾಹೀರಾತು ಮಾಡುತ್ತದೆ. ಅನೇಕ ಲಕ್ಷಣ, ಗುರುತುಗಳಿರುವ ವಸ್ತುಗಳಲ್ಲಿ ಆಯ್ಕೆ ಮಾಡುವ ಅಧಿಕಾರವನ್ನು ಜಾಹೀರಾತು ಜನರಿಗೆ ನೀಡುತ್ತವೆ. ಬಳಕೆದಾರರು ಒಳ್ಳೆಯ ಗುಣಮಟ್ಟ ಮತ್ತು ಕಡಿಮೆ ಬೆಲೆಯ ವಸ್ತುಗಳನ್ನು ಕೊಂಡುಕೊಳ್ಳುವುದಕ್ಕೆ ಸಹಾಯ ಮಾಡುತ್ತವೆ. ಜಾಹೀರಾತು ಇಲ್ಲವಾದರೆ ಜನರು ಕಳಪೆ ಗುಣಮಟ್ಟದ ಗುರುತುಗಳುಳ್ಳ ವಸ್ತುಗಳನ್ನು ಹೆಚ್ಚು ಬೆಲೆ ಕೊಟ್ಟು ಕೊಂಡು ವಂಚಿತರಾಗಬೇಕಾಗುತ್ತದೆ.

ಸುದ್ದಿಯನ್ನು ಹರಡಿಸುವ ಜಾಹೀರಾತಿನ ರೂಪವು ಪ್ರಾಚೀನ ಗ್ರೀಕ್ ಮತ್ತು ರೋಮ್ ನಗರಗಳಲ್ಲಿ ಇತ್ತು ಎಂದೂ ವಸ್ತುಗಳು ಅಥವಾ ಸೇವೆಯನ್ನು ಕುರಿತ ಸುದ್ದಿಯನ್ನು ಹರಡಿಸುವುದಕ್ಕೆ ಕೂಗುವವನು/ಡಂಗೂರ ಹೊಡೆಯುವವನು ಮತ್ತು ಚಿಹ್ನೆಗಳು ಉಪಯೋಗವಾದವು ಎಂದು ಚುನಾವಲ್ಲ ಹೇಳುತ್ತಾರೆ. ಈ ಪ್ರಯೋಗವು ಮಧ್ಯಮ ಕಾಲದವರೆಗೂ ಮುಂದುವರೆಯಿತು. ೧೭ನೇ ಶತಮಾನದಲ್ಲಿ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಪತ್ರಿಕೆಗಳು ಪ್ರಾರಂಭವಾದಾಗ ಪತ್ರಿಕಾ ಜಾಹೀರಾತುಗಳು ಬೆಳೆಯುವುದಕ್ಕೆ ಪ್ರಾರಂಭವಾದವು. ಹೇಗಿದ್ದರೂ ೧೯ನೇ ಶತಮಾನದ ಕೊನೆಯಲ್ಲಿ ಅಂದರೆ ತಾಂತ್ರಿಕ ವಿಷಯಗಳು ಮತ್ತು ಹೆಚ್ಚು ಉತ್ಪಾದನೆ ಮಾಡುವ ಯುಕ್ತಿಗಳು ಸಾಕಷ್ಟು ಅಭಿವೃದ್ಧಿ ಪಡೆದಾಗ ಜಾಹೀರಾತಿಗೆ ಒಂದು ದೊಡ್ಡ ಅವಕಾಶ ದೊರೆಯಿತು. ಈ ಶತಮಾನದಲ್ಲಿ ಬಾನುಲಿ, ದೂರದರ್ಶನ ಮುಂತಾದ ಸಮೂಹ ಸಂವಹನಗಳು ಬಂದ ಮೇಲೆ ಜಾಹೀರಾತು ಕ್ಷೇತ್ರ ಕ್ರಾಂತಿಕಾರಕವಾಯಿತು. ಪತ್ರಿಕೆಗಳು ವಿದ್ಯಾವಂತರಿಗೆ ಉಪಯೋಗವಾದರೆ ಬಾನುಲಿ, ದೂರದರ್ಶನಗಳು ವಿದ್ಯಾವಂತರು, ಅವಿದ್ಯಾವಂತರು ಇಬ್ಬರಿಗೂ ಉಪಯೋಗವಾದವು. ದೂರದರ್ಶನ ಮತ್ತು ಬಾನುಲಿಗಳು ಗ್ರಾಮ ಮತ್ತು ನಗರಗಳ ಪ್ರಸಿದ್ಧ ಮಾಧ್ಯಮಗಳಾದವು.

ಹ್ಯಾರಿಸ್ ಮತ್ತು ಸೆಲ್ಡನ್ ಎಂಬುವವರು ಜಾಹೀರಾತು ಎಂಬುವುದು ಸಂತೆಗೆ ಬರುವ ವಸ್ತುಗಳು ಮತ್ತು ಸೇವೆಗಳ ಮಾರಾಟವನ್ನು ಹೆಚ್ಚಿಸುವ ಸಲುವಾಗಿ ಮಾಹಿತಿಗಳನ್ನು/ಸುದ್ದಿಗಳನ್ನು ಹರಡಿಸುವುದಕ್ಕಾಗಿ ರೂಪಿಸಿದ ಸಾರ್ವಜನಿಕ ಸೂಚನಾ ಪತ್ರ ಎನ್ನುತ್ತಾರೆ. ಜಾಹೀರಾತು ಏನನ್ನು ಮಾರಬೇಕು ಎಂಬುದನ್ನು ಅಥವಾ ಕೊಂಡುಕೊಳ್ಳಬಯಸುವುದು ಏನನ್ನು ಎಂಬುದನ್ನು ತಿಳಿದುಕೊಳ್ಳುವಂತೆ ಮಾಡುತ್ತದೆ. ಶೆರ್ಲರ್ಲೆಕರ್, ಜಾಹೀರಾತುದಾರರು ತಮ್ಮ ಜಾಹೀರಾತು ಪ್ರಕಟವಾಗುವ ಸ್ಥಳ, ಸಮಯಗಳಿಗೆ ಹಣ ಪಾವತಿಸಬೇಕಾಗಿರುವುದರಿಂದ ಅದನ್ನು ಹಣ ಕೊಟ್ಟು ಮಾಡುವ ಸಂವಹನ ಎನ್ನುತ್ತಾರೆ. ದಿನಪತ್ರಿಕೆಗಳು, ಬಾನುಲಿ, ದೂರದರ್ಶನ, ಚಲನಚಿತ್ರ, ಭಿತ್ತಿಪತ್ರ ಮುಂತಾದ ಅಂಗೀಕೃತ ಮಾಧ್ಯಮಗಳಲ್ಲಿ ಜಾಹೀರಾತುಗಳು ಕಾಣಿಸಿಕೊಳ್ಳುತ್ತವೆ. ಶಕ್ತಿಯುತವಾದ ಸಂವಹನದ ಮೂಲಕ ಒಂದು ಉತ್ಪನ್ನ, ಸೇವೆ ಅಥವಾ ವಿಚಾರವನ್ನು ಮಾರುವುದೇ ಜಾಹೀರಾತಿನ ಮೊಟ್ಟಮೊದಲ ಉದ್ದೇಶವಾಗಿರುತ್ತದೆ.

ಮುದ್ರಣ ಮಾಧ್ಯಮಗಳಲ್ಲಿನ ಜಾಹೀರಾತುಗಳೇ ಹಳೆಯವು ಮತ್ತು ದೊಡ್ಡವು. ಇತರ ಮಾಧ್ಯಮಗಳಿಗಿಂತ ದಿನಪತ್ರಿಕೆ ಮತ್ತು ಸಂಚಿಕೆಗಳಿಗೆ ಜಾಹೀರಾತುದಾರರು

ಹೆಚ್ಚು ಹಣವನ್ನು ಖರ್ಚು ಮಾಡುತ್ತಾರೆ. ಭಾರತದಲ್ಲಿ ಪ್ರತಿ ನೂರು ರೂಪಾಯಿಯಲ್ಲಿ ೬೦ ರೂಪಾಯಿ ಸಂಚಿಕೆಗಳಲ್ಲಿ ಬರುವ ಜಾಹೀರಾತಿಗೆ ಖರ್ಚಾಗುತ್ತದೆ (ನೋಡಿ: ಚುನಾವಲ್ಲ, ೧೯೮೫; ವಿನಾಯಕ ಮೂರ್ತಿ, ೧೯೮೯). ಸಂಚಿಕೆಗಳಲ್ಲಿ ಬರುವ ಜಾಹೀರಾತುಗಳಿಗೆ ಅದರದೇ ಆದ ವಿಶಿಷ್ಟತೆಗಳಿವೆ. ಚಂದಾದಾರರು ಪತ್ರಿಕೆಯ ನಿರ್ದಿಷ್ಟ ಸಂಚಿಕೆಗಳನ್ನು ಇಟ್ಟುಕೊಂಡು ಹಲವು ಬಾರಿ ಓದಬಹುದು. ಇದು ಸಂಚಿಕೆಗಳಲ್ಲಿ ಬರುವ ಜಾಹೀರಾತುಗಳು ಓದುವವರ ಗಮನವನ್ನು ಪೂರ್ತಿಯಾಗಿ ಸೆಳೆಯುತ್ತವೆ. ಅಲ್ಲದೆ ಜಾಹೀರಾತುಗಳ ಬಣ್ಣದ ಮುದ್ರಣ ಮತ್ತು ಗುಣಮಟ್ಟ ಚೆನ್ನಾಗಿವೆ. ಒಂದು ಸಾಧಾರಣ ಜಾಹೀರಾತಿನ ಅಂಶಗಳಾಗಿ ಶೀರ್ಷಿಕೆ, ಮಾಹಿತಿ ಭಾಗ, ಮುಖ್ಯ ಸೂಚನೆ, ಸ್ಥಾಯಿ ಸೂಚನೆ ಮತ್ತು ನಿದರ್ಶನ ದೃಶ್ಯಗಳು ಮುಂತಾದುವು ಬರುತ್ತವೆ. ಸಾಧಾರಣವಾಗಿ ಶೀರ್ಷಿಕೆಗಳು ಯಾವಾಗಲೂ ಜಾಹೀರಾತಿನ ಮೇಲ್ಭಾಗದಲ್ಲಿ ಇರುತ್ತವೆ. ಬೇರೆ ಬೇರೆ ಗಾತ್ರದಲ್ಲಿರುವ ದಪ್ಪ ಅಕ್ಷರಗಳಲ್ಲಿ ಮುದ್ರಿತವಾಗಿರುತ್ತವೆ. ಇದರಲ್ಲಿ ಜಾಹೀರಾತಿನ ಮುಖ್ಯ ಸುದ್ದಿಗಳು ಸಂಕ್ಷಿಪ್ತವಾಗಿಯೂ ತಿಳಿಯಾಗಿಯೂ ಅಡಕವಾಗಿಯೂ ಇದ್ದು ಓದುವವರನ್ನು ಆಕರ್ಷಿಸುವುದಕ್ಕಾಗಿ ಆವರ್ತನಗೊಂಡಿರುತ್ತವೆ. ಹೆಚ್ಚಿನ ಓದುಗರು ಮುಖ್ಯವಾದ ಮಾಹಿತಿಗಳನ್ನು ತಿಳಿದುಕೊಳ್ಳುವುದಕ್ಕೆ ಶೀರ್ಷಿಕೆಯನ್ನೇ ನಂಬಿರುತ್ತಾರೆ. ಜಾಹೀರಾತಿನ ಮುಖ್ಯಭಾಗ, ಒಡಲು ಅಥವಾ ಮಾಹಿತಿಭಾಗ. ಇದರಲ್ಲಿ ಮಾಹಿತಿಗಳು ಹಲವು ಉಪಶೀರ್ಷಿಕೆಗಳ ಅಡಿಯಲ್ಲಿ ಹಲವು ಭಾಗಗಳಾಗಿ ಬರುತ್ತವೆ. ಇವುಗಳು ವಸ್ತುಗಳನ್ನು ಕುರಿತ ಎಲ್ಲಾ ವಿವರಗಳನ್ನು ನೀಡುತ್ತವೆ. ಮುಖ್ಯ ಸೂಚನೆ ಎನ್ನುವುದು ವಸ್ತುವಿನ ಹೆಸರನ್ನು ಸೂಚಿಸುವುದು. ಇದರ ಜೊತೆಗೆ ಬೆಲೆಪಟ್ಟಿ, ಘೋಷಣೆ, ವ್ಯಾಪಾರ ಚಿಹ್ನೆ ಮುಂತಾದವುಗಳು ಬರುತ್ತವೆ. ಸ್ಥಾಯಿ ಸೂಚನೆ ಎಂದರೆ ಗುರುತಿನ ಚೀಟಿ, ಸ್ಥಾಪನದ ವಿಳಾಸ ಮುಂತಾದವು. ವಸ್ತುವನ್ನು ಮತ್ತು ವ್ಯಕ್ತಿಯನ್ನು ಚಿತ್ರಿಸುವ ಮುದ್ರಿತ ದೃಶ್ಯಗಳನ್ನು ನಿದರ್ಶನ ಎನ್ನುತ್ತಾರೆ. ಸಂಚಿಕೆಗಳ ಸ್ಥಳವನ್ನು ಜಾಹೀರಾತುಗಳಿಗೆ ಮಾರುತ್ತಾರೆ.

ಬಾನುಲಿ ಮತ್ತು ದೂರದರ್ಶನಗಳು ಪ್ರಚಾರ ಮಾಧ್ಯಮಗಳು. ಬಾನುಲಿಯಲ್ಲಿ ಧ್ವನಿಯ ಮೂಲಕ ಸಂವಹನ ನಡೆಯುತ್ತದೆ. ಆದರೆ ದೂರದರ್ಶನದಲ್ಲಿ ಧ್ವನಿ, ದೃಶ್ಯ ಮತ್ತು ಚಲನಗಳ ಮೂಲಕ ನಡೆಯುತ್ತದೆ. (ವಿವರಗಳಿಗೆ ನೋಡಿ ಜೆಫ್ಕಿನ್ಸ್, ೧೯೭೩). ಬಾನುಲಿಗೆ ಕೇಳುವುದು ಅವಶ್ಯವಾದರೆ ದೂರದರ್ಶನಕ್ಕೆ ಕೇಳುವುದು–ನೋಡುವುದು ಎರಡೂ ಆವಶ್ಯಕ. ಹಿನ್ನೆಲೆಯ ಸಂಗೀತ, ಧ್ವನಿಯೊಡನೆ ಅಥವಾ ಧ್ವನಿ ಇಲ್ಲದೆ ಬರುವ ಹಿನ್ನೆಲೆ ಸಂಗೀತ, ವಸ್ತುವಿನ ಧ್ವನಿ ಮತ್ತು ಬೇರೆ ಬೇರೆ ಧ್ವನಿಗಳು –ಇವುಗಳ ಮೂಲಕ ಬಾನುಲಿ ಮತ್ತು ದೂರದರ್ಶನಗಳ ಜಾಹೀರಾತುಗಳು ಮನಸ್ಸನ್ನು ಸೆಳೆಯುತ್ತವೆ. ಚಲಿಸುವ ಚಿತ್ರಗಳು ದೂರದರ್ಶನ ಜಾಹೀರಾತುಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡುತ್ತವೆ. ಬಾನುಲಿ ಮತ್ತು ದೂರದರ್ಶನಗಳ ಕಾರ್ಯ

ಚಟುವಟಿಕೆಗಳಲ್ಲಿ ಮಾತಿನ ಮೂಲಕ ಸಂವಹನಗಳು ನಡೆಯುವುದರಿಂದ ಪತ್ರಿಕೆಗಳ ಭಾಷೆಗಿಂತ ಆಡುಭಾಷೆಯ ಬಳಕೆ ಇಲ್ಲಿ ಅತ್ಯವಶ್ಯಕ.

ಜಾಹೀರಾತಿನ ವಿಷಯ ಮತ್ತು ಉದ್ದೇಶಗಳ ಮೇಲೆ ಅವುಗಳನ್ನು ವಾಣಿಜ್ಯ ಜಾಹೀರಾತುಗಳು ಮತ್ತು ವಾಣಿಜ್ಯೇತರ ಜಾಹೀರಾತುಗಳು ಎಂದು ವರ್ಗೀಕರಿಸಲಾಗಿದೆ. ವಾಣಿಜ್ಯೇತರ ಜಾಹೀರಾತುಗಳಲ್ಲಿ ಮಾರುವುದು ಮತ್ತು ಕೊಳ್ಳುವುದು ನಡೆಯುವುದಿಲ್ಲ. ಕೆಲವು ಸುದ್ದಿಗಳನ್ನು, ನೀತಿಗಳನ್ನು ಅಥವಾ ಬೇಡಿಕೆಗಳನ್ನು ಸರ್ಕಾರದ ಪ್ರತಿನಿಧಿಗಳು ಅಥವಾ ವಿವಿಧ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಪ್ರಚಾರ ಮಾಡುತ್ತವೆ. ಇದರ ಉದ್ದೇಶ ಧರ್ಮಕಾರ್ಯಗಳು, ರಾಜಕೀಯ ಪ್ರಚಾರ ಅಥವಾ ವಿವಿಧ ಸಮಾಜ ಕಲ್ಯಾಣ ಚಟುವಟಿಕೆಗಳಿಗೆ ಸಂಬಂಧಪಟ್ಟದ್ದಾಗಿರುತ್ತದೆ. ವಾಣಿಜ್ಯ ಜಾಹೀರಾತುಗಳು, ವಾಣಿಜ್ಯ ಬಳಕೆದಾರರ ಜಾಹೀರಾತುಗಳು ಮತ್ತು ಪ್ರತಿಷ್ಠಿತ ಜಾಹೀರಾತುಗಳು ಎಂದು ಎರಡು ವಿಧ. ವಾಣಿಜ್ಯ ಬಳಕೆದಾರರ ಜಾಹೀರಾತುಗಳಲ್ಲಿ ಬಳಕೆದಾರರ ವಸ್ತುಗಳು ಅಂದರೆ ಅಲಂಕಾರ ಸಾಮಗ್ರಿಗಳು ಮತ್ತು ಔಷಧಿಗಳು ಬರುತ್ತವೆ. ಬ್ಯಾಂಕುಗಳು ಮತ್ತು ಜೀವವಿಮೆ ಸಂಸ್ಥೆಗಳು ಮುಂತಾದವುಗಳ ಸೇವೆಯನ್ನು ಕುರಿತ ಜಾಹೀರಾತು ಪ್ರತಿಷ್ಠಿತ ಜಾಹೀರಾತುಗಳು. ಇವು ಎರಡರಲ್ಲಿ ಗುಣಮಟ್ಟ ಮತ್ತು ಪರಿಮಾಣದ ಆಧಾರದ ಮೇಲೆ ವಾಣಿಜ್ಯ ಬಳಕೆದಾರರ ಜಾಹೀರಾತುಗಳನ್ನು ಬಹು ಮುಖ್ಯವಾದವುಗಳಾಗಿ ಪರಿಗಣಿಸಲಾಗಿದೆ.

ಒಂದು ಯಶಸ್ವಿಯಾದ ಜಾಹೀರಾತು ಈ ಕಾರ್ಯಗಳನ್ನು ನಿರ್ವಹಿಸುತ್ತದೆ:

೧) ಬಳಕೆದಾರರ ಗಮನವನ್ನು ಸೆಳೆಯುವುದು.

೨) ಉತ್ಸಾಹವನ್ನು ಆಸಕ್ತಿಯನ್ನು ನಿಯಂತ್ರಿಸುವುದು.

೩) ಬಳಕೆದಾರರಿಗೆ ಆಸಕ್ತಿಯನ್ನು ಮೂಡಿಸುವುದು.

೪) ಬಳಕೆದಾರರ ನಂಬಿಕೆಗೆ ಸ್ಫೂರ್ತಿ ನೀಡುವುದು.

೫) ಕ್ರಿಯಾಶೀಲತೆಗೆ ಪ್ರೇರಣೆ ನೀಡುವುದು.

ಈ ಐದು ಕಾರ್ಯಗಳನ್ನು ಒಂದು ಜಾಹೀರಾತು ನೆರವೇರಿಸಬೇಕೆಂದು ನಿರೀಕ್ಷಿಸಲಾಗಿದೆ (ಸಿ. ಜೆಫ್ಕಿನ್ಸ್, ೧೯೭೩; ವೆಸ್ಟರ್ ಗಾರ್ಡ್ ಮತ್ತು ಶ್ರೋಡ್ರ್, ೧೯೮೫). ಈ ಐದು ಕಾರ್ಯಗಳೂ ಒಂದಕ್ಕೊಂದು ಪೂರಕವಾದವು. ಇವು ಜಾಹೀರು ಗೊಳಿಸುವ ಉತ್ಪನ್ನಗಳ ಮಾರಾಟವನ್ನು ಹೆಚ್ಚಿಸುವ ಸೇವೆಯನ್ನು ಮಾಡುತ್ತವೆ. ಜಾಹೀರಾತಿನ ಈ ಕಾರ್ಯಗಳನ್ನು ಪೂರೈಸುವಲ್ಲಿ ಜಾಹೀರಾತಿನಲ್ಲಿ ಬರುವ ಶಕ್ತಿಯುತವಾದ ಭಾಷಾ ಬಳಕೆ ಎಲ್ಲಕ್ಕಿಂತ ಮುಖ್ಯವೆನಿಸುತ್ತವೆ. ಹೀಗೆ ಜಾಹೀರಾತು ಮತ್ತು ಪತ್ರಿಕೆಗಳು ಪರಸ್ಪರ ಒಂದಕ್ಕೊಂದು ಪೂರಕವಾದವು.

ಪರಾಮರ್ಶನ ಗ್ರಂಥಗಳು

೧	ಚಂದ್ರಶೇಖರ್ ಬಿ.ಎಸ್.	೨೦೦೩	ಸಂವಹನ ಮಾಧ್ಯಮಗಳು ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
೨	ಪೂರ್ಣಿಮಾ ಟಿ.ಎಸ್.	೨೦೦೩	ಆಧುನಿಕ ಸಂವಹನ ಮಾಧ್ಯಮಗಳು ಮತ್ತು ಕನ್ನಡ ಅಭಿವೃದ್ಧಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ
೩	Chunawalla Sethia	1985	Foundation of Advertising Theory and Advertising Himalaya Publishing House Bombay
೪	Harris R and Seldon A.	1962	Advertising and the Public Longmans London
೫	Madhu S.R.	1996	'The Visible Persuaders An Over view of Advertising in India and US' Span xxxvii, 3, PP. 15-23
೬	Santhia Bai	1999	Language of Advertisements in Tamil Mass Media Unpublished Ph D Dissertation University of Mysore

ಮಾಹಿತಿ ಹಕ್ಕಿನ ಸಬಲೀಕರಣದಲ್ಲಿ ನ್ಯಾಯಾಂಗದ ಪ್ರಭಾವ ಮತ್ತು ಪರಿಣಾಮಗಳು

ಆರ್. ಸೋಮಪ್ಪ ಮತ್ತು ಬಿ.ಪಿ. ವಿಜಯರಾಜು

ಮಾಹಿತಿ ಹಕ್ಕು ೧೭೬೬ರಲ್ಲಿ ಸ್ವೀಡನ್ ದೇಶದಲ್ಲಿ ಜನ್ಮತಾಳಿ ಆ ದೇಶದ ಸಂಪತ್ತು ಮತ್ತು ರಾಜನಿಂದ ಅತ್ಯುತ್ಕೃಷ್ಟ ಮಟ್ಟದಲ್ಲಿ ಉತ್ತೇಜನ ಪಡೆಯಿತು. ಆದರೆ ೧೯೬೬ರಲ್ಲಿ ಅಮೇರಿಕಾ ದೇಶ ಇದಕ್ಕೆ ಸಂಬಂಧಿಸಿದ ಕಾಯ್ದೆಗೆ ಮೊದಲ ಮುನ್ನಡಿ ಇಟ್ಟಿತು. ಅನಂತರ ಅನೇಕ ಪಾಶ್ಚಾತ್ಯ ಪ್ರಜಾಸತ್ತಾತ್ಮಕ ರಾಷ್ಟ್ರಗಳು ಈ ಕಾಯ್ದೆಯ ಬಗ್ಗೆ ಆಸಕ್ತಿ ತೋರಿ ಅನುಸರಿಸಲಾರಂಭಿಸಿದವು. ೨೦೦೦ನೇ ಇಸವಿಯ 'ಇಯು ಚಾರ್ಟರ್ ಆಫ್ ಫಂಡಮೆಂಟಲ್ ರೈಟ್ಸ್'ನಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಮೂಲ ದಾಖಲೆಗಳಲ್ಲಿನ ಮಾಹಿತಿ ಪರಿಶೀಲನೆಗೆ ಒತ್ತು ನೀಡಲಾಯಿತು. ಸುಮಾರು ೨೦೧೦ರ ಸುಮಾರಿಗೆ ಇಡೀ ವಿಶ್ವದಲ್ಲಿ ೮೫ಕ್ಕಿಂತ ಹೆಚ್ಚು ರಾಷ್ಟ್ರಗಳು ಮಾಹಿತಿ ಹಕ್ಕಿಗೆ ಸಂಬಂಧಿಸಿದ ಕಾಯ್ದೆ ಮತ್ತು ನಿಯಮಗಳನ್ನು ಅಳವಡಿಸಿಕೊಂಡಿವೆ. ಮುಂದುವರಿಯುತ್ತಿರುವ ರಾಷ್ಟ್ರಗಳಾದ ಚೀನಾ ಮತ್ತು ಭಾರತಗಳಂತೂ ಇದರಲ್ಲಿ ಹೆಚ್ಚಿನ ಆಸಕ್ತಿ ತೋರಿರುವುದು ಕಂಡುಬರುತ್ತದೆ.

ಇಡೀ ಜಗತ್ತಿನಲ್ಲಿಯೇ ಭಾರತೀಯ ಸಂವಿಧಾನ ಅತ್ಯಂತ ವಿಶಾಲವಾದುದು ಎಂಬುದು ಅಗ್ಗಳಿಕೆಯ ವಿಷಯ. ಇದರೊಟ್ಟಿಗೆ ಸಾವಿರಾರು ಅಪರಾಧಿಕ ಮತ್ತು ದಿವಾನಿಯಂತಹ ಪೂರಕ ಕಾನೂನುಗಳು ಇವೆ. ಯಾರ ಹಕ್ಕಿಗೂ ಚ್ಯುತಿ ಬರಬಾರದು, ಯಾರ ಹಕ್ಕೂ ಉಲ್ಲಂಘನೆಯಾಗಬಾರದು, ಯಾರಿಗೂ ಅನ್ಯಾಯವಾಗಬಾರದು ಎಂಬುದು ಇವುಗಳ ಸದುದ್ದೇಶ. ಪ್ರಸುತ್ತ ದಿನಮಾನಗಳಲ್ಲಿ ಮಾನವ ತನಗೆ ಅನ್ಯಾಯವಾದಾಗ ನ್ಯಾಯಾಲಯದದ ಬಾಗಿಲನ್ನು ತಟ್ಟುತ್ತಿದ್ದ. ಈಗ ಪರಿಸ್ಥಿತಿ ಬದಲಾಗಿದೆ; ಕಾನೂನಿನ ಪರಿಧಿಯನ್ನು ಅತ್ಯಂತ ವಿಶಾಲವಾಗಿ ಅರ್ಥೈಸಿಕೊಂಡ ಪರಿಣಾಮ ಸಾಮಾನ್ಯ ಸಂದರ್ಭಗಳಲ್ಲಿಯೂ ಬೇರೆಯವರ ಅಂದರೆ ಸಾರ್ವಜನಿಕ

ಹಿತಕ್ಕಾಗಿಯೂ ಕಾನೂನಿನ ಮೊರೆಹೋಗುವಂತಹ ವಿಶಿಷ್ಟ ಸಂದರ್ಭಗಳು ಉದ್ಭವವಾಗಿರುವುದಕ್ಕೆ ನಮ್ಮ ಕಣ್ಣಮುಂದೆ ನಿದರ್ಶನಗಳಿವೆ. ಉದಾಹರಣೆಗೆ, ಸಂವಿಧಾನವನ್ನು ಒಳಗೊಂಡಂತೆ ಮಾಹಿತಿಹಕ್ಕು ಅಧಿನಿಯಮ, ಸಾರ್ವಜನಿಕ ಅಧಿಲೇಖಗಳ ಅಧಿನಿಯಮ, ತನಿಖಾ ಆಯೋಗ ಅಧಿನಿಯಮ ಇವೇ ಮುಂತಾದವುಗಳು.

ಮಾಹಿತಿ ಹಕ್ಕನ್ನು ಬಳಸಲಿ, ಬಿಡಲಿ ಅದನ್ನು ದೇಶದ ಸರ್ವೋಚ್ಚ ನ್ಯಾಯಾಲಯ ಮೂಲಭೂತಹಕ್ಕೆಂದು ಮಾನ್ಯ ಮಾಡಿದೆ. ವ್ಯಕ್ತಿಯು ನ್ಯಾಯಾಲಯ ಅಥವಾ ಸಾರ್ವಜನಿಕ ಅಧಿಕಾರಿಯ ಸಮಕ್ಷಮ ಮಾಹಿತಿಯನ್ನು ಪ್ರಶ್ನಿಸುವ ಅರ್ಹತೆ ಪಡೆದಿದ್ದಾನೆ. ಇದಕ್ಕೆ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳಲ್ಲಿ ಆಗಿರುವ ಮಹತ್ತರ ಬೆಳವಣಿಗೆಗಳು ಪ್ರಮುಖ ಕಾರಣ.

ಪ್ರಸ್ತುತ ದಿನಮಾನಗಳಲ್ಲಿ ಸರ್ಕಾರದ ಕಾರ್ಯಗಳನ್ನು ಹತೋಟಿಯಲ್ಲಿಡಲು, ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು, ಸಾರ್ವಜನಿಕರ ಹಿತಕಾಪಾಡಲು ಈ ರೀತಿಯ ನಿರಂತರ ಬೆಳವಣಿಗೆಗಳ ಅಗತ್ಯ ಕಂಡುಬರುತ್ತದೆ.

ಭಾರತ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು ಪ್ರಜೆಗಳೇ ಪ್ರಭುಗಳು. ದುರದೃಷ್ಟವಶಾತ್ ನಮ್ಮ ಜನರ ಸಂವಿಧಾನ ತಿಳಿವಳಿಕೆಯ ವೈಫಲ್ಯ, ಮೌಢ್ಯ, ಹಾಗೂ ಜಡ್ಡುಗಟ್ಟಿದ ಮನಃಸ್ಥಿತಿ –ಇವುಗಳಿಂದ, ಹಾಗೂ ಬಡವನ ಕೋಪ ದವಡೆಗೆ ಮೂಲ, ಬಡವಾ ನೀನು ಮಡಗಿದ ಹಾಗಿರು, ಊರ ಉಸಾಬರಿ ನನಗ್ಯಾಕೆ ಎಂಬಂತಹ ಉಡಾಫೆಯ ಧೋರಣೆಗಳಿಂದ ಪ್ರಶ್ನಿಸಬೇಕಾದ ಸನ್ನಿವೇಶಗಳಿಂದ ಹಿಂದೆ ಸರಿದಿರುವುದು ಕಂಡುಬರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳ ಅಧಿಕಾರಿಗಳು ಹಾಗೂ ಸಿಬ್ಬಂದಿವರ್ಗ ಅಧಿಕಾರ ದರ್ಪದಿಂದ ತಿಳಿಯಾದ ವ್ಯವಸ್ಥೆಯನ್ನು ರಾಡಿಮಾಡುವುದರಲ್ಲಿ ಸಂಶಯವಿಲ್ಲ. ಇಂತಹ ಸಂದಿಗ್ಧ ಸಂದರ್ಭದಲ್ಲಿ ವ್ಯವಸ್ಥೆಯನ್ನು ದುರುಪಯೋಗಪಡಿಸಿಕೊಳ್ಳುವವರ ವಿರುದ್ಧ ಸಮರ ಸಾರಲು ಮಾನವನ ಬತ್ತಳಿಕೆಗೆ ಬಂದು ಸೇರಿರುವ ದಿವ್ಯಾಸ್ತ್ರವೇ ಮಾಹಿತಿ ಹಕ್ಕು ಅಧಿನಿಯಮ–೨೦೦೫.

ಮಾಹಿತಿ ಎಂದರೇನು?

ಲ್ಯಾಟಿನ್‌ನ 'ಫಾರ್ಮೇಷನ್' ಮತ್ತು 'ಫಾರ್ಮ್' ಎಂಬ ಪದದಿಂದ ಮಾಹಿತಿ ಎಂಬ ಪದ ಬಂದಿದ್ದು, ಆಕಾರ, ನಮೂನೆ ಎನ್ನಬಹುದಾಗಿದ್ದು, ಒಟ್ಟಾರೆಯಾಗಿ ಮಾಹಿತಿ ಎಂದರೆ ಯಾವುದೇ ನಮೂನೆಯ ಪುರಾವೆಗಳು, ಅಭಿಲೇಖನಗಳು, ದಸ್ತಾವೇಜುಗಳು, ಮೆಮೋಗಳು, ಇ–ಮೇಲ್‌ಗಳು, ಅಭಿಪ್ರಾಯಗಳು, ಸಲಹೆಗಳು, ಪತ್ರಿಕಾ ಪ್ರಕಟಣೆಗಳು, ಸುತ್ತೋಲೆಗಳು, ಆದೇಶಗಳು, ಸಂಚಾರ ಪುಸ್ತಕಗಳು, ಕರಾರುಗಳು, ವರದಿಗಳು, ಒಡಂಬಡಿಕೆಗಳು ಕಾಗದ ಪತ್ರಗಳು, ಮಾದರಿಗಳು, ಆಕೃತಿಗಳು, ಅಂಕಿ ಅಂಶಗಳು, ವಿದ್ಯುನ್ಮಾನ ಪ್ರಕಾರ ಮಾಹಿತಿಗಳು, ಸಾರ್ವಜನಿಕ ಪ್ರಾಧಿಕಾರ'ದ'

ಮೂಲಕ ಅವಲೋಕಿಸಬಹುದಾದ ಖಾಸಗಿ ನಿಕಾಯಕ್ಕೆ ಸಂಬಂಧಿಸಿದ ವಿವರಣೆಗಳನ್ನು ಮಾಹಿತಿಗಳೆನ್ನಬಹುದು(http://www.rrtd.nic.in/RTI-RRTD.htm). ಅಂದರೆ ಇದು ಎಲ್ಲ ಬಗೆಯ ಮಾಹಿತಿಗಳನ್ನೂ ಒಳಗೊಳ್ಳುವುದಿಲ್ಲ, ಪ್ರಶ್ನಿತ ಮಾಹಿತಿಯನ್ನು ಪ್ರಾಧಿಕಾರವು ದಾಖಲು ಮಾಡಿಕೊಂಡಿದ್ದು, ಮಾಹಿತಿ ಕೋರಿದಾಗ ಪ್ರಸರಣಕ್ಕೆ ಸಿದ್ಧಪಡಿಸಿಕೊಂಡಿರಬೇಕಾಗುತ್ತದೆ. ಒಟ್ಟಾರೆಯಾಗಿ ಮಾಹಿತಿಯು ಆಡಳಿತಕ್ಕೆ ಸಂಬಂಧಿಸಿರಬೇಕು. ಹಾಗೂ ಕಾಯ್ದೆಯಡಿಯಲ್ಲಿ ಸಾರ್ವಜನಿಕ ಪ್ರಾಧಿಕಾರವು ಪ್ರಚುರಪಡಿಸುವ ಅಥವಾ ಪ್ರಜೆಯು ಕೋರಿದಾಗ ನೀಡುವ ಕಟ್ಟುಪಾಡನ್ನು ಹೊಂದಿರಬೇಕು, ಖಾಸಗಿ ನಿಕಾಯ ಅಥವಾ ವ್ಯಕ್ತಿಯ ಕುರಿತು ಯಾವುದೇ ಕಾನೂನಿನನುಸಾರ ಸಾರ್ವಜನಿಕ ಪ್ರಾಧಿಕಾರವು ದಾಖಲಿಸಿಕೊಂಡಿರುವ ಯಾವುದೇ 'ಮಾಹಿತಿ' ಕಾಯ್ದೆಯ ಪರಿಮಿತಿಗೆ ಬರುವುದು, ಕಾಯ್ದೆಯು ಗೊತ್ತುಪಡಿಸಿರುವ ನಿಬಂಧನೆಗಳಿಗೆ ಒಳಪಟ್ಟು ಖಾಸಗಿ ನಿಕಾಯಕ್ಕೆ ಅಥವಾ ವ್ಯಕ್ತಿಗೆ ಸಂಬಂಧಿಸಿದ, ಆದಾಯ ತೆರಿಗೆ ಸಲ್ಲಿಕೆ ಸಂಬಂಧಿಸಿದ ಮಾಹಿತಿ ಪಡೆಯಬಹುದು(K.A. Madhusoodan and C.N. Manjappa, 2005).

ಮುಕ್ತ ನಿಷ್ಪಕ್ಷಪಾತ, ಪಾರದರ್ಶಕ ಆಡಳಿತ, ಪ್ರಜಾಪ್ರಭುತ್ವದ ಮೂಲಸ್ಥಂಭ. ರಾಷ್ಟ್ರದ ಭದ್ರತೆ, ಶಾಂತಿ, ಸುವ್ಯವಸ್ಥೆಯ ಕಾರ್ಯ ಹೊರತುಪಡಿಸಿ ಆಡಳಿತ ದುರುಪಯೋಗ ತಡೆದು ನಾಗರಿಕರಿಗೆ ಇರುವ ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಪ್ರಶ್ನಿಸುವ ಸ್ವಾತಂತ್ರ್ಯಕ್ಕೆ ಪೂರಕವಾಗಿ ನ್ಯಾಯಾಂಗ ಕಾರ್ಯನಿರ್ವಹಿಸುವುದರೊಟ್ಟಿಗೆ ಮಾಹಿತಿ ಹಕ್ಕು ಅಧಿನಿಯಮದ ಗರ್ಭೀಕೃತ ನಿಯಮವಾದ ಪ್ರಜೆಗಳೇ ಪ್ರಭುಗಳು ಎಂಬ ನಿಯಮವನ್ನು ನ್ಯಾಯಾಂಗವು ಸುಭದ್ರಗೊಳಿಸಿ ಸಾಧಿಸಿ ತೋರಿಸಿರುವುದನ್ನು ಅನೇಕ ಪ್ರಕರಣಗಳಲ್ಲಿ ಕಾಣಬಹುದಾಗಿದೆ.

ಮಾಹಿತಿ ಹಕ್ಕು ಸಬಲೀಕರಿಸುವಲ್ಲಿ ನ್ಯಾಯಾಂಗದ ಪ್ರಕ್ರಿಯೆ

ಸಮಾಜ ವ್ಯವಸ್ಥೆಯಲ್ಲಿ ಜೀವನ ನಿರ್ವಹಣೆ ಮಾಡುತ್ತಿರುವ ಪ್ರತಿಯೊಬ್ಬ ಜೀವಿ ಭೌತಿಕವಾಗಿ ಸರ್ವ ಸ್ವತಂತ್ರ ಹಾಗೂ ಮುಕ್ತನೆಂದು ಕಂಡುಬಂದರೂ ಆಂತರಿಕವಾಗಿ ಪರತಂತ್ರಿ ಅಥವಾ ದಾಸನಾಗಿಯೇ ಇದ್ದಾನೆ. ಬದುಕು ಎಂಬುದು ಕೊಡು–ಕೊಳ್ಳುವಿಕೆಯ ವಿನಿಮಯ ವ್ಯವಹಾರ. ಒಬ್ಬರಿಗೊಬ್ಬರು ಸಹಕಾರ, ಸಹಬಾಳ್ವೆ ಸೌಹಾರ್ದಗಳಿಂದ ಜೀವನ ನಿರ್ವಹಣೆ ಮಾಡಿದರೆ ಗಾಂಧೀಜಿಯವರ ಸುಖೀ ಸಮಾಜಕ್ಕೆ ನಾಂದಿಹಾಡಬಹುದು. ಇಂತಹ ಸಂದರ್ಭ ಅಭಿಪ್ರಾಯ ವಿನಿಮಯಕ್ಕೆ ಮಾತಿನ(ಗಿಉಭಿಜ) ಅಗತ್ಯವಿದೆ ಎಂದು ಕಂಡುಬಂದಾಗ ಅದನ್ನು ವ್ಯಕ್ತಿಯ ಮೂಲಭೂತ ಹಕ್ಕಾಗಿ ರೂಪಾಂತರಿಸಿದ ಸಂವಿಧಾನತಜ್ಞರು ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವೆಂದು ಅನುಚ್ಛೇದ ೧೯(೧)(ಎ)ನಲ್ಲಿ ನಿರೂಪಿಸಿದ್ದಾರೆ. ಈ ಅಂಶವನ್ನು ದಿನೇಶ್ ತ್ರಿವೇದಿ–ವಿ–ಭಾರತ ಒಕ್ಕೂಟ ಎಂಬ ಪ್ರಕರಣದಲ್ಲಿ ಎತ್ತಿಹಿಡಿಯಲಾಗಿದೆ(೧೯೭೭(೪)ಎಸ್‌ಸಿಸಿ ೩೦೬). ವೈಯಕ್ತಿಕ ಸ್ವಾತಂತ್ರ್ಯಕ್ಕೊಂದು ಭದ್ರಬುನಾದಿ ಒದಗಿಸಬೇಕಾದಲ್ಲಿ ವಾಕ್

ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯಗಳಿಗೆ ಚ್ಯುತಿ ಬರಬಾರದೆನ್ನಲಾಗಿದೆ(ಭಾರತ ಸಂವಿಧಾನ ಅನುಚ್ಛೇದ ೨೧). ಅಲ್ಲದೆ ಅನುಚ್ಛೇದ ೧೯(೧)(ಎ)ರ ಅಡಿಯಲ್ಲಿ ಭಾರತ ಸಂವಿಧಾನ ಕೊಡಮಾಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿ ಮಾಹಿತಿ ಹಕ್ಕು ವಿಲೀನಗೊಳ್ಳುತ್ತದೆ. ಅನುಚ್ಛೇದ-೧೨, ಭಾರತ ಸಂವಿಧಾನದಲ್ಲಿ ಬಳಸಿರುವ 'ರಾಜ್ಯ' ಪದದ ಅರ್ಥದೊಳಗೆ ಬರುವ ಪ್ರಾಧಿಕಾರಗಳು ಅಥವಾ ನಿಕಾಯಗಳ ವಿರುದ್ಧ ಈ ಹಕ್ಕು ಸಂವಿಧಾನದ ಮೂಲಕ ಲಭಿಸುವುದು. ಅಲ್ಲದೆ ಇದನ್ನು ಅನುಚ್ಛೇದ ೧೪ ಮತ್ತು ೨೧ರ ಪರಿಮಿತಿಯಲ್ಲಿ ಪಡೆಯಬಹುದಾಗಿದೆ(ಎಐಆರ್ ೧೯೮೯ ಎಸ್‌ಸಿ ೧೯೦). ಬಿಜೋಯ್ ಇಮ್ಯುನುಯಲ್ -ವಿ- ಕೇರಳರಾಜ್ಯ ಪ್ರಕರಣದಲ್ಲಿ ೧೯(೧)(ಎ)ರ ಅಡಿಯಲ್ಲಿ ಯಾರದೇ ಮೂಲಭೂತ ಹಕ್ಕುಗಳನ್ನು ಮೊಟಕುಗೊಳಿಸುವ ಅಧಿಕಾರ ಇಲ್ಲ(ಎಐಆರ್ ೧೯೮೭ ಎಸ್‌ಸಿ ೭೪೮). ಅನುಚ್ಛೇದ ೧೯(೧)(ಎ)ರ ಅಡಿಯಲ್ಲಿನ ಹಕ್ಕನ್ನು ಕಾನೂನು ಮತ್ತು ಸಂವಿಧಾನದಲ್ಲಿ ನಮೂದಿಸಿರುವ ಆಧಾರದ ಮೇಲೆ ನಿಯಂತ್ರಿಸಬಹುದೇ ಹೊರತು ಕಾರ್ಯಾಂಗದ ಆದೇಶದಿಂದಲ್ಲ ಎಂದು ಸರ್ವೋಚ್ಚ ನ್ಯಾಯಾಲಯ ತೀರ್ಪು ನೀಡಿದೆ.

ಪಿ.ವಿ. ನರಸಿಂಹರಾವ್-ವಿ-ರಾಜ್ಯ ಪ್ರಕರಣದಲ್ಲಿ ಚುನಾಯಿತ ಸದಸ್ಯರು ಪಕ್ಷಾಂತರ ಮಾಡುವುದನ್ನು ಮೊಟಕುಗೊಳಿಸುವ ಪಕ್ಷಾಂತರ ನಿಷೇಧ ಕಾಯ್ದೆ ಸದಸ್ಯರ ವಾಕ್ ಸ್ವಾತಂತ್ರ್ಯಕ್ಕೆ ಅಡ್ಡಿಯನ್ನುಂಟುಮಾಡುತ್ತದೆ ಎನ್ನುವುದು ಸರಿಯಲ್ಲ(ಎಐಆರ್ ೧೯೯೮ ಎಸ್‌ಸಿ ೨೧೨೦). ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿನ ಆದರ್ಶಗಳ ಹಾಗೂ ವಾಕ್ ಮತ್ತು ಅಭಿವ್ಯಕ್ತಿ ಸ್ವಾಂತ್ರ್ಯಗಳ ನಡುವೆ ವೈರುಧ್ಯ ಉದ್ಭವಿಸಿದಾಗ ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಮಾನ್ಯತೆ ನೀಡಬೇಕಾಗುತ್ತದೆ ಎಂದು ತಿಳಿಸಲಾಗಿದೆ.

ರಾಜ್ ನಾರಾಯಣ್-ವಿ-ಉತ್ತರ ಪ್ರದೇಶ ರಾಜ್ಯ ಪ್ರಕರಣದಲ್ಲಿ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದಡಿಯಲ್ಲಿ ಮಾಹಿತಿ ತಿಳಿಯುವ/ಪಡೆಯುವ ಹಾಗೂ ಪ್ರಚುರಪಡಿಸುವ ಹಕ್ಕು ವ್ಯಾಪಕವಾಗಿದ್ದು, ದೇಶದ ಪ್ರತಿಯೊಬ್ಬ ಪ್ರಜೆಯೂ ಸರ್ಕಾರ ತನಗೆ ಏನು ಮಾಡುತ್ತಿದೆ ಎಂದು ತಿಳಿಯುವ ಹಕ್ಕುಳ್ಳವನಾಗಿರುತ್ತಾನೆ(ಎಐಆರ್ ೧೯೭೫ ಎಸ್‌ಸಿ ೮೬೫). ಇದರಿಂದಾಗಿ ೧೯(೧)(ಎ) ಮುಕ್ತ ಸರ್ಕಾರದ ಪರಿಕಲ್ಪನೆಗೆ ಒತ್ತು ನೀಡಿರುತ್ತದೆ.

ಅಲ್ಲದೆ ಅಂಬೇಡ್ಕರ್ ಅವರು ನ್ಯಾಯಾಂಗಗಳನ್ನು ಪಾರದರ್ಶಕ ವ್ಯವಸ್ಥೆಯಿಂದ ರಕ್ಷಿಸಲು ಪ್ರಯತ್ನಿಸಿದರಲ್ಲದೆ, ನ್ಯಾಯಾಂಗ ವ್ಯವಸ್ಥೆಯನ್ನು ಮುಕ್ತ ಹಾಗೂ ಸ್ವತಂತ್ರ ವ್ಯವಸ್ಥೆಯಲ್ಲಿರಿಸಲು ಪ್ರಯತ್ನಿಸಿದರಾದರೂ ಸಾರ್ವಜನಿಕ ಸೇವಾಧಿಕಾರಿ ಆ ದೇಶದ ಜನರ ಶ್ರೇಯೋಭಿವೃದ್ಧಿಗೆ ಕರ್ತವ್ಯ ನಿರ್ವಹಿಸಬೇಕಾದ ಅಗತ್ಯವಿದೆ ಎಂದು ನ್ಯಾಯಮೂರ್ತಿ ಕೆ.ಜಿ. ಬಾಲಕೃಷ್ಣನ್‌ರವರು ಹೇಳಿದ್ದಾರೆ(೨೦೦೮). ಹಾಗೂ ಮಾಹಿತಿ ಹಕ್ಕೆಂಬುದು ಭಾರತದ ಪ್ರಜೆಗಳು ಅಗತ್ಯ ಮಾಹಿತಿ ಉನ್ನತ ಪ್ರಾಧಿಕಾರದಿಂದ ಪಡೆಯುವ ಸಲುವಾಗಿ ನೀಡಲಾಗಿರುವ ಸುಭದ್ರ ಸಲಕರಣೆ ಎಂತಲೂ ತಿಳಿಸಿದ್ದಾರೆ(ಅಲ್ಲೆ). ಸಿ.ಬಿ.ಎಸ್.ಇ.-ವಿ-ಭಂಡೋಪಾಧ್ಯಾಯ

ಪ್ರಕರಣದಲ್ಲಿ ಕಲ್ಕತ್ತಾ ಉಚ್ಚ ನ್ಯಾಯಾಲಯ ಪರೀಕ್ಷಾ ಉತ್ತರ ಪತ್ರಿಕೆಗಳನ್ನು ಅವಲೋಕಿಸಲು ಮಾಹಿತಿಗಾಗಿ ಪ್ರಶ್ನಿಸುವುದು ಪ್ರಜೆಯ ಹಕ್ಕು ಎಂದು ತಿಳಿಸಿದೆ.(http://indiankanoon.org/doc/1519371/).

ದೇಶದ ಅತ್ಯುಚ್ಚ ನ್ಯಾಯಾಲಯದ ನ್ಯಾಯಾಧೀಶರು ತಮ್ಮ ಆಸ್ತಿಪಾಸ್ತಿ ವಿವರವನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಬೇಕೆಂಬ ವಿಚಾರಕ್ಕೆ ಸರ್ವೋಚ್ಚಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದ ಕೆ.ಜಿ. ಬಾಲಕೃಷ್ಣನ್‌ರವರು ಆಸ್ತಿ ಬಹಿರಂಗದಂತಹ ವಿಷಯ ನ್ಯಾಯಾಂಗದ ಗೌಪ್ಯತೆಗೆ ಸಂಬಂಧಿಸಿದ್ದಾಗಿದೆ. ಹಾಗೇನಾದರೂ ಆಸ್ತಿ ಬಹಿರಂಗಪಡಿಸಿದಲ್ಲಿ ಸಂವಿಧಾನದ ಮೂಲತತ್ವಗಳೊಲ್ಲೊಂದಾದ ಸ್ವತಂತ್ರ ನ್ಯಾಯಾಂಗ ವ್ಯವಸ್ಥೆಗೆ ಭಂಗ ತಂದಂತಾಗುತ್ತದೆಂಬ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯವನ್ನು ದೆಹಲಿ ಉಚ್ಚ ನ್ಯಾಯಾಲಯ ತಿರಸ್ಕರಿಸಿದಾಗ, ನ್ಯಾಯಾಂಗದ ಸ್ವಾತಂತ್ರ್ಯ ಎಂಬುದು ವೈಯಕ್ತಿಕ ವೈಭೋಗವಲ್ಲ. ಆದಕಾರಣ, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ಆಸ್ತಿಪಾಸ್ತಿಯ ವಿವರಗಳನ್ನು ಸಾರ್ವಜನಿಕ ಅವಲೋಕನಕ್ಕೆ ಕಲ್ಪಿಸಬೇಕೆಂದು ಪೂರ್ಣಪೀಠದ ರೂವಾರಿ ನ್ಯಾಯಮೂರ್ತಿ ಎ.ಪಿ. ಷಾರವರು ಪುಣೆಯ ಮಹಿತಿ ಹಕ್ಕಿನ ಕಾರ್ಯಕರ್ತ ನಕೊಲೆಯ ಪ್ರಕರಣದಲ್ಲಿ ತೀರ್ಪನ್ನಿತ್ತಿದ್ದಾರೆ(http://www.deccanherald.com/content/56925/rti-sc-assails-high-court.html).

ಮಾಹಿತಿ ಹಕ್ಕು ಹೋರಾಟಗಾರ ಶೆಟ್ಟಿ ಕೊಲೆ ಪ್ರಕರಣದಲ್ಲಿ ಪುಣೆ ನ್ಯಾಯಾಲಯ ಅಪರಾಧಿಗೆ ೧೪ ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ತಳ್ಳಿತು. ಅಲ್ಲದೆ, ಆಪಾದಿತನು ಕಾನೂನುಬಾಹಿರ ಅಕ್ರಮ ಕಟ್ಟಡ ಕಟ್ಟುತ್ತಿದ್ದುದನ್ನು ಪ್ರಶ್ನಿಸಿದ ಶೆಟ್ಟಿಯನ್ನು ಹಳೆ ವೈಷಮ್ಯದಡಿಯಲ್ಲಿ ಪುಣೆಯಿಂದ ಸುಮಾರು ೪೫ ಕಿ.ಮೀ. ದೂರದಲ್ಲಿ ಬೆಳಗಿನ ವಾಯುವಿಹಾರದ ಸಂದರ್ಭದಲ್ಲಿ ಕೊಲೆಗೈದಿದ್ದಕ್ಕೆ ಆಪಾದಿತನ ರಕ್ಷಣೆಗೆ ಅವಕಾಶ ನೀಡದೆ ನ್ಯಾಯಾಂಗ ಬಂಧನ ವಿಧಿಸಿರುವುದು ಮಾಹಿತಿ ಹಕ್ಕಿನ ಸಬಲೀಕರಣದಲ್ಲಿ ನ್ಯಾಯಾಂಗದ ಪಾತ್ರವೇನು ಎಂಬುದನ್ನು ತಿಳಿಸುತ್ತದೆ (https://www.facebook.com/pages/RTI-India/158277873928).

ಇಂಡಿಯನ್ ಎಕ್ಸ್‌ಪ್ರೆಸ್ ನ್ಯೂಸ್ ಪೇಪರ್–ವಿ–ಭಾರತ ಒಕ್ಕೂಟ ಪ್ರಕರಣದಲ್ಲಿ ಪ್ರತಿಯೊಬ್ಬ ವ್ಯಕ್ತಿ ಸಮರ್ಥವಾಗಿ ನಿರ್ಣಯ ರೂಪಿಸುವ ಪ್ರಕ್ರಿಯೆಯಲ್ಲಿ ಪತ್ರಿಕಾ ಸ್ವಾತಂತ್ರ್ಯಕ್ಕೆ ಅನುವು ಮಾಡಿಕೊಡಬೇಕಾಗುತ್ತದೆ. ಇದು ಸುಭದ್ರವಾದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನುಂಟುಮಾಡುತ್ತದೆ. ಜನಪ್ರಿಯ ಸರ್ಕಾರಗಳ ಸ್ಥಾಪನೆಗೆ ಸಹಕಾರ ನೀಡುತ್ತದೆ. ಇದು ಸತ್ಯಶೋಧನೆ ಮಾಡಲು ಹಾಗೂ ಸಮಾಜದ ಸ್ವಾಸ್ಥ್ಯ ಸ್ಥಿರೀಕರಿಸಲು ಸಹಕಾರಿಯಾಗುತ್ತದೆ. ಆದಕಾರಣ ಸಂವಿಧಾನದ ಆಶಯವನ್ನು ಒತ್ತಟ್ಟಿಗಿರಿಸಿ ಮುಕ್ತಮಾಹಿತಿ ಬಿತ್ತರಕ್ಕೆ ತೊಡಕುಂಟುಮಾಡುವ ಕಾನೂನುಗಳು ಮತ್ತು ಆಡಳಿತ ಕ್ರಮವನ್ನು ಅಮಾನ್ಯಗೊಳಿಸಿ ಪತ್ರಿಕಾ ಸ್ವಾತಂತ್ರ್ಯ ಬೆಂಬಲಿಸುವುದು ನ್ಯಾಯಾಲಯದ ಕರ್ತವ್ಯ ಎಂದು ತಿಳಿಸಲಾಗಿದೆ(ಎಐಆರ್ ೧೯೮೬ ಎಸ್‌ಸಿ ೫೧೫).

ಪ್ರೆಸ್ ಕೌನ್ಸಿಲ್ ಕಾಯ್ದೆ ೧೯೭೮ರ ಪ್ರಕಾರ ಪತ್ರಿಕೆಯಲ್ಲಿ ಪ್ರಕಾಶನಗೊಳಿಸುವ ಯಾವುದೇ ಸುದ್ದಿ ಅಥವಾ ಮಾಹಿತಿಯನ್ನು ಬಹಿರಂಗಗೊಳಿಸಲು ಪತ್ರಕರ್ತನನ್ನು ಬಲವಂತಪಡಿಸಕೂಡದು, ಆದರೆ ಅಗತ್ಯಬಿದ್ದಾಗ ಮಾಹಿತಿಯ ಮೂಲ, ಆಧಾರವನ್ನು ಪ್ರಚುರಪಡಿಸುವಂತೆ ಪತ್ರಕರ್ತನನ್ನು ಒತ್ತಾಯಿಸಬಹುದು. ಇದು ಇಂಗ್ಲೆಂಡ್‌ನ ವೃತ್ತ ಪತ್ರಿಕಾ ನಿಯಮವಾಗಿದ್ದು ಭಾರತದಲ್ಲಿಯೂ ಅನ್ವಯಿಸಬೇಕೆಂದು ಹೇಳಲಾಗಿದೆ (ನಿಶಿ ಪ್ರೇಮ್-ವಿ-ಜಾವೇದ್ ಅಕ್ತರ್ ಎಐಆರ್ ೧೯೮೮ ಬಾಂ ೨೨೨). ಒಮ್ಮೆ ನ್ಯಾಯಾಲಯ ಆಗ್ರಹಪಡಿಸಿದ್ದೇ ಆದರೆ ವರದಿಯ ಮೂಲ, ಆಧಾರವನ್ನು ಬಹಿರಂಗಪಡಿಸಲು ಒತ್ತಾಯ ಹೇರಬಹುದು(೧೯೯೬) ೬ ಎಸ್‌ಸಿಸಿ ೪೬೬) .

ಲೈಫ್ ಇನ್ಶೂರೆನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ-ವಿ-ಪ್ರೊ. ಮನುಭಾಯಿ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಪತ್ರಿಕಾ ಮಾಧ್ಯಮದಲ್ಲಿ ಯಾವುದೇ ವ್ಯಕ್ತಿಗೆ ಸಂಬಂಧಿಸಿದಂತೆ ಸುದ್ದಿ ಪ್ರಕಟಗೊಂಡಾಗ ಸದರಿ ಸುದ್ದಿಗೆ ಪ್ರತಿಕ್ರಿಯೆ ವ್ಯಕ್ತಪಡಿಸುವ ಹಕ್ಕು ಆ ವ್ಯಕ್ತಿಗಿರುತ್ತದೆ, ಸದರಿ ಪ್ರತಿಕ್ರಿಯೆ, ಪ್ರತ್ಯುತ್ತರ, ಟೀಕೆ, ವಿಮರ್ಶೆ, ಅಭಿಪ್ರಾಯಗಳನ್ನು ಸಮೂಹ ಮಾಧ್ಯಮದವರು ಪ್ರಕಟಿಸುವುದು ಸಾಂವಿಧಾನಿಕ ಕರ್ತವ್ಯವಾಗಿರುತ್ತದೆ. ಅದಾಗಿ ಪ್ರತಿಕ್ರಿಯಿಸುವ ಹಕ್ಕು ಅನುಚ್ಛೇದ ೧೯(೧)(ಎ)ರ ಅಡಿಯಲ್ಲಿ ಖಾತರಿಪಡಿಸುವ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಭಾಗಾಂಶವಾಗಿದೆ ಎಂದು ತಿಳಿಸಿದೆ (ಎಐಆರ್ ೧೯೯೩ ಎಸ್‌ಸಿ ೧೭೧).

ಪೀಪಲ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್-ವಿ- ಭಾರತ ಒಕ್ಕೂಟ ಪ್ರಕರಣದಲ್ಲಿ, ದೂರವಾಣಿಯಲ್ಲಿ ಮಾತನಾಡುವ ವ್ಯಕ್ತಿಯು ತನಗೆ ಕೊಡ ಮಾಡಿರುವ ವಾಕ್ ಸ್ವಾತಂತ್ರ್ಯವನ್ನು ಚಲಾವಣೆ ಮಾಡುವವನಾಗಿರುತ್ತಾನೆ. ಆತನ ಈ ಕ್ರಿಯೆಯನ್ನು ಅನುಚ್ಛೇದ ೧೯(೨)ರ ಅಡಿಯಲ್ಲಿ ಸಮಂಜಸವಾದ ನಿರ್ಬಂಧವಿಲ್ಲದಿದ್ದರೆ ದೂರವಾಣಿ ಕದ್ದಾಲಿಕೆಯು ಅನುಚ್ಛೇದ ೧೯(೧)(ಎ)ಯನ್ನು ಉಲ್ಲಂಘಿಸಿದಂತಾಗುತ್ತದೆಂದು ತಿಳಿಸಲಾಗಿದೆ (ಎಐಆರ್ ೧೯೯೭ ಎಸ್‌ಸಿ ೫೬೮).

ವ್ಯಕ್ತಿಗತ ಮಾಹಿತಿ ವಿನಿಮಯ ಇದರಲ್ಲಿ ಸ್ವಾಭಾವಿಕ ವ್ಯಕ್ತಿಯೂ ಸೇರಿದಂತೆ ನ್ಯಾಯಿಕ ವ್ಯಕ್ತಿಗಳೆಂದು ಪರಿಗಣಿಸಿರುವ ಕಂಪನಿ, ಸಂಘ-ಸಂಸ್ಥೆ, ನಿಗಮ, ಮಂಡಳಿಗಳೂ ಕಾನೂನಿನ ಕಟ್ಟುಪಾಡಿಗೆ ಒಳಪಟ್ಟು ಮಾಹಿತಿ ಒದಗಿಸಬೇಕಾಗುತ್ತದೆ, ಉದ್ದೇಶಪೂರ್ವಕವಾಗಿ ಮಾಹಿತಿ ಪಡೆದಿದ್ದೇ ಆದಲ್ಲಿ ಅದು ದುಷ್ಕೃತ್ಯವೆಂದು ಪರಿಗಣಿಸಬಹುದು(ಭಾರತ ದಂಡ ಸಂಹಿತೆ ವಿಭಾಗ ೩೨೧).

ಪ್ರಜೆ ಮತ್ತು ರಾಜ್ಯದ ನಡುವೆ ಮಾಹಿತಿ ವಿನಿಮಯ ಮಾಹಿತಿಗಳು ವಿನಿಮಯಗೊಂಡಾಗ ಪ್ರಜಾಪ್ರಭುತ್ವ ಸದೃಢಗೊಳ್ಳುತ್ತದೆ. ಉದಾಹರಣೆಗೆ, ಯಾವುದೇ ವ್ಯಕ್ತಿಯನ್ನು ದಸ್ತಗಿರಿ ಮಾಡಿ ಬಂಧಿಸಿದಾಗ ದಸ್ತಗಿರಿಯ ಕಾರಣ ತಿಳಿಸಿ ಸ್ವರಕ್ಷಣೆಗೆ ವಕೀಲರ ನೆರವು ಪಡೆದುಕೊಳ್ಳಲು ಆಪಾದಿತನಿಗೆ ಅವಕಾಶ ಕಲ್ಪಿಸಿ ಕೊಡಬೇಕು. ರಾಜ್ಯದ ಭದ್ರತೆಗೆ ಅಥವಾ ಶಾಂತಿಗೆ ಧಕ್ಕೆ ಉಂಟುಮಾಡಲು ಯತ್ನಿಸಲು ಮುಂದಾಗುವ

ಶಂಕಿತ ವ್ಯಕ್ತಿಯನ್ನು ತಡೆಯುವ ಸಲುವಾಗಿ ಮುಂಜಾಗರೂಕತಾ ಕ್ರಮವಾಗಿ ಅಂತಹ ವ್ಯಕ್ತಿಯನ್ನು ದಸ್ತಗಿರಿ ಮಾಡಿ ಬಂಧನದಲ್ಲಿರಿಸುವುದಕ್ಕೆ ಆದೇಶಿಸಿದಾಗ ಆದಷ್ಟು ಬೇಗ ಅವನಿಗೆ ಆದೇಶದ ಕಾರಣ ತಿಳಿಸಿ ಅದರ ವಿರುದ್ಧ ಅಹವಾಲು ಸಲ್ಲಿಸಲು ಅನುಕೂಲ ಮಾಡಿಕೊಡಬೇಕು (ಭಾರತ ಸಂವಿಧಾನದ ಅನುಚ್ಛೇದ೨೨). ಅದೇ ರೀತಿ ಯಾವುದೇ ಸಾರ್ವಜನಿಕ ನೌಕರನನ್ನು ಹುದ್ದೆಯಿಂದ ವಜಾಗೊಳಿಸುವ, ತೆಗೆದುಹಾಕುವ ಅಥವಾ ಹಿಂಬಡ್ತಿ ನೀಡುವ ಮೊದಲು ಆತನ ವಿರುದ್ಧವಿರುವ ಆರೋಪಗಳನ್ನು ಪಟ್ಟಿಮಾಡಿ ಅದನ್ನು ಅವನಿಗೆ ನೀಡಿ ಅವನ ವಾದ ವಿವಾದವನ್ನು ಆಲಿಸಬೇಕು, ಅಹವಾಲುಗಳನ್ನು ಆಲಿಸದೆಯೇ ಯಾರನ್ನು ದೂಷಿಸಬಾರದು (ಭಾರತ ಸಂವಿಧಾನದ ಅನುಚ್ಛೇದ ೩೧೧).

ಸಂವಿಧಾನವು ಪ್ರತಿಯೋರ್ವನಿಗೂ ಬಾಳುವ ಹಕ್ಕು ಹಾಗೂ ವೈಯಕ್ತಿಕ ಸ್ವಾತಂತ್ರ್ಯಗಳನ್ನು ದಯಪಾಲಿಸಿದ್ದು, ಕಾನೂನಿನ ಪ್ರಕ್ರಿಯೆಯಿಂದಲ್ಲದೆ ಅದನ್ನು ಮೊಟಕುಗೊಳಿಸಲಾಗದು(ಭಾರತ ಸಂವಿಧಾನದ ಅನುಚ್ಛೇದ ೨೧) . ಅಂತೆಯೇ ಅನೇಕ ಆಡಳಿತಾತ್ಮಕ ನಿರ್ಣಯ, ನ್ಯಾಯಾಂಗೀಣ ಮತ್ತು ಅರೆ ನ್ಯಾಯಾಂಗೀಣ ತೀರ್ಪುಗಳನ್ನು ಕಾರಣ ಸಹಿತ ಸಂಬಂಧಿತ ಪಕ್ಷಗಾರರಿಗೆ ತಿಳಿಸುವುದು ಆಯಾ ಪ್ರಾಧಿಕಾರದ ಆದ್ಯಕರ್ತವ್ಯವಾಗಿದೆ (೧೯೯೦ ಎಸ್‌ಸಿ ೧೫೮೦, ಎಐಆರ್ ೨೦೦೩ ಎಸ್‌ಸಿ ೨೫೬೨) .

೧೯(೧)(ಎ)ನಲ್ಲಿ ಕೊಡಮಾಡಿರುವ ವಾಕ್ ಸ್ವಾತಂತ್ರ್ಯ ನ್ಯಾಯಾಂಗದ ಕ್ರಿಯಾತ್ಮಕ ಕಾರ್ಯವಾಗಿದ್ದು, ಅನುಚ್ಛೇದ ೨೧ರ ಅಡಿಯಲ್ಲಿ ಇದಕ್ಕೆ ವಿಶಿಷ್ಟ ವೈಶಾಲ್ಯವನ್ನು ಒದಗಿಸಲಾಗಿದೆ (http://www.ebc-india.com/practical/index2.php).

ದಿನೇಶ್ ತ್ರಿವೇದಿ –ವಿ– ಭಾರತ ಒಕ್ಕೂಟ ಪ್ರಕರಣದಲ್ಲಿ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವೆಂದರೆ ದೇಶದ ನಾಗರಿಕ ಸರ್ಕಾರದ ಕಾರ್ಯಕಲಾಪಗಳ ಬಗೆಗಿನ ಮಾಹಿತಿ ತಿಳಿಯುವಂತಹುದು ಎನ್ನಲಾಗಿದೆ. ಸರ್ವೋಚ್ಚ ನ್ಯಾಯಾಲಯ ಈ ವಿಷಯವನ್ನು ಪುನರಾವರ್ತಿತ ಪ್ರಕರಣಗಳಲ್ಲಿ ಎತ್ತಿಹಿಡಿಯಲಾಗಿದ್ದು, ಪ್ರಜಾಸತ್ತಾತ್ಮಕ ರಾಜಕೀಯ ವ್ಯವಸ್ಥೆಯಲ್ಲಿ ಮಾನವನ ಭಾಗವಹಿಸುವಿಕೆ ಹಾಗೂ ಮಾಹಿತಿ ಪಡೆದುಕೊಳ್ಳುವಂತಹುದಾಗಿದೆ (೧೯೯೭(ಎ) ಎಸ್‌ಸಿಸಿ ೩೦೬).

ಪೀಪಲ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್–ವಿ–ಭಾರತ ಒಕ್ಕೂಟ ಪ್ರಕರಣದಲ್ಲಿ ಭಾರತದ ನಾಗರಿಕನಿಗೆ ದೇಶದ ನೀತಿ ನಿಯಮಾವಳಿಗಳ ವಿಚಾರಗಳಲ್ಲಿ ಭಾಗವಹಿಸುವ ಹಕ್ಕಿಲ್ಲದಿದ್ದರೆ, ಪ್ರಜಾಪ್ರಭುತ್ವ ವ್ಯವಸ್ಥೆ ಅಸ್ತಿತ್ವದಲ್ಲಿರಲು ಸಾಧ್ಯವಿಲ್ಲ. ಹಾಗೇನಾದರೂ ಆದಲ್ಲಿ ಅದು ಅರ್ಥರಹಿತವಾದುದು ಎನ್ನಲಾಗಿದೆ (ಎಐಆರ್ ೨೦೦೩ ಎಸ್‌ಸಿ ೨೩೬೩).

ಭಾರತ ಒಕ್ಕೂಟ–ವಿ–ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ಪ್ರಕರಣದಲ್ಲಿ ಯಾವುದೇ ಸರ್ಕಾರದ ವ್ಯವಸ್ಥೆ ಮುಕ್ತ ಹಾಗೂ ಪಾರದರ್ಶಕವಾಗಿದ್ದಾಗ, ಪ್ರಜೆಗಳು ಪ್ರಜಾಸತ್ತಾತ್ಮಕ ಮೌಲ್ಯವನ್ನು ಗೌರವಿಸುತ್ತಾರೆ. ಮಾಹಿತಿಯನ್ನು ಹೊಂದಿರುವ ಪ್ರಜೆ ಮಾತ್ರ ಯಾವುದೇ ಅನುಮಾನಕ್ಕೆ ಆಸ್ಪದವಿಲ್ಲದಂತೆ ಪ್ರಜಾಪ್ರಭುತ್ವದ ಮೌಲ್ಯವರ್ಧನೆಗೆ ಸಹಕಾರಿಯಾಗಬಲ್ಲ ಎಂದು ತಿಳಿಸಲಾಗಿದೆ (ಎಐಆರ್ ೨೦೦೨ ಎಸ್‌ಸಿ ೨೧೧೨).

ಸ್ಟೇಟ್ ಆಫ್ ಉತ್ತರ ಪ್ರದೇಶ–ವಿ– ರಾಜ್ ನಾರಾಯಣ್ **ಪ್ರಕರಣದಲ್ಲಿ**, ಮಾಹಿತಿ ಹಕ್ಕು ಕಾಯ್ದೆಯನ್ನು ಜಾರಿಗೆ ತಂದ ಶಾಸಕಾಂಗ ಮಾಹಿತಿ ಹಕ್ಕಿನಲ್ಲಿ ಕೆಲವೊಂದು ಮಾಪನಗಳನ್ನು ಅಳವಡಿಸಿತು. ಇದರ ಅಡಿಯಲ್ಲಿ ಸರ್ಕಾರ ಜವಾಬ್ದಾರಿಯುತವಾಗಿರಬೇಕು. ಸರ್ಕಾರ ಮತ್ತು ಜನರ ನಡುವಿನ ಮಧ್ಯವರ್ತಿಗಳು ತಮ್ಮ ತಮ್ಮ ಕಾರ್ಯಗಳಿಗೆ ಜವಾಬ್ದಾರರಾಗಿರಬೇಕು. ಇದರಿಂದ ದೇಶದ ಪ್ರತಿಯೊಬ್ಬ ಪ್ರಜೆಯೂ ಸರ್ಕಾರಿ ಮತ್ತು ಸಾರ್ವಜನಿಕ ಕೆಲಸಗಾರರ ಕಾರ್ಯಗಳ ಮಾಹಿತಿಯನ್ನು ಪಡೆಯಬಹುದಾಗಿದೆ –ಎಂದು ತಿಳಿಸಲಾಗಿದೆ (೧೯೭೫ (೪) ಎಸ್‌ಸಿಸಿ ೪೨೮).

ಭಾರತ ಅತ್ಯಂತ ವಿಶಾಲವಾದ ಪ್ರಜಾಸತ್ತಾತ್ಮಕ ರಾಷ್ಟ್ರ. ಈ ರೀತಿಯ ಪ್ರಜಾಸತ್ತಾತ್ಮಕ ವ್ಯವಸ್ಥೆ ಸುಭದ್ರವಾಗಿ ಉಳಿಯಬೇಕಾದರೆ ಸರ್ಕಾರ ಮತ್ತು ಜನರ ನಡುವೆ ಸಹಯೋಗವಿರಬೇಕಾಗುತ್ತದೆ. ರಾಜ್ಯದಿಂದ ಪ್ರಜೆಯ ಕಡೆಗೆ ಮಾಹಿತಿಯು ಮುಕ್ತವಾಗಿ ಪ್ರವಹಿಸಿದಾಗ ಜನರು ಸರ್ಕಾರದ ಕಾರ್ಯಗಳಲ್ಲಿ ಸಹಭಾಗಿಗಳಾಗುತ್ತಾರೆ.

ಮಹಾತ್ಮಾ ಗಾಂಧಿಯವರು ತಿಳಿಸಿರುವಂತೆ, ನಿಜವಾದ ಸ್ವರಾಜ್ಯವೆಂದರೆ ಅಧಿಕಾರ ಪಡೆಯುವುದಲ್ಲ. ಅಧಿಕಾರಶಾಹಿ ಮತ್ತು ಅದರ ಕಾರ್ಯವೈಖರಿಗಳನ್ನು ಪ್ರಶ್ನಿಸಿ, ವಿಮರ್ಶೆಗೆ ಒಳಪಡಿಸಿದಾಗ ಮಾತ್ರ ಸ್ವರಾಜ್ಯದ ಸಾಕ್ಷಾತ್ಕಾರವಾಗುತ್ತದೆ. ಇಂತಹ ಸಂದರ್ಭದಲ್ಲಿ ನ್ಯಾಯಾಂಗವು ಸೂಕ್ತ ಸಂದರ್ಭಗಳಿಗೆ ಮಾಹಿತಿಹಕ್ಕನ್ನು ಅನ್ವಯಿಸುವ ಮೂಲಕ ಪ್ರಜೆಗಳಲ್ಲಿ ಪಾರದರ್ಶಕತೆ, ನಿಷ್ಪಕ್ಷಪಾತ ಮನೋಭಾವನೆ ಬಿತ್ತುವ ಕಾರ್ಯವನ್ನು ಮಾಡಿದೆ. ಇದರಿಂದ ಪಾರದರ್ಶಕತೆ, ಬದ್ಧತೆ, ಸಾಕ್ಷರತೆ, ಮುಕ್ತತೆ, ಉತ್ತಮ ಸ್ವರಾಜ್ಯ, ಭ್ರಷ್ಟಚಾರ ನಿಯಂತ್ರಣ, ಪ್ರಜಾಸತ್ತೆಯ ಮೌಲ್ಯಗಳನ್ನು ಎತ್ತಿಹಿಡಿದಂತಾಗಿದೆ.

'ಮಾಹಿತಿಹಕ್ಕು', ಪ್ರಜೆಗಳನ್ನು ಸಲಬರನ್ನಾಗಿಸಿ, ಅಧಿಕಾರಶಾಹಿಯನ್ನು ಪ್ರಶ್ನೆಗೆ ಒಳಪಡಿಸಿ, ಪಾರದರ್ಶಕ ಆಡಳಿತಕ್ಕೆ ಮುನ್ನುಡಿ ಬರೆದ ಮೈಲುಗಲ್ಲಾಗಿದೆ.

❐

ದೂರದರ್ಶನ ಶೈಕ್ಷಣಿಕ ಕಾರ್ಯಕ್ರಮಗಳ ಪರಿಣಾಮ ಒಂದು ಅಧ್ಯಯನ

ಇಟಗಿ ಸತೀಶ ಕೊಟ್ರಪ್ಪ

ಭಾರತಕ್ಕೆ ಜಗತ್ತಿನ ಜನಸಂಖ್ಯೆಯ ಪ್ರಮಾಣದಲ್ಲಿ ಎರಡನೆಯ ಮತ್ತು ಭೌಗೋಳಿಕ ವಿಸ್ತೀರ್ಣದಲ್ಲಿ ಏಳನೆಯ ಸ್ಥಾನಗಳಿವೆ. ಶೇ. ೮೨.೭ರಷ್ಟು ಜನ ಹಳ್ಳಿಗಳಲ್ಲಿ ಮತ್ತು ಶೇ. ೧೭.೩ರಷ್ಟು ಜನ ನಗರ ಪ್ರದೇಶಗಳಲ್ಲಿ ನೆಲೆಸಿದ್ದಾರೆ. ಪ್ರತಿ ಸಾವಿರ ಪುರುಷರಿಗೆ ೯೪೭ ಸ್ತ್ರೀಯರು ಇದ್ದಾರೆ. ಪುರಾತನ ಕಾಲದಿಂದ ಕೃಷಿ ಹಾಗೂ ಕೈಗಾರಿಕೆ ಪ್ರಮುಖ ಉದ್ಯೋಗ. ಸುನೀತ್‌ಕುಮಾರ ಚಟರ್ಜಿ ಕೈಗೊಂಡ ಭಾಷಾ ಪರಿಶೀಲನೆ ಪ್ರಕಾರ ೧೭೯ ಭಾಷೆಗಳು, ೫೪೪ ಉಪಭಾಷೆಗಳು ಪ್ರಚುರದಲ್ಲಿವೆ. ರಾಜ್ಯಾಂಗದಲ್ಲಿ ೨೨ ಭಾಷೆಗಳನ್ನು ಅಂಗೀಕರಿಸಲಾಗಿದೆ.

ಭಾರತದಲ್ಲಿ ಅಸ್ತಿತ್ವದಲ್ಲಿರುವ ಹಲವು ಭಾಷೆಗಳಲ್ಲಿ ಕಾರ್ಯಕ್ರಮ ಬಿತ್ತರಿಸುವ ವ್ಯವಸ್ಥೆಯನ್ನು ದೂರದರ್ಶನ ಹೊಂದಿರುವುದು ವಿಶೇಷ. ಇದು ಶೈಕ್ಷಣಿಕ ಹಾಗೂ ಸಾರ್ವಜನಿಕ ಅಭಿವೃದ್ಧಿಗೆ ಪೂರಕವಾಗಿದೆ. ಭಾರತದಲ್ಲಿ ದೂರದರ್ಶನ ಸರ್ಕಾರಿ ಮಾಧ್ಯಮ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದೆ.

೧೯೫೬ರಲ್ಲಿ ಭಾಷವಾರು ಪ್ರಾಂತ್ಯಗಳ ರಚನೆಯಾದ ಅನಂತರ, ಸಾಕ್ಷರತೆಯ ಪ್ರಮಾಣ ಹೆಚ್ಚಿಸಲು, ಪುರಾತನ ಸಂಸ್ಕೃತಿ, ಸಂಪ್ರದಾಯ ಉಳಿಸಿ ಬೆಳೆಸುವ ಪ್ರಯತ್ನದ ಹಿನ್ನೆಲೆಯಲ್ಲಿ ದೂರದರ್ಶನದ ಕಾರ್ಯಕ್ರಮಗಳಿಗೆ ಮಹತ್ವ ನೀಡಲಾಯಿತು. ಭಾರತದಲ್ಲಿ ದೂರದರ್ಶನ ಪ್ರಸಾರಕ್ಕೆ ಮೊದಲು ಇಂಬು ನೀಡಿದ್ದು ದೆಹಲಿ ನಗರ. ತನ್ನ ಸುತ್ತಮುತ್ತಲಿನ ಜನರಿಗೆ ಕಾರ್ಯಕ್ರಮ ಪ್ರಸಾರ ಮಾಡುವುದರ ಮೂಲಕ ತನ್ನ ಕಾರ್ಯಾರಂಭ ಮಾಡಿತು. ಭಾರತದ ಕೇಂದ್ರ ಸರ್ಕಾರ ಅಮೆರಿಕೆಯ ಫೋರ್ಡ್ ಫೌಂಡೇಶನ್ ಸಂಸ್ಥೆಯ ನೆರವಿನಿಂದ ದೆಹಲಿಯ ಪ್ರೌಢಶಾಲಾ ಮಕ್ಕಳಿಗಾಗಿ ಪ್ರತಿದಿನ ಒಂದು ಗಂಟೆ ಕಾರ್ಯಕ್ರಮ ಪ್ರಸಾರ ಮಾಡಿತು. ಅನಂತರ ಯುನೆಸ್ಕೋ

ದಾನವಾಗಿ ಕೊಟ್ಟ ೪೫ ಟಿ.ವಿ. ಸೆಟ್‌ಗಳನ್ನು ದೆಹಲಿ ಶಾಲೆಗಳಲ್ಲಿ ಶಾಲಾ ಮಕ್ಕಳ ವೀಕ್ಷಣೆಗಾಗಿ ವ್ಯವಸ್ಥೆಗೊಳಿಸಲಾಯಿತು. ಪಶ್ಚಿಮ ಜರ್ಮನಿ ದೇಶವೂ ಉಪಕರಣಗಳನ್ನು ಪೂರೈಸಿ ದೂರದರ್ಶನ ಬೆಳವಣಿಗೆಗೆ ನೆರವಾಯಿತು. ೧೯೬೫ರಲ್ಲಿ ಡಾ.ಎಸ್. ರಾಧಾಕೃಷ್ಣನ್ ದೆಹಲಿಯ ಆಕಾಶವಾಣಿ ಕೇಂದ್ರದಲ್ಲಿ ದೂರದರ್ಶನ ಕಾರ್ಯವನ್ನು ಉದ್ಘಾಟಿಸಿದರು. ೨೦೦೨-೦೩ರ ವರದಿಯ ಪ್ರಕಾರ, ಒಟ್ಟು ೨೩ ದೂರದರ್ಶನ ವಾಹಿನಿಗಳು, ೫೩ ಸ್ಟುಡಿಯೋಗಳು, ೧೩೧೪ ಟ್ರಾನ್ಸಮೀಟರ್‌ಗಳಿದ್ದು ಪ್ರತಿವಾರ ೧೪೮೫ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿವೆ. ದೂರದರ್ಶನದ ಇತರೆ ವಾಹಿನಿಗಳೆಂದರೆ ಡಿಡಿ೧-ರಾಷ್ಟ್ರೀಯ, ಡಿಡಿ೨-ಮೆಟ್ರೋ, ಡಿಡಿ ಕ್ರೀಡೆ, ಡಿಡಿ ಭಾರತಿ. ಗಳಾಗಿವೆ. ಈ ವಾಹಿನಿಗಳ ಪ್ರಸಾರ ಕೇಂದ್ರಗಳ ಮುಖ್ಯ ಉದ್ದೇಶ ಶೈಕ್ಷಣಿಕ, ಸಾಮಾಜಿಕ ಮತ್ತು ಆರೋಗ್ಯಕರ ಮನರಂಜನೆ ಮತ್ತು ಮಾಹಿತಿಯ ಅವಶ್ಯಕತೆಗಳನ್ನು ಪೂರೈಸುವುದಾಗಿರುತ್ತದೆ.

ಶಿಕ್ಷಣ ಪೂರೈಸುವ ಉದ್ದೇಶಕ್ಕಾಗಿ ಸರ್ಕಾರ ದೂರದರ್ಶನ ವಾಹಿನಿಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ಪ್ರಸಾರ ಮಾಡತೊಡಗಿತು. ಕ್ರಮೇಣ ಸೈಟ್(ಎಸ್‌ಐಟಿಇ) ಮತ್ತು ಉಪಗ್ರಹ ವಾಹಿನಿ ಬೆಳೆದ ಸಾಹಸ ಗಮನಾರ್ಹವಾದದ್ದು. ೧೯೮೪-೮೫ ರಿಂದ ಕರ್ನಾಟಕದಲ್ಲಿ ಮಕ್ಕಳ ಶಿಕ್ಷಣ ಕುರಿತು, ಕೆಲ ಪಠ್ಯಕ್ರಮಾಧಾರಿತ, ಮಾಹಿತಿ ತಂತ್ರಜ್ಞಾನ, ಭಾಷೆ, ವ್ಯಾಕರಣ, ಸಿಇಟಿ, ಯುಜಿಸಿ ಸಂಬಂಧಿಸಿದ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಸಾರವಾದವು. ಈ ಕುರಿತು ಜ್ಞಾನದರ್ಶನ, ಇ-ಟಿ.ವಿ (Education TV), ಪ್ರತ್ಯೇಕ ಶಿಕ್ಷಣ ವಾಹಿನಿಗಳು ಕಾರ್ಯಾರಂಭಗೊಂಡವು. ೨೦೦೫ರ ಸುಮಾರಿಗೆ, ಕನ್ನಡದ ಚಂದನದಲ್ಲಿ ಸಿಇಟಿ ಕುರಿತಾದ ಪ್ರಾಯೋಜಕತ್ವದ ಕಾರ್ಯಕ್ರಮ ವರ್ಷವಿಡೀ ಪ್ರಸಾರವಾಯಿತು. ಜೊತೆಗೆ ವಯಸ್ಕರ ಶಿಕ್ಷಣ, ಉಪಗ್ರಹ ಕಲಿಕೆ, ಕೃಷಿ, ಫಸಲು, ಭೂವಿಜ್ಞಾನ, ರಸಪ್ರಶ್ನೆ, ಮಕ್ಕಳಿಗೆ, ಯುವಕರಿಗೆ ನಾಗರಿಕರಿಗೆ ಸಂಬಂಧಿಸಿದ ಜನಪ್ರಿಯ ಕಾರ್ಯಕ್ರಮಗಳು ಯಶಸ್ವಿಯಾಗಿ ಪ್ರಸಾರವಾಗಿ, ಶೈಕ್ಷಣಿಕ ತಿಳಿವಳಿಕೆಗೆ ಮತ್ತಷ್ಟು ಪ್ರೇರಣೆ ಒದಗಿಸಿತು. ಕರ್ನಾಟಕ ರಾಜ್ಯದಲ್ಲಿ ಎರಡನೆಯ ದೂರದರ್ಶನ ಕೇಂದ್ರ ಕಾರ್ಯಾರಂಭ ಮಾಡಿದ್ದು, ಹೈದ್ರಾಬಾದ್ ಪ್ರದೇಶದ ಕಲ್ಬುರ್ಗಿ ನಗರದಲ್ಲಿ. ಆರಂಭದಲ್ಲಿ ಸೈಟ್ ಕಾರ್ಯಕ್ರಮಗಳ ಪ್ರಯೋಗಾರ್ಥ ೧ ವರ್ಷದವರೆಗೆ ಜಿಲ್ಲೆಯ ೨೪೦ ಗ್ರಾಮಗಳಿಗೆ ಸಮುದಾಯ ಸೆಟ್‌ಗಳನ್ನು ವಿತರಿಸಿದ್ದು ದಾಖಲೆ. ಅದಕ್ಕೆಂದೆ ಪ್ರತ್ಯೇಕ ವಿಭಾಗ ಮಾಡಿ, ಪ್ರತಿ ಮುಂಜಾನೆ ಶೈಕ್ಷಣಿಕ ಪ್ರಸಾರ ಮಾಡಿದ್ದು, ಆ ಪ್ರದೇಶದಲ್ಲಿ ದೂರದರ್ಶನದ ಐತಿಹಾಸಿಕ ದಾಖಲೆ. ಆ ತಳಹದಿಯ ಮೇಲೆ ೨೫ ದೂರದರ್ಶನ ವಾಹಿನಿಗಳು ೩೫ ರಾಜ್ಯಗಳಲ್ಲಿ SITE ಮತ್ತು Edutainment ಕಾರ್ಯಕ್ರಮ ಪ್ರಸಾರ ಮಾಡತೊಡಗಿತು. ಈ ಶೈಕ್ಷಣಿಕ ಮನ್ವಂತರಕ್ಕೆ ವಿಜ್ಞಾನಿ, ಇಸ್ರೋದ ವಿಕ್ರಮ್ ಸಾರಾಬಾಯಿ ಕೊಡುಗೆ ಅಪಾರವಾದದ್ದು.

ಮೂಲ ಮತ್ತು ಅರ್ಥ

ದೂರದರ್ಶನ ಸರ್ಕಾರಿ ಮಾಧ್ಯಮವಾಗಿದ್ದು, ಕೇಂದ್ರ ವಾರ್ತಾ ಮತ್ತು ಪ್ರಚಾರ ಸಚಿವಾಲಯದ ಸಾಮ್ಯದಲ್ಲಿರುತ್ತದೆ. ತತ್ವಶಾಸ್ತ್ರದ ಪ್ರಕಾರ, 'ದರ್ಶನ' ಎಂಬ ಪದ 'ಅತ್ಯುನ್ನತ ಜ್ಞಾನ'ವೆಂದು ಸೂಚಿಸುತ್ತದೆ. ಅಂದರೆ ಶ್ರೇಷ್ಠವಾದದ್ದನ್ನು ದೂರದಿಂದ ದರ್ಶಿಸುವುದರ ಮೂಲಕ ತಿಳಿಯುವ ಸಾಧನ ಎಂಬುದಾಗಿದೆ. ಅದನ್ನೆ Divine Eyes ದಿವ್ಯಚಕ್ಷು, ಜ್ಞಾನಚಕ್ಷು, ಧರ್ಮ ಮತ್ತು ನೀತಿಶಾಸ್ತ್ರವನ್ನು ದರ್ಶಿಸುವುದು ಎಂದು ವಿಶ್ಲೇಷಿಸಿದೆ.

ಈ ರೀತಿಯಾದ ಪದಗಳ ಅರ್ಥೈಸುವಿಕೆಯ ಆಧಾರದ ಮೇಲೆ, 'ಶಿಕ್ಷಣದ ಪರಮೋನ್ನತ ಅಂಶವಾದ ಅಧ್ಯಾತ್ಮದ ತಿರುಳನ್ನು ಅರಿತು, ಅದನ್ನು ಬದುಕಿಗೆ ಅನ್ವಯಿಸಿಕೊಳ್ಳುವ ಕ್ರಿಯೆಗೆ ಸಹಾಯಕವಾದ, ಹಾಗೂ ಇಡೀ ವಿಶ್ವವನ್ನೇ ದರ್ಶಿಸುವ ಸಂವಹನದ ವಾಹಿನಿಗೆ 'ದೂರದರ್ಶನ' ಎಂದು ಹೆಸರಿಸಿದ್ದು ಸಾರ್ಥಕ ಎನಿಸುತ್ತಿದೆ. ಈ ಹಿನ್ನಲೆಯಲ್ಲಿ ೧೯೭೬ರಲ್ಲಿ ಅಕಾಶವಾಣಿಯಿಂದ ಪ್ರತ್ಯೇಕಗೊಂಡ ದೂರದರ್ಶನ ತನ್ನ SITE ಯೋಜನೆಗಳನ್ನು ಪೂರೈಸುವಲ್ಲಿ ಯಶಸ್ವಿಯಾಯಿತು. ಅಲ್ಲದೆ, ಪ್ರಥಮ ಬಾರಿಗೆ ಅಹಮದಾಬಾದಿನ ಖೇದ ಜಿಲ್ಲೆಯಲ್ಲಿ ಸಮುದಾಯ ಶಿಕ್ಷಣ ಯೋಜನೆಯನ್ನು ಬಿತ್ತರಿಸಿತು. ಆಗ ಖೇದ ಜಿಲ್ಲೆಯ ೧೦ ತಾಲ್ಲೂಕುಗಳಲ್ಲಿ ೫೬೦ ಸಮುದಯ ಟಿ.ವಿ. ಸೆಟ್‌ಗಳನ್ನು ವಿತರಿಸಿ, ವೀಕ್ಷಕ ಲೋಕ ನಿರ್ಮಿಸತೊಡಗಿತು.

ಶಿಕ್ಷಣ

ಶಿಕ್ಷಣ ಕುರಿತಾದ ಕಾರ್ಯಕ್ರಮಗಳನ್ನು ವಿಶ್ಲೇಷಿಸುವ ಮೊದಲು ಶಿಕ್ಷಣದ ಅರ್ಥವನ್ನು ವಿಶ್ಲೇಷಿಸುವುದು ಸೂಕ್ತ. ಒಂದು ವ್ಯವಸ್ಥೆಯ ಒಳಗು ಮತ್ತು ಹೊರಗಿನ ಪರಿವರ್ತನೆ, ಬೆಳವಣಿಗೆ, ಅಭಿವೃದ್ಧಿ ಮತ್ತು ಪ್ರಗತಿ ಇವುಗಳ ಸ್ವರೂಪಕ್ಕೆ ಶಿಕ್ಷಣ ಎನ್ನಲಾಗುತ್ತಿದೆ. ಇದು ವಿಕಾಸದ ನಿರ್ವಹಣೆ ವೈಯಕ್ತಿಕ ಸಾಮರ್ಥ್ಯ ಮತ್ತು ಆಂತರಿಕ ಅರ್ಹತೆಗಳನ್ನು ಅವಲಂಬಿಸಿರುತ್ತದೆ. 'ಶಿಕ್ಷಣ', ಇಂಗ್ಲಿಷಿನಲ್ಲಿ Education, ಲ್ಯಾಟಿನದಲ್ಲಿ Educatum ಎಂದೂ ಹೇಳಲಾಗುತ್ತಿದೆ. ಇಲ್ಲಿ E- ಮತ್ತು Doco- ಎಂಬೆರಡು ಪದಗಳ ಸಂಯೋಜನೆಯಾಗಿದೆ. ಶಿಕ್ಷಣಾರ್ಥಿಯನ್ನು ಶಿಕ್ಷಣದ ಮೂಲಕ ಪರಿವರ್ತಿಸುವುದಾಗಿದೆ. ಶಿಕ್ಷಣದ ವೈಶಾಲ್ಯ ವ್ಯಕ್ತಿ ಮತ್ತು ಸಮುದಾಯಗಳನ್ನು ಒಳಗೊಳ್ಳುತ್ತದೆ. ಶಿಕ್ಷಣವು ಸಾಮಾಜಿಕ ನಡಾವಳಿಗಳನ್ನು ಪರಿವರ್ತಿಸಿ, ಶಿಕ್ಷಣಾರ್ಥಿಗಳನ್ನು ನಾಗರಿಕರನ್ನಾಗಿ ಸರ್ವಶ್ರೇಷ್ಠತೆಯತ್ತ ಸಾಗುವ ಸೂತ್ರವನ್ನು ಕಲಿಸುತ್ತದೆ. ಹಾಗೂ ರಾಷ್ಟ್ರೀಯತೆ, ದೇಶಾಭಿಮಾನ ಮತ್ತು ತ್ಯಾಗಮಯ ಭಾವನೆಗಳನ್ನು ಉತ್ತೇಜಿಸುತ್ತದೆ. ಆ ಕಾರಣಕ್ಕಾಗಿ ಶಾಲಾ ಕಾಲೇಜುಗಳೊಂದಿಗೆ ಗ್ರಂಥ ಭಂಡಾರ, ವಾಚಾನಾಲಯ, ಬಾನುಲಿ, ಚಿತ್ರಮಂದಿರ, ಮಂದಿರ, ಮೈದಾನ, ಪ್ರದರ್ಶನಾಲಯಗಳು, ಮನೋರಂಜನಾ ಕೇಂದ್ರಗಳನ್ನು ಸಹ ಶೈಕ್ಷಣಿಕವಾದ ತಿಳಿವಳಿಕೆಯ ಮೂಲಗಳನ್ನಾಗಿ

ಪರಿಗಣಿಸಿದ್ದುಂಟು. ಇವೆಲ್ಲವುಗಳ ಪರಿಣಾಮವಾಗಿ, ಜನರಲ್ಲಿ ಹಕ್ಕು, ಕರ್ತವ್ಯ, ಜವಾಬ್ದಾರಿ ಕುರಿತು ಅರಿವು ಮೂಡಿಸಲು ಸಾಧ್ಯವಾಗಿದೆ. ಈ ಹಿನ್ನಲೆಯಲ್ಲಿ ೧೯೫೦ರ ಸುಮಾರಿಗೆ ದೇಶದ ಎಲ್ಲಾ ರಾಜ್ಯಗಳು ಉಚಿತ ಕಡ್ಡಾಯ ಶಿಕ್ಷಣವನ್ನು ಸಮಾಜದ ಎಲ್ಲ ವರ್ಗಗಳವರಿಗೆ ಪೂರೈಸಲು ಸಂವಿಧಾನದಲ್ಲಿ ವಿಧಿಸಲಾಯಿತು. ಇದನ್ನೇ ಘನ ಉದ್ದೇಶವಾಗಿ ತೆಗೆದುಕೊಂಡ ದೂರದರ್ಶನ, ಶಿಕ್ಷಣದ ಧ್ಯೇಯದಲ್ಲಿ ತನ್ನ ಬಹುಮುಖಿ ಕಾರ್ಯಕ್ರಮಗಳೊಂದಿಗೆ, ಹಲವು ವಾಹಿನಿಗಳ ಮೂಲಕ ದೇಶದ ಪ್ರತಿ ಮೂಲೆಯಲ್ಲಿರುವ ಸಮುದಾಯವನ್ನು ತಲುಪಿ, ಅರಿವು–ತಿಳಿವಳಿಕೆ ಕುರಿತು ಪ್ರಸಾರ ಮಾಡಲು ಸಾಧ್ಯವಾಗಿದೆ.

ದೂರದರ್ಶನ ಸಾಮಾನ್ಯವಾಗಿ ನಾಲ್ಕು ಕಾರ್ಯಗಳ ಮೂಲಕ ಸಮಾಜದ ಮೇಲೆ ಪರಿಣಾಮ ಬೀರುವ ಮಾಧ್ಯಮ. ಅವು ಮಾಹಿತಿ, ಮನೋರಂಜನೆ, ಶಿಕ್ಷಣ ಮತ್ತು ಅರಿವು(ಜಾಗೃತಿ). ಆರಂಭದಲ್ಲಿ ಭಾರತೀಯ ದೂರದರ್ಶನ ಹಮ್‌ಲೋಗ್, ಬುನಿಯಾದ್ ಮುಂತಾದ ಕೆಲವು ದೀರ್ಘ(ಮೆಗಾ) ಧಾರಾವಾಹಿಗಳನ್ನು ಪ್ರಸಾರ ಮಾಡಿತು. ಅವು ಸಾಮಾಜಿಕ ಅನಿಷ್ಟಗಳ ಆಚಾರ–ವಿಚಾರಗಳನ್ನು ಕುರಿತವಾಗಿದ್ದವು. ಅಲ್ಲದೆ, ಏಕ್ ಕಹಾನಿ, ತೆರಾಹ ಪಾನೀ, ಭಾರತ ಏಕ ಖೋಜ್ ಮತ್ತು ನಿರ್ಮಲ್‌ದಂತಹ ಪ್ರಸಾರ ಕಾರ್ಯಕ್ರಮಗಳು ಭಾರತೀಯ ಬರಹಗಾರರಲ್ಲಿ ಸಾಹಿತ್ಯಕ ಶಿಕ್ಷಣ ವರ್ಧಿಸುವಷ್ಟು ಪ್ರಭಾವಿಯಾದವು. ಅನಂತರ ೧೯೭೬ರ ಸುಮಾರಿಗೆ SITE ೨೦೦೨ರಲ್ಲಿ Edutainment ವಾಹಿನಿಗಳನ್ನು ಉಡಾಯಿಸಲಾಯಿತು.

ದೂರದರ್ಶನದ ಬೆಳವಣಿಗೆ

ಟಿ.ವಿ. ಅಥವಾ ದೃಶ್ಯ ಮಾಧ್ಯಮ, ವಾಸ್ತವವಾಗಿ ಮೊದಲು ಪ್ರಜಾಸತ್ತಾತ್ಮಕ ಸಂಸ್ಕೃತಿಯ ಪ್ರತೀಕವಾಗಿತ್ತು. ಸಾಮಾನ್ಯವಾಗಿ ಪ್ರಜಾಸಮುದಾಯ ಅಪೇಕ್ಷಿಸುವುದನ್ನು ಪೂರೈಸುವ ಉದ್ದೇಶ ಹೊಂದಿತ್ತು. ರಾಷ್ಟ್ರೀಯ ಪ್ರಸಾರ ಮಾಧ್ಯಮವಾದ ದೂರದರ್ಶನ, ಅನಕ್ಷರಸ್ಥರಿಗೆ ಸಾಹಿತ್ಯ ಸಾಧನ. ಕೆಳವರ್ಗದ, ನಿರ್ಗತಿಕರಿಗಾಗಿ ಅರಳುವ ಸಾಂಸ್ಕೃತಿಕ ಸಂಪಾತ್ತಾಗಿದೆ; ವೀಕ್ಷಣಾ ಸಮುದಾಯಕ್ಕೆ ಕೂಟವೂ (Club) ಆಗಿದೆ. ೧೯೫೯ರ ಸೆಪ್ಟಂಬರ್ ೧೫ ದೂರದರ್ಶನಕ್ಕೆ ಸುವರ್ಣ ದಿನ. ಅಂದೇ ಅದು ತನ್ನ ಪ್ರಥಮ ಕಾರ್ಯವನ್ನು ಪ್ರಸಾರ ಮಾಡಿತು. ಯುನೆಸ್ಕೋದ ೨೦ ಸಾವಿರ ಡಾಲರ್ ನೆರವಿನಿಂದ ವಿವಿಧ ಉಪಕರಣಗಳನ್ನು ಖರೀದಿಸಲಾಯಿತು. ಅಮೇರಿಕ ಸಂಯುಕ್ತ ಸಂಸ್ಥಾನ ಸಹ ಕೆಲ ಸಮುದಾಯದ ಸಾಧನ ಸಲಕರಣೆಗಳನ್ನು ದಾನವಾಗಿ ನೀಡಿತು. ಇದು ಸಾರ್ವತ್ರಿಕ ಶಿಕ್ಷಣಕ್ಕೆ ಮತ್ತು ಸಮುದಾಯದ ಅಭಿವೃದ್ಧಿಗೆ ಕೈಗೊಂಡ ರಾಷ್ಟ್ರದ ಆವಿಷ್ಕಾರ. ವೈಯಕ್ತಿಕವಾಗಿ ವೀಕ್ಷಣೆಗೆ ತರಬೇತಿ ಪ್ರಕ್ರಿಯೆಯೂ ನಡೆಯಿತು. ಅದೇ ವರ್ಷ ಭಾರತದ ಫಿಲೀಪ್ಸ ಕಂಪನಿ ಅಗ್ಗವಾಗಿ ಪೂರೈಸಿದ (ಟ್ರಾನ್ಸಮೀಟರ್ಸ) ರವಾನಿಸುವ ಉಪಕರಣಗಳಿಂದ ಸರ್ಕಾರಕ್ಕೆ ಉತ್ತೇಜನ ಲಭಿಸಿತು. ಹೀಗಾಗಿ ದೆಹಲಿ ನಗರ ಸೇರಿದಂತೆ,

ಸುತ್ತಮುತ್ತಲಿನ ೪೦ಕಿ.ಮೀ. ವ್ಯಾಪ್ತಿ ಪ್ರದೇಶದ ಜನರಿಗೆ ಪ್ರಥಮ ಬಾರಿಗೆ ದೂರದರ್ಶನ ವೀಕ್ಷಿಸಲು ಸಾಧ್ಯವಾಯಿತು. ಜರ್ಮನಿ ಸಹ ಈ ಅಚ್ಚರಿ ಆವಿಷ್ಕಾರದ ಪ್ರಯೋಗ ಗಮನಿಸಿ, ಸ್ಟುಡಿಯೋ ನಿರ್ಮಿಸಿಕೊಡಲು ಮುಂದಾಯಿತು. ಇದರಿಂದ ವಾರದಲ್ಲಿ ೨೦ ನಿಮಿಷದ ಎರಡೆರಡು ಕಾರ್ಯಕ್ರಮಗಳನ್ನು ಪ್ರಸಾರಮಾಡಲಾಯಿತು.

ಆರಂಭದಲ್ಲಿ ಸಾಮಾಜಿಕ ಶಿಕ್ಷಣಾಧಾರಿತ ಕಾರ್ಯಕ್ರಮಗಳಿಗೆ ಹೆಚ್ಚು ಆದ್ಯತೆ ನೀಡಿದ್ದು ಮಹತ್ವದ ಸಂಗತಿ. ಈ ಪ್ರಾಯೋಗಿಕ ಕಾರ್ಯಕ್ರಮಗಳಿಗೆ ವೀಕ್ಷಣಾ ಕೂಟದ ೧೮೦ ಸದಸ್ಯರು ಆರಂಭಿಕ ವೀಕ್ಷಕರು. ಆ ಕೂಟದಲ್ಲಿ ಯುನೆಸ್ಕೊ ಉಚಿತವಾಗಿ ದಯಪಾಲಿಸಿದ ವೀಕ್ಷಣಾ ಪೆಟ್ಟಿಗೆಯನ್ನು ಅಳವಡಿಸಲಾಗಿತ್ತು.

೧೯೬೭ರ ಸುಮಾರಿಗೆ, ಕೃಷಿದರ್ಶನ ಎಂಬ ವಾರದ ಕಾರ್ಯಕ್ರಮ ಪ್ರಸಾರ ಮಾಡಲಾರಂಭಿಸಿತು. ಅದು ೮೦ ಹಳ್ಳಿಗಳ ರೈತರಿಗೆ ಕೃಷಿ ಕುರಿತು ಮಾಹಿತಿ–ಶಿಕ್ಷಣ ನೀಡುವುದಾಗಿತ್ತು. ಈ ಕಾರ್ಯಕ್ರಮಕ್ಕೆ ಅಣುಶಕ್ತಿ ಇಲಾಖೆ, ಭಾರತೀಯ ಕೃಷಿ ಸಂಶೋಧನಾ ಸಂಸ್ಥೆ, ದೆಹಲಿ ನಗರಾಡಳಿತ, ಹರ್ಯಾಣ ಮತ್ತು ಉತ್ತರ ಪ್ರದೇಶ ರಾಜ್ಯ ಸರ್ಕಾರಗಳು ಸಹ ಸಹಾಯ ಹಸ್ತ ನೀಡಿದವು. ಇದರಿಂದ ಪ್ರಸಾರದ ವ್ಯಾಪ್ತಿ ೪೦ಕಿ.ಮೀ. ದಿಂದ ೬೦ಕಿ.ಮೀ.ಗಳಿಗೆ ವಿಸ್ತರಿಸಿತು. ಅಲ್ಲದೆ ೧೯೭೦ರ ಸುಮಾರಿಗೆ ವೀಕ್ಷಕರ ಕೂಟಕ್ಕೆ ಕಾರ್ಯಕ್ರಮ ಪ್ರಸಾರದ ಅವಧಿಯೂ ಹೆಚ್ಚಾಯಿತು. ವಿವಿಧ ಕಾರ್ಯಕ್ರಮಗಳು ಪ್ರಸಾರಕ್ಕೆ ಸಿದ್ಧಗೊಂಡವು. ಆ ದಶಕದ ಅಂತ್ಯಕ್ಕೆ ೨ ಲಕ್ಷದಷ್ಟು ದೂರದರ್ಶನ ಪೆಟ್ಟಿಗೆಗಳು ದೆಹಲಿ ನಗರದವೊಂದರಲ್ಲೇ ವೀಕ್ಷಣೆಗೆ ಅಣಿಯಾದವು. ೧೯೭೨ ರಲ್ಲಿ ಮುಂಬೈ ದೂರದರ್ಶನ ಕೇಂದ್ರ ಆರಂಭಗೊಂಡಿತು. ಅದರೊಂದಿಗೆ ಶ್ರೀನಗರ, ಅಮೃತಸರ ಮತ್ತು ಪುಣೆ ನಗರಗಳಲ್ಲೂ ರಿಲೇ ಕೇಂದ್ರಗಳನ್ನು ತೆರೆಯಲಾಯಿತು. ೧೯೭೫ರಲ್ಲಿ ಕಲ್ಕತ್ತಾ, ಮದ್ರಾಸ್ ಮತ್ತು ಲಖನೌ ನಗರಗಳಲ್ಲಿ ದೂರದರ್ಶನ ಪ್ರಸಾರ ಕೇಂದ್ರ ಆರಂಭಿಸಲಾಯಿತು. ೧೯೭೬ನೇ ಜನವರಿ ೧ರಿಂದ ಎಲ್ಲ ಕೇಂದ್ರಗಳಲ್ಲಿ ವಾಣಿಜ್ಯ ಸೇವೆ ಪ್ರಸಾರಗೊಂಡಿತು. ಆಕಾಶವಾಣಿಯಿಂದ ಪ್ರತ್ಯೇಕಗೊಂಡ ಅನಂತರ ದೂರದರ್ಶನ, ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದಲ್ಲಿ ವಿಶೇಷ ಘಟಕವನ್ನು ಹೊಂದಿತು. ಅಲ್ಲದೆ, ಹೆಚ್ಚು ಮೌಲ್ಯಾಧಾರಿತ ಹಾಗೂ ಗುಣಾತ್ಮಕ ಕಾರ್ಯಕ್ರಮಗಳ್ನು ಪ್ರಸಾರ ಮಾಡಲು ಅನುಕೂಲವಾಯಿತು. ೧೯೭೭ರಲ್ಲಿ ದೂರದರ್ಶನ ವೀಕ್ಷಕರ ಸಂಖ್ಯೆ ನೂರು ಮಿಲಿಯನ್ ಮೀರಿತ್ತು. ಅದುವೇ ಜೈಪುರ, ಹೈದ್ರಾಬಾದ, ರಾಯಪುರ, ಕಲ್ಬುರ್ಗಿ, ಸಂಬಾಲ್ಪುರ ಮತ್ತು ಮುಜಾಫರಪುರಗಳಲ್ಲೂ ಪ್ರಾದೇಶಿಕ ಪ್ರಸಾರ ಕೇಂದ್ರಗಳನ್ನು ಆರಂಭಿಸಿಲು ಪ್ರೋತ್ಸಾಹ ದೊರೆಯಿತು. ೧೯೮೦ರಲ್ಲಿ ಎರಡನೆಯ ವಾಹಿನಿಯನ್ನು ದೆಹಲಿ ಮತ್ತು ಮುಂಬೈ ನಗರಗಳಲ್ಲಿ ಆರಂಭಿಸಲಾಯಿತು. ಅಲ್ಲದೆ, ಇತರೆ ಮೆಟ್ರೋ ಚಾನೆಲ್ ಆರಂಭಿಸಿ, ಜನಪ್ರಿಯಗೊಳಿಸಲಾಯಿತು. ೧೯೮೨ರಲ್ಲಿ ಪ್ರಸಾರವಾದ ಏಶಿಯನ್ ಕ್ರೀಡೆಗಳ ಪ್ರಸಾರವು ರಾಷ್ಟ್ರೀಯ ಕಾರ್ಯಕ್ರಮವಾಗಿ ವಿಸ್ತಾರವಾಯಿತು. ೧೯೯೦ರಲ್ಲಿ ೧೫ ಮಿಲಿಯನ್

ವೀಕ್ಷಣಾ ಪೆಟ್ಟಿಗೆಗಳಿಗೆ ನೇರೆಯ ಕೇಬಲ್ ಸಂಪರ್ಕ ಸಾಧಿಸಲಾಯಿತು. ಆ ಸಂದರ್ಭದಲ್ಲಿ ಒಟ್ಟು ೫೮ ಮಿಲಿಯನ್ ಟಿ.ವಿ. ಪೆಟ್ಟಿಗೆಗಳು ದೇಶಾದ್ಯಂತ ವೀಕ್ಷಣಗೆ ಅನುಕೂಲವಾಗಿದ್ದವು. ವಿವಿಧ ಮೆಟ್ರೋಪಾಲಿಟನ್ ನಗರಗಳಲ್ಲಿ ಮನೋರಂಜನೆಗಾಗಿ ದೂರದರ್ಶನ ಪ್ರತ್ಯೇಕ ವಾಹಿನಿಯನ್ನು ಆರಂಭಿಸಿದ್ದು, ಅದನ್ನು ಡಿಡಿ-೨ ಎಂದು ಕರೆಯಲಾಗುತ್ತಿದೆ. ೧೯೯೯ರ ಮಾರ್ಚ ೮ ದೂರದರ್ಶನಕ್ಕೆ ಮತ್ತೊಂದು ಮೈಲಿಗಲ್ಲಿನ ದಿನ. ಅಂದಿನ ಪ್ರಧಾನ ಮಂತ್ರಿ ನೂತನ ಕ್ರೀಡಾ ವಾಹಿನಿ ಪ್ರಸಾರಕ್ಕೆ ಚಾಲನೆ ನೀಡಿದರು. ಅದು DD-Sports, ಆಗಿದ್ದು ಸಂಪೂರ್ಣ ಉಪಗ್ರಹಾಧಾರಿತವಾಗಿದೆ. ಈ ವಾಹಿನಿಯು ಕ್ರೀಡಾ ಪ್ರಸಾರದೊಂದಿಗೆ ಯುವಕರಿಗೆ ಸಂಬಂಧಿಸಿದ ರಸಪ್ರಶ್ನೆ ಹಾಗೂ ವಿವಿಧ ಆಕರ್ಷಕ ಕಾರ್ಯಕ್ರಮಗಳನ್ನು ಪ್ರಸಾರಮಾಡತೊಡಗಿತು. ಪ್ರಸಾರ ಭಾರತಿ ೨೦೦೨, ಜನೇವರಿ ೨೬ರಂದು ಡಿಡಿ-ಭಾರತಿ ವಾಹಿನಿಗೆ ಜನ್ಮ ನೀಡಿತು. ಇದು ನೂತನ ಮಾದರಿಯ ಶಿಕ್ಷಣ ಸೇರಿದಂತೆ ಮಾಹಿತಿ-ಮನೋರಂಜನೆಗಳನ್ನು ಸಮ್ಮಿಶ್ರವಾಗಿ ಪ್ರಸಾರ ಮಾಡುವ ವಿಷಾಯನುಕ್ರಮಣಿಕೆಯನ್ನು ಹೊಂದಿದೆ. ಡಿಡಿ-ಇಂಡಿಯಾ ಇದು ಸಂಪೂರ್ಣ ದೇಶಿ ಚಾನೆಲ್ ಆಗಿದ್ದು, ಪ್ರಸಾರ ಮಂಡಳಿ ೧೯೯೫ನೇ ಮಾರ್ಚ ೧೪ರಂದು ಪ್ರಸಾರಕ್ಕೆ ಹಸಿರು ನಿಶಾನೆ ತೋರಿತು. ಇದರಲ್ಲಿ ಪಾರಂಪರಿಕ ಶಿಕ್ಷಣ, ಮಾಹಿತಿ ಮತ್ತು ಮನರಂಜನೆ ಕುರಿತಾದ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲಾಗುತ್ತಿದೆ. ಜಾಗತಿಕ ಮಟ್ಟದಲ್ಲಿ ಪ್ರಾಚೀನ ಭಾರತೀಯತೆಯನ್ನು ಪ್ರತಿಬಿಂಬಿಸಲು ಹಾಗೂ ಪ್ರದರ್ಶನಕ್ಕೆ ಅನುಕೂಲವಾಗಿಸಲು ಈ ವಾಹಿನಿಯನ್ನು ಹುಟ್ಟುಹಾಕಿದೆ.

೧೯೭೬ರಿಂದ ದೇಶದ ೧೯ ದೂರದರ್ಶನ ಕೇಂದ್ರಗಳಲ್ಲಿ ವೀಕ್ಷಕ ಸಂಶೋಧನಾ ಘಟಕಗಳನ್ನೂ ಆರಂಭಿಸಲಾಗಿದೆ. ದೂರದರ್ಶನ ಮಾಹಿತಿ ತಂತ್ರಜ್ಞಾನದ ಫಲಶ್ರುತಿಯಿಂದ ದೂರದರ್ಶನ DTH, Narrowcasting ಸೌಲಭ್ಯಗಳನ್ನು ಹೊಂದಿದೆ. ೨೦೦೩ರಿಂದ ಆರ್ಚಿವ್ಸ್ ಆರಂಭಿಸಿದ್ದು ಇದರಿಂದ ವಿಡಿಯೋ ಮತ್ತು ಆಡಿಯೋ ಸಿಡಿಗಳ ಸೇವೆಗೆ, ಮತ್ತಷ್ಟು ಅನುಕೂಲ ಒದಗಿದೆ. ದೂರದರ್ಶನವು ಅಂತರಜಾಲ ಸೌಕರ್ಯವನ್ನೂ ಆರಂಭಿಸಿದ್ದು, ವಿವಿಧ ವೆಬ್‌ಸೈಟ್ ಸುಳಿವುಗಳಿಂದ ಎಲ್ಲ ಕೇಂದ್ರಗಳಲ್ಲಿ ಲಭ್ಯವಿರುವ ಪ್ರಮುಖ ಕಾರ್ಯಕ್ರಮಗಳನ್ನು ಗಮನಿಸಬಹುದಾಗಿದೆ. ಅಗತ್ಯವೆನಿಸಿದರೆ, ವಿಷಯ, ವಸ್ತು, ದೃಶ್ಯಾವಳಿ, ಆಡಿಯೋ-ವಿಡಿಯೋಗಳನ್ನು ಮುಕ್ತವಾಗಿ ಸಾರ್ವಜನಿಕರ ಬಳಕೆಗೆ ಅನುಕೂಲಗೊಳಿಸಿದೆ.

ಕರ್ನಾಟಕದಲ್ಲಿ ದೂರದರ್ಶನ

ರಾಷ್ಟ್ರದ ಪ್ರಮುಖ ಪ್ರಾದೇಶಿಕ ಭಾಷೆಗಳಲ್ಲಿ ವಿವಿಧ ವಾಹಿನಿಗಳನ್ನು ಆರಂಭಿಸಿದಂತೆ, ಕರ್ನಾಟಕದಲ್ಲೂ ಡಿಡಿ-ಚಂದನವನ್ನು ಆರಂಭಿಸಿದೆ. ಇದರ ಪ್ರಧಾನ ಕೇಂದ್ರ ಬೆಂಗಳೂರು ನಗರದಲ್ಲಿದೆ. ಇದು ಉಪಗ್ರಹಾಧಾರಿತ ವಾಹಿನಿಯಾಗಿದ್ದು, ೧೯೯೧ರ ಆಗಸ್ಟ್ ೧೫ರಂದು ಬೆಂಗಳೂರು ದೂರದರ್ಶನ ಕೇಂದ್ರ ಎಂಬ

ಹೆಸರಿನಿಂದ ಕಾರ್ಯಾರಂಭಕ್ಕೆ ಮಾಡಿತು. ೨೦೦೦ನೇ ವರ್ಷದಲ್ಲಿ ಸಂಪೂರ್ಣ ೨೪ ಗಂಟೆಯ ವಾಹಿನಿಯಾಗಿ ಪರಿವರ್ತನೆಯಾಯಿತು.

ರಾಜ್ಯದ ಸಾಂಸ್ಕೃತಿಕ ಸೊಗಡಿನ ಆಧಾರದ ಮೇಲೆ ಅದಕ್ಕೆ ಚಂದನ ಎಂದು ಮರುನಾಮಕರಣಗೊಳಿಸಲಾಯಿತು. ೧೯೯೦ರ ನವೆಂಬರ್ ೧ರಿಂದ ಡಿಡಿ–೯ ಎಂಬ ನಾಮಧೇಯ ಹೊಂದಿತ್ತು. ೧೯೯೪ನೇ ಸೆಪ್ಟಂಬರ್ ೧೪ರಂದು ಕಲ್ಬುರ್ಗಿಯಲ್ಲಿ ರಾಜ್ಯದ ಪ್ರಾದೇಶಿಕ ಕೇಂದ್ರವನ್ನು ಉದ್ಘಾಟಿಸಲಾಯಿತು. ವಾರದಲ್ಲಿ ಎರಡೆರಡು ತಾಸಿನ ಕಾರ್ಯಕ್ರಮ ಪ್ರಸಾರ ಮಾಡುವ ವ್ಯವಸ್ಥೆಯೊಂದಿಗೆ ಕಾರ್ಯಾರಂಭ ಮಾಡಿತು. ಇಂದು ಡಿಡಿ–ಚಂದನ ರಾಜ್ಯದಲ್ಲಿ ಶೇ.೮೧.೭ರಷ್ಟು ವೀಕ್ಷಕರಿಗೆ, ಶೇ.೭೬.೨ರಷ್ಟು ಪ್ರದೇಶಗಳಿಗೆ ಲಭ್ಯವಿದೆ. ತನ್ನ ಪ್ರಸಾರದ ಕಾರ್ಯಕ್ರಮಗಳಲ್ಲಿ ಶೇ ೦೪ರಷ್ಟು ಸಾಮಾಜಿಕ ಶಿಕ್ಷಣಕ್ಕೆ ಆದ್ಯತೆ ನೀಡಿದೆ.

ಮಾಹಿತಿ ಶಿಕ್ಷಣದ ಸ್ವರೂಪ ಮತ್ತು ಬೆಳವಣಿಗೆ

ಸಾಮಾನ್ಯವಾಗಿ ಶಿಕ್ಷಣದ ವ್ಯಾಪ್ತಿಯನ್ನು ಎರಡು ಮುಖಗಳಲ್ಲಿ ವಿಂಗಡಿಸಬಹುದಾಗಿದೆ. ಮಾಹಿತಿ ಶಿಕ್ಷಣ ಮತ್ತು ಮೌಲ್ಯಶಿಕ್ಷಣ (Information and Transformation Education). 'ಭೌತಿಕ ಜೀವನದಲ್ಲಿ ಜೀವನೋಪಾಯಕ್ಕೆ, ಸೌಲಭ್ಯಗಳಿಗೆ, ಅನುಕೂಲ–ಸಮೃದ್ಧಿಗಳಿಗೆ ಬೇಕಾದ ಅವಶ್ಯಕತೆಗಳನ್ನು ಪೂರೈಸುವುದು ಮಾಹಿತಿ ಶಿಕ್ಷಣ'. ನಿತ್ಯ ಜೀವನ ಸುಗುಮವಾಗಿ ನಿರ್ವಹಿಸಲು ಬೇಕಾಗುವ ತಂತ್ರಜ್ಞರು, ವೈದ್ಯರು, ವಿಜ್ಞಾನಿಗಳು, ಆಡಳಿತಗಾರರು, ನ್ಯಾಯಾಧೀಶರು, ಉದ್ಯೋಗಿಗಳು, ವೃತ್ತಿ ನಿಪುಣರು ಇತ್ಯಾದಿ ವ್ಯಕ್ತಿಗಳನ್ನು ನಿರ್ಮಿಸುವುದು ಬಹುಪಾಲು ಮಾಹಿತಿ ಶಿಕ್ಷಣವೇ. ಸ್ವಾಮಿ ವಿವೇಕಾನಂದರು ಹೇಳುವಂತೆ, 'ಮನುಷ್ಯ ತನ್ನ ಕಾಲ ಮೇಲೆ ತಾನು ನಿಲ್ಲುವ ಜೀವನ ಕಲೆ ಕಲಿಸುವವುದೇ ಶಿಕ್ಷಣ'. ಇದು ಮಾಹಿತಿ ಶಿಕ್ಷಣದ ಸ್ವರೂಪವೂ ಹೌದು. ಭಾರತ ಬಹು ಸಂಸ್ಕೃತಿಗಳ ದೇಶ. ಕೈಗಾರಿಕೆ, ಕೃಷಿ, ಶಿಕ್ಷಣ ಮತ್ತು ಔದ್ಯಮೀಕರಣಗಳ ಅಭಿವೃದ್ಧಿಗೆ ವಿಶಿಷ್ಟ ಮಾರ್ಗವನ್ನು ಅನುಸರಿಸುತ್ತಿದೆ. ಕಳೆದ ಎರಡು ದಶಕಗಳಿಂದ ಮೌಲ್ಯವರ್ಧನೆ ಹಾಗೂ ಸಂವಹನ ಜಾಲಕ್ಕೆ ಮಹತ್ವ ನೀಡಿದೆ. ಇದರಿಂದ ದೇಶದ ಬಹುತೇಕ ಪ್ರಾದೇಶಿಕತೆ ಹಾಗೂ ನಗರ–ಗ್ರಾಮಗಳ ನಡುವಿನ ತಾರತಮ್ಯ ಹೋಗಲಾಡಿಸಲು ನೆರವಾಗಿದೆ. ತೀವ್ರ ಆರ್ಥಿಕ ಸುಧಾರಣೆ, ಮುಕ್ತ ಸಾಧನ ಸಲಕರಣೆಗಳ ಹರಿವಿನಿಂದ, ನಿರೀಕ್ಷಿತ ವಿಕಾಸಕ್ಕೆ ಅನುಕೂಲ ಎನಿಸಿದೆ. ಇದರಲ್ಲಿ ಉನ್ನತ ಶಿಕ್ಷಣದ ಪಾತ್ರ, ಸಂವಹನ ಮಾಧ್ಯಮಗಳ ಪ್ರಭಾವ, ಮಾಹಿತಿ ತಂತ್ರಜ್ಞಾನದ ಬೆಳವಣಿಗೆಯ ಹೊಣೆಯೂ ಇರುತ್ತದೆ. ಶಿಕ್ಷಣದ ಧ್ಯೇಯ ವಿಸ್ತೃತ ಸಮಾಜದ ಸಮೃದ್ಧಿ. ಇತ್ತೀಚಿನ ಆವಿಷ್ಕಾರ ಎಂದರೆ, ಮಾಹಿತಿ ತಂತ್ರಜ್ಞಾನದ ಸ್ಫೋಟ ಮತ್ತು ಉಪಗ್ರಹ ಸಂವಹನದ ಪ್ರಗತಿ. ಇವು ಜಗತ್ತನ್ನು ಸಂಕುಚಿತಗೊಳಿಸಿವೆ. ಜೀವನ ಶೈಲಿಯೊಂದಿಗೆ ವೈಚಾರಿಕ ಜ್ಞಾನದ ಕ್ಷಿತಿಜ ವಿಸ್ತರಿಸಿದೆ. ಅನಕ್ಷರಸ್ಥ ಸಮುದಾಯ

ಶಿಕ್ಷಣ ವಾಹಿನಿಗೆ ಬರದಿದ್ದರೆ, ಶಿಕ್ಷಣವೇ ಅವರತ್ತ ಸಾಗಬೇಕೆಂಬ ಸ್ವಾಮಿ ವಿವೇಕಾನಂದರ ವಿಚಾರ ಸೂಕ್ತವೆನಿಸುತ್ತದೆ. ವ್ಯವಸ್ಥೆಯ ಕುರಿತು ಜಾಗೃತಿ ವಹಿಸಿ, ಭವಿಷ್ಯದ ಜನಾಂಗಕ್ಕೆ ಶ್ರೇಷ್ಠತೆಯನ್ನು ಸಂರಕ್ಷಿಸುವುದು ಜಾಗತೀಕರಣದ ಸಂದೇಶ. ಸಂಸ್ಕೃತಿ ಮತ್ತು ಸ್ವಂತಿಕೆಯ ಉಳಿವಿಗೆ ಜನ ಮತ್ತಷ್ಟು ನಿಗಾವಹಿಸಿದ್ದು ತೀವ್ರ ಆಸಕ್ತಿ ಮೂಡಿಸಿದೆ. ತಮ್ಮ ಪಾರಂಪರಿಕತೆಯ ಕುರಿತು ಹೆಚ್ಚೆಚ್ಚು ಅರಿಯಲೂ ನೆರವಾಗಿದೆ. ಪ್ರಾಚೀನ ಬ್ರಿಟಿಷ್ ಪದ್ಧತಿ,ಸಮಾಜಕ್ಕೆ ಸವಾಲಾಗಿರಬಹುದು. ಆದರೆ ನವ ಮಾದರಿಯ ಉದಯಕ್ಕೆ ಸಾಕ್ಷಿಯಾಗಿರುತ್ತದೆ.

ಬೆಳವಣಿಗೆ

ಪ್ರಾಚೀನ ಭಾರತದಲ್ಲಿ ಶಿಕ್ಷಣಮಾಧ್ಯಮ ವೌಖಿಕ ಮತ್ತು ಲಿಖಿತ ಸಂಪ್ರದಾಯಗಳನ್ನು ತಲೆಮಾರಿನಿಂದ ತಲೆಮಾರಿಗೆ ರವಾನಿಸುವ ಪ್ರಭಾವಿ ಸಾಧನವಾಗಿತ್ತು. ಜ್ಞಾನ ವಿನಿಮಯಕ್ಕೆ ಗುರು–ಶಿಷ್ಯರ ಪರಂಪರೆ ಚಾಲ್ತಿಯಲ್ಲಿತ್ತು. ಆದಿಕಾಲದಿಂದಲೂ ಹಿಂದೂ ಶಿಕ್ಷಣ ಮತ್ತು ಬೌದ್ಧ ಶಿಕ್ಷಣವೆಂಬ ಪ್ರಭೇದಗಳಿದ್ದವು. ಚರ್ಚೆ, ಭಾಷಣ ಮತ್ತು ಮೌಖಿಕ ಪದ್ಧತಿಯೇ ಎರಡೂ ಪ್ರಭೇದಗಳಲ್ಲಿ ಕಲಿಸುವ ವ್ಯವಸ್ಥೆಯಾಗಿತ್ತು. ಅವು ಋಷಿವರ್ಯರ ಆಶ್ರಮಗಳೆಂದು ಹಿಂದೂ ಶಿಕ್ಷಣ ವ್ಯವಸ್ಥೆಯಲ್ಲಿ ಹಾಗೂ ಸನ್ಯಾಸಿ ವಿಹಾರಗಳು ಎಂದು ಬೌದ್ಧಾಧರಿತ ಶಿಕ್ಷಣದಲ್ಲಿ ಪ್ರಚುರಪಟ್ಟಿದ್ದವು. ಅವುಗಳ ಬುನಾದಿಯಲ್ಲೇ ನಳಂದಾ, ವಿಕ್ರಮಶಿಲಾ ಮತ್ತು ವಲ್ಲಾಬಿಯಂಥ ಮಹಾನ್ ವಿಶ್ವವಿದ್ಯಾಲಯಗಳು ಬೆಳೆದದ್ದು ಚಾರಿತ್ರಿಕ ದಾಖಲೆ. ಮಧ್ಯಕಾಲಿನ ಯುಗ(೧೨ರಿಂದ ೧೮ನೇ ಶತಮಾನ)ದಲ್ಲಿ, ಪಾಶ್ಚಾತ್ಯರ ಬೆರಕೆ ಮತ್ತು ವ್ಯವಹಾರ ವಿನಿಮಯದ ಪರಿಣಾಮಕ್ಕೆ ವ್ಯತಿರಿಕ್ತವಾಗಿ ಮದ್ರಸಾಗಳು ತಲೆ ಎತ್ತಲಾರಂಭಿಸಿವು. ಪುರಾತನ ಪಾರಂಪರಿಕ ಶಿಕ್ಷಣ ಆಂಗ್ಲೇಯ ಶೈಕ್ಷಣಿಕ ಯೋಜನೆಗೊಳಪಟ್ಟಿತು. ೧೯ನೇ ಶತಮಾನದ ಅವಧಿಗೆ ರಾಜಕೀಯ ನಿಶ್ಶಕ್ತೀಕರಣದಿಂದಾಗಿ ಬ್ರಿಟಿಷ್ ಸಾಮ್ರಾಜ್ಯ ಯುರೋಪ್ ಖಂಡದಲ್ಲೇ ನಾಯಕತ್ವದಿಂದ ಪ್ರಜಲ್ವಿಸಿತು. ಅಧಿಕಾರಷಾಹಿತ್ವದ ಪರಿಪಾಲನೆಗೆ ಮೆಕಾಲೆ ಪದ್ಧತಿ ಪ್ರಚುರ ಪಟ್ಟಿದ್ದು ಐತಿಹಾಸಿಕ ಬೆಳವಣಿಗೆ. ೧೮೧೭ರಲ್ಲಿ ಪ್ರಥಮ ಆಂಗ್ಲ ಮೂಲದ ಶಿಕ್ಷಣ, ಕಲ್ಕತ್ತೆಯ ಹಿಂದು ಕಾಲೇಜಿನಲ್ಲಿ ಅನಾವರಣಗೊಳ್ಳಲಾರಂಭಿಸಿತು. ಅನಂತರ ಭಾರತದ ಪ್ರಮುಖ ನಗರಗಳಿಗೆ ವ್ಯಾಪಿಸಿ, ಆಂಗ್ಲ ಮಾಧ್ಯಮದಲ್ಲಿ ಯೂರೋಪಿಯನ್ ಸಾಹಿತ್ಯ, ವಿಜ್ಞಾನ ಬೋಧನೆಯ ಆರಂಭಕ್ಕೆ ನಾಂದಿ ಹಾಡಿತು. ೧೮೫೭ರಲ್ಲಿ ಮೊದಲ ಬಾರಿಗೆ ಮುಂಬೈ, ಕಲ್ಕತ್ತ ಮತ್ತು ಚೆನ್ನೈಗಳಲ್ಲಿ ಮೂರು ವಿಶ್ವವಿದ್ಯಾಲಯಗಳನ್ನು ತೆರೆಯಲಾಯಿತು. ಇವುಗಳಿಗೆ ಲಂಡನ್ ವಿಶ್ವವಿದ್ಯಾಲಯ ಮಾದರಿಯಾಗಿತ್ತು. ಆಡಳಿತವೂ ಅದರ ಬತ್ತಳಿಕೆಯಲ್ಲಿತ್ತು. ೧೮೫೫ರ ಸುಮಾರಿಗೆ ೨೮೧ ಮಾಧ್ಯಮಿಕ ಶಾಲೆಗಳು, ೨೮ ಕಾಲೇಜುಗಳು ಬ್ರಿಟಿಷರಿಂದ ಗುಮಾಸ್ತರನ್ನು ತಯಾರಿಸಲು ತೆರೆದುಕೊಂಡವು. ೧೯೪೭ರಲ್ಲಿ ಅವುಗಳ ಸಂಖ್ಯೆ ೧೯ ವಿಶ್ವವಿದ್ಯಾಲಯಗಳು, ೧೯೬ ಕಾಲೇಜುಗಳಿಗೇರಿತು.

ಸ್ವಾತಂತ್ರ್ಯೋತ್ತರ ಭಾರತದ ಆಧುನಿಕ ಶಿಕ್ಷಣದಲ್ಲಿ ವಿಶಿಷ್ಟ ಬೆಳವಣಿಗೆಯೆಂದರೆ ದೂರ ಮತ್ತು ಮುಕ್ತ ಶಿಕ್ಷಣ ಪದ್ಧತಿ. ಇದರಲ್ಲಿ ದ್ವಿ-ಮಾದರಿಗಳಿವೆ: ೧. ಕರೆಸ್ಪಾಡೆನ್ಸ್ ಕೋರ್ಸಿನ ಸಂಸ್ಥೆಗಳು(ವಿಶ್ವವಿದ್ಯಾಲಯಗಳಿಂದ) ಹಾಗೂ ೨. ಮುಕ್ತ ಕಲಿಕೆ, ಮುಕ್ತ(ಓಪನ್) ವಿಶ್ವವಿದ್ಯಾಲಯಗಗಳಿಂದ. ಇದರಲ್ಲಿ ಬಾಹ್ಯ ಪರೀಕ್ಷಾ ಪದ್ಧತಿಯನ್ನು ಅನುಸರಿಸಲಾಗುತ್ತಿದೆ. ೧೯೬೨ರಲ್ಲಿ ದೆಹಲಿ ವಿಶ್ವವಿದ್ಯಾಲಯದಿಂದ ಪ್ರಥಮ ಬಾರಿಗೆ ಈ ಮಾದರಿಯ ಶಾಲೆಯನ್ನು ಆರಂಭಿಸಲಾಯಿತು. ಇಂದು ೫೦ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಗಳು ಬಾಹ್ಯ ಶಿಕ್ಷಣ ಮಳಿಗೆಗಳನ್ನು ತೆರೆದು ಪ್ರತಿ ವರ್ಷ ಲಕ್ಷಕ್ಕೂ ಅಧಿಕ ಶಿಕ್ಷಣಾರ್ಥಿಗಳಿಗೆ ಸೇವೆ ಒದಗಿಸುತ್ತಿವೆ. ಈ ರೀತಿಯ ಆವಿಷ್ಕಾರ, ಆಧುನಿಕ ಪದ್ಧತಿಯ ಕಲಿಕಾ ಪ್ರವೃತ್ತಿಗಳಿಗೆ ಅನುಗುಣವಾಗಿ, ಮಾಹಿತಿ ತಂತ್ರಜ್ಞಾನದ ಕ್ರಾಂತಿಗೆ ಸ್ಫೂರ್ತಿಯಾಯಿತು. ಸಂವಹನದ ಜಾಲಗಳ ಪ್ರಭಾವದಿಂದ ವಿದ್ಯುನ್ಮಾನ ಮತ್ತು ಹೊಸ ಮಾದರಿಯ ಸಮೂಹ ಮಾಧ್ಯಮಗಳೂ ಶಿಕ್ಷಣ ಪಸರಿಸುವ ಕಾರ್ಯಕ್ಕೆ ಒಗ್ಗಿಕೊಳ್ಳಲಾರಂಭಿಸಿದವು. ಅವುಗಳ ಫಲಶ್ರುತಿಯಿಂದ ಭಾರತದಲ್ಲಿ ದೂರದರ್ಶನ ಕೇಂದ್ರವು, ಶಿಕ್ಷಣ ಸೇವೆಯನ್ನೇ ಪ್ರಧಾನವನ್ನಾಗಿಟ್ಟುಕೊಂಡು ಕಾರ್ಯಾರಂಭ ಮಾಡುತ್ತಿದೆ. ಅದಕ್ಕೆಂದೆ ನೂರಾರು ಕಾರ್ಯಕ್ರಮಗಳು, ಹತ್ತಾರು ವಿಶೇಷ ವಾಹಿನಿಗಳನ್ನು ಜನತೆಗೆ ಅರ್ಪಿಸುತ್ತಿದೆ.

ದೂರದರ್ಶನ ಪ್ರಸಾರದ ಶೈಕ್ಷಣಿಕ ಕಾರ್ಯಕ್ರಮಗಳು ದೂರದರ್ಶನ ವಾಹಿನಿ ಮೂಲಭೂತವಾಗಿ ಮೂರು ವಿಧದ ಕಾರ್ಯಕ್ರಮಗಳ ಅನುಕ್ರಮಣಿಕೆಯನ್ನು ಹೊಂದಿದೆ. ಅವು ಮಾಹಿತಿ-ಶಿಕ್ಷಣ-ಮನೋರಂಜನೆ ಆಧಾರಿತ ಕಾರ್ಯಕ್ರಮಗಳು. ಶಿಕ್ಷಣಾಧಾರಿತ ಕಾರ್ಯಕ್ರಮಗಳಲ್ಲಿ ಹಲವು ತೆರನಾಗಿದೆ. ಅವೆಲ್ಲವೂ ವಾಣಿಜ್ಯ ಆಧಾರಿತ, ಪ್ರಾಯೋಜಕತ್ವದ ಹಾಗೂ ನೇರ ಪ್ರಸಾರದ ಸ್ವರೂಪದವುಗಳು. ಕೆಲವು IGNOU(ಇಗ್ನೋ), ಯುಜಿಸಿ(UGC), CIET, SITE, NIM-National Literacy Mission, HRD, SIERT, NCERT, IIT, UNESCO, CEC-Consortium for Educational Communication, EMRC, AVRC ಮುಂತಾದವುಗಳ ಆಧಾರಿತ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿದೆ. ಮತ್ತೆ ಕೆಲವು ಕಾರ್ಯಕ್ರಮಗಳು ಹೀಗಿವೆ -Edusat, CET, (ಎಡ್ಯುಸ್ಯಾಟ್, ಸಿಇಟಿ) ಕ್ವಿಝ್(ಇತಿಹಾಸ ಮತ್ತು ಸಾಮಾನ್ಯ ವಿಜ್ಞಾನ), ಉಪಗ್ರಹ ಬೋಧನೆ, ಪೃಥ್ವಿ ಶಿಕ್ಷಣ(ಅರ್ತ್ ಎಡ್ಯುಕೇಷನ್), ಬೆಳಗಿನ ಶೈಕ್ಷಣಿಕ ಪ್ರಸಾರ, ವಿಜ್ಞಾನ ಮತ್ತು ತಂತ್ರಜ್ಞಾನ ತಿಳಿವಳಿಕೆ, ಪಠ್ಯಕ್ರಮ ಆಧಾರಿತ, ಭಾಷೆ ಕುರಿತು, ಯುಜಿಸಿ, ಇಗ್ನೋ ಚಟುವಟಿಕೆ, ಕಾನೂನು ಕಲಿಗಳು, ಥಟ್ ಅಂಥ ಹೇಳಿ, ಟರ್ನಿಂಗ್ ಪಾಯಿಂಟ್, ಭೂಮಿ(ಪರಿಸರ ಶಿಕ್ಷಣ), ಸಿಐಇಟಿ-ಎಸ್ಸೈಇಟಿ, ಟ್ರೈಬಲ್ ಅಫೇರ್ (ಬುಡಕಟ್ಟು ಕುರಿತು), ವಯಸ್ಕರ ಶಿಕ್ಷಣ, ರಾಷ್ಟ್ರೀಯ ಶಿಕ್ಷಣ ಮಿಷನ್, ಅವಿರತ ಕ್ವಿಝ್-೨೦೦೯, ಪಿಎಸ್‌ಬಿಯಿಂದ ಮಹಿಳೆಯರ ಕುರಿತಾದ ಮೊಲಾದ ಕಾರ್ಯಕ್ರಮಗಳನ್ನು ಹೀಗೆ ಪಟ್ಟಿ ಮಾಡಬಹುದು.

ದೂರದರ್ಶನ ಕೇಂದ್ರವು, ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ವಾರ್ತಾ ಮತ್ತು ಪ್ರಚಾರ ಸಚಿವಾಲಯದ ನೇತೃತ್ವದಲ್ಲಿ ಹಾಗೂ ಇಗ್ನೋ ನೆರವಿನಿಂದ ೨೦೦೦ನೇ ಜನವರಿ ೧೦ರಂದು ಶೈಕ್ಷಣಿಕ ಕಾರ್ಯಕ್ರಮಕ್ಕಾಗಿ 'ಡಿಡಿ-ಜ್ಞಾನದರ್ಶನ' ಎಂಬ ಶಿಕ್ಷಣ ವಾಹಿನಿಯನ್ನು ಪ್ರತ್ಯೇಕವಾಗಿ ಪ್ರಸಾರ ಮಾಡಲಾರಂಭಿಸಿತು. ಈ ವಾಹಿನಿ ೨೦೦೩ನೇ ಜನವರಿ ಅಂತ್ಯಕ್ಕೆ, ಅಂದರೆ ಮೂರು ವರ್ಷಗಳ ಕಾಲ ದಿನದ ೨೪ಗಂಟೆಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನೇ ಪ್ರಸಾರ ಮಾಡುವ ಸಾಮರ್ಥ್ಯ ಹೊಂದಿತು. ಇದು ಸಹ ಸಂಪೂರ್ಣ ಉಪಗ್ರಹ ಆಧಾರಿತವಾಗಿತ್ತು. ಯುಜಿಸಿ, ಇಗ್ನೊಗೆ ಸಂಬಂಧಿಸಿದ ಶೈಕ್ಷಣಿಕ ಕಾರ್ಯಕ್ರಮಗಳನ್ನು ೨೫ ನಿಮಿಷಗಳಿಂದ ಅರ್ಧ ಗಂಟೆಯವರೆಗೆ ಬೆಳಗ್ಗೆ ಮತ್ತು ಸಂಜೆ ಪ್ರಸಾರ ಮಾಡುತ್ತಿದೆ. E-TV (Eduvation Television) ಪ್ರಾದೇಶಿಕ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಸೋಮವಾರದಿಂದ ಶುಕ್ರವಾರದವರೆಗೆ ಪ್ರತಿ ೧೦-೩೦ಕ್ಕೆ ಅರ್ಧ ಗಂಟೆಯವರೆಗೆ, ಪ್ರತಿದಿನ ೧೧ಕ್ಕೆ ಪ್ರಸಾರ ಮಾಡುತ್ತಿದೆ. ಇವೆಲ್ಲ ಪ್ರಾಯೋಜಕತ್ವವಿಲ್ಲದ ಶೈಕ್ಷಣಿಕ ಕಾರ್ಯಕ್ರಮಗಳು. ಜ್ಞಾನದರ್ಶನ ವಾಹಿನಿಯಲ್ಲಿ ಪ್ರಸಾರವಾಗುವ ಪ್ರಾಯೋಜಿತ ಶೈಕ್ಷಣಿಕ ಕಾರ್ಯಕ್ರಮಗಳೆಂದರೆ, ಪ್ರತಿ ಶನಿವಾರ ೧೪.೩೦ಕ್ಕೆ ಅರ್ಧ ಗಂಟೆ ಪ್ರಸಾರವಾಗುವ ಟರ್ನಿಂಗ್ ಪಾಯಿಂಟ್ ಮತ್ತು ಅದೇ ದಿನ ೧೫.೦೨ಕ್ಕೆ ೨೮ ನಿಮಿಷಗಳವರಗೆ ಪ್ರಸಾರವಾಗುವ ಕ್ವಿಝ್ ಕಾರ್ಯಕ್ರಮವಾಗಿತ್ತು. ೨೦೦೩ರಲ್ಲಿ ದಿನದ ಒಟ್ಟು ೧೪ ಗಂಟೆ ೫೩ ನಿಮಿಷಗಳವರಗೆ ಈ ಮೇಲಿನ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿತ್ತು. ಉಳಿದ ೧೦ ಗಂಟೆ ೧೩ ನಿಮಿಷಗಳಲ್ಲಿ ಶಿಕ್ಷಣ ಆಧಾರಿತ ಸಾಂದರ್ಭಿಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡಿದೆ (ಆಧಾರ: ೨೦೦೦೩ನೇ ಸಾಲಿನ ದೂರದರ್ಶನ ವರದಿ ಪುಸ್ತಿಕೆ). ೨೦೦೩ನೆ ಜನವರಿ ೨೬ರಂದು ಜ್ಞಾನದರ್ಶನ-೩, ಎಂಬ ಮತ್ತೊಂದು ಶೈಕ್ಷಣಿಕ ಪ್ರಸಾರದ ವಾಹಿನಿಯನ್ನು ಆರಂಭಿಸಲಾಯಿತು. ಇಲ್ಲಿ ತಾಂತ್ರಿಕ ಶಿಕ್ಷಣಾಧರಿತ ವಿಷಯ ಪ್ರಧಾನವಾಗಿರುತ್ತದೆ. ಅದಕ್ಕೆಂದೆ ತಾಂತ್ರಿಕ ಶಿಕ್ಷಣ ಇಲಾಖೆ, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ, ಐಐಟಿ-ದೆಹಲಿ, ನೋಡಲ್ ಸಂಸ್ಥೆ, ಜ್ಞಾನದೀಪ ಸಂಬಂಧಿತ ಇಗ್ನೊಗಳ ಸಹಯೋಗದೊಂದಿಗೆ ಈ ವಾಹಿನಿ ಪ್ರಸಾರ ಮಾಡಲಾರಂಭಿಸಿದೆ. ಐಐಟಿ ಸಂಸ್ಥೆಯ ತಾಂತ್ರಿಕ ಶಿಕ್ಷಣ ಕಲಿಕಾರ್ಥಿಗಳ ಅನುಕೂಲಕ್ಕಾಗಿ, ರಾಷ್ಟ್ರದ ಶೈಕ್ಷಣಿಕ ಕೇತ್ರದಲ್ಲಿ ನವ ವ್ಯವಸ್ಥೆಯನ್ನು ಹರಡಲಾರಂಭಿಸಿತು. ಇವುಗಳಲ್ಲದೆ, ಡಿಡಿ-೧ ಸಹ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ, ಮಾಹಿತಿ ಕಾರ್ಯಕ್ರಮಗಳನ್ನು ವಿವಿಧ ವಿಷಯಗಳ ಕುರಿತು ಪ್ರಸಾರ ಮಾಡುವ ವ್ಯವಸ್ಥೆ ಹೊಂದಿದೆ. ಜೊತೆಗೆ ಜ್ಞಾನದರ್ಶನ ಕೆಲವು ಮಹತ್ವದ ಕಾರ್ಯಕ್ರಮಗಳನ್ನು ಡಿಡಿ-೧ ರಲ್ಲಿ ಮರು ಪ್ರಸಾರದ ವ್ಯವಸ್ಥೆ ಕಲ್ಪಿಸಲಾಗಿದೆ. ಜ್ಞಾನದರ್ಶನ ಮತ್ತು ಇ-ಟಿ.ವಿಯಲ್ಲಿ ಪ್ರಸಾರವಾಗುವ ಪ್ರಮುಖ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಎನ್ಸೈಇಟಿ, ಸಿಐಇಟಿಗೆ ಸಂಬಂಧಿಸಿದವುಗಳನ್ನು ತಮಿಳು, ಮರಾಠಿ, ಉಡಿಯಾ, ತೆಲಗು ಮತ್ತು ಹಿಂದಿ ಸೇರಿದಂತೆ ಇತರ ಪ್ರಾದೇಶಿಕ ಭಾಷೆಗಳಲ್ಲಿ ಡಿಡಿ-೧ರಲ್ಲಿ ಪ್ರಾಥಮಿಕವಾಗಿ

ಪ್ರಸಾರ ಮಾಡಲಾಗುತ್ತಿದೆ. ಮಾಧ್ಯಮಿಕ ಹಂತದ ಶಿಕ್ಷಣಾರ್ಥಿಗಳಿಗೆ, ಸಿಐಇಟಿ, ರಾಷ್ಟ್ರೀಯ ಮುಕ್ತ ಶಾಲೆ ಸಂಬಂಧಿತ, ಉಪಗ್ರಹ ಕುರಿತು, ಯುಜಿಸಿ ಕಾರ್ಯಕ್ರಮಗಳನ್ನು ಡಿಡಿ–೧ ಮತ್ತು ಜ್ಞಾನದರ್ಶನದಲ್ಲಿ ಪ್ರಸಾರ ಮಾಡಲಾಗುತ್ತದೆ. ದೇಶವ್ಯಾಪಿಯಾಗಿ ಉನ್ನತ ಶಿಕ್ಷಣದವರಿಗಾಗಿ ಯುಜಿಸಿ ಮತ್ತು ಸಿಇಸಿ ಸಂಬಂಧಿಸಿದ ಕಾರ್ಯಕ್ರಮಗಳನ್ನು, ವಯಸ್ಕರ ಶಿಕ್ಷಣ ಅಪೇಕ್ಷಿತರಿಗೆ ವಯಸ್ಕರ ಶಿಕ್ಷಣ ಇಲಾಖೆ ನೆರವಿನಿಂದ ಡಿಡಿ–೧ ಮತ್ತು ಇ–ಟಿ.ವಿ, ಜ್ಞಾನದರ್ಶನ ವಾಹಿನಿಗಳಲ್ಲಿ ವಿವಿಧ ಸಮಯ ಸಂದರ್ಭಯೋಚಿತವಾಗಿ ಪ್ರಸಾರ ಮಾಡುವುದು ವಿಶೇಷವಾಗಿದೆ. ೧೯೬೧ರಲ್ಲಿ ದೆಹಲಿ ಟಿ.ವಿ. ಅವಳಿ ನಗರದಲ್ಲಿ ಮಾತ್ರ ಕಾರ್ಯಕ್ರಮ ಬಿತ್ತರಿಸುತ್ತಿತ್ತು. ವಿಜ್ಞಾನ ವಿಷಯ ಸೇರಿದಂತೆ ಪಠ್ಯ ಮತ್ತು ಪಠ್ಯೇತರ ವಿಷಯದ ಕುರಿತು ಪ್ರಸಾರ ಮಾಡುವ ಉದ್ದೇಶ ಹೊಂದಿತ್ತು. ದೆಹಲಿಯಲ್ಲಿ ತಲೆದೋರಿದ ಪ್ರಯೋಗಾಲಯ ಮತ್ತು ಅರ್ಹತೆಯುಳ್ಳ ವಿಜ್ಞಾನ ಬೋಧಕರ ಕೊರತೆಯ ದೋಷ ನಿವಾರಣೆಗೆ ಮುಂದಾಗಿದ್ದು ದೃಶ್ಯ ಮಾಧ್ಯಮ ಎಂಬ ಟಿ.ವಿ. ೧೯೬೯ರ ಸುಮಾರಿಗೆ ಫೋರ್ಡ ಫೌಂಡೇಶನ್‌ದ ಆರ್ಥಿಕ ನೆರವಿನಿಂದ, ವಿಜ್ಞಾನ ವಿಷಯಗಳ ಜ್ಯುಕೇಷನಲ್ ಟಿ.ವಿ. ಆರಂಭವಾಗಿದ್ದು ಅದನ್ನು ಎಂದು ಹೇಳಲಾಗುತ್ತಿದೆ. ಅದೇ ವರ್ಷ, ಯುನೆಸ್ಕೊ ತಜ್ಞ ಪೌಲ್ ನ್ಯರೆಡ್ ಅದರ ಮೌಲ್ಯೀಕರಣ ಮಾಡಿದ್ದರು. ಇದರಿಂದ ದೆಹಲಿ ಟಿ.ವಿ. ತನ್ನ ಪ್ರಸಾರದ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿತು. ಅಲ್ಲದೆ ವಿವಿಧ ಶಾಲೆಗಳಲ್ಲಿ ರಿಸಿವರ್‌ಗಳನ್ನು ಪ್ರತಿಷ್ಠಾಪಿಸಿತು. ಇ–ಟಿ.ವಿ, ದೆಹಲಿ ನಗರಾಡಳಿತದ ನೆರವಿನಿಂದ ೫೦೦ ಶಾಲೆಗಳಲ್ಲಿ ಶೇ. ೩೮ರಷ್ಟು ರಿಸಿವರ್‌ಗಳನ್ನು ಮಾಧ್ಯಮಿಕ ವರ್ಗಗಳಲ್ಲಿ ಅಣಿಗೊಳಿಸಿತು. ಪ್ರತಿವಾರ ಪಾಠಗಳನ್ನು ಕುರಿತಾದ ಕಾರ್ಯಕ್ರಮಗಳನ್ನು ಪ್ರಸಾರ ಮಾಡತೊಡಗಿತು. ಇದರೊಂದಿಗೆ ಆಂಗ್ಲ ಸಾಹಿತ್ಯ ಕುರಿತಾಗಿಯೂ ಕೆಲವು ಕಾರ್ಯಕ್ರಮಗಳನ್ನು ಪ್ರಸಾರ ಮಾಡಿತು. ಅನಂತರ ದೂರದರ್ಶನ, ಉಪಗ್ರಹ ಸೌಲಭ್ಯಗಳ ನೆರವಿನಿಂದ ದೇಶವ್ಯಾಪಿ ಪ್ರಸಾರಕ್ಕೆ ಉತ್ತೇಜಿಸಿತು. ೧೯೭೮ರಲ್ಲಿ ವರ್ಗಿಸ್ ಸಮಿತಿಯನ್ನು ಜನತಾ ಸರ್ಕಾರ ನೇಮಿಸಿತು. ಶಿಕ್ಷಣ ಸಂಸ್ಥೆಗಳ ಕುರಿತು ಪ್ರಸಾರ ಮಾಡಲು ಒತ್ತು ನೀಡಬೇಕೆಂದು ತನ್ನ ವರದಿಯಲ್ಲಿ ತಿಳಿಸಿತು. ಯುಜಿಸಿ ಉನ್ನತ ಶಿಕ್ಷಣದ ಯೋಜನೆಯ ಅನ್ವಯ, ೧೯೮೪ ಆಗಷ್ಟಿನಲ್ಲಿ ದೇಶವ್ಯಾಪಿ ಕೊಠಡಿ ಶಿಕ್ಷಣ ಪ್ರಸಾರ ಮಾಡಿತು. ಮತ್ತು ದೆಹಲಿ ಸಿಇಸಿ ಸಂಯೋಜನೆಯಲ್ಲಿ ಪ್ರತಿವಾರದ ಮುಂಜಾನೆ ಮತ್ತು ಸಂಜೆ ಇ–ಟಿ.ವಿ.ಕಾರ್ಯಕ್ರಮಗಳು ದೇಶಾದ್ಯಂತ ಪ್ರಸಾರವಾದವು.

ಆ ಸಂದರ್ಭದಲ್ಲಿ ೧೭೦೦ ಕಾಲೇಜುಗಳಿಗೆ ಉಚಿತ ಕಲರ್ ಟಿ.ವಿ.ಗಳನ್ನು ಹಂಚಲಾಯಿತು. ಕೆಲವು ಕಾಲೇಜುಗಳು ತಮ್ಮ ಸ್ವಂತ ಖರ್ಚಿನಲ್ಲಿ ಟಿ.ವಿ. ಸೆಟ್‌ಗಳನ್ನು ಖರೀದಿಸಿದ್ದುಂಟು. ಸಮುದಾಯ ಸೆಟ್‌ಗಳು ೬೦ ಸಾವಿರದಷ್ಟು ಚಾಲ್ತಿಯಲ್ಲಿದ್ದವು. ೭ ಮಿಲಿಯನ್ ನಿತ್ಯ ವೀಕ್ಷಕರು ಪ್ರತಿ ವಾರ ವಿಕ್ಷೀಸಿದರು. ಶೇ.೪೫ರಷ್ಟು ನಿತ್ಯ ವೀಕ್ಷಕರಲ್ಲಿ ವಿದ್ಯಾರ್ಥಿಗಳಿದ್ದರು. ೧೨ ಮಿಲಿಯನ್ ಜನ ವಾರದಲ್ಲಿ ಒಂದು ಸಲ ಯುಜಿಸಿ ಕಾರ್ಯಕ್ರಮಗಳನ್ನು ವೀಕ್ಷಿಸಿದರು. ಇದರೊಂದಿಗೆ ಕೆಲ ನುಡಿ, ಸ್ಥಿರಚಿತ್ರಣ

(ಡಾಕ್ಯುಮೆಂಟ್ರಿಸ್) ಸಂದರ್ಶನಗಳು, ಕ್ವಿಝ್ ಕಾರ್ಯಕ್ರಮ, ಕ್ರೀಡಾ ಪ್ರದರ್ಶನಗಳು, ಪ್ರಶಸ್ತಿ ವಿತರಣೆ ಮತ್ತಿತರ ಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದವು. ಮಕ್ಕಳಿಗಾಗಿ ಕಾರ್ಟೂನ್ಸ್, ಬೊಂಬೆಯಾಟ, ನೇರಪ್ರಸಾರ ಮಾಡಿ ಮಕ್ಕಳನ್ನು ಆಕರ್ಷಿಸುವಲ್ಲಿ ಯಶಸ್ವಿಯಾದವು. SITE (Satellite Instructional Television Experiment) ಭಾರತದಲ್ಲಿ ಹೊಸ ಮನ್ವಂತರವನ್ನು ನಿರ್ಮಿಸಿತು. ಶಿಕ್ಷಣ ಮತ್ತು ಅಭಿವೃದ್ಧಿಗಾಗಿ ಟಿ.ವಿ.ಯನ್ನೆ ಸಾಧನವನ್ನಾಗಿಸಿಕೊಂಡಿತು. ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ದೃಶ್ಯದ ಪರಿಣಾಮ ಮತ್ತು ಪ್ರಭಾವವನ್ನು ಮನಗಂಡಿತು. ಹೀಗಾಗಿ ಭಾರತ ಸರ್ಕಾರದ ಅಣುಶಕ್ತಿ ಇಲಾಖೆ ಮತ್ತು ನಾಸಾ ಸಹಯೋಗದಲ್ಲಿ ೧೯೬೯ರ ಒಡಂಬಡಕೆಯಂತೆ, ಸೈಟ್‌ನ ಯೋಜನೆಯಲ್ಲಿ ವಾಹಿನಿ ಮೂಲಕ ಶಿಕ್ಷಣವನ್ನು ದ್ವಿತೀಯ ಅಂಶವನ್ನಾಗಿ ಪರಿಗಣನೆಗೆ ತೆಗೆದುಕೊಂಡವು. ಪ್ರಸಾರದ ಅವಧಿಯ ೪ ಗಂಟೆಗಳು, ೬ ರಿಂದ ೧೨ವರೆ ವರ್ಷಗಳವರೆಗೆ ಪೂರ್ಣ ಶಿಕ್ಷಣ ಪ್ರಸಾರಕ್ಕೆ ಆಧ್ಯತೆ ನೀಡಲಾಯಿತು. ಅದರಲ್ಲಿ ೨೨ ವರೆ ನಿಮಿಷಾವಧಿಯ ಕಾರ್ಯಕ್ರಮದಲ್ಲಿ ಚತುರ್ಥ (ಹಿಂದಿ, ಉಡಿಯಾ, ತೆಲಗು ಮತ್ತು ಕನ್ನಡ) ಭಾಷಾ ಕಾರ್ಯಕ್ರಮಕ್ಕೆ ಪ್ರಸಾರ ಅವಕಾಶ ಕಲ್ಪಿಸಲಾಯಿತು. ಶೈಕ್ಷಣಿಕ ವಾಹಿನಿಯಾದ ಇ-ಟಿ.ವಿ.ಯಲ್ಲಿ ಮಕ್ಕಳು ಪಾಲ್ಗೊಳ್ಳುವುದರ ಮೂಲಕ ಆಂಗ್ಲ ಭಾಷಾ ಮಾಧ್ಯಮವನ್ನು ತಿಳಿಯಲು ಸುಲಭವಾಗಿಸಿದ್ದು, ವಿಶೇಷ. ಕರ್ನಾಟಕ ರಾಜ್ಯದ ಚಂದನದಲ್ಲಿ ಪ್ರಸಾರವಾಗುವ ಪ್ರಮುಖ ಶೈಕ್ಷಣಿಕ ಕಾರ್ಯಕ್ರಮಗಳೆಂದರೆ, ಅವಿರತ ಕ್ವಿಝ್-೨೦೦೯, ಥಟ್ ಅಂತ ಹೇಳಿ, ಕಾನೂನು ಕಲಿಗಳು, ರಸಪ್ರಶ್ನೆ ಸೇರಿದಂತೆ ಮೊದಲಾದವು ಬಹುದಿನಗಳಿಂದ ಶಿಕ್ಷಣ ಆಸಕ್ತರಿಗಾಗಿ ಸೊಗಸಾಗಿ ಪ್ರಸಾರವಾಗುತ್ತಿದೆ. ಪ್ರತಿ ಸೋಮವಾರದಿಂದ ಶುಕ್ರವಾರದವರೆಗೆ ರಾತ್ರಿ ೧೦.೩೦ಕ್ಕೆ ಪ್ರಸಾರವಾಗುವ ಥಟ್ ಅಂತ ಹೇಳಿ ರಸಪ್ರಶ್ನೆ ಕಾರ್ಯಕ್ರಮ ಶಿಕ್ಷಣದ ವಿವಿಧ ಸ್ಪರ್ಧಾ ಪರೀಕ್ಷಾರ್ಥಿಗಳು ಶಿಕ್ಷಣದ ಆಯಾ ವಿಷಯಾಸಕ್ತರು ತೀವ್ರ ಗಮನ ಸೆಳೆದಿರುವುದು ವಿಶೇಷ. ಇದು ೧೫೦೦ ಕಂತುಗಳನ್ನು ಪೂರೈಸಿದ್ದು ಪೂರೈಸಿದ್ದು, ಯಾವುದೇ ಪ್ರಾಯೋಜಿಕತೆ ಸಹಾಯವಿಲ್ಲದೆ ಆಕರ್ಷಕವಾಗಿ ಪ್ರಸಾರವಾಗುತ್ತಿದೆ. ತಜ್ಞ ಡಾ.ನಾ. ಸೋಮೇಶ್ವರ ಕಾರ್ಯಕ್ರಮ ನಿರ್ವಹಿಸುತ್ತಿದ್ದು, ಪ್ರತಿ ಕಾರ್ಯಕ್ರಮದಲ್ಲಿ ೩ ಅಭ್ಯರ್ಥಿಗಳು ಭಾಗವಹಿಸುತ್ತಾರೆ. ಶಿಕ್ಷಣದ ವಿವಿಧ ವಿಷಯಗಳ ಮೇಲೆ ಒಟ್ಟು ೧೨ ಪ್ರಶ್ನೆಗಳಿರುವ ೩೦ ನಿಮಿಷದ ಕಾರ್ಯಕ್ರಮ ಇದಾಗಿರುತ್ತದೆ. ಸುವರ್ಣ ಕರ್ನಾಟಕೋತ್ಸವ ನಿಮಿತ್ತ ಆರಂಭವಾದ ಈ ಕ್ವಿಝ್ ಕಾರ್ಯಕ್ರಮವನ್ನು ಅವಿರತ ಸಂಘಟನೆ ನೆರವೇರಿಸಿಕೊಟ್ಟಿದ್ದು, ಮೊದಲು IT, BT, BPO ಸಂಸ್ಥೆಗಳಿಗೆ ಸಂಬಂಧಿಸಿದ ರಸ ಪ್ರಶ್ನೆಗಳಿರುತ್ತಿದ್ದವು. ಕನ್ನಡ ದೂರದರ್ಶನದ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಇದು ಅತಿ ಜನಪ್ರಿಯವಾಗಿದೆ.

ಅಧ್ಯಯನದ ಪ್ರಾಮುಖ್ಯ

ಶಿಕ್ಷಣವನ್ನೇ ಮೂಲ ಅಂಶವನ್ನಾಗಿಟ್ಟುಕೊಂಡು ಕಾರ್ಯಾರಂಭ ಮಾಡಿದ ಭಾರತೀಯ ದೂರದರ್ಶನ, ಕಳೆದ ಮೂರು ದಶಕಗಳಿಂದ ನೂರಾರು ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿದೆ. ಜೊತೆಗೆ ಶಿಕ್ಷಣದ ಕ್ಷೇತ್ರದಲ್ಲಿ ಜನಪ್ರಿಯತೆ ಗಳಿಸುವಲ್ಲಿ ಆ ಕ್ಷೇತ್ರದ ಸಮುದಾಯವನ್ನು ವಾಹಿನಿಯತ್ತ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಶೈಕ್ಷಣಿಕ ಪ್ರಸಾರಕ್ಕೆಂದೆ, ವಾರ್ತಾ ಮತ್ತ ಪ್ರಚಾರ ಇಲಾಖೆ, ವಿವಿಧ ಶಿಕ್ಷಣ ವಾಹಿನಿಗಳನ್ನು ಪ್ರತ್ಯೇಕವಾಗಿ ಪ್ರಸಾರ ಮಾಡಲು ಸಾಕಷ್ಟು ನೆರವು, ಪ್ರೋತ್ಸಾಹ ನೀಡಿದ್ದರ ಪರಿಣಾಮವಾಗಿ ಇಂದು ಹತ್ತೆಂಟು ವಾಹಿನಿಗಳು ಶೈಕ್ಷಣಿಕ ಸೇವೆಯಲ್ಲಿ ನಿರತವಾಗಿದ್ದು ಮಹತ್ತರ ಬೆಳವಣಿಗೆ. ಪ್ರತಿಯೊಂದು ವಾಹಿನಿಯು ದಿನ/ವಾರಗಟ್ಟಲೆ ಹಲವು ಕಾರ್ಯಕ್ರಮಗಳ ಪ್ರಸಾರದ ಅವಕಾಶ, ಸಾಮರ್ಥ್ಯವನ್ನು ಪಡೆದಿವೆ. ಇದರಿಂದ ವಿವಿಧ ಮಾದರಿಯ ಶಿಕ್ಷಣ ಪದ್ಧತಿ ಮತ್ತು ಶೈಕ್ಷಣಿಕ ವ್ಯಾಪ್ತಿ ಮಾಧ್ಯಮ ಕ್ಷೇತ್ರ ಆವರಿಸಿಕೊಂಡು, ಸಮುದಾಯ ಮತ್ತು ಪ್ರದೇಶ ಅಭಿವೃದ್ಧಿಗೂ ಪೂರಕವಾಗಿದೆ. ಶಿಕ್ಷಣ ವಾಹಿನಿಯಿಂಥ ತಾಂತ್ರಿಕ, ವೈದ್ಯಕೀಯ, ನೈಸರ್ಗಿಕ ವಿಜ್ಞಾನ, ಅಣುವಿಜ್ಞಾನ, ಖಗೋಳ, ಸ್ಪರ್ಧಾತ್ಮಕ ಮತ್ತು ಭಾಷೆ, ವ್ಯಾಕರಣ ಸೇರಿದಂತೆ ಸಾವಿರಾರು ವಿಷಯಗಳು ಇಂದು ಗ್ರಾಮೀಣ ಮಟ್ಟದ ಹಾಗೂ ಸಾಮಾನ್ಯ ಬುದ್ಧಿಮತ್ತೆಯ ಕಲಿಕಾರ್ಥಿಗಳಿಗೆ ಸುಲಭವಾಗಿ ತಿಳಿಯಲು, ಗ್ರಹಿಸಿಕೊಳ್ಳಲು ನೆರವಾಗಿದೆ. ಮಾಹಿತಿ ತಂತ್ರಜ್ಞಾನ ಆವಿಷ್ಕಾರದ ಬಳಿಕೆ, ಪ್ರತಿಯೊಬ್ಬರಿಗೂ ತಲುಪಿ, ಅದರಿಂದ ಶಿಕ್ಷಣ ವಾಹಿನಿ ಸಂಪರ್ಕ, ಸಂವಹನ ಸಾಧಿಸುವ ಕಲೆ ಶಿಕ್ಷಣ ಸಂಸ್ಥೆಯ, ವಿಶ್ವವಿದ್ಯಾಲಯಗಳ ಮತ್ತು ಶಿಕ್ಷಕ ವಿಧ್ಯಾರ್ಥಿ ಸಮುದಾಯದ ಮಧ್ಯ ಸಂಯೋಜಕ ಸೇತುವೆಯಾಗಿ ಕಾರ್ಯ ನಿರ್ವಹಿಸುವುದು ವಿಶೇಷವಾಗಿದೆ. ಶೈಕ್ಷಣಿಕ ಕಾರ್ಯಕ್ರಮಗಳ ಪ್ರಸಾರದಿಂದ ರಾಷ್ಟ್ರದ ಅಭಿವೃದ್ಧಿ ಮತ್ತು ಜಾಗತಿಕ ಮಟ್ಟದಲ್ಲಿ ಶೈಕ್ಷಣಿಕ ಹಾಗು ಸಾಂಸ್ಕೃತಿಕ ಸ್ಥಿತಿ-ಗತಿಯ ಮಟ್ಟವನ್ನು ತಿಳಿಯಲು ನೆರವಾಗಲೂಬಹುದು.

ಉದ್ದೇಶಗಳು

ಈ ಅಧ್ಯಯನದ ಉದ್ಧೇಶಗಳಲ್ಲಿ ಎರಡು ವಿಧಗಳಿವೆ. ಅವು ಸಾಮಾನ್ಯ ಉದ್ದೇಶಗಳು ಮತ್ತು ವಿಶೇಷ(ನಿರ್ದಿಷ್ಟ) ಉದ್ದೇಶಗಳು.

ಸಾಮಾನ್ಯ ಉದ್ದೇಶಗಳು

೧. ಶೈಕ್ಷಣಿಕ ಬೆಳವಣಿಗೆಯಲ್ಲಿ ದೂರದರ್ಶನ ಸೇರಿದಂತೆ ದೃಶ್ಯ ಮಾಧ್ಯಮದ ಪಾತ್ರ.

೨. ಪ್ರಾದೇಶಿಕತೆ ಮತ್ತು ಸಮುದಾಯವನ್ನು ಶಿಕ್ಷಣ ವಾಹಿನಿಯತ್ತ ತರುವಲ್ಲಿ ದೂರದರ್ಶನ ವಹಿಸುವ ಕಾರ್ಯಕ್ಷಮತೆ.

೩. ಸರ್ಕಾರದ ಶೈಕ್ಷಣಿಕ ಯೋಜನೆಗಳನ್ನು ಜನಸಾಮಾನ್ಯರಿಗೆ ಸುಲಭ ಮತ್ತು ಸರಳವಾಗಿ ತಲುಪಿಸಲು ದೂರದರ್ಶನ ವಾಹಿನಿಯು ಪ್ರಸಾರದ ಕಾರ್ಯಕ್ರಮಗಳು.

೪. ಮಾಹಿತಿ ತಂತ್ರಜ್ಞಾನ ಮತ್ತು ವೈಜ್ಞಾನಿಕ ಆವಿಷ್ಕಾರಗಳ ಉಪಯುಕ್ತತೆ ಮತ್ತು ಅಗತ್ಯಗಳನ್ನು ಸರ್ವರ ಗಮನಕ್ಕೆ, ಅನ್ವಯಿಕೆಗೆ ಅಣಿಗೊಳಿಸಲು ದೂರದರ್ಶನ ವಾಹಿನಿಯ ಕಸರತ್ತು ಮತ್ತು ತಳೆಯುವ ನಿಲುವು.

೫. ಸಾಮಾಜಿಕ–ಸಾಂಸ್ಕೃತಿಕ ಅಭಿವೃದ್ಧಿಯಲ್ಲಿ, ರಾಷ್ಟ್ರದ ಪ್ರಗತಿಯಲ್ಲಿ ಶಿಕ್ಷಣ ಮಹತ್ವದ್ದು. ಅದರ ಮೂಲಕ ದೂರದರ್ಶನ ಮಾನವ ಸಂಪತ್ತನ್ನು ಏಳಿಗೆಯತ್ತ, ಕಲ್ಯಾಣಕಾರಿ ಸೇವೆ ಒದಗಿಸುವ ಪರಿಣಾಮ ಮತ್ತು ಪ್ರಭಾವ ತಿಳಿಯುವುದು.

ವಿಶೇಷ ಉದ್ದೇಶಗಳು

೧. ಶೈಕ್ಷಣಿಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವ ದೂರದರ್ಶನ ವಾಹಿನಿಯ ಇತರೆ ವಾಹಿನಿಗಳನ್ನು ಪರಿಚಯಿಸುವುದು. ಹಾಗೂ ಅವುಗಳ ಸ್ವರೂಪವನ್ನು ವಿಶ್ಲೇಷಿಸುವುದು.

೨. ವಿವಿಧ ದೂರದರ್ಶನ ವಾಹಿನಿಗಳಲ್ಲಿ ಇಲ್ಲಿಯವರೆಗೆ ಪ್ರಸಾರವಾದ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಾಗು ಅವುಗಳ ಅಗತ್ಯತೆ–ಮಹತ್ವ ಕುರಿತು ಸ್ಥೂಲ ಅಧ್ಯಯನ ಮಾಡುವುದು.

೩. ಶಿಕ್ಷಣ ವಾಹಿನಿ ಮತ್ತು ಶಿಕ್ಷಣ ಕ್ಷೇತ್ರ ಹಾಗು ಸಮುದಾಯಗಳ ಹೊಂದಾಣಿಕೆ, ಅನ್ವಯಿಕೆಯ ಸ್ವರೂಪವನ್ನು ತಿಳಿಯುವುದು. ಅದರಿಂದ ಶಿಕ್ಷಣ ಕ್ಷೇತ್ರದಲ್ಲಿ ವ್ಯಕ್ತವಾದ ಪ್ರತಿಕ್ರಿಯೆ ಗಮನಿಸುವುದು.

೪. ನೂತನ ಮಾದರಿಯ ಶಿಕ್ಷಣ ಪದ್ಧತಿಯನ್ನು ಪರಿಚಯಿಸುವಲ್ಲಿ ವಿಶ್ವವಿದ್ಯಾಲಯ ಶಾಲಾ–ಕಾಲೇಜುಗಳು ಮತ್ತು ದೂರದರ್ಶನದ ಪಾತ್ರವನ್ನು ವಿಶ್ಲೇಷಿಸುವುದು.

ಅಧ್ಯಯನದ ಕ್ಷೇತ್ರ

'ದೂರದರ್ಶನ ಪ್ರಸಾರದ ಶೈಕ್ಷಣಿಕ ಕಾರ್ಯಕ್ರಮಗಳ ಪರಿಣಾಮ: ಒಂದು ಅಧ್ಯಯನ' ಈ ವಿಷಯ ಕುರಿತು ಸಂಶೋಧನೆ ಮಾಡಲು ವಿಷಯ ಮತ್ತು ಕ್ಷೇತ್ರದ ವ್ಯಾಪ್ತಿ ವಿಶಾಲ ವಾಗಿರುತ್ತದೆ. ಹೀಗಾಗಿ, ದೂರದರ್ಶನ ವಾಹಿನಿಗಳನ್ನು, ಪ್ರಸಾರದ ಕಾರ್ಯಕ್ರಮಗಳನ್ನು ಹಾಗು ಅವುಗಳ ಬೆಳವಣಿಗೆ, ಸ್ವರೂಪ ಮತ್ತು ಪರಿಣಾಮವನ್ನು ತಿಳಿದು–ವಿಶ್ಲೇಷಿಸುವ ಸೀಮಿತ ಉದ್ದೇಶ ಹೊಂದಲಾಗಿದೆ. ಈ ರೀತಿ ಸಂಶೋಧನಾ ಅಧ್ಯಯನ ಕೆಲವೇ ಪ್ರದೇಶದ ನಗರಗಳಿಗೆ ಮತ್ತು ಪ್ರಮುಖ ಕೇಂದ್ರಗಳಿಗೆ ಸಂಬಂಧಿಸಿರುತ್ತದೆ. ಅಧ್ಯಯನಕ್ಕಾಗಿ ಕರ್ನಾಟಕದ ಕೆಲವು ಪ್ರಮುಖ

ಜಿಲ್ಲೆಗಳನ್ನು ಹಾಗೂ ನಗರ ಪ್ರದೇಶದ ದೂರದರ್ಶನ ವೀಕ್ಷಕರನ್ನು ಆಯ್ಕೆ ಮಾಡಲಾಗಿದೆ. ಅಲ್ಲದೆ, ಕಲ್ಬುರ್ಗಿ,ಬೆಂಗಳೂರು ಮತ್ತು ದೆಹಲಿ ದೂರದರ್ಶನ ಕೇಂದ್ರಗಳನ್ನು ಪ್ರಧಾನವಾಗಿ ತೆಗೆದುಕೊಳ್ಳಲಾಗಿದೆ. ಜೊತೆಗೆ ಆಯಾ ದೂರದರ್ಶನ ವ್ಯಾಪ್ತಿಗೆ ಒಳಪಡುವ ಶೈಕ್ಷಣಿಕ ಕ್ಷೇತ್ರದಲ್ಲಿ ಬರುವ ಶಾಲಾ–ಕಾಲೇಜುಗಳನ್ನು, ವಿಶ್ವವಿದ್ಯಾಲಯ ಹಾಗು ಸಂಘ–ಸಂಸ್ಥೆ, ಸಮುದಾಯಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ.

ಸಂಶೋಧನಾ ಪದ್ದತಿ


ಈ ಸಂಶೋಧನಾ ಅಧ್ಯಯನದ ಗುರಿ ದೂರದರ್ಶನ ಪ್ರಸಾರದ ಶೈಕ್ಷಣಿಕ ಕಾರ್ಯಕ್ರಮಗಳ ಕುರಿತಾಗಿರುತ್ತದೆ. ದೇಶದ ಸುಮಾರು ಮೂರ್‍ನಾಲ್ಕು ದೂರದರ್ಶನ ಪ್ರಾದೇಶಿಕ ಕೆಂದ್ರಗಳೂ ಸಹ ಪ್ರಸಾರ ಮಾಡುವ ಕಾರ್ಯಕ್ರಮಗಳನ್ನು ಅಧ್ಯಯನಕ್ಕೆ ಅಳವಡಿಸಿಕೊಳ್ಳಲಾಗಿದೆ. ಅದಕ್ಕೆಂದು ಸಮೀಕ್ಷೆ (Survey) ಮಾಡುವ ಪದ್ದತಿ ಅನುಸರಿಸಲಾಗಿದೆ. ಈ ಪದ್ದತಿ ಸೂಕ್ತ ಮತ್ತು ಸಮರ್ಪಕ ಮಾಹಿತಿ, ವಿಷಯ ಸಂಗತಿ ಹಾಗು ನ್ಯಾಸ ಸಂಗ್ರಹಣೆಗೆ ಅನುಕೂಲವಾಗಿರುತ್ತದೆ. ಅಲ್ಪಾವಧಿಯಲ್ಲಿ ಸಂಶೋಧನೆಯ ವಾಸ್ತವತೆ ಮತ್ತದರ ನೈಜತೆ ಅರಿತು ನಿರ್ಣಾಯ ತಳೆಯಲು ಸುಲಭವೆನಿಸಿದೆ. ಸಂಶೋಧನೆಯ ನ್ಯಾಸ ಆಯ್ಕೆ ನಮೂನೆಗಳಲ್ಲಿ ಅತೀ ಸೂಕ್ತ ಮತ್ತು ಸರಳವೆನಿಸಿದ, ಯಾದೃಚ್ಛಿಕ ಸರಳ ಆಯ್ಕೆ ನಮೂನೆ ಪದ್ಧತಿಯನ್ನು (The Simple Random Sampling Method) ಅನುಸರಿಸಲಾಗಿದೆ. ಸಂಬಂಧಿಸಿದ ದೂರದರ್ಶನ ಕೇಂದ್ರಗಳನ್ನು ಹಾಗು ಪ್ರಸಾರ ವ್ಯಾಪ್ತಿಯ ಪ್ರದೇಶ–ಸಮುದಾಯದ ಮೂಲಗಳನ್ನು ಅವಲಂಭಿಸಿ, ಮಾಹಿತಿ, ನ್ಯಾಸ ಸಂಗ್ರಹಿಸಿ, ವಿಶ್ಲೇಷಿಸುವ ಪದ್ದತಿ ಇದಾಗಿರುತ್ತದೆ.

ಸಮಾರೋಪ

ಉಪಯುಕ್ತ ಮಾಹಿತಿ ಹರಡಲು ಶೈಕ್ಷಣಿಕ ತಂತ್ರಜ್ಞಾನ ಸೂಕ್ತವಾದದ್ದು. ಈ ಕ್ಷೇತ್ರದ ಸೇವಾ ನಿರತರ ತರಬೇತಿ, ಅನುಭವ ಮತ್ತು ಗುಣಾತ್ಮಕತೆ ಸುಧಾರಣೆಗೂ ಅನುಕೂಲ. ಮೌಲ್ಯಯುತ ಸಂಸ್ಕೃತಿ, ಕಲೆ ಕುರಿತಾಗಿ ತೀಕ್ಷಣ ಜಾಗೃತಿ ವಹಿಸಲಾಗುತ್ತಿದೆ. ಆ ದಿಸೆಯಲ್ಲಿ ಬಾನುಲಿ ಮತ್ತು ದೂರದರ್ಶನ ಮಾಧ್ಯಮ ಅನುಸರಿಸುವ ನೀತಿ ಮತ್ತು ತಳೆದ ಪ್ರಯತ್ನ ಬಹು ಸ್ಫೂರ್ತಿದಾಯಕವಾಗಿದೆ. ಅದರಲ್ಲೂ ದೂರದರ್ಶನವು ಸಂವಹನ ಸಾಧನಗಳಲ್ಲಿ ಅತ್ಯಂತ ಪರಿಣಾಮಕಾರಿಯಾಗಿರುತ್ತದೆ. ಶೈಕ್ಷಣಿಕ ನಿರ್ವಹಣೆಯಲ್ಲಿ ಕ್ರಾಂತಿಕಾರಿ ಮಾಧ್ಯಮವೆನಿಸಿದೆ. ಗುಣಾತ್ಮಕ ಶಿಕ್ಷಣ ಸುಧಾರಣೆಯಲ್ಲಿ ಅದರ ಪಾತ್ರ ಗಮನಾರ್ಹವಾದದ್ದು. ರಾಜ್ಯವಾರು ಯೋಜನೆಗಳನ್ನು ಪ್ರಚುರ ಪಡಿಸುವಲ್ಲಿ ಮತ್ತು ಶೈಕ್ಷಣಿಕ ಸೌಲಭ್ಯಗಳನ್ನು ಜನಸಾಮಾನ್ಯರಿಗೆ ಮಾಹಿತಿ ಒದಗಿಸಿ, ಅವರನ್ನು ಅಕ್ಷರ ವಾಹಿನಿಯತ್ತ ತರುವಲ್ಲಿ ದೂರದರ್ಶನದ ಕೀರ್ತಿ ಹೇಳಲಸಾಧ್ಯ. ಸರ್ಕಾರವೂ ಹೆಚ್ಚು ನೆರವು ಪ್ರೋತ್ಸಾಹ ಹಾಗೂ ಮುಕ್ತ ಅಧಿಕಾರ ನೀಡಿದ್ದರ ಪ್ರತೀಕವಾಗಿ ದೂರದರ್ಶನ ಶೈಕ್ಷಣಿಕ ವಾಹಿನಿಯಾಗಿ ಜನಮನಸೂರೆಗೊಳ್ಳಲು ಕಾರಣವಾಗಿದೆ.

ಅಮೇರಿಕಾದಲ್ಲಿಯೂ ಶೈಕ್ಷಣಿಕ ಟಿವಿ ಪಾತ್ರ ಗಮನಾರ್ಹವಾದದ್ದು. ೧೯೫೦ರ ಸುಮಾರಿಗೆ ಸೈನಿಕ ಶಾಲೆಗಳಲ್ಲಿ ಶಿಕ್ಷಣ ಪ್ರಸಾರ ಮಾಡುವುದಕ್ಕಾಗಿ ಟಿ.ವಿಯನ್ನು ಬಳಸಿಕೊಳ್ಳಲಾಗಿತ್ತು. ಅನಂತರ ಕೆಲವು ಅನುಭವಿ ಶಿಕ್ಷಣಾರ್ಥಿಗಳ ಅಭಿಪ್ರಾಯ, ಒತ್ತಾಸೆಗಳ ಮೇರೆಗೆ ಅದನ್ನು ಸಲಹಾತ್ಮಕ ವಾಹಿನಿ ಎಂದು ಬಳಕೆಗೆ ತರಲಾಯಿತು. ಕ್ರಮೇಣ ಖಾಸಗಿ ಮತ್ತು ಸಾರ್ವಜನಿಕ ಸಂಸ್ಥೆಗಳ ವರ್ಗದ ಕೊಠಡಿಗಳಿಗೆ ಹಬ್ಬಿಸಲಾಯಿತು. ಟಿ.ವಿ. ಪೆಟ್ಟಿಗೆ ಒಬ್ಬ ಶಿಕ್ಷಕನಂತೆ ಕಾರ್ಯನಿರ್ವಹಿಸತೊಡಗಿದ್ದರ ಪರಿಣಾಮ, ಯಶಸ್ವಿಯತ್ತ ದಾಪುಗಾಲು ಹಾಕಲು ಕಾರಣವಾಯಿತು. ಮುಂದೆ ದಶಕಾರ್ಧದಲ್ಲಿ, ಅಮೇರಿಕಾದ ಶಿಕ್ಷಣದಲ್ಲಿ ಟಿ.ವಿ. ಮಾಡಿದ ಸಾಧನೆ ಅಚ್ಚರಿ ಮೂಡಿಸಿತು. ಸುಮಾರು ೧೦ ಮಿಲಿಯನ್ ವಿದ್ಯಾರ್ಥಿಗಳು, ತಮ್ಮ ಶೈಕ್ಷಣಿಕ ವರ್ಷದಲ್ಲಿ ಬಹುತೇಕ ತಿಳಿವಳಿಕೆ ಮತ್ತು ಮಾಹಿತಿಗಳನ್ನು ದೂರದರ್ಶನದಿಂದಲೇ ಪಡೆದುಕೊಳ್ಳಲಾರಂಭಿಸಿದರು. ಅದರ ಫಲಶ್ರುತಿ, ಅಮೇರಿಕಾದಲ್ಲಿಂದು ಪ್ರತಿ ಪದವಿ ವಿಷಯದ ಶಾಲೆ, ಕಾಲೇಜುಗಳ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳು ಪ್ರಸಾರದಲ್ಲಿ ಅವಕಾಶ ಪಡೆದವು. ವಿಜ್ಞಾನದ ವಿಷಯಗಳೆನಿಸಿದ, ಅಂಕಗಣಿತ, ಜೀವ-ಪ್ರಾಣಿ ಮತ್ತು ಸಸ್ಯಶಾಸ್ತ್ರಗಳನ್ನು ಟಿ.ವಿ. ವಾಹಿನಿಗಳ ಮೂಲಕ ಕಲಿಸುವ-ಕಲಿಯುವ ಕ್ರಿಯೆಗೆ ನೆರವಾದವು. ಅಮೆರಿಕದ ಈ ಸು-ಪರಿಣಾಮ ಭಾರತಕ್ಕೂ ನಿಧಾನವಾಗಿ ತಟ್ಟುತ್ತಿದೆ. ಇಲ್ಲಿಯ ಶಿಕ್ಷಣ ಕ್ಷೇತ್ರದವರು, ಸರ್ಕಾರ, ಆಡಳಿತ ವರ್ಗ ಮತ್ತು ಮಾಹಿತಿ ತಂತ್ರಜ್ಞಾನದವರೂ ತೀವ್ರ ಆಸಕ್ತಿ ವಹಿಸಿದ್ದಾರೆ. ಪ್ರತಿ ಶಿಕ್ಷಕ ಮತ್ತು ವಿದ್ಯಾರ್ಥಿಗೆ ದೂರದರ್ಶನ ಪ್ರಯೋಜನ ಏನೆಂಬುದನ್ನು ಮನವರಿಕೆ ಮಾಡುವ ಪ್ರಯತ್ನ ನಿರಂತರವಾಗಿ ನಡೆದಿದೆ. ರಾಜೀವ್ ಗಾಂಧಿಯಿಂದ ಕಾಲದಿಂದ ಇಂದಿನ ಮನಮೋಹನ್ ಸಿಂಗ್ ಆಡಳಿತದವರೆಗೆ ದೂರದರ್ಶನ ಶೈಕ್ಷಣಿಕ ಮತ್ತು ತಂತ್ರಜ್ಞಾನ ಕುರಿತು ಪ್ರಸಾರ ಮಾಡುವ ಕಾರ್ಯಕ್ರಮಗಳು ಅಗಣಿತ. ಅದಕ್ಕೆಂದೆ, ಸುಮಾರು ೧೪ರಿಂದ ೨೦ ದೂರದರ್ಶನ ವಾಹಿನಿಗಳು ದೇಶದಲ್ಲಿ ಪ್ರದೇಶವಾರು ತಲೆ ಎತ್ತಿರುವುದು ಮಹತ್ತರ ಬೆಳವಣಿಗೆ. ಗುಣಾತ್ಮಕವಾದ ಸಾವಿರಾರು ಶೈಕ್ಷಣಿಕ ಕಾರ್ಯಕ್ರಮಗಳಿಗೆ ಸರ್ಕಾರ ಉದಾರ ನೆರವು ನೀಡುತ್ತಿದೆ. ಇನ್ನಷ್ಟು ಪ್ರಯತ್ನಪಟ್ಟರೆ, ಭಾರತದ ಪ್ರತಿ ಶಾಲೆ-ಕಾಲೇಜುಗಳ ಕೊಠಡಿಯಲ್ಲಿ ದೂರದರ್ಶನ ಪ್ರಸಾರದ ಟಿ.ವಿ. ಪೆಟ್ಟಿಗೆ ಕೂಡಬಲ್ಲದು. ಒಬ್ಬ ಶಿಕ್ಷಕನಂತೆ ವಿದ್ಯಾರ್ಥಿ ಸಮುದಾಯಕ್ಕೆ ಆಯ್ದ ವಿಷಯಗಳ ಕುರಿತು, ಮಾಹಿತಿ ಕೊಡಬಲ್ಲ ಸೂಕ್ತ ಮತ್ತು ಪ್ರಭಾವಿ ಸಾಧನವಾಗಬಲ್ಲದು ಎಂಬುದಕ್ಕೆ ಸಂದೇಹವಿಲ್ಲ.

❐



ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ

ಮಾನಸಗಂಗೋತ್ರಿ, ಮೈಸೂರು